ಕನ್ನಡ ಗದ್ಯಾವಲೋಕನ

ಸಂಪಾದಕ

ಎನ್. ಬಸವಾರಾಧ್ಯ, ಎಂ.ಎ.,

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

ಕನ್ನಡ ಗದ್ಯಾವಲೋಕನ

ಸಂಪಾದಕ

ಎನ್. ಬಸವಾರಾಧ್ಯ, ಎಂ.ಎ.,

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮

KANNADA GADYAVALOKANA : A Collection of Selected prose writings ; edited by N. Basavaradhya
Published by Kannada Sahitya Parishath, Chamarajpet, Bangalore-560 018, Pp ; 180 + 8; Fifth Edition ; Rs. 24-00 ; 1995

ಐದನೆಯ ಮುದ್ರಣ : ೧೯೯೫

ಪ್ರತಿಗಳ ಸಂಖ್ಯೆ : ೨೦೦೦

ಬೆಲೆ : ರೂ. ೨೪/-

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೫೬೦೦೧೮

ಅಧ್ಯಕ್ಷರ ನುಡಿ

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ ಹಾಗೂ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದ ಅವಧಿಯಲ್ಲಿ ಪ್ರಚಲಿತ ಹಾಗೂ ಪ್ರಾತಿನಿಧಿಕ ಗದ್ಯದ ಆಯ್ಕೆ ಈ ಸಂಗ್ರಹದಲ್ಲಿ ಸಂಕಲಿತವಾಗಿದ್ದು, ಗದ್ಯ ಬರವಣಿಗೆಯ ಬೆಳವಣಿಗೆಯನ್ನು ದಾಖಲಿಸುವ ಉದ್ದೇಶ ಹೊಂದಿದೆ.

ಪ್ರಾದೇಶಿಕ ಸೊಗಡಿನಿಂದ ಕೂಡಿದ ಪ್ರಬಂಧಗಳನ್ನು ಆಯ್ಕೆ ಮಾಡುವುದರಲ್ಲಿ ಸಂಪಾದಕರು ಬಹಳಷ್ಟು ಯಶಸ್ವಿಯಾಗಿದ್ದಾರೆ.

ಎಂ. ಎಸ್. ಪುಟ್ಟಣ್ಣನವರ ಲೇಖನದಿಂದ ಆರಂಭವಾಗಿ, ಪಂಜೆ ಮಂಗೇಶರಾಯರು, ಮುದವೀಡು ಕೃಷ್ಣರಾಯರು, ಹರ್ಡೀಕರ ಮಂಜಪ್ಪ, ಎ. ಆರ್. ಕೃ, ಮಾಸ್ತಿ, ಕುವೆಂಪು, ಡಿ. ಎಲ್. ಎನ್, ತೀ. ನಂ. ಶ್ರೀ ಇವರೇ ಮೊದಲಾದ ಮಹನೀಯರುಗಳ ಪ್ರಬಂಧಗಳು ಈ ಸಂಗ್ರಹದಲ್ಲಿ ಸೇರಿವೆ.

ಸಾಹಿತ್ಯ ಪರಿಷತ್ತಿನ 'ಕಾವ' ಪರೀಕ್ಷೆಗೆ ಈ ಪುಸ್ತಕ ಪಠ್ಯವಾಗಿರುವುದರಿಂದ, ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು, ಸಂಪಾದಕರು ಪ್ರತಿ ಲೇಖಕರ ಬಗೆಗೆ ಪರಿಚಯ, ಟಿಪ್ಪಣಿ ಹಾಗೂ ಅರ್ಥಕೋಶವನ್ನು ಸೇರಿಸಿರುವುದು ಹೆಚ್ಚು ಉಪಯುಕ್ತವಾಗಿದೆ.

ಐದನೆಯ ಮುದ್ರಣ ಕಂಡಿರುವ ಈ ಪುಸ್ತಕವನ್ನು ಸಂಪಾದಿಸಿ ನೀಡಿರುವ ಶ್ರೀ ಎನ್. ಬಸವಾರಾಧ್ಯ ಅವರಿಗೆ, ಅಚ್ಚುಕಟ್ಟಾಗಿ ಮುದ್ರಣ ಮಾಡಿ ಒದಗಿಸಿರುವ ಬಿ. ಎಂ. ಶ್ರೀ ಅಚ್ಚುಕೂಟದ ವ್ಯವಸ್ಥಾಪಕರು ಹಾಗು ಅವರ ಸಿಬ್ಬಂದಿಗೆ ಪರಿಷತ್ತು ಕೃತಜ್ಞತೆ ಸಲ್ಲಿಸುತ್ತದೆ.

ಡಾ. ಸಾ. ಶಿ. ಮರುಳಯ್ಯ
ಅಧ್ಯಕ್ಷ

ಪೀಠಿಕೆ

'ಕನ್ನಡ ಗದ್ಯಾವಲೋಕನ'ದಲ್ಲಿ ಕ್ರಿ. ಶ. ೧೮೫೦ ರಿಂದ ೧೯೫೦ ರ ವರೆಗಿನ ಗದ್ಯದ ಬೆಳವಣಿಗೆಗೆ ಸಂಬಂಧಿಸಿದ ೧೧ ಜನ ವಿದ್ವಾಂಸರ ಗದ್ಯಭಾಗ ಗಳನ್ನು ಆರಿಸಿಕೊಳ್ಳಲಾಗಿದೆ. 'ಕನ್ನಡ ಗದ್ಯವಿಕಾಸ' ಮತ್ತು 'ಕನ್ನಡ ಗದ್ಯಾವಲೋಕನ' ಇವುಗಳಲ್ಲಿ ಕ್ರಿ.ಶ. ೮೫೦ ರಿಂದ ೧೯೫೦ರ ವರೆಗಿನ ಗದ್ಯದ ವಿಕಾಸವನ್ನು ಕಾಣಬಹುದಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೧೯ ಮತ್ತು ೨೦ನೆಯ ಶತಮಾನಗಳು ತಮ್ಮವೇ ಆದ ವೈಶಿಷ್ಟ್ಯದಿಂದ ಕೂಡಿವೆ. ಹಿಂದಿನ ಚಂಪೂ, ಷಟ್ಪದಿ, ಸಾಂಗತ್ಯ ಮುಂತಾದ ಕಾವ್ಯಪ್ರಕಾರಗಳು ಕಡಮೆಯಾಗಿ ಗದ್ಯ, ಪ್ರಬಂಧ, ಕಥೆ, ಭಾಷಾಂತರ ಮುಂತಾದ ಪ್ರಕಾರಗಳು ವಿಪುಲವಾಗಿ ಕಂಡುಬಂದಿವೆ. ಈ ಶತಮಾನಗಳಲ್ಲಿ ಗದ್ಯಸಾಹಿತ್ಯವೇ ಪ್ರಧಾನವಾದ ಭಾಗ ಎಂದು ಹೇಳಿದರೂ ಬಹುಶಃ ತಪ್ಪಾಗಲಾರದು.

ಕನ್ನಡ ಸಾಹಿತ್ಯದ ಗದ್ಯದ ಬೆಳವಣಿಗೆಗೆ ಸಂಬಂಧಿಸಿದಂತೆ ಒಂದು ಸಮಗ್ರ ಸಂಕಲನವನ್ನು ಸಿದ್ಧಪಡಿಸಬೇಕೆಂಬ ಅಭಿಲಾಷೆ ನನ್ನಲ್ಲಿ ಬಹುಕಾಲ ದಿಂದಲೂ ಇತ್ತು. ಅದು 'ಕನ್ನಡ ಗದ್ಯವಿಕಾಸ' ಮತ್ತು 'ಕನ್ನಡ ಗದ್ಯಾವ ಲೋಕನ' ಗಳಿಂದ ನೆರವೇರಿದೆ ಎಂದು ಭಾವಿಸುತ್ತೇನೆ.

ಪ್ರಕೃತ 'ಕನ್ನಡ ಗದ್ಯಾವಲೋಕನ' ೧೯ ಮತ್ತು ೨೦ನೆಯ ಶತಮಾನ ಗಳ ಗದ್ಯದ ಬರವಣಿಗೆಗಳ ಒಂದು ಪ್ರಾತಿನಿಧಿಕ ಸಂಕಲನ. ಈ ಸಂಕಲನ ದಲ್ಲಿ ಕನ್ನಡ ಸಾಹಿತ್ಯಕ್ಕೆ–ವಿಶೇಷವಾಗಿ ಗದ್ಯದ ಬೆಳವಣಿಗೆಗೆ ಶ್ರಮಿಸಿದ ವಿದ್ವಾಂಸರ ಲೇಖನಗಳಿವೆ. ಇವು ಪ್ರಾದೇಶಿಕವಾಗಿಯೂ ಪ್ರಾತಿನಿಧಿಕ ವಾಗಿಯೂ ಇವೆ. ಈ ಲೇಖನಗಳನ್ನು ಬಿಟ್ಟರೆ ಮತ್ತಾವ ಗದ್ಯಲೇಖನಗಳೂ ಇಲ್ಲ ಎಂದು ಹೇಳುವುದು ಧಾರ್ಷ್ಟ್ಯವಾಗುತ್ತದೆ. ನನಗೆ ತಿಳಿದಷ್ಟು ಶಕ್ಯ ವಿದ್ದಷ್ಟು, ಮುಖ್ಯವಾಗಿ ಕನ್ನಡ ಗದ್ಯ ಸಾಹಿತ್ಯದ ಒಂದು ಸಮಗ್ರ ಚಿತ್ರ

ಮೂಡುವಂತೆ ಈ ಲೇಖನಗಳನ್ನು ಆರಿಸಿಕೊಂಡಿದ್ದೇನೆ. ಇದರಿಂದ ಜನತೆಗೆ ಪ್ರಯೋಜನವಾಗುವುದಾದರೆ ನನ್ನ ಶ್ರಮ ಸಾರ್ಥಕವಾಗುತ್ತದೆ.

ಪ್ರಸ್ತುತ ಸಂಕಲನದಲ್ಲಿ ಆರಿಸಿಕೊಂಡಿರುವ ಲೇಖಕರಲ್ಲಿ ಕೆಲವರು ನನ್ನ ಗುರುಗಳಾಗಿದ್ದವರು ; ಉಳಿದವರು ಗುರುಸ್ಥಾನದಲ್ಲಿರುವವರು ; ಹಿರಿಯರು ; ವಿದ್ವಾಂಸರು. ಇವರಲ್ಲಿ ಕೆಲವರು ಈಗ ಕೈಲಾಸವಾಸಿಗಳಾಗಿದ್ದಾರೆ. ಆದರೆ ಅವರ ಸಾಹಿತ್ಯ ಸೇವೆಯಿಂದ ಸದಾ ಅಮರರಾಗಿದ್ದಾರೆ.

ಈ ಸಂಕಲನದಲ್ಲಿ ಉಪಯೋಗಿಸಿಕೊಂಡಿರುವ ಲೇಖನಗಳಿಗೆ ಅನುಮತಿಯನ್ನು ಕೊಟ್ಟ ಎಲ್ಲ ಹಿರಿಯ ಮಹನೀಯರಿಗೂ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ದಿವಂಗತರ ಲೇಖನಗಳಿಗೆ ಅನುಮತಿಯನ್ನು ಒದಗಿಸಿಕೊಟ್ಟ ಅವರ ಬಂಧು ಬಾಂಧವರಿಗೂ ವಿದ್ವಾಂಸರಿಗೂ ನಾನು ಕೃತಜ್ಞ.

ಈ ಸಂಕಲನವನ್ನು ಸಿದ್ಧಪಡಿಸುವಲ್ಲಿ ನನಗೆ ಸೂಕ್ತ ಮಾರ್ಗದರ್ಶನ ನೀಡಿದ ಹಿರಿಯರೊಬ್ಬರಿಗೆ ನನ್ನ ನಮಸ್ಕಾರಗಳು. ನನ್ನ ಸಹೋದ್ಯೋಗಿಗಳಾದ ಪಂಡಿತ ಹೆಮ್ಮಿಗೆ ದೇಶಿಕಾಚಾರ್ಯ, ಜಿ.ಜಿ. ಮಂಜುನಾಥನ್ ಎಂ.ಎ., ಅವರು ಈ ಸಂಕಲನವನ್ನು ಸಿದ್ಧಪಡಿಸುವಲ್ಲಿ ನೆರವಾಗಿದ್ದಾರೆ. ವಿಶೇಷವಾಗಿ ಶ್ರೀ ಜಿ. ಜಿ. ಮಂಜುನಾಥನ್ ಅವರು ನನಗಾಗಿ ಶ್ರಮಿಸಿದ್ದಾರೆ. ಆದುದರಿಂದ ನಾನು ಅವರಿಗೆ ಆಭಾರಿಯಾಗಿದ್ದೇನೆ. ಈ ಸಂಕಲನವನ್ನು ಕ್ಷಿಪ್ರದಲ್ಲಿಯೇ ಅಚ್ಚುಮಾಡಿಕೊಟ್ಟ ಶ್ರೀ ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟದವರಿಗೆ ನನ್ನ ವಂದನೆಗಳು.

ಬೆಂಗಳೂರು

೨೦-೭-೧೯೬೬

ಎನ್. ಬಸವಾರಾಧ್ಯ

ಎರಡನೆಯ ಮುದ್ರಣ

ಬೆಂಗಳೂರು ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ ಸಮಿತಿಯವರು ೧೯೭೩–೭೪ನೆಯ ವರ್ಷದ ಎರಡನೆಯ ಬಿ.ಎ., ಬಿ.ಎಸ್‌ಸಿ., ತರಗತಿಗಳಿಗೆ ಕನ್ನಡ ಗದ್ಯಾವಲೋಕನವನ್ನು ಪಠ್ಯಪುಸ್ತಕವನ್ನಾಗಿ ನಿಯಮಿಸಿದುದರಿಂದ

ಸಮಿತಿಯ ಸದಸ್ಯರಿಗೆಲ್ಲ ಕೃತಜ್ಞತೆಗಳನ್ನು ಸೂಚಿಸುತ್ತೇನೆ. ಮೊದಲನೆಯ ಆವೃತ್ತಿಯ ಕಾಲಕ್ಕೆ ಜೀವಂತರಾಗಿದ್ದು ಈಗ ಕೀರ್ತಿಶೇಷರಾಗಿರುವ ನನ್ನ ವಿದ್ಯಾಗುರುಗಳಾದ ಡಾ॥ ಎ. ಆರ್. ಕೃಷ್ಣಶಾಸ್ತ್ರಿ, ಪ್ರೊ॥ ಡಿ. ಎಲ್. ನರಸಿಂಹಾಚಾರ್ ಮತ್ತು ಪ್ರೊ॥ ತೀ.ನಂ. ಶ್ರೀಕಂಠಯ್ಯನವರಿಗೆ ಶ್ರದ್ಧಾಂಜಲಿಯನ್ನರ್ಪಿಸುತ್ತೇನೆ.

ಎನ್. ಬಸವಾರಾಧ್ಯ

ಮೂರನೆಯ ಮುದ್ರಣ

ಬೆಂಗಳೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯದ ಪಠ್ಯಪುಸ್ತಕ ಸಮಿತಿಯವರು ೧೯೭೮ನೆಯ ವರ್ಷದ ಕೆಲವು ಪದವಿ ತರಗತಿಗಳಿಗೆ ಕನ್ನಡ ಗದ್ಯಾವಲೋಕನವನ್ನು ಪಠ್ಯಪುಸ್ತಕವನ್ನಾಗಿ ನಿಯಮಿಸಿದುದರಿಂದ ಆಯಾ ಸಮಿತಿಯ ಸದಸ್ಯರಿಗೆಲ್ಲ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಆವೃತ್ತಿ ತರುವ ವೇಳೆಗೆ ನಮ್ಮನ್ನಗಲಿರುವ ಶ್ರೀ ಜಿ. ಹನುಮಂತರಾವ್ ಅವರಿಗೆ ಶ್ರದ್ಧಾಂಜಲಿಯನ್ನರ್ಪಿಸುತ್ತೇನೆ.

ಮೈಸೂರು
೧೬-೯-೧೯೭೭

ಎನ್. ಬಸವಾರಾಧ್ಯ

ನಾಲ್ಕನೆಯ ಮುದ್ರಣ

ಕನ್ನಡ ಸಾಹಿತ್ಯ ಪರಿಷತ್ತು ನಡೆಸುತ್ತಿರುವ ಸಾಹಿತ್ಯ ಪರೀಕ್ಷೆಗಳಲ್ಲಿ ಒಂದಾದ 'ಕಾವ' ಪರೀಕ್ಷೆಗೆ, 'ಕನ್ನಡ ಗದ್ಯಾವಲೋಕನ' ಕೃತಿಯನ್ನು ೧೯೯೩ ವರ್ಷಕ್ಕೆ ನಿಗದಿಪಡಿಸಿ ಉಪಕರಿಸಿದೆ ; ಹಾಗೆಯೇ ಮರುಮುದ್ರಿಸುವ ಕಾರ್ಯಗೌರವವನ್ನು ಪರಿಷತ್ತು ಅಚ್ಚುಕಟ್ಟಾಗಿ ನಿರ್ವಹಿಸಿ ಪ್ರೋತ್ಸಾಹಿಸಿದೆ. ಸಾಹಿತ್ಯ ಪರಿಷತ್ತಿಗೆ ನಾನು ಸದಾ ಚಿರಋಣಿ.

ಎನ್. ಬಸವಾರಾಧ್ಯ

ಐದನೆಯ ಮುದ್ರಣ

'ಕನ್ನಡ ಗದ್ಯಾವಲೋಕನ'ವನ್ನು ಕನ್ನಡ ಸಾಹಿತ್ಯ ಪರಿಷತ್ತಿನ 'ಕಾವ' ಪರೀಕ್ಷೆಗೆ ಪಠ್ಯಪುಸ್ತಕವನ್ನಾಗಿ ನಿಯಮಿಸಿದುದರಿಂದ ಈಐದನೆಯ ಆವೃತ್ತಿಯನ್ನು ಹೊರತರಲಾಗಿದೆ. ಈ ಆವೃತ್ತಿಯಲ್ಲಿ ಯಾವ ಬದಲಾವಣೆಗಳನ್ನು ಮಾಡಿಲ್ಲ. ಈ ಕೃತಿಯನ್ನು ಮರು ಮುದ್ರಣ ಮಾಡಿದ ಕನ್ನಡ ಸಾಹಿತ್ಯ ಪರಿಷತ್ತಿಗೆ ನಾನು ಆಭಾರಿಯಾಗಿದ್ದೇನೆ.

ಬೆಂಗಳೂರು
ಎನ್. ಬಸವಾರಾಧ್ಯ
೧೫-೩-೧೯೯೬

ಪರಿಚಯ

ಎಂ. ಎಸ್. ಪುಟ್ಟಣ್ಣನವರು

ದಿವಂಗತ ಎಂ. ಎಸ್. ಪುಟ್ಟಣ್ಣನವರು ಕ್ರಿ.ಶ. ೧೮೫೪ರಲ್ಲಿ ಮೈಸೂರಿ
ಲ್ಲಿ ಜನ್ಮವೆತ್ತಿದರು. ೧೮೭೮ರಲ್ಲಿ ಮದರಾಸು ವಿಶ್ವವಿದ್ಯಾನಿಲಯದ ಬಿ.ಎ.,
ದವೀಧರರಾದರು. ಇವರು ಮೊದಲು ಶಾಲಾ ಉಪಾಧ್ಯಾಯರಾಗಿ,
ತರುವಾಯ ಭಾಷಾಂತರಕಾರರಾಗಿ, ಕೊನೆಗೆ ಅಮಲ್ದಾರರಾಗಿ ಸೇವೆಯಿಂದ
ನಿವೃತ್ತರಾದರು. ಕನ್ನಡ ಸಾಹಿತ್ಯಕ್ಕೆ ಇವರು ಸಲ್ಲಿಸಿದ ಸೇವೆ ಅಪಾರ
ವಾದುದು. ಚಾರಿತ್ರಿಕ ಕಾದಂಬರಿ, ಜೀವನ ಚರಿತ್ರೆ, ಶಾಲಾ ಪಠ್ಯಪುಸ್ತಕ,
ಭಾಷಾಂತರ ಮತ್ತು ಪತ್ರಿಕೋದ್ಯಮ ಈ ಕ್ಷೇತ್ರಗಳಲ್ಲಿ ಇವರು ವಿಶೇಷವಾಗಿ
ದುಡಿದಿದ್ದಾರೆ. ಇವರು ಕನ್ನಡ ಒಂದನೇ ರೀಡರ್, ಲೇಖನ ಲಕ್ಷಣ, ನೀತಿ
ಚಿಂತಾಮಣಿ, ಮುಸುಕು ತೆಗೆಯೇ ಮಾಯಾಂಗನೆ, ಮಾಡಿದ್ದುಣ್ಣೋ
ಮಹಾರಾಯ, ಪೇಟೆ ಮಾತೇನಜ್ಜಿ, ಸುಮತಿ ಮದನಕುಮಾರ ಚರಿತ್ರೆ,
ಕಾಂಪೂಷನಚರಿತ್ರೆ, ಕುಣಿಗಲ ರಾಮಾಶಾಸ್ತ್ರಿಗಳ ಚರಿತ್ರೆ, ಮಹಮ್ಮದ್
ಗಜಾನನ ಚರಿತ್ರೆ, ಗುಮ್ಮನಾಯಕನ ಪಾಳ್ಯ, ಇಕ್ಕೇರಿ, ಹಾಗಲವಾಡಿ–
ಪಾಳಯಗಾರರ ಚರಿತ್ರೆ ಮುಂತಾದ ಗ್ರಂಥಗಳನ್ನು ಬರೆದಿದ್ದಾರೆ.
'ಹಿತಬೋಧಿನಿ' ಎಂಬ ಪತ್ರಿಕೆಯನ್ನೂ ಕೆಲಕಾಲ ನಡೆಸಿದರು.

ಶ್ರೀಯುತರು ೧೯೧೫ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ
ಸ್ಥಾಪನೆಯ ಕಾರ್ಯದಲ್ಲಿ ಅತ್ಯಂತ ಶ್ರದ್ಧೆಯಿಂದ ಭಾಗವಹಿಸಿ ಕೆಲಕಾಲ
ಅದರ ಕಾರ್ಯದರ್ಶಿಗಳಾಗಿಯೂ ಸೇವೆಯನ್ನು ಸಲ್ಲಿಸಿದ್ದಾರೆ.

ದಿವಂಗತ ಪುಟ್ಟಣ್ಣನವರನ್ನು ಕುರಿತು ಪ್ರೊ|| ದೇ. ಜವರೇಗೌಡ ಅವರು
"ಕನ್ನಡ ನಾಡಿನ ಆವರಣವನ್ನು ಹಿನ್ನಲೆಯಾಗಿಟ್ಟುಕೊಂಡು, ಕನ್ನಡ
ಜನಾಂಗದ ಆಸೆ ಪ್ರತ್ಯಾಸೆಗಳನ್ನು, ನೋವು, ನಲಿವುಗಳನ್ನು, ತಳುಕು

*

ಹುಳುಕುಗಳನ್ನು, ನಡೆ ನುಡಿಗಳನ್ನು–ಒಟ್ಟಿನಲ್ಲಿ ಕನ್ನಡಿಗರ ಸಮಾಜವನ್ನು, ಅವರ ಕನ್ನಡತನವನ್ನು – ಚಿತ್ರಿಸಲು, ಕನ್ನಡಿಸಲು ಮೊಟ್ಟಮೊದಲು ಪ್ರಯತ್ನಿಸಿದವರು ಪುಟ್ಟಣ್ಣನವರು” ಎಂದು ಹೇಳಿದ್ದಾರೆ.[1]

ಪ್ರಕೃತ ಭಾಗವನ್ನು ‘ಚಿತ್ರದುರ್ಗದ ಪಾಳಯಗಾರರು’ ಎಂಬ ಗ್ರಂ[illegible]ದಿಂದ ಎತ್ತಿಕೊಳ್ಳಲಾಗಿದೆ. ಇದರಲ್ಲಿ ಪಾಳಯಗಾರರ ಆಳ್ವಿಕೆಯ ಆರಂಭ, ಅಂದಿನ ಕಾಲದ ಜನಜೀವನ, ಆಡಳಿತ ವಿಧಾನ, ನ್ಯಾಯಪದ್ಧತಿ ಮೊದಲಾದ ಅಂಶಗಳು ವಿಶಿಷ್ಟವಾಗಿ ಮೂಡಿಬಂದಿವೆ. ಕನ್ನಡದಲ್ಲಿ ಚಾರಿತ್ರಿಕ ಕಾದಂಬರಿಗಳನ್ನು ಪ್ರಪ್ರಥಮವಾಗಿ ರಚಿಸಿದ ಕೀರ್ತಿ ಪುಟ್ಟಣ್ಣನವರಿಗೆ ಸಲ್ಲಬೇಕಾಗಿದೆ.

೨. ಪಂಜೆ ಮಂಗೇಶರಾಯರು

ದಿವಂಗತ ಪಂಜೆ ಮಂಗೇಶರಾಯರು ಕ್ರಿ.ಶ. ೧೮೭೪ರಲ್ಲಿ ಹುಟ್ಟಿದರು. ಇವರು ಮದರಾಸು ವಿಶ್ವವಿದ್ಯಾನಿಲಯದಲ್ಲಿ ೧೯೦೪ ರಲ್ಲಿ ಬಿ.ಎ., ಪದವಿಯನ್ನೂ, ೧೯೦೫ ರಲ್ಲಿ ಎಲ್.ಟಿ., ಪದವಿಯನ್ನೂ ಪಡೆದರು. ತರುವಾಯ ಉಪಾಧ್ಯಾಯರಾಗಿ ಸೇರಿ, ಶಾಲಾ ಇನ್ಸ್‌ಪೆಕ್ಟರ್ ಆಗಿ, ಕೊನೆಗೆ ಮಡಕೇರಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ನಿವೃತ್ತರಾದರು.

ಪಂಜೆ ಮಂಗೇಶರಾಯರು ಕವಿಗಳು, ರಸಿಕರು, ಉತ್ತಮ ಶಿಕ್ಷಣ ತಜ್ಞರು. ವಿದ್ಯಾಭ್ಯಾಸ ಇಲಾಖೆಯಲ್ಲಿ ದುಡಿದ ಇವರಿಗೆ ಅಲ್ಲಿನ ಕುಂದ ಕೊರತೆಗಳು ಚೆನ್ನಾಗಿ ತಿಳಿದಿದ್ದುವು. ಆದುದರಿಂದ ಇವರ ದೃಷ್ಟಿ ವಿಶೇಷವಾಗಿ ಮಕ್ಕಳ ಶಿಕ್ಷಣದ ಕಡೆಗೆ ಹರಿಯಿತು. ಕನ್ನಡದಲ್ಲಿ ಬಾಲಸಾಹಿತ್ಯವನ್ನು ಆರಂಭಿಸಿದ ಕೀರ್ತಿ ಪಂಜೆಯವರಿಗೆ ಸಲ್ಲುತ್ತದೆ. ಇವರು ಐತಿಹಾಸಿಕ ಪ್ರಬಂಧಗಳು, ಕತೆಗಳು, ಕವನಗಳು, ಸಂಸ್ಮರಣ ಲೇಖನಗಳೇ ಮೊದಲಾದುವನ್ನು ಬರೆದಿದ್ದಾರೆ. ಇವರ ಕವನಗಳಲ್ಲಿ ದೇಶೀಯ ಛಂದಸ್ಸಿನ ವಿವಿಧ ಭಾವ ಭಂಗಿಗಳನ್ನು ಕಾಣಬಹುದಾಗಿದೆ. ‘ಕವಿಶಿಷ್ಯ’ ಎನ್ನುವುದು ಇವರ ಕಾವ್ಯನಾಮ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಗೆ ಇವರು ಸಲ್ಲಿಸಿದ ವಿಶೇಷವಾದ ಸೇವೆಯನ್ನು ಪರಿಗಣಿಸಿ, ೧೯೩೪ರಲ್ಲಿ ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಲಾಯಿತು.

---

1. ಸಾಹಿತಿಗಳ ಸಂಗದಲ್ಲಿ, ಪುಟ ೨೯.

'ವೈದ್ಯರ ಒಗ್ಗರಣೆ' ಎಂಬ ಕಥೆಯನ್ನು 'ಪಂಜೆಯವರ ನೆನಪಿಗಾಗಿ' ಎಂಬ ಸ್ಮಾರಕ ಗ್ರಂಥದಿಂದ ಆರಿಸಿಕೊಳ್ಳಲಾಗಿದೆ. ಈ ಕಥೆಯಲ್ಲಿ ಪಂಜೆಯವರು ಸಮಕಾಲೀನ ಸಮಾಜದ ಚಿತ್ರಣವನ್ನು ಸ್ವಾರಸ್ಯವಾಗಿ ನಿರೂಪಿಸಿದ್ದಾರೆ.

೩. ಮುದವೀಡು ಕೃಷ್ಣರಾಯರು

ದಿವಂಗತ ಮುದವೀಡು ಕೃಷ್ಣರಾಯರು 'ಕನ್ನಡದ ಕೃಷ್ಣರಾಯರು' ಎಂದು ಪ್ರಖ್ಯಾತರಾಗಿದ್ದಾರೆ. ಇವರು ಕನ್ನಡನಾಡು ನುಡಿಯ ಜಾಗೃತಿಗಾಗಿ ಸತತವಾಗಿ ಪರಿಶ್ರಮಿಸಿದ್ದಾರೆ. ೧೮೭೪ ರಲ್ಲಿ ಧಾರವಾಡ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ಜನಿಸಿದ ಇವರು ಸಿಂಧಗಿ, ಕಾರವಾರಗಳಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದರು. ಕರ್ನಾಟಕ ಏಕೀಕರಣ ಆಂದೋಲನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. ಉತ್ತರ ಕರ್ನಾಟಕದಲ್ಲಿ ಮರಾಠಿಗರ ಕಾಲ್ತುಳಿತಕ್ಕೆ ಸಿಕ್ಕಿದ್ದ ಕನ್ನಡವನ್ನು ಉದ್ಧರಿಸಿದ ಮಹಾಪುರುಷರಲ್ಲಿ ಇವರೂ ಒಬ್ಬರು.

ಮುದವೀಡು ಕೃಷ್ಣರಾಯರ ಕಾರ್ಯಕ್ಷೇತ್ರ ವಿಸ್ತಾರವಾದುದು. ಮುಖ್ಯವಾಗಿ ಸಾರ್ವಜನಿಕ ರಂಗದಲ್ಲಿ ಇವರು ವಿಶೇಷವಾಗಿ ದುಡಿದಿದ್ದಾರೆ. ಪತ್ರಿಕಾ ರಂಗದಲ್ಲಿಯೂ ಇವರು ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು. 'ಧಾರವಾಡ ವೃತ್ತ' ಎಂಬ ಮರಾಠಿ ಪತ್ರಿಕೆಯನ್ನು ಸ್ವಲ್ಪ ಕಾಲವೂ; 'ಕರ್ನಾಟಕ ವೃತ್ತ', 'ಧನಂಜಯ' ಎಂಬ ಕನ್ನಡ ಪತ್ರಿಕೆಗಳನ್ನು ಸುಮಾರು ಮೂವತ್ತು ವರ್ಷಗಳ ಕಾಲವೂ ನಡೆಸಿಕೊಂಡು ಬಂದಿದ್ದಾರೆ.

ನಾಟಕಕಲೆಯಲ್ಲಿ ಇವರಿಗೆ ವಿಶೇಷವಾದ ಅಭಿರುಚಿ. ಧಾರವಾಡದ ಭರತಕಲೋತ್ತೇಜಕ ಮಂಡಲದ ಕಾರ್ಯದರ್ಶಿಯಾಗಿದ್ದರು. ಅನೇಕ ನಾಟಕಗಳಲ್ಲಿ ಭಾಗವಹಿಸಿದ್ದರು. ಇವರು ಬೆಳಗಾವಿಯಲ್ಲಿ ನಡೆದ ೧೦ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಇವರು ಚಿತ್ತೂರು ಮುತ್ತಿಗೆ, ಪ್ರೇಮಭಂಗ ಮುಂತಾದ ಗ್ರಂಥಗಳನ್ನು ಬರೆದಿದ್ದಾರೆ. 'ಕನ್ನಡವನ್ನುದ್ಧರಿಸಿದ ಪುಣ್ಯಪುರುಷರು' ಎಂಬ ಲೇಖನವನ್ನು 'ಸಂಭಾವನೆ' ಎಂಬ ಸಂಸ್ಮರಣ ಸಂಪುಟದಿಂದ ಆರಿಸಿಕೊಳ್ಳಲಾಗಿದೆ. ಇದರಲ್ಲಿ

ಕನ್ನಡ ನಾಡು ನುಡಿಗಳಿಗಾಗಿ ತನು ಮನ ಧನವನ್ನರ್ಪಿಸಿದ ಹಿರಿಯ ವ್ಯಕ್ತಿಗಳ ಚಿತ್ರಣಗಳನ್ನು ಕೊಟ್ಟಿದ್ದಾರೆ.

೪. ಹರ್ಡೇಕರ ಮಂಜಪ್ಪನವರು

'ಕರ್ನಾಟಕದ ಗಾಂಧಿ' ಎಂದು ಲೋಕಪ್ರಿಯರಾಗಿದ್ದ ಹರ್ಡೇಕರ ಮಂಜಪ್ಪನವರು ಕನ್ನಡದಲ್ಲಿ ರಾಷ್ಟ್ರೀಯ ಸಾಹಿತ್ಯವನ್ನು ಆರಂಭಿಸಿದವರಲ್ಲಿ ಮೊದಲಿಗರು. ತತ್ತ್ವನಿಷ್ಠರೂ ದೇಶಸೇವಾಕಾಂಕ್ಷಿಗಳೂ ಆದ ಶ್ರೀ ಮಂಜಪ್ಪನವರು ೧೮೮೬ರಲ್ಲಿ ಜನ್ಮವೆತ್ತಿದರು. ಧಾರವಾಡದ ಶಿಕ್ಷಣ ಮಹಾವಿದ್ಯಾಲಯದಲ್ಲಿ ಮೂರು ವರ್ಷಗಳ ಕಾಲ ಪ್ರೌಢವ್ಯಾಸಂಗವನ್ನು ಮಾಡಿದರು. ಆಮೇಲೆ ಉಪಾಧ್ಯಾಯ ವೃತ್ತಿಯನ್ನು ಕೈಕೊಂಡರು. ಕೆಲಕಾಲದ ಮೇಲೆ ಅದನ್ನು ಬಿಟ್ಟರು.

ಕ್ರಿಯಾಶೀಲ ವ್ಯಕ್ತಿಯಾಗಿದ್ದ ಹರ್ಡೇಕರ ಮಂಜಪ್ಪನವರು ದಾವಣಗೆರೆಯಲ್ಲಿ ಜ್ಞಾನಪ್ರಸಾರಕ ಸಂಘ, ಹುಬ್ಬಳ್ಳಿಯಲ್ಲಿ ಸತ್ಯಾಗ್ರಹ ಸಮಾಜ, 'ಹರಿಹರದ ತುಂಗಭದ್ರೆಯ ದಂಡೆಯ ಮೇಲೆ ಸತ್ಯಾಗ್ರಹ ಆಶ್ರಮ, ಆಲಮಟ್ಟಿಯಲ್ಲಿ ವೃತ್ತಿಶಿಕ್ಷಣ ಶಾಲೆಯಾದ ವೀರಶೈವ ಮಹಾವಿದ್ಯಾಲಯ–ಮೊದಲಾದುವನ್ನು ಸ್ಥಾಪಿಸಿದರು. ಬಸವೇಶ್ವರ ಸೇವಾದಳವೆಂಬ ಸ್ವಯಂಸೇವಕ ಪಂಥವನ್ನು ಕಟ್ಟಿ ಕನ್ನಡನಾಡಿನ ತರುಣರ ನೈತಿಕ ಪುನರುತ್ಥಾನಕ್ಕೆ ಕಾರಣರಾದರು. ಆಜೀವ ಬ್ರಹ್ಮಚಾರಿಗಳಾಗಿದ್ದ ಇವರು ನಾಡಿನಲ್ಲೆಲ್ಲ ಸಂಚರಿಸಿ ಜನಜಾಗೃತಿಯನ್ನುಂಟುಮಾಡಿದರು. ದೇಶಪ್ರೇಮವನ್ನು ತುಂಬಿದರು.

ಹರ್ಡೇಕರ ಮಂಜಪ್ಪನವರು ರಾಷ್ಟ್ರೀಯ ಸಾಹಿತ್ಯ, ಪತ್ರಿಕಾ ವ್ಯವಸಾಯ, ಸಂಶೋಧನೆ, ಶಿಶುಸಾಹಿತ್ಯ ಮುಂತಾದ ದಿಸೆಗಳಲ್ಲಿ ದುಡಿದಿದ್ದಾರೆ. ಬ್ರಿಟಿಷರ ಕರಾಳ ಪತ್ರಿಕಾಶಾಸನವಿದ್ದರೂ ೧೯೦೭ರಲ್ಲಿ 'ಧನುರ್ಧಾರಿ' ಎಂಬ ಪತ್ರಿಕೆಯನ್ನು ದಾವಣಗೆರೆಯಲ್ಲಿ ಪ್ರಾರಂಭಿಸಿದರು. ೧೯೧೩ರ ವರೆಗೆ ಅದನ್ನು ಸಾಹಸದಿಂದ ನಡೆಸಿದರು. ೧೯೨೧ರಲ್ಲಿ 'ರಾಷ್ಟ್ರಜೀವನ ಗ್ರಂಥಮಾಲೆ'ಯನ್ನು ಆರಂಭಿಸಿ ಸಮಾಜಕ್ಕೆ ಉಪಯುಕ್ತವಾದ ಸಾಹಿತ್ಯವನ್ನು ಪ್ರಚುರಪಡಿಸಿದರು.

ದಿವಂಗತ ಹರ್ಡೇಕರ ಮಂಜಪ್ಪನವರು ಸ್ವತಂತ್ರ ವಿವೇಚನಾಶಕ್ತಿಯ ಪ್ರವೃತ್ತಿಯುಳ್ಳವರಾಗಿದ್ದರು. ಅವರು ಒಂದುಕಡೆ "ನನ್ನ ಅನೇಕ ಕಾರ್ಯ ಪದ್ಧತಿಗಳು ಕೆಲವರಿಗೆ ಅಯುಕ್ತವಾಗಿ ತೋರಬಹುದು. ಆದರೆ ನಾನು ಮಾತ್ರ ನನ್ನ ಸದಸದ್ವಿವೇಕ ಬುದ್ಧಿಗೆ ಯುಕ್ತವೆಂದು ತೋರಿದ ರೀತಿಯಲ್ಲೇ ನಡೆದು ಬಂದಿದ್ದೇನೆ" ಎಂದು ಹೇಳಿಕೊಂಡಿದ್ದಾರೆ. 'ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ' ಎಂಬ ಬೃಹದ್ಗ್ರಂಥದಲ್ಲಿ ಮಂಜಪ್ಪನವರ ಬಹು ಮಟ್ಟಿನ ಎಲ್ಲ ಬರವಣಿಗೆಗಳನ್ನು ಸಂಗ್ರಹಿಸಲಾಗಿದೆ. 'ತರುಣರ ಕೈಗನ್ನಡಿ' ಎಂಬ ಲೇಖನವನ್ನು ಮೇಲಿನ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ. ಇದರಲ್ಲಿ ಯುವಕರಿಗೆ ಉಪದೇಶವನ್ನು ನೀಡಿ ತನ್ಮೂಲಕ ಅವರ ಉದ್ಧಾರ ಮಾರ್ಗವನ್ನು ಸೂಚಿಸಿದ್ದಾರೆ ಹರ್ಡೇಕರ ಮಂಜಪ್ಪನವರು.

೫. ಡಾ|| ಎ. ಆರ್. ಕೃಷ್ಣಶಾಸ್ತ್ರೀ

ಡಾ|| ಎ. ಆರ್. ಕೃಷ್ಣಶಾಸ್ತ್ರೀ ಅವರು ೧೮೯೦ರಲ್ಲಿ ಮೈಸೂರಿನಲ್ಲಿ ಜನ್ಮವೆತ್ತಿದರು. ಇವರ ತಂದೆಯವರು ವ್ಯಾಕರಣ ಮಹಾವಿದ್ವಾನ್ ರಾಮಕೃಷ್ಣ ಶಾಸ್ತ್ರಿಗಳು. ಮೈಸೂರಿನಲ್ಲಿಯೇ ವ್ಯಾಸಂಗವನ್ನು ಮುಗಿಸಿ ಎಂ.ಎ., ಪದವೀಧರರಾದ ಶ್ರೀಕೃಷ್ಣಶಾಸ್ತ್ರಿಗಳು ೧೯೧೫ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕರಾದರು. ೧೯೧೮ರಲ್ಲಿ ಕರ್ನಾಟಕ ಸಂಘ ವನ್ನು ಸ್ಥಾಪಿಸಿ 'ಪ್ರಬುದ್ಧ ಕರ್ಣಾಟಕ' ಎಂಬ ಶ್ರೇಷ್ಠ ತ್ರೈಮಾಸಿಕವನ್ನು ಪ್ರಾರಂಭಿಸಿದರು. ಸುಮಾರು ೨೩ ವರ್ಷಗಳ ಕಾಲ ಅದರ ಸಂಪಾದಕ ರಾಗಿದ್ದರು. ಇವರು ೧೯೩೯-೪೫ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥ ಪ್ರಕಾಶನ ಸಮಿತಿಯ ಅಧ್ಯಕ್ಷರಾಗಿದ್ದರು. ಅಂದಿನ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಜನತೆಗೆ ಕನ್ನಡದಲ್ಲಿ ಅಭಿರುಚಿಯನ್ನೂ ಆಸಕ್ತಿಯನ್ನೂ ಹುಟ್ಟಿಸಿದವರು ಶ್ರೀ ಕೃಷ್ಣಶಾಸ್ತ್ರಿಗಳು. ಇವರು ಮೈಸೂರು ವಿಶ್ವವಿದ್ಯಾ ನಿಲಯದ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿದರು.

ಶ್ರೀ ಕೃಷ್ಣಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿಗೆ ಮಿಗಿಲಾದ ಸೇವೆ ಯನ್ನು ಸಲ್ಲಿಸಿದ್ದಾರೆ. ಇವರು ಪರಿಷತ್ಪತ್ರಿಕೆಯ ಸಂಪಾದಕರಾಗಿದ್ದರು; ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿದ್ದರು. ಪರಿಷತ್ತು ಪ್ರಕಟಿಸಿದ

ಕನ್ನಡ ನಿಘಂಟಿನ ಸಂಪಾದಕ ಸಮಿತಿಯ ಅಧ್ಯಕ್ಷರಾಗಿದ್ದರು ; ಕೆಲವು ಕಾಲ ಅದರ ಸಂಪಾದಕರೂ ಆಗಿದ್ದರು. ಇವರು ೧೯೪೧ರಲ್ಲಿ ಹೈದರಾಬಾದಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯವು ಇವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನಿತ್ತು ಗೌರವಿಸಿತು.

ಶ್ರೀ ಕೃಷ್ಣಶಾಸ್ತ್ರಿಗಳವರಿಗೆ ಕನ್ನಡ, ಇಂಗ್ಲಿಷ್, ಸಂಸ್ಕೃತಗಳಲ್ಲಿ ಅಪಾರವಾದ ಪಾಂಡಿತ್ಯವಿದೆ. ಬಂಗಾಲಿಯಲ್ಲಿ ವಿಶೇಷ ಪರಿಶ್ರಮವಿದೆ. ಸಂಸ್ಕೃತ ನಾಟಕ, ಭಾಸಕವಿ ಇವು ಅತ್ಯುತ್ತಮ ವಿಮರ್ಶಾಗ್ರಂಥಗಳು. ವಚನಭಾರತ, ಶ್ರೀಪತಿಯ ಕಥೆಗಳು, ಬಂಕಿಮಚಂದ್ರ, ಕಥಾಸರಿತ್ಸಾಗರ, ಕನ್ನಡ ಕೈಪಿಡಿ, ನಾಗಮಹಾಶಯ, ಭಾಷಣಗಳು ಮತ್ತು ಲೇಖನಗಳು—ಮುಂತಾದ ಗ್ರಂಥಗಳನ್ನು ಬರೆದಿದ್ದಾರೆ. ಇವರ ಬಂಕಿಮಚಂದ್ರ ಗ್ರಂಥಕ್ಕೆ ಸಾಹಿತ್ಯ ಅಕಾಡೆಮಿಯ ಬಹುಮಾನ ಸಂದಿದೆ. ಶ್ರೀಕೃಷ್ಣಶಾಸ್ತ್ರಿಗಳು ಸರಳಜೀವಿಗಳು, ನಿಗರ್ವಿಗಳು.

ಪ್ರಕೃತ 'ಮಹಾಭಾರತ ಮತ್ತು ಭಾರತೀಯ ಸಂಸ್ಕೃತಿಯಲ್ಲಿ ಅದರ ಸ್ಥಾನ' ಎಂಬ ಪ್ರಬಂಧವನ್ನು 'ಭಾಷಣಗಳು ಮತ್ತು ಲೇಖನಗಳು' ಎಂಬ ಗ್ರಂಥದಿಂದ ಆರಿಸಿಕೊಳ್ಳಲಾಗಿದೆ. ಇದರಲ್ಲಿ ಅವರ ಆಳವಾದ ಪಾಂಡಿತ್ಯ ತೀಕ್ಷ್ಣ ವಿಚಾರಧಾರೆಯನ್ನು ಕಾಣಬಹುದಾಗಿದೆ.

೬. ರಾಜಸೇವಾಪ್ರಸಕ್ತ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್

ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಕೋಲಾರ ಜಿಲ್ಲೆಯ ಮಾಲೂರು ತಲ್ಲೂಕಿನ ಮಾಸ್ತಿ ಎಂಬ ಊರಿನವರು. ಇವರ ಜನನ ೧೮೯೧ರಲ್ಲಿ. ಇವರು ವಿದ್ಯಾರ್ಥಿ ದೆಸೆಯಲ್ಲಿ ಪ್ರತಿವರ್ಗದಲ್ಲಿಯೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಹೊಂದಿದವರು. ಎಂ.ಎ., ಪದವೀಧರರಾದ ಮೇಲೆ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಮುಗಿಸಿ ಸರ್ಕಾರದ ವಿವಿಧ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿ ಕೊನೆಗೆ ಎಕ್ಸೈಜ್ ಕಮೀಷನರ್ ಹುದ್ದೆಯಿಂದ ನಿವೃತ್ತರಾದರು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಸರ್ಕಾರದ ಸೇವೆಯಲ್ಲಿದ್ದರೂ ಸಾಹಿತ್ಯ ಕ್ಷೇತ್ರದಲ್ಲಿ ಅವರು ಮಾಡಿದ ಕಾರ್ಯ ಸ್ಥಿರವಾಗಿ ನಿಲ್ಲತಕ್ಕದ್ದಾಗಿದೆ. 'ಶ್ರೀನಿವಾಸ' ಎಂಬುದು ಇವರ ಕಾವ್ಯನಾಮ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಎಂದರೆ ಕತೆ, ಕಾದಂಬರಿ, ಕವನ, ನಾಟಕ, ಭಾಷಾಂತರ, ಜೀವನ ಚರಿತ್ರೆ, ವಿಮರ್ಶೆ ಮುಂತಾದ ಕ್ಷೇತ್ರಗಳಲ್ಲಿ ದುಡಿದಿದ್ದಾರೆ. ಮಾಸ್ತಿಯವರ ಸಣ್ಣ ಕತೆಗಳು ಅತ್ಯಂತ ಜನಪ್ರಿಯವಾದುವು. ಕನ್ನಡದಲ್ಲಿ ಸಣ್ಣ ಕತೆಯನ್ನು ಪ್ರಾರಂಭಿಸಿದವರು ಶ್ರೀ ಮಾಸ್ತಿಯವರು. ಇವರು ಸಣ್ಣ ಕತೆಗಳು, ಯಶೋಧರ, ಜನತೆಯ ಸಂಸ್ಕೃತಿ, ಚನ್ನಬಸವನಾಯಕ, ರವೀಂದ್ರನಾಥ ಟಾಗೂರ್, ವಿಮರ್ಶೆ ಮೊದಲಾದ ಹಲವಾರು ಗ್ರಂಥಗಳನ್ನು ಬರೆದಿದ್ದಾರೆ. ಮಾಸ್ತಿಯವರು ಪತ್ರಿಕಾ ವ್ಯವಸಾಯದಲ್ಲೂ ಬಹಳವಾಗಿ ಶ್ರಮಿಸಿದ್ದಾರೆ. 'ಜೀವನ' ಎಂಬ ಶ್ರೇಷ್ಠತರಗತಿಯ ಮಾಸಪತ್ರಿಕೆಯನ್ನು ಬಹಳ ಕಾಲ ನಡೆಸಿಕೊಂಡು ಬಂದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪುರೋಭಿವೃದ್ಧಿಗಾಗಿ ಮಾಸ್ತಿಯವರು ವಿಶೇಷವಾಗಿ ದುಡಿದಿದ್ದಾರೆ. ಸುಮಾರು ಐದು ವರ್ಷಗಳ ಕಾಲ ಅದರ ಉಪಾಧ್ಯಕ್ಷರಾಗಿದ್ದರು. ಇವರು ೧೯೨೯ರಲ್ಲಿ ಬೆಳಗಾವಿಯಲ್ಲಿ ನಡೆದ ೧೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರಿಗೆ, ಮೈಸೂರು ಮಹಾರಾಜರವರು 'ರಾಜಸೇವಾಪ್ರಸಕ್ತ' ಎಂಬ ಬಿರುದನ್ನು ದಯಪಾಲಿಸಿದ್ದಾರೆ : ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾಲಯದವರು ಗೌರವ ಡಾಕ್ಟರೇಟ್ ಪದವಿಯನ್ನಿತ್ತು ಗೌರವಿಸಿದ್ದಾರೆ. ಮಾಸ್ತಿಯವರನ್ನು ಕುರಿತು ಪ್ರೊ|| ಡಿ. ಜವರೇಗೌಡ ಅವರು 'ಶ್ರೀನಿವಾಸರು ಕತೆಯ ಲಕ್ಷಣಶಾಸ್ತ್ರವನ್ನು ಬರೆದಿಟ್ಟಿಲ್ಲ ; ಲಕ್ಷಣಕಾರರು ಅರಗಿಸಿಕೊಳ್ಳಲಾರದಷ್ಟು ಕತೆಗಳನ್ನು ರಚಿಸಿದ್ದಾರೆ. ಅವರ ದೃಷ್ಟಿಗೆ ದೂರವಾದ, ಅವರ ಪ್ರತಿಭೆಗೆ ಸಿಲುಕದ, ಅವರ ಪ್ರಯೋಗಕ್ಕೆ ಸಿಲುಕದ ಕಥಾವಿಧಾನವಿಲ್ಲ. ಹಲವಾರು ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಕಾಲ್ಪನಿಕ ಕತೆಗಳನ್ನು ಕಂಡು, ಕೇಳಿದ, ಊಹಿಸಿದ ವಸ್ತುವಿನ ಆಧಾರದ ಮೇಲೆ, ದಿನಚರಿಯ, ಸಂಭಾಷಣೆಯ ಅಥವಾ ಪತ್ರರಚನೆಯ ರೂಪದಲ್ಲಿ—ಇನ್ನೂ ಎಷ್ಟೆಷ್ಟೋ ರೀತಿ ವಿಧಾನಗಳಲ್ಲಿ—

ಕತೆಗಳನ್ನು ಕಟ್ಟಿ ಸಮಕಾಲೀನ ಮತ್ತು ಕಿರಿಯ ಪೀಳಿಗೆಯ ಕತೆಗಾರರಿಗೆ ಆದರ್ಶರಾಗಿದ್ದಾರೆ, ಮಾರ್ಗದರ್ಶಕರಾಗಿದ್ದಾರೆ" ಎಂದು ಹೇಳಿದ್ದಾರೆ.[1]

ಪ್ರಕೃತ ಸಣ್ಣ ಕತೆಗಳ ಗ್ರಂಥದಿಂದ 'ನಿಜಗಲ್ಲಿನ ರಾಣಿ' ಎಂಬ ಕಥೆಯನ್ನು ಇಲ್ಲಿ ಆರಿಸಿಕೊಳ್ಳಲಾಗಿದೆ.

೨. ಶಿ. ಶಿ. ಬಸವನಾಳರು

ದಿವಂಗತ ಶಿವಲಿಂಗಪ್ಪ ಶಿವಯೋಗಪ್ಪ ಬಸವನಾಳರು ೧೮೯೩ರಲ್ಲಿ ಜನ್ಮವೆತ್ತಿದರು. ಗದಗಿನಲ್ಲಿ ಹೈಸ್ಕೂಲು ವಿದ್ಯಾಭ್ಯಾಸವನ್ನು ಮುಗಿಸಿ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಎಂ.ಎ., ಪದವೀಧರರಾದರು. ವಿದ್ಯಾಭ್ಯಾಸ ಮುಗಿದಮೇಲೆ ಬೆಳಗಾವಿಯಲ್ಲಿ ಒಂದು ಹೈಸ್ಕೂಲನ್ನು ಸ್ಥಾಪಿಸಿದರು. ೧೯೨೨ರಲ್ಲಿ ಧಾರವಾಡದ ರಾಜಾಲಖಮನಗೌಡ ಸರ್ ದೇಸಾಯರ್ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾದರು. ಆಮೇಲೆ ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾದರು.

ಶಿಕ್ಷಣ ಕ್ಷೇತ್ರದಲ್ಲಿ ಶಿ. ಶಿ. ಬಸವನಾಳರು ಸಲ್ಲಿಸಿರುವ ಸೇವೆ ಅಮೋಘವಾದುದು ; ಚಿರಕಾಲ ನಿಲ್ಲುವಂತಹದು ಇವರು ಕೆ.ಎಲ್.ಇ. ಸೊಸೈಟಿಯ ಕಾರ್ಯದರ್ಶಿಯಾಗಿದ್ದರು. ವೀರಶೈವ ತರುಣ ಸಂಘದ ಸಂಸ್ಥಾಪಕರಲ್ಲೊಬ್ಬರಾಗಿ ಆ ಸಂಘದ ಅಧ್ಯಕ್ಷರಾಗಿದ್ದರು. 'ಪ್ರಬೋಧ', 'ಜಯಕರ್ನಾಟಕ' ಎಂಬ ಮಾಸಪತ್ರಿಕೆಗಳಿಗೆ ಕೆಲಕಾಲ ಸಂಪಾದಕರಾಗಿದ್ದರು. ಇವರು ವೀರಶೈವ ವಿದ್ಯಾವರ್ಧಕ ಸಂಘದ ಹುಟ್ಟು, ಬೆಳವಣಿಗೆಗಾಗಿ ಅಪಾರವಾಗಿ ದುಡಿದಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಮಿಗಿಲಾಗಿ ಶ್ರಮಿಸಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿಯೂ ಬಸವನಾಳರು ಸಲ್ಲಿಸಿರುವ ಸೇವೆ ಮಹತ್ತರವಾದುದು. ಬಸವಣ್ಣನವರ ವಚನಗಳು, ಪ್ರಭುಲಿಂಗಲೀಲೆ, ಶಬರಶಂಕರ ವಿಳಾಸ, ಕರ್ನಾಟಕ ಕಾವ್ಯಾವಲೋಕನ ಮುಂತಾದ ಗ್ರಂಥಗಳ ಪರಿಷ್ಕೃತ ಮುದ್ರಣಗಳನ್ನು ಹೊರತಂದಿದ್ದಾರೆ. ಶಬ್ದಾನುಶಾಸನಕ್ಕೆ ಪ್ರಕಾಶಿಕೆಯನ್ನು

---

1 ಸಾಹಿತಿಗಳ ಸಂಗದಲ್ಲಿ, ಪುಟ ೯೮–೯೯.

ಬರೆದಿದ್ದಾರೆ. 'Mousings of Basava' ಎನ್ನುವ ಇವರ ಕೃತಿ ಬಸವಣ್ಣನವರ ವಚನಗಳ ಇಂಗ್ಲಿಷ್ ಅನುವಾದ.

ಬಸವನಾಳರು ರಬಕವಿಯಲ್ಲಿ ನಡೆದ ೩೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅಖಿಲ ಭಾರತ ವೀರಶೈವ ಮಹಾಸಭೆಯ ೧೩ನೆಯ ಅಧಿವೇಶನದ ಅಧ್ಯಕ್ಷಪೀಠವನ್ನೂ ಇವರು ವಹಿಸಿದ್ದರು.

ಪ್ರಕೃತ ಭಾಗವನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಿಂದ ಆರಿಸಿಕೊಳ್ಳಲಾಗಿದೆ. ಇದರಲ್ಲಿ ಕನ್ನಡದ ಬಗ್ಗೆ ಅವರಿಗಿರುವ ಅಪಾರ ಅಭಿಮಾನವನ್ನು ವ್ಯಕ್ತಪಡಿಸಿರುವುದಲ್ಲದೆ, ಕನ್ನಡ ಸಾಹಿತ್ಯದ ಸರ್ವಾಂಗೀಣ ಪ್ರಗತಿಗೆ ಕೆಲವು ಗೊತ್ತುಗುರಿಗಳನ್ನು ಸೂಚಿಸಿದ್ದಾರೆ.

೮. ಜಿ. ಹನುಮಂತರಾವ್

ಶ್ರೀ ಜಿ. ಹನುಮಂತರಾಯರು. ೧೯೦೮ರಲ್ಲಿ ಜನ್ಮವೆತ್ತಿದರು. ಇವರು ಎಂ.ಎ., ಪದವಿಯನ್ನು ಪಡೆದ ಮೇಲೆ ತತ್ತ್ವ ಶಾಸ್ತ್ರದ ಅಧ್ಯಾಪಕರಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೇರಿ ಕೊನೆಗೆ ವಿಶ್ವವಿದ್ಯಾನಿಲಯ ಗ್ರಂಥ ಭಂಡಾರದ ಮುಖ್ಯಾಧಿಕಾರಿಗಳಾಗಿ ನಿವೃತ್ತರಾದರು.

ಶ್ರೀ ಹನುಮಂತರಾಯರು ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನ ಶಾಖೆಯ ಕಾರ್ಯದರ್ಶಿಗಳಾಗಿ ವಿಶೇಷವಾದ ಸೇವೆಯನ್ನು ಸಲ್ಲಿಸಿದ್ದಾರೆ. ವಿಶ್ವವಿದ್ಯಾನಿಲಯದ ಗ್ರಂಥ ಭಂಡಾರವನ್ನು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿದ್ದಾರೆ.

ಇವರು ವಿಜ್ಞಾನ, ತರ್ಕಶಾಸ್ತ್ರ ಮುಂತಾದ ಗ್ರಂಥಗಳನ್ನೂ ಹಲವಾರು ವಿದ್ವತ್ಪೂರ್ಣವಾದ ಲೇಖನಗಳನ್ನೂ ಬರೆದಿದ್ದಾರೆ. ತತ್ತ್ವಶಾಸ್ತ್ರದಲ್ಲಿ ಆಳವಾದ ಪಾಂಡಿತ್ಯವನ್ನು ಹೊಂದಿರುವವರು ಶ್ರೀಮಾನ್ ಜಿ. ಹನುಮಂತರಾಯರು.

ಮಹಾಕವಿ ಕುವೆಂಪು ಅವರು "ಶ್ರೀಮಾನ್ ಜಿ. ಹನುಮಂತರಾಯರು ಹಲವಾರು ವರ್ಷ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟನ ಶಾಖೆ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸುತ್ತಾರೆ. ಅವರ ಪಾಂಡಿತ್ಯ ಗಾಢವೂ, ಅಗಾಧವೂ ಆಗಿ ವಿಶೇಷ ಅನುಭವವನ್ನೂ ಪಡೆದಿದ್ದಾರೆ—ಪಾಂಡಿತ್ಯವನ್ನೂ

ನಿಷ್ಕೃಷ್ಟವಾದ ಜ್ಞಾನವನ್ನೂ ಗಳಿಸಿ ಖ್ಯಾತರಾಗಿರುವ ಶ್ರೀ ಜಿ. ಹನುಮಂತ ರಾವ್ ಅವರ ಈ ಗ್ರಂಥ ಸರ್ವಮಾನ್ಯವಾಗುವುದರಲ್ಲಿ ಸಂದೇಹವಿಲ್ಲ” ಎಂದು ತರ್ಕಶಾಸ್ತ್ರದ ಗ್ರಂಥದ ಮುನ್ನುಡಿಯಲ್ಲಿ ಹೇಳಿದ್ದಾರೆ.

ಪ್ರಕೃತ ‘ವಿಜ್ಞಾನವೆಂದರೇನು’ ಎಂಬ ಭಾಗವನ್ನು ಶ್ರೀಯುತರ ‘ವಿಜ್ಞಾನ’ ಎಂಬ ಪುಸ್ತಕದಿಂದ ಎತ್ತಿಕೊಳ್ಳಲಾಗಿದೆ. ಇದರಲ್ಲಿ ವಿಜ್ಞಾನವನ್ನು ಅವಲೋಕಿಸಬೇಕಾಗಿರುವ ದೃಷ್ಟಿಯನ್ನು ಒಂದು ವಿಶಿಷ್ಟರೀತಿಯಿಂದ ವಿವರಿಸಿದ್ದಾರೆ.

೯. ಡಾ॥ ಕುವೆಂಪು

ಪದ್ಮಭೂಷಣ ಡಾ॥ ಕೆ. ವಿ. ಪುಟ್ಟಪ್ಪನವರು ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ೧೯೦೪ರಲ್ಲಿ ಜನ್ಮವೆತ್ತಿದರು. ಮಲೆನಾಡಿನ ಪ್ರಕೃತಿಯ ಮಡಿಲಲ್ಲಿ ಬೆಳೆದ ಅವರು ತೀರ್ಥಹಳ್ಳಿಯಲ್ಲಿ ವ್ಯಾಸಂಗವನ್ನು ಮುಗಿಸಿದ ಮೇಲೆ ಮೈಸೂರಿಗೆ ಬಂದು ವ್ಯಾಸಂಗವನ್ನು ಮುಂದುವರಿಸಿ ಎಂ.ಎ., ಪದವೀಧರರಾದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕ ವೃತ್ತಿಯನ್ನು ಸ್ವೀಕರಿಸಿದ ಇವರು ಪ್ರಾಧ್ಯಾಪಕರಾಗಿ ಕೊನೆಗೆ ಉಪಕುಲಪತಿಗಳಾಗಿ ನಿವೃತ್ತರಾದರು. ಕುವೆಂಪು ಅವರ ಕನ್ನಡ ಅಭಿಮಾನ ಅನನ್ಯವಾದುದು, ಅಸದೃಶವಾದುದು. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮವನ್ನು ಕಾರ್ಯಗತಗೊಳಿಸಿದರು ; ಮಾನಸ ಗಂಗೋತ್ರಿಯೆಂಬ ಸ್ನಾತಕೋತ್ತರ ಶಿಕ್ಷಣ ಶಾಖೆಯನ್ನು ಪ್ರಾರಂಭಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವನ್ನು ಪುನಶ್ಚೇತನಗೊಳಿಸಿದರು. ‘ಬಾರಿಸು ಕನ್ನಡ ಡಿಂಡಿಮವ’ ಎಂಬುದು ಇವರ ಘೋಷಣೆ ; ‘ಎಲ್ಲಾದರು ಇರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರು’ ಎಂಬುದು ಇವರ ಹೃದಯವಾಣಿ. ಕುವೆಂಪು ಅವರು ಧಾರವಾಡದಲ್ಲಿ ನಡೆದ ೩೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರಿಗೆ ರಾಷ್ಟ್ರಪತಿಯವರಿಂದ ‘ಪದ್ಮಭೂಷಣ’ ಪ್ರಶಸ್ತಿ ಲಭಿಸಿದೆ. ಇವರ ಮೇರುಕೃತಿ ‘ಶ್ರೀರಾಮಾಯಣ ದರ್ಶನಂ’ ಎಂಬ ಕಾವ್ಯಕ್ಕೆ ಸಾಹಿತ್ಯ ಅಕಾಡೆಮಿಯ ಬಹುಮಾನ ಹಾಗೂ ಜ್ಞಾನಪೀಠ ಪ್ರಶಸ್ತಿ ಸಂದಿದೆ. ಕನ್ನಡ ರಾಷ್ಟ್ರಕವಿ ಎಂದು ಮೈಸೂರು ಸರ್ಕಾರ ಇವರನ್ನು ಗೌರವಿಸಿದೆ.

'ಕುವೆಂಪು' ಎನ್ನುವ ಕಾವ್ಯನಾಮದಿಂದ ಪ್ರಸಿದ್ಧರಾದ ಇವರು ಕನ್ನಡ ಸಾಹಿತ್ಯಕ್ಕೆ ಬಹುಮುಖವಾದ ಸೇವೆಯನ್ನು ಸಲ್ಲಿಸಿದ್ದಾರೆ. ಕವನ, ಕಥೆ, ಕಾದಂಬರಿ, ನಾಟಕ, ಮಹಾಕಾವ್ಯ, ಶಿಶುಸಾಹಿತ್ಯ, ಜೀವನ ಚರಿತ್ರೆ, ಕಾವ್ಯ, ಮೀಮಾಂಸೆ, ವಿಮರ್ಶೆ—ಈ ಮುಂತಾದ ಕ್ಷೇತ್ರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. ಇವರ ಕೃತಿಗಳು ಪಕ್ಷಿಕಾಶಿ, ಪ್ರೇಮಕಾಶ್ಮೀರ, ಮಲೆನಾಡಿನ ಚಿತ್ರಗಳು, ಗಳು, ಕಾನೂರು ಸುಬ್ಬಮ್ಮ ಹೆಗ್ಗಡತಿ, ರಕ್ತಾಕ್ಷಿ, ಶ್ರೀರಾಮಾಯಣ ದರ್ಶನಂ, ಬೊಮ್ಮನಹಳ್ಳಿಯ ಕಿಂದರಿಜೋಗಿ, ಕಾವ್ಯವಿಹಾರ, ಶ್ರೀರಾಮಕೃಷ್ಣ ಪರಮಹಂಸ, ವಿಭೂತಿ ಪೂಜೆ, ತಪೋನಂದನ ಮುಂತಾದವು.

ಪ್ರಕೃತ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಭಾಷಣ—ಲೇಖನದಲ್ಲಿ ಅನೂಚಾನವಾಗಿ ಬಂದ ಸಂಪ್ರದಾಯಗಳಲ್ಲಿ ಪರಿಗ್ರಾಹ್ಯ, ಅಪರಿಗ್ರಾಹ್ಯವಾದವುಗಳನ್ನು ವಿಮರ್ಶಿಸಿ ಸ್ವೀಕರಿಸಬೇಕೆಂದು ಕುವೆಂಪು ಅವರು ತರುಣರಿಗೆ ಕರೆ ನೀಡಿದ್ದಾರೆ.

೧೦. ಪ್ರೊ|| ಡಿ. ಎಲ್. ನರಸಿಂಹಾಚಾರ್

'ಚಲಿಸುವ ಕನ್ನಡ ವಿಶ್ವಕೋಶ' ಎಂದು ವಿದ್ಯಾರ್ಥಿಗಳೆಲ್ಲರ ಪ್ರೀತಿ, ಗೌರವ, ಆದರಗಳಿಗೆ ಪಾತ್ರರಾಗಿರುವ ಶ್ರೀ ಡಿ. ಎಲ್. ನರಸಿಂಹಾಚಾರ್ ಅವರು ತುಮಕೂರು ಜಿಲ್ಲೆಯ ದೊಡ್ಡಬೆಲೆಯವರು; ಇವರ ಜನನ ೧೯೦೬ರಲ್ಲಿ. ಇವರು ಮೈಸೂರು ವಿಶ್ವವಿದ್ಯಾನಿಲಯದ ಎಂ.ಎ., ಪದವೀಧರರಾದ ಮೇಲೆ ಅದೇ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ಸೇರಿ ಕೊನೆಗೆ ಪ್ರಾಧ್ಯಾಪಕರಾಗಿ ನಿವೃತ್ತರಾದರು.

ಶ್ರೀ ನರಸಿಂಹಾಚಾರ್ಯರ ಪ್ರತಿಭೆ ಬಹುಮುಖವಾದುದು. ಕನ್ನಡ, ಇಂಗ್ಲಿಷ್, ಸಂಸ್ಕೃತ, ಪ್ರಾಕೃತಗಳಲ್ಲಿ ಇವರು ವಿಶೇಷ ಪರಿಶ್ರಮವನ್ನು ಸಂಪಾದಿಸಿಕೊಂಡಿದ್ದಾರೆ. ಕನ್ನಡದ ಪ್ರಕಟಿತ ಅಪ್ರಕಟಿತ ಗ್ರಂಥಗಳನ್ನೆಲ್ಲಾ ಅವಲೋಕಿಸಿದ್ದಾರೆ. ಹಳಗನ್ನಡ ಗ್ರಂಥಗಳನ್ನು ಕುರಿತು ಅಧಿಕೃತವಾಗಿ ಮಾತನಾಡಬಲ್ಲವರು ಶ್ರೀ ನರಸಿಂಹಾಚಾರ್ಯರು. ಇವರು ಘನಪಂಡಿತರು. ಸ್ಪಷ್ಟವಾಗಿ, ನಿಷ್ಪಕ್ಷಪಾತವಾಗಿ ವಿವೇಚಿಸಿ ವಿಮರ್ಶಿಸುವುದರಲ್ಲಿ ಇವರು

ನಿಸ್ಸೀಮರು. ಎಲ್ಲಕ್ಕಿಂತ ಮಿಗಿಲಾಗಿ ಶ್ರೀ ನರಸಿಂಹಾಚಾರ್ಯರು ಶಿಷ್ಯ ವಾತ್ಸಲ್ಯ ಪ್ರಪೂರ್ಣರು.

ನರಸಿಂಹಾಚಾರ್ಯರು ಬೀದರಿನಲ್ಲಿ ನಡೆದ ೪೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು. ಇವರು ಕನ್ನಡ ಸಾಹಿತ್ಯ ಪರಿಷತ್ತು ಕೈಕೊಂಡಿರುವ ಕನ್ನಡ ನಿಘಂಟಿಗೆ ಅವಿಶ್ರಾಂತವಾಗಿ ದುಡಿದಿದ್ದಾರೆ. ಕೆಲಕಾಲ ನಿಘಂಟಿನ ಸಂಪಾದಕರಾಗಿದ್ದರು ; ಸಂಪಾದಕ ಸಮಿತಿಯ ಉಪಾಧ್ಯಕ್ಷರೂ ಅಧ್ಯಕ್ಷರೂ ಆಗಿದ್ದರು.

ಶ್ರೀಯುತರು ವಡ್ಡಾರಾಧನೆ, ಸುಕುಮಾರ ಚರಿತೆ, ಸಿದ್ಧರಾಮ ಚರಿತೆ, ಶಬ್ದಮಣಿದರ್ಪಣ, ಪಂಪ ರಾಮಾಯಣ ಸಂಗ್ರಹ, ಸಿದ್ಧರಾಮ ಚರಿತೆಯ ಸಂಗ್ರಹ ಮುಂತಾದ ಹಳಗನ್ನಡ ಗ್ರಂಥಗಳ ಅಧಿಕೃತ ಸಂಸ್ಕರಣಗಳನ್ನು ಹೊರತಂದಿದ್ದಾರೆ. ಜೊತೆಗೆ ಶಬ್ದವಿಹಾರ, ಕನ್ನಡ ಗ್ರಂಥಸಂಪಾದನೆ ಎಂಬ ವಿಶಿಷ್ಟ ರೀತಿಯ ಗ್ರಂಥಗಳನ್ನು ರಚಿಸಿದ್ದಾರೆ. ಅಲ್ಲದೆ ಹಲವಾರು ವಿಮರ್ಶಾತ್ಮಕ ಸಂಶೋಧನಾತ್ಮಕ ಮತ್ತು ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ವಿದ್ವತ್ಪೂರ್ಣ ಲೇಖನಗಳನ್ನು ಬರೆದಿದ್ದಾರೆ.

ಪ್ರಕೃತ ಭಾಗ 'ಕುಮಾರವ್ಯಾಸನ ದೃಷ್ಟಿಯಲ್ಲಿ ಕರ್ಣ' ಎಂಬ ಲೇಖನದಲ್ಲಿ ಮಹಾಭಾರತದ ಕರ್ಣನ ವ್ಯಕ್ತಿತ್ವವನ್ನು ಚಿತ್ರಿಸಿರುವುದರಲ್ಲಿ ಅವರ ವಿದ್ವತ್ತು, ವಿಷಯ ಸ್ಪಷ್ಟತೆ, ವಿಮರ್ಶನ ಶಕ್ತಿ ವ್ಯಕ್ತವಾಗಿವೆ.

೧೧. ಪ್ರೊ|| ತೀ. ನಂ. ಶ್ರೀಕಂಠಯ್ಯ

ಮಹಾಕವಿ ಕುವೆಂಪು ಅವರು ಹೇಳಿರುವಂತೆ 'ಆಚಾರ್ಯ ಕೃತಿ'ಯೊಂದನ್ನು ಕನ್ನಡ ಸಾರಸ್ವತ ಪ್ರಪಂಚಕ್ಕೆ ನೀಡಿದ ಶ್ರೀ ತೀ. ನಂ. ಶ್ರೀಕಂಠಯ್ಯನವರು ತೀರ್ಥಪುರದಲ್ಲಿ ೧೯೦೬ರಲ್ಲಿ ಜನಿಸಿದರು. ತೀರ್ಥಪುರ, ಚಿಕ್ಕನಾಯಕನಹಳ್ಳಿ, ತುಮಕೂರುಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ವ್ಯಾಸಂಗವನ್ನು ಮುಗಿಸಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು ಆರು ಸುವರ್ಣ ಪದಕಗಳೊಡನೆ ಪಡೆದರು. ೧೯೨೬ರಲ್ಲಿ ಎಂ.ಸಿ.ಎಸ್., ಪರೀಕ್ಷೆಯನ್ನು ಮುಗಿಸಿದರು. ೧೯೨೯ರಲ್ಲಿ ಇಂಗ್ಲಿಷ್ ಎಂ.ಎ., ಪರೀಕ್ಷೆಯಲ್ಲಿ ಪ್ರಥಮ ಸ್ಥಾನದಲ್ಲಿ ತೇರ್ಗಡೆ ಹೊಂದಿದರು.

ರೆವಿನ್ಯೂ ಇಲಾಖೆಯಲ್ಲಿ ಉನ್ನತ ಹುದ್ದೆಯನ್ನು ಪಡೆಯಬಹುದಾಗಿದ್ದ ಇವರು ಕನ್ನಡದ ಮೇಲಿನ ಅಭಿಮಾನದಿಂದ ಕನ್ನಡ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ತಮ್ಮ ಅಪಾರವಾದ ಕಲಿವನ್ನು ವಿದ್ಯಾರ್ಥಿವೃಂದಕ್ಕೆ ಅತ್ಯಂತ ಆಸಕ್ತಿಯಿಂದ, ವಾತ್ಸಲ್ಯದಿಂದ ಬೋಧಿಸಿದ್ದಾರೆ.

ಶ್ರೀ ತೀ.ನಂ ಶ್ರೀ. ಅವರು ಭಾಷಾಶಾಸ್ತ್ರದಲ್ಲಿ ವಿಶೇಷವಾದ ಪಾಂಡಿತ್ಯವನ್ನು ಗಳಿಸಿಕೊಂಡಿದ್ದಾರೆ.ಇವರು ಅಮೆರಿಕಾದ ವಿಶ್ವವಿದ್ಯಾಲಯಗಳಿಗೆ ಭೇಟಿ ಕೊಟ್ಟು, ಅಲ್ಲಿ ನಡೆಯುತ್ತಿರುವ ಭಾಷಾಶಾಸ್ತ್ರ ಸಂಬಂಧವಾದ ಸಂಶೋಧನೆ ಮತ್ತು ಬೋಧನಾ ವಿಧಾನಗಳನ್ನು ಪರಿಶೀಲಿಸಿಕೊಂಡುಬಂದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು ಕೈಕೊಂಡಿರುವ ಕನ್ನಡ ನಿಘಂಟಿಗೆ ಸೂತ್ರಪ್ರಾಯರಾಗಿ ಪ್ರಾರಂಭದಿಂದಲೂ ದುಡಿಯುತ್ತ ಬಂದಿದ್ದಾರೆ. ಕೆಲಕಾಲ ಅದರ ಸಂಪಾದಕರಾಗಿದ್ದರು ; ಸಂಪಾದಕ ಸಮಿತಿಯ ಅಧ್ಯಕ್ಷರಾಗಿದ್ದರು.

ನಂಬಿಯಣ್ಣನ ರಗಳೆ, ಗದಾಯುದ್ಧ ಸಂಗ್ರಹ, ಹೆಣ್ಣುಮಕ್ಕಳ ಪದಗಳನ್ನು ಸಂಪಾದಿಸಿ, ಪರಿಷ್ಕರಿಸಿದ್ದಾರೆ. ಒಲುಮೆ, ಪಂಪ, ಕಾವ್ಯಸಮೀಕ್ಷೆ. ಮಧ್ಯಮ ವ್ಯಾಕರಣ, ನಂಟರು, ಸಮಾಲೋಕನ, ಭಾರತೀಯ ಕಾವ್ಯಮೀಮಾಂಸೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಶ್ರೀ ತೀ. ನಂ. ಶ್ರೀ. ಅವರನ್ನು ಕುರಿತು "ಒಂದು ಭಾಷೆಯಲ್ಲಿ ಅಥವಾ ಶಾಖೆಯಲ್ಲಿ ಅದ್ವಿತೀಯ ಪಾಂಡಿತ್ಯಗಳಿಸಿರುವ ಮಂದಿ ಸಾಕಷ್ಟು ಸಿಕ್ಕಾರು. ಆದರೆ ಮೂರು ಭಾಷೆಗಳಲ್ಲಿ, ಸಾಹಿತ್ಯದ ಸಕಲ ಶಾಖೆಗಳಲ್ಲಿ ಜೊತೆಗೆ ಭಾಷಾಶಾಸ್ತ್ರದಲ್ಲಿ ಒಬ್ಬರೇ ನಿರ್ದುಷ್ಟವೂ, ಸರ್ವಂಕಷವೂ, ಸರ್ವಗ್ರಾಹಿಯೂ ಆದ ಪಾಂಡಿತ್ಯ ಸಂಪಾದಿಸಿರುವ ವ್ಯಕ್ತಿಗಳು ಅಪರೂಪ. ಅಂಥ ಅಪರೂಪವಾದ ವರ್ಗಕ್ಕೆ ಸೇರಿದವರು ತೀ. ನಂ. ಶ್ರೀ.ಯವರು"[1] ಎಂದು ಹೇಳಿರುವ ಮಾತುಗಳು ಯಥಾರ್ಥವಾಗಿವೆ.

ಪ್ರಕೃತ ಭಾಗ 'ದಾನ ಚಿಂತಾಮಣಿ ಅತ್ತಿಮಬ್ಬೆ' ಎಂಬ ಲೇಖನದಲ್ಲಿ ಶ್ರೀಯುತರ ಆಳವಾದ ಅಭ್ಯಾಸದ, ಸಮತೋಲನ ವಿಮರ್ಶನ ಶಕ್ತಿಯ ಸರಳ ಸುಂದರ ನಿರೂಪಣೆಯನ್ನು ಕಾಣಬಹುದಾಗಿದೆ.

1 ಸಾಹಿತಿಗಳ ಸಂಗದಲ್ಲಿ, ಪುಟ ೧೬೮.

ವಿಷಯಾನುಕ್ರಮಣಿಕೆ

೧. ಪಾಳೆಯಗಾರರು

ಡಾ|| ಎಂ. ಎಚ್. ಕೃಷ್ಣನವರು : ೧೮೯೪–೧೯೬೦

ಚಿತ್ರದುರ್ಗದವರ ಪೌರುಷ

ಚಿತ್ರದುರ್ಗದ ಪಾಳೆಯಪಟ್ಟನ್ನು ಸ್ಥಾಪಿಸಿದವನು ಮತ್ತಿ ತಿಮ್ಮಣ್ಣ ನಾಯಕ. ಇವನು ಚಿತ್ರದುರ್ಗಕ್ಕೆ ಬಂದು ರಾಜ್ಯವನ್ನು ಸಂಪಾದಿಸಿ ಬೆಟ್ಟದ ಮೇಲೆ ತಕ್ಕಮಟ್ಟಿಗೆ ಕೋಟೆಯನ್ನೂ ಅರಮನೆಯನ್ನೂ ಕಟ್ಟಿಕೊಂಡು ನಿಂತದ್ದು ವಿಜಯನಗರದ ಚಕ್ರವರ್ತಿಗಳೆನಿಸಿಕೊಂಡಿದ್ದವರು ಹೆಚ್ಚಾಗಿ ಅಸೂಯೆ ಪಡಲು ಕಾರಣವಾಯಿತು. ಅವರು ಯಾವುದೋ ಒಂದು ಅಲ್ಪವಾದ ನೆಪವನ್ನು ತೆಗೆದು ಚಿತ್ರದುರ್ಗವನ್ನು ಹಿಡಿದುಕೊಂಡು ತಿಮ್ಮಣ್ಣ ನಾಯಕನನ್ನು ಕೈಸೆರೆ ಹಿಡಿದು ತಂದು ಒಪ್ಪಿಸಲು, ಸಾಳೋ ನರಸಿಂಗರಾಯನೆಂಬ ಸೇನಾಧಿಪತಿಯನ್ನು ಕಳುಹಿಸಿದರು. ಈ ನರಸಿಂಗರಾಯನು ಸೇನೆಯೊಡನೆ ಬಂದು ಚಿತ್ರದುರ್ಗದ ಬೆಟ್ಟದ ಕೆಳಗೆಯಲ್ಲಿ ಇಳಿದುಕೊಂಡನು. ತಿಮ್ಮಣ್ಣನಾಯಕನು ಇದನ್ನು ತಿಳಿದು ಒಂದು ದಿನ ಅರ್ಧರಾತ್ರಿಯಲ್ಲಿ ಬೆಟ್ಟದಿಂದ ಇಳಿದು ಶತ್ರುಗಳ ಪಾಳಯಕ್ಕೆ ನುಗ್ಗಿ ಆ ಸೇನಾಪತಿಯ ಸ್ವಂತ ಕುದುರೆಯ ಹಿಂದುಗಡೆ ಮುಂದುಗಡೆ ಹಗ್ಗವನ್ನು ಬಿಚ್ಚುತಾ ಇದ್ದನು. ಕುದುರೆಯು ಹೊಸಬರ ವಾಸನೆ ತಿಳಿದು ಕಾಲನ್ನು ಬಡಿಯುತಾ ಕೆನೆಯುತಾ ಗದ್ದಲಮಾಡಿತು ಮಲಗಿ ನಿದ್ರೆಮಾಡುತಾ ಇದ್ದ ಕಾಸಾದಾರನಿಗೆ ಎಚ್ಚರವಾಯಿತು. ಅವನು ತನ್ನನ್ನು ಕಂಡರೆ ಕೆಲಸ ಕೆಡುವುದೆಂದು ಯೋಚಿಸಿ, ತಿಮ್ಮಣ್ಣನಾಯಕನು ಸಮೀಪದಲ್ಲಿಯೇ ನೆಲದ ಮೇಲೆ ತಟ್ಟನೆ ಮಲಗಿಕೊಂಡು ಅಲ್ಲಿದ್ದ ಕಸದ ಹುಲ್ಲನ್ನೆಲ್ಲಾ ತನ್ನ ಮೈ ಮೇಲೆ ಕವಿಚಿಕೊಂಡನು. ಕಾಸ್‌ದಾರನು ನಿದ್ದೆಗಣ್ಣಿನಲ್ಲಿ ಎದ್ದು ಕಿತ್ತುಹೋಗಿದ್ದ ಕುದುರೇ ಕಟ್ಟುವ

ಗೂಟವನ್ನು ನೆಲದ ಮೇಲೆ ಇರಿಸಿ ಗಟ್ಟಿಯಾಗಿ ಬಡಿದು ಕುದುರೆಯನ್ನು ಅದಕ್ಕೆ ಕಟ್ಟಿ ತಾನು ಮಲಗಿಕೊಂಡನು. ಅವನು ಪೆಟ್ಟಿದ ಒಂದು ಗೂಟವು ಕೆಳಗೆ ಹುಲ್ಲಿನ ಮರೆ ಯಲ್ಲಿ ಮಲಗಿದ್ದ ತಿಮ್ಮಣ್ಣನಾಯಕನ ಅಂಗೈಯಲ್ಲಿ ಹಾಮ ನೆಲಕ್ಕೆ ಇಳಿಯಿತು. ತಿಮ್ಮಣ್ಣನಾಯಕನು ಅದನ್ನು ತಡೆಏುಕೊಂಡು ಕಾಸ್ ಪಾರನಿಗೆ ನಿದ್ರೆಬರುವ ತನಕ ಮಲಗಿದ್ದು, ತರುವಾಯ ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಚಾಕುವನ್ನು ಹಿರಿದು ನೆಲಕ್ಕೆ ಬಡಿದಿದ್ದ ಕುದುರೇಗೂಟದ ಕೆಳಕ್ಕೆ ಸಿಕ್ಕಿಕೊಂಡಿದ್ದ ಕೈಯನ್ನು ಹಸ್ತಕ್ಕೆ ಸರಿಯಾಗಿ ಕತ್ತರಿಸಿ, ಪಾಗಿನ ಜಟ್ಟಿ ಹರಿದು ಕೈಮೋಟಿಗೆ ಸುತ್ತಿ ಪುನಃ ಅದೇ ಕುದುರೆಯನ್ನು ಬಿಚ್ಚಿ ಅದರ ಮೇಲೆ ಏರಿಕೊಂಡು ಬೆಟ್ಟದ ಮೇಲಕ್ಕೆ ಹೊರಟುಹೋದನು. ಮಾರನೇ ದಿವಸ ಅದೇ ಸೇನಾಪತಿಯ ಆನೆ ಬೆಟ್ಟದ ಕೆಳಗಿರುವ ತಿಮ್ಮಣ್ಣನಾಯಕನ ಕೆರೆಗೆ ನೀರು ಕುಡಿಯಲು ಬರಲು, ಅದೇ ಶೂರನು ತನ್ನ ಬಿಲ್ಲನ್ನು ಕಾಲಲ್ಲಿ ಮೆಟ್ಟಿಕೊಂಡು ತನ್ನ ಇನ್ನೊಂದು ಕೈಯಲ್ಲಿ ತುಯಿದು ಅಂಬನ್ನು ಹೊಡೆಯಲು ಆ ಆನೆಯ ಭ್ರೂಮಧ್ಯಕ್ಕೆ ಏಟು ಬಿತ್ತು. ಅದು ಒಂದೇ ಏಟಿಗೆ ಅರಿಚಿಕೊಂಡು ಕೆಳಕ್ಕೆ ಬಿದ್ದು ಪ್ರಾಣಬಿಟ್ಟಿತು. ಯುಗಾಂತರದಲ್ಲಿ ತಾನು ದ್ರೋಣಾ ಚಾರ್ಯರ ಶಿಷ್ಯನೆಂದು ಭಾವಿಸಿಕೊಂಡಿದ್ದ ಏಕಲವ್ಯನು ಅವರಿಗೆ ಗುರುದಕ್ಷಿಣೆ ಯಾಗಿ ತನ್ನ ಬಲದ ಉಂಗುಷ್ಟವನ್ನು ಕುಯಿದುಕೊಟ್ಟ ಮನೋದಾರ್ಢ್ಯವನ್ನು ತಿಮ್ಮಣ್ಣನಾಯಕನ ಪರಾಕ್ರಮವು ಮೀರಿಸಿತು. ಇನ್ನು ಎಷ್ಟು ಹೇಳೋಣ !

ಮಹಾಪರಾಕ್ರಮ

ಸನ್ ೧೭೪೮ರಲ್ಲಿ ನಗರ, ಸವಣೂರು, ಹರಪನಹಳ್ಳಿ, ರಾಯದುರ್ಗ ಈ ಸಂಸ್ಥಾನಗಳ ಪಾಳಯಗಾರರು ದುರ್ಗಕ್ಕೆ ಸೇರಿದ ಮಾಯಿಕೊಂಡದ ಕೋಟೆಗೆ ಮುತ್ತಿಗೆ ಹಾಕಿದರು. ಆಗ ದುರ್ಗದ ದೊರೆಯಾದ ಹಿರೀ ಮದಕೆರಿ ನಾಯಕನು ಸೇನೆಯೊಡನೆ ಹೊರಟು ಶತ್ರುಗಳೊಡನೆ ಯುದ್ಧ ಮಾಡುವಾಗ ಎದುರು ಪಕ್ಷದವರ ಕೈ ಬಲವಾಯಿತು. ಹರಪನಹಳ್ಳಿ ಸೋಮಶೇಖರ ನಾಯಕನ ಆನೆಯೂ ಮದಕೆರಿನಾಯಕನ ಆನೆಯೂ ಎದುರಾದವು. ತನ್ನ ಆನೆ ಓಡಿಹೋದೀತು ತನಗೆ ಅಪಮಾನವಾದೀತು ಎಂದು ಅವರ ಕಾಲಿಗೆ

ಸಬಳ ಎಂದರೆ ತೂಕವಾದ ಕಬ್ಬಿಣದ ಭಾರವನ್ನು ಕಟ್ಟಿಸಿದ ಮದಕೇರಿ ನಾಯಕನು ಕದನಕ್ಕೆ ನಿಂತನು. ಶತ್ರುಗಳು ಆ ಆನೆಯನ್ನು ಮುತ್ತಿ, ಕೆಲವರು ಅದರ ಕಾಲನ್ನೂ, ಕೆಲವರು ಅದರ ಹೊಟ್ಟೆಯನ್ನೂ ಕತ್ತರಿಸುತ್ತಾ ಅದನ್ನು ಕೆಡಹಿದರು. ಮದಕೇರಿನಾಯಕನು ಬೇರೆ ಆನೆಯನ್ನೇರಿ ಯುದ್ಧಕ್ಕೆ ಅನುವಾದನು. ಆ ಇಬ್ಬರು ದೊರೆಗಳಿಗೂ ಜಾವಹೊತ್ತು ಘೋರವಾದ ಲಡಾಯಿ ನಡೆಯಿತು. ಮೊದಲು ಅಂಬು ಬಿಲ್ಲುಗಳಿಂದ ಕಾಳಗವಾಯಿತು. ತೋಫಿಗಳಿಂದ ಗೋಲಿವಗ್ಗೈರಿ ಹಾರಾಡಿದವು. ಅದೆಲ್ಲಾ ಬರಿದಾದ ಮೇಲೆ ಸೋಮಶೇಖರನಾಯಕನು ಥಳಥಳಿಸುವ ಅಂಜೋಮುಖವೆಂಬ ಹೊಸ ಭರ್ಜಿಯನ್ನು ತೆಗೆದುಕೊಂಡು ಆನೆಯ ಮೇಲಿನಿಂದ ಬಗ್ಗಿ ಅದರ ಮಸ್ತಕದ ಮೇಲೆ ಕಾಲಿಟ್ಟು ಹಿರೀಮದಕೇರಿನಾಯಕನನ್ನು ತಿವಿದನು. ಆಗ ದುರ್ಗದ ಭೂಪನು ಆ ಬಹಲೆಯನ್ನು ಕಿತ್ತುಕೊಳ್ಳಬೇಕೆಂದು ಬಗ್ಗಿ ತನ್ನ ಆನೆಯ ಮಸ್ತಕದ ಮೇಲೆ ಕಾಲಿಟ್ಟು ನಿಂತು ಆ ಭರ್ಜಿಗೆ ಕೈಹಾಕಿ ಹಿಡಿದುಕೊಳ್ಳಲು ಸೋಮಶೇಖರ ನಾಯಕನು ಅದನ್ನು ಕಿತ್ತುಕೊಳ್ಳುವುದಕ್ಕೆ ಯತ್ನಮಾಡಿ ಸಲೀಸಾಗಿ ತಿನಕಾಡಿದನು. ಮದಕೇರಿನಾಯಕನ ಕೈ ಗಾಯವಾಯಿತೇ ಹೊರತು ಭರ್ಜಿಯ ಅಲಗನ್ನು ಆ ಶೂರ ಬಿಡದೆ ಹಿಡಿದುಕೊಂಡನು. ಉಭಯ ಕಕ್ಷಿಯ ಮಾವುತರೂ ಸತ್ತುಬಿದ್ದರು. ಉಭಯ ರಾಯರಿಗೂ ಗಾಯ ಬಹಳವಾಯಿತು. ಸೋಮಶೇಖರನಾಯಕನು ಮೂರ್ಛೆ ಬಂದು ಬಿದ್ದುಬಿಟ್ಟನು. ಇಂಥಾ ಪರಾಕ್ರಮವು ಈ ಕಾಲದೊಳು ಕಥೆಗಳಲ್ಲಿಯೇ ನಿಂತುಹೋಯಿತು.

ವೀರಾಸನ

ಕಡೇಮದಕೇರಿನಾಯಕನ ದಿವಸದಲ್ಲಿ ಮರಾಟೆಯವರಿಗೆ ಸೇರಿದ್ದ ಅನವಟ್ಟಿ ಕೋಟೆಯನ್ನು ಹೈದರಲಿಯು ಮುತ್ತಿ ವಶಮಾಡಿಕೊಂಡು ಅಲ್ಲಿ ಠಾಣ್ಯವನ್ನು ಇಟ್ಟನು. ಆಗ ಪೇಶ್ವೆ ದೊಡ್ಡ ಮಾಧವರಾಯನು ಆ ಕೋಟೆಗೆ ಮುತ್ತಿಗೆ ಹಾಕಿ ತೆಗೆದುಕೊಳ್ಳಲು ದುರ್ಗದವರ ಸಹಾಯವನ್ನು ಕೇಳಿದನು. ಮದಕೇರಿನಾಯಕನು ಆ ಕೋಟೆಗೆ ಮುತ್ತಿಗೆ ಹಾಕಿದನು. ದುರ್ಗದ ದಂಡಿನವರು ಕೋಟೆಯೊಳಕ್ಕೆ ನುಗ್ಗಿ ಅಲ್ಲಿದ್ದ [illegible] ಕಡಿದು ತಂದು [illegible] ತಲೆಯನ್ನು [illegible] ನನ್ನು ದೊರೆಗೆ ಒಪ್ಪಿಸುತ್ತಾ ಬಂದರು.

ಸೇರಿಸಿ ಜಗಲಿ ಮಾಡಿಸಿ ಅದನ್ನು ಪೇಶ್ವೆಗೆ ತೋರಿಸುತಾ ದುರ್ಗದ ದೊರೆಯು "ಶತ್ರುಗಳ ಶಿರಸ್ಸಿನಿಂದ ವೀರಾಸನವನ್ನು ಕಟ್ಟಿಸಿದ್ದೇನೆ, ಅದರ ಮೇಲೆ ತಾವು ಕುಳಿತುಕೊಳ್ಳಬೇಕು. ರಕ್ತದಿಂದ ಅಭಿಷೇಕ ಮಾಡಿಸುತ್ತೇನೆ" ಎಂದು ಹೇಳಿದನು ; ದುಶ್ಶಾಸನ ವಧೆ ಜ್ಞಾಪಕಕ್ಕೆ ಬರುತಿದೆ. ಶತ್ರುಸೇನೆಗೆ ನುಗ್ಗಿ ದುರ್ಗದ ಭಟರು ತಲೆಗಳನ್ನು ಕಡಿದು ತಂದ ಪರಾಕ್ರಮ ಎಂಥಾದ್ದೋ ಹೇಳಬೇಕಾದ್ದೇ ಇಲ್ಲ.

ಜೋವಾನ್ ಆಫ್ ಆರ್ಕ್

ಇಂಗ್ಲೆಂಡು ದೇಶದ ದೊರೆಯಾಗಿದ್ದ ಮುಮ್ಮಡಿ ಎಡ್ವರ್ಡ್ ಎಂಬಾತನ ಆಳಿಕೆಯಲ್ಲಿ ಫ್ರಾನ್ಸ್ ದೇಶಕ್ಕೂ ಇಂಗ್ಲೆಂಡ್ ದೇಶಕ್ಕೂ ಭಾರಿಯಾಗಿ ಯುದ್ಧಗಳು ಜರುಗುತಿದ್ದವು. ಆಗ ಇಂಗ್ಲಿಷ್‌ನವರೇ ಜಯಶೀಲರಾಗುತಾ ಬಂದರು. ಇದನ್ನು ಕಂಡು ಸಹಿಸಲಾರದೆ ಫ್ರೆಂಚ್ ಜನರೆಲ್ಲಾ ರೋಷದಿಂದ ಇಂಗ್ಲಿಷ್ ಜನರ ಮೇಲೆ ತಿರುಗಿಬಿದ್ದರು. ಆರ್ಲಿಯನ್ಸ್ ಪಟ್ಟಣದ ಒಬ್ಬ ಸ್ತ್ರೀ ಜೋವಾನ್ ಆಫ್ ಆರ್ಕ್ ಎಂಬುವಳು ಇಂಗ್ಲಿಷರನ್ನು ನಾಶಮಾಡಿ ಆ ದೇಶದಿಂದ ಅವರನ್ನು ಹೊರಡಿಸುವುದಕ್ಕೆ ತನಗೆ ವರವಾಗಿದೆ ಎಂಬುದಾಗಿ ಕುದುರೆಯನ್ನೇರಿ ಆಯುಧಪಾಣಿಯಾಗಿ ಅನೇಕ ಜನ ಇಂಗ್ಲಿಷರನ್ನು ಕೊಂದಳೆಂದು ತಿಳಿಯಬಂದಿದೆ. ಆದರೆ ಚಿತ್ರದುರ್ಗದ ಒಬ್ಬ ಸ್ತ್ರೀಯು ತೋರಿದ ಮಹಾಪರಾಕ್ರಮವನ್ನು ಸ್ತ್ರೀ ಪುರುಷರು ಯಾರೇ ಆಗಲಿ ಯಾವಾಗಲೂ ತೋರಿಸಲಾರರೆಂದು ಹೇಳಬಹುದು.

ಓಬವ್ವ

ಹೈದರಲಿಯ ಸೇನೆಯವರು ಚಿತ್ರದುರ್ಗದ ಬೆಟ್ಟಕ್ಕೆ ಯಾವ ಕಡೆಯೂ ಪ್ರವೇಶ ಮಾಡುವುದಕ್ಕೆ ಆಸ್ಪದವಿಲ್ಲದ ಹಾಗೆ ದುರ್ಗದ ಬೇಡರು ಖಾಡಾಖಾಡಿ ಯುದ್ಧವನ್ನು ಮಾಡುತ್ತಿದ್ದರು. ಇವರೆದುರಿಗೆ ಶ್ರೀರಂಗಪಟ್ಟಣದ ಸೇನೆ ನಿಲ್ಲಲಾರದೆ ಹೋಯಿತು. ಶತ್ರುಗಳು ದುರ್ಗದ ಬೆಟ್ಟದ ಕೋಟೆ ಒಳಕ್ಕೆ ಬರುವುದು ಕಷ್ಟವಾಯಿತು. ಆ ಬೆಟ್ಟದ ಒಂದು ಪಕ್ಕದಲ್ಲಿ ಒನಕೆ ಓಬವ್ವನ ಕಿಂಡಿ ಎಂದು ಇದೆ. ಅದಕ್ಕೆ ಮೇಲುಗಡೆ ಸ್ವಲ್ಪ ದೂರವಾಗಿ

ಒಂದು ರಹಸ್ಯವಾದ ಸ್ಥಳವಿದೆ. ಮೇಲೆ ಕೆಳಗೆ ಪಕ್ಕದಲ್ಲಿ ಸದಾ ನಾಲ್ಕು ಕಡೆಯಲ್ಲಿಯೂ ಬಂಡೆ ಇದೆ. ಮಧ್ಯೆ ಒಬ್ಬ ಮನುಷ್ಯ ಕೂತುಕೊಂಡು ಒಳಕ್ಕೆ ಹೋಗುವ ಹಾಗೆ ಸಣ್ಣ ದ್ವಾರವಿದೆ. ಶತ್ರುಗಳು ಈ ದ್ವಾರವನ್ನು ಗೊತ್ತು ಮಾಡಿಕೊಂಡು ಅದರೊಳಗಿನ ನುಸುಳಿ ಒಳಕ್ಕೆ ಬರಲು ಪ್ರಯತ್ನಮಾಡು ತ್ತಿದ್ದರು. ಅರ್ಧಬೆಟ್ಟದಲ್ಲಿ ಮನೆ ಕಟ್ಟಿಕೊಂಡಿದ್ದ ಕಹಳೆಯವನ ಹೆಂಡತಿ ಓಬಿಯೆಂಬುವಳು ಕೆಲಸ ಮುಗಿಸಿಕೊಂಡು ಮನೆಗೆ ಬಂದ ತನ್ನ ಗಂಡನಿಗೆ ಅನ್ನ ವನ್ನು ಬಡಿಸಿ ಅವನು ಊಟಮಾಡುತ್ತಿರುವಾಗ ತಾನು ಹರವಿ ತೆಗೆದುಕೊಂಡು ನೀರು ತರುವುದಕ್ಕೆ ಹೊರಟಳು. ನೀರನ್ನು ತುಂಬಿಕೊಳ್ಳುತ್ತಾ ಇರುವಾಗ, ಸಮೀಪದಲ್ಲಿದ್ದಂಥಾ ಮೇಲೆ ಹೇಳಿದ ಕಳ್ಳದಾರಿಯ ಹೊರಗಡೆ ಗದ್ದಲ ಕೇಳಿಸಿತು. ಕೂಡಲೇ ಓಬಿಯು ತನ್ನ ಮನೆಗೆ ಹೋಗಿ ನೀರಿನ ಹರವಿಯನ್ನು ಇರಿಸಿ ಒಂದು ಒನಕೆಯನ್ನು ತೆಗೆದುಕೊಂಡು ಹೋಗಿ ಇಕ್ಕಟ್ಟಾದ ಆ ಕಳ್ಳ ದಾರಿಯ ಪಕ್ಕ ಕತ್ತಲೆಯಾದ ಸ್ಥಳದಲ್ಲಿ ಓರೆಯಾಗಿ ನಿಂತುಕೊಂಡಳು. ಆ ಸಣ್ಣ ಕಂಡಿಯಿಂದ ಒಬ್ಬ ಮನುಷ್ಯ ಒಳಕ್ಕೆ ತೂರಿ ಬಂದನು. ಪಕ್ಕದಲ್ಲಿ ನಿಂತಿದ್ದ ಓಬಿಯು ಒನಕೆಯಿಂದ ಒಂದೇಟನ್ನು ಆ ಮನುಷ್ಯನ ತಲೆಯ ಮೇಲೆ ಹೊಡೆದಳು. ಅವನು ಕೆಳಗೆ ಬಿದ್ದು ಸತ್ತನು. ಹಾಗೆಯೇ ಒಂದು ಗಳಿಗೆ ಮೇಲೆ ಇನ್ನೊಬ್ಬ ಒಳಕ್ಕೆ ತೂರಿದನು. ಅವನನ್ನೂ ಓಬಿಯು ಅದೇ ಪ್ರಕಾರ ಹೊಡೆದಳು. ಅವನೂ ಸತ್ತು ಬಿದ್ದನು. ಇನ್ನೊಬ್ಬ, ಮತ್ತೊಬ್ಬ, ಮಗ ದೊಬ್ಬ ಬಂದರು. ಎಲ್ಲರಿಗೂ ಮುಸಲಾಯುಧವ ಸೇವೆಯಿಂದ ಲೋಕಾಂತರ ಪ್ರಾಪ್ತವಾಗುತ್ತಾ ಬಂತು. ಹೀಗೆ ಅನೇಕ ಜನ ಶತ್ರುಗಳ ಕಡೆ ಭಟರು ಸತ್ತು ಬಿದ್ದರು. ಹೆಣದ ರಾಶಿಯು ಪಕ್ಕದಲ್ಲಿದ್ದ ಬೆಟ್ಟದೆತ್ತರಕ್ಕಾಯಿತು. ಒಂದೇಟಿಗೆ ಒಂದು ಹೆಣ ಈ ಪ್ರಕಾರ ಅನೇಕ ಜನ ಸತ್ತು ಹೋಯಿತು. ಓಬಿಗೆ ರಕ್ತದಲ್ಲಿ ಸ್ನಾನವಾಯಿತು. ರಕ್ತವು ಹೊಳೆನೀರಿನಂತೆ ಹರಿದು ಹೋಗು ವುದಕ್ಕೆ ಆರಂಭವಾಯಿತು. ಹೆಂಡತಿ ಎಷ್ಟು ಹೊತ್ತಾದರೂ ಬಾರದೇ ಹೋದದ್ದನ್ನು ಕಂಡು ಅವಳ ಗಂಡನು ಅವಳನ್ನು ಅರಸಿಕೊಂಡು ಬಂದು ಆ ಹಗರಣವನ್ನೆಲ್ಲಾ ನೋಡಿದನು, ದಿಗಿಲಾಯಿತು. ಓಬಿಯು ಕೆಂಪಗೆ ರಕ್ತ ದಲ್ಲಿ ಇಳಿಯ ಮುಳುಗಿದ ಮಹಾಕಾಳಿಯೋ ಎನ್ನುವ ಹಾಗೆ ಕಾಣುತ್ತಾ ಆಗ ಬಂದ ತನ್ನ ಗಂಡನೂ ಶತ್ರುಪಕ್ಷದವನೆಂದು ವೀರಾವೇಶದಿಂದ ಬಾರಿಸಿಕೊಂಡು

ಆವನನ್ನೂ ಹೊಡೆಯುವುದಕ್ಕೆ ಹೋದಳು. ಕಡೆಗೆ ಗಂಡನೆಂದು ತಿಳಿದು ಸುಮ್ಮನಾದಳು. ಈ ಪರಾಕ್ರಮವನ್ನು ಹೇಳತಕ್ಕ ಸಾಮರ್ಥ್ಯ ಮತ್ತೆಲ್ಲಿ ನಡೆದಿದೆಯೋ ಇದುವರೆಗೆ ನಾನರಿಯೆ.

ಗುಮ್ಮನಾಯಕನ ಪಾಳೆಯದವರ ಪರಾಕ್ರಮ

ವಸಂತನಾಯಕನ ಶೌರ್ಯ

ಗುಮ್ಮನಾಯಕನ ಪಾಳೆಯದವರಲ್ಲಿ ಎಂಥಾ ಪರಾಕ್ರಮಶಾಲಿಗಳಿದ್ದರು ಎಂಬ ಸಂಗತಿಯನ್ನು ಕುರಿತು ಸ್ವಲ್ಪ ಅರಿಕೆ ಮಾಡುತ್ತೇನೆ. ಈ ಪಾಳೆಯಗಾರರಲ್ಲಿ ೯ನೇ ತಲೆಯವನಾದ ದೊಡ್ಡ ವಸಂತನಾಯಕರು ಆಳುತ್ತಿರುವಾಗ ಅತ್ತ ವಿಜಯನಗರದಲ್ಲಿ ಕೃಷ್ಣರಾಯರು ಚಕ್ರವರ್ತಿಗಳಾಗಿದ್ದರು. ಆಗ ಕಲಬುರಗಿ ಸಂಸ್ಥಾನದವರು ಬಹಳವಾಗಿ ವಿರೋಧವನ್ನು ಬೆಳಸಿ ಕೃಷ್ಣರಾಯರನ್ನು ಧಿಕ್ಕಾರಮಾಡಿದರು. ಇಂಥಾ ವಿರೋಧಿಗಳನ್ನು ಅಡಗಿಸಲು ಚಕ್ರವರ್ತಿಗಳ ದಂಡಿನೊಡನೆ ದೊಡ್ಡ ವಸಂತನಾಯಕರು, ಇವರ ಪುತ್ರರೂ ಮತ್ತು ಚಿಮ್ಮಸಾನಿ ತಿಮ್ಮನಾಯಕ ಮೊದಲಾಗಿ ಒಬ್ಬೊಬ್ಬ ಪಾಳಯಗಾರರೂ ಇವರ ಸೇನೆ ಸೇರಿ ಭಾರಿಯಾದ ಫೌಜನ್ನು ಹೊರಡಿಸಿದರು. ಇವರೆಲ್ಲಾ ಎಂಟು ದಿವಸ ಯುದ್ಧ ಮಾಡಿದಾಗ್ಯೂ ಕಲ್‌ಬುರ್ಗಿಯವರು ಸಗ್ಗಲಿಲ್ಲ. ಆಗ ವಿಜಯನಗರದವರನ್ನು ಬಿಟ್ಟು ಪಾಳಯಗಾರರ ದಂಡುಗಳನ್ನೇ ಸೇರಿಸಿಕೊಂಡು ಶತ್ರುಗಳ ಮೇಲೆ ರಾಜಕಾರ್ಯಕ್ಕೆ ಹೊರಟು ದೊಡ್ಡ ವಸಂತನಾಯಕರು ಘೋರವಾದ ಯುದ್ಧವನ್ನು ಮಾಡಿದರು. ಪಾಳಯಗಾರರ ಪಕ್ಷದಲ್ಲಿಯೂ ಶತ್ರುಪಕ್ಷದಲ್ಲಿಯೂ ಬಹಳ ಜನ ನಷ್ಟವಾಯಿತು. ಈ ಹತಾಹತಿಯನ್ನು ಕಲ್‌ಬುರ್ಗಿ ದೊರೆ ತಾಳಲಾರದೆ ಹೋದನು. ಕಡೆಗೆ ಚಿಮ್ಮಸಾನಿ ತಿಮ್ಮನಾಯಕನು ಆತನನ್ನು ಕೈಸೆರೆ ಹಿಡಿಯಲು ಯತ್ನಮಾಡಿದ್ದನ್ನು ಕಂಡು ಕಲ್‌ಬುರ್ಗಿಯ ಶತ್ರುರಾಜನು "ನನ್ನ ಸೇನೆಯೆಲ್ಲಾ ಖಿಲವಾಯಿತು, ನಾನು ನಾಶವಾದೆ ; ಉಳಿದ ಸೇನೆಯನ್ನು ಕೊಂದು ನನ್ನನ್ನು ಕೈಸೆರೆ ಹಿಡಿಯುವುದು ದೊಡ್ಡ ಪರಾಕ್ರಮವಲ್ಲ. ನಾನೂ ದೊಡ್ಡ ವಸಂತನಾಯಕನೂ ಇಬ್ಬರೇ ನಿಂತು ದ್ವಂದ್ವ ಯುದ್ಧ ಮಾಡಿ ಜಯಾಪಜಯವನ್ನು ನಿರ್ಧರಿಸಿಕೊಳ್ಳೋಣ ಎಂದು ಹೇಳಲು, ಗುಮ್ಮನಾಯಕನ ಪಾಳೆಯದ ಶೂರನಾದ ದೊಡ್ಡ ವಸಂ

ನಾಯಕನು ಅದಕ್ಕೆ ಒಪ್ಪಿದನು. ಉಭಯವೀರರೂ ದ್ವಂದ್ವ ಯುದ್ಧಕ್ಕೆ ನಿಂತರು. ಢಾಲ್‌ಕತ್ತಿಯನ್ನು ತೆಗೆದುಕೊಂಡು ಹೊಡೆದಾಟಕ್ಕೆ ಆರಂಭಿಸಿದರು. ಇವರಲ್ಲಿ ಒಬ್ಬರ ಏಟನ್ನು ಒಬ್ಬರು ಚಮತ್ಕಾರವಾಗಿ ತಪ್ಪಿಸಿಕೊಳ್ಳುತಾ ಕಾಳಗ ಮಾಡುತಾ ಇರುವಾಗ ದೊಡ್ಡ ವಸಂತನಾಯಕನು ಶತ್ರುರಾಜನ ಕತ್ತಿಯನ್ನು ಕತ್ತರಿಸಿದನು. ಆಗ ಅವರಿಬ್ಬರೂ ಜಟ್ಟೀ ಕಾಳಗಕ್ಕೆ ಮೊದಲು ಮಾಡಿದರು. ಅದು ಒಂದು ಗಳಿಗೆ ನಡೆಯಿತು. ಕಡೆಗೆ ದೊಡ್ಡ ವಸಂತ ನಾಯಕನ ಏಟು ಬಹಳ ಬಲವಾಗಲು, ಅದನ್ನು ತಾಳಲಾರದೆ ಕಲ್‌ಬುರ್ಗಿ ದೊರೆಯು ನೆಲಕ್ಕೆ ಬಿದ್ದು ಮೂಗಿನಲ್ಲಿಯೂ ಬಾಯಿಯಲ್ಲಿಯೂ ರಕ್ತ ಕಾರಿ ಮೃತಪಟ್ಟನು. ಕಲ್‌ಬುರ್ಗಿ ಕೋಟೆಯು ಜೈಶಾಲಿಗಳ ವಶವಾಯಿತು. ಕೃಷ್ಣರಾಯರು ದೊಡ್ಡ ವಸಂತ ನಾಯಕರ ಸಾಹಸವನ್ನು ಶ್ಲಾಘನೆಮಾಡಿ ಆತನಿಗೆ ಅನೇಕ ರತ್ನಾಭರಣ ದಿವ್ಯ ದುಕೂಲಗಳು, ಆನೆ, ಜಿಲ್ಲೆ, ಅಂಬಾರಿ, ಉತ್ತಮಾಶ್ವಗಳು ಮೊದಲಾಗಿ ಅತ್ಯಧಿಕವಾದ ಭಾರಿ ಬಹುಮಾನವನ್ನು ಕೊಟ್ಟು ಗಂಡೀಕೋಟೆ ಪಾಳಯಗಾರನಿಗೂ ಅದೇ ರೀತಿಯಾಗಿ ಸನ್ಮಾನವನ್ನು ತೋರಿಸಿದರು.

ಕದರಪ್ಪ ನಾಯಕ

ಈ ಗುಮ್ಮನಾಯಕನ ಪಾಳಯದ ಪಾಳಯಗಾರರ ೧೨ನೇ ತಲೆಯವ ನಾದ ಕದರಪ್ಪನಾಯಕನ ದೊರೆತನದಲ್ಲಿ ಇಡಗೂರು ಚಿನ್ನಗಾನಪಲ್ಲಿ ಸಂಸ್ಥಾನದ ರಂಗರಾಜನೆಂಬ ಪಾಳಯಗಾರನು ವಿಜಯನಗರದ ಚಕ್ರವರ್ತಿ ಗಳನ್ನು ಧಿಕ್ಕರಿಸಿ ಮಾತನಾಡಿದ್ದ ಕ್ರೋಧಕ್ಕಾಗಿ ಕದರಪ್ಪನಾಯಕನು ತನ್ನ ಸ್ವಂತ ಸೇನೆಯೊಡನೆ ಹೋಗಿ ಆ ರಂಗರಾಜನನ್ನು ಅಡಗಿಸಿ ಮಹಾರಾಜರಿಗೆ ಸರಿಯಾಗಿ ಕಪ್ಪ ಮೊದಲಾದ್ದನ್ನು ಕೊಟ್ಟುಕೊಂಡು ಯೋಗ್ಯವಾಗಿ ನಡೆದು ಕೊಳ್ಳುವ ಹಾಗೆ ನಿಯಾಮಕದಿಂದ ಕರಾರು ಮಾಡಿಕೊಂಡು ಬರಲು, ಆಗ ವಿಜಯನಗರದ ರಾಮರಾಜನು ವಿಶೇಷವಾಗಿ ಬಹುಮಾನವನ್ನು ಮಾಡಿ ತಮ್ಮ ಆಸ್ಥಾನದಲ್ಲಿಯೇ ಕೆಲವು ದಿವಸ ಇರಬೇಕೆಂದು ಗುಮ್ಮನಾಯಕನ ಪಾಳಯದ ದೊರೆಯನ್ನು ಪ್ರೀತಿಯಿಂದ ಇರಿಸಿಕೊಂಡನು.

ಪೊಳ್ಳುಕಠಾರಿ

ಹೀಗಿರುವಲ್ಲಿ ಮಹಾಸನವಮಿ ಪ್ರಾಪ್ತವಾಯಿತು. ಆಗ ಪದ್ಧತೀ ಪ್ರಕಾರ ಆ ಒಡ್ಡೋಲಗದಲ್ಲಿ ಅನೇಕ ದೇಶಾಧೀಶರು, ಪ್ರಧಾನ ಮಂತ್ರಿಗಳು, ಅನೇಕ ವೀರರು, ಪಾಳಯಗಾರರು ವಿದ್ವಾಂಸರು ಸಹಾ ಶೋಭಿಸುತಾ ಇದ್ದರು. ಆಗ ಬಂಗಾರ ಯಾಚಮನಾಯಕನ ಪಾಳಯದ ಸಂಸ್ಥಾನದಿಂದ ಬಂದಿದ್ದ ಒಬ್ಬ ಭಟರಾಜು ಎದ್ದು ನಿಂತು ತನ್ನ ಕೈಯ್ಯಲ್ಲಿದ್ದ ಅತಿ ತೀಕ್ಷ್ಣವಾದ ಒಂದು ಕಠಾರಿಯನ್ನು ಒರೆಯಿಂದ ಹಿರಿದು ಅದನ್ನು ಮೇಲಕ್ಕೆ ಎತ್ತಿ ಝಳಪಿಸುತಾ "ನನ್ನ ಕಠಾರಿಯ ಏಟಿಗೆ ತಮ್ಮ ಎದೆಯನ್ನು ಧೈರ್ಯವಾಗಿ ಕೊಡುವವರು ಈ ಸಭೆಯಲ್ಲಿ ಯಾರಿದಾರೆಯೋ ಅವರನ್ನು ನಾನು ಹೊಗಳುತ್ತೇನೆ" ಎಂದು ಹೇಳಿಕೊಳ್ಳುತಾ ಕಠಾರಿಯನ್ನು ಝಳಪಿಸುತಾ ನಿಂತುಕೊಂಡನು. ಆಗ ಆಕಸ್ಮಾತ್ತಾಗಿ ಹೊರಟ ಈ ಮಾತನ್ನು ಕೇಳಿ ಆ ಮಹಾಸಭೆಯೆಲ್ಲಾ ಸ್ತಂಭೀಭೂತವಾಯಿತು. ಆ ಕಾಲದಲ್ಲಿ ಶೂರನಾದ ಗುಮ್ಮನಾಯಕನ ಪಾಳಯದ ಕದರಪ್ಪ ನಾಯಕನು ತಟ್ಟನೆ ಎದ್ದು ತಾನು ಎದೆಯನ್ನು ಕೊಡುತ್ತೇನೆಂದು ಧೈರ್ಯವಾಗಿ ನಿಂತುಕೊಂಡನು. ಕೂಡಲೇ ಆ ಭಟರಾಜುವು ಗರ್ಜನೆಮಾಡುತಾ ತನ್ನ ಕಠಾರಿಯಿಂದ ಕದರಪ್ಪನಾಯಕನ ಎದೆಯ ಮೇಲೆ ತಿವಿದನು. ಪಾಳಯಗಾರನ ದೇಹವೆಲ್ಲಾ ರಕ್ತಮಯವಾಯಿತು. ಸಮೀಪದಲ್ಲಿದ್ದವರೆಲ್ಲಾ ಗಾಬರಿಯಾಗಿ ಹತ್ತಿರ ಬಂದು ನೋಡಲಾಗಿ, ಆ ಕಠಾರಿಯು ಕೃತ್ರಿಮದಿಂದ ಮಾಡಿದ್ದೆಂತಲೂ, ರಕ್ತವಾಗಿ ಸುರಿದುದ್ದೆಲ್ಲಾ ಅವುಕಳಿ ಎಂತಲೂ ಗೊತ್ತಾಯಿತು. ಅಗ ಆ ಭಟರಾಜುವು ಆ ಕದರಪ್ಪನಾಯಕನ ಶೌರ್ಯವನ್ನು ಕೊಂಡಾಡಿ ಆ ತಕ್ಷಣವೇ ಪದ್ಯರೂಪದಲ್ಲಿ ಕವಿತ್ವಮಾಡಿ ಹೇಳಿ ಹೊಗಳಲು, ಧೀರನಾದ ಆ ಪಾಳಯಗಾರನು ಆ ಭಟರಾಜುವಿನ ಚಮತ್ಕೃತಿಗೆ ಮೆಚ್ಚಿ ತಾನು ಧರಿಸಿದ್ದ ಮುತ್ತಿನ ಕಂಠಿಯನ್ನು ಅವನ ಕೊರಳಿಗೆ ಹಾಕಿ, ತನ್ನ ಶಾಲನ್ನು ಅವನಿಗೆ ಹೊದಿಸಿದನು. ಚಕ್ರವರ್ತಿಯು ಇವರಿಬ್ಬರಿಗೂ ಭಾರಿಯಾಗಿ ಬಹುಮಾನ ಮಾಡಿದನು.

ಆದರೆ ಗೊತ್ತಿಲ್ಲದ ಹಾಗಿರುವ ಈ ಶೂರರ ಸರಣಿಯಲ್ಲಿ ಇನ್ನೊಂದು ಹೆಸರನ್ನು ಮಾತ್ರ ಸೇರಿಸಿ ಅಲ್ಲಿಗೆ ನಿಲ್ಲಿಸುತ್ತೇನೆ.

ಇಕ್ಕೇರಿ ದೊಡ್ಡ ಸಂಕಣ್ಣನಾಯಕ

ಇಕ್ಕೇರಿ ಪಾಳೆಯಗಾರರಲ್ಲಿ ೩ನೇ ತಲೆಯವನಾದ ದೊಡ್ಡ ಸಂಕಣ್ಣ ನಾಯಕನು ವಿಶೇಷವಾದ ದರ್ಪದಿಂದಲೂ ಖ್ಯಾತಿಯಿಂದಲೂ ಆಳುತಾ ಇದ್ದು, ತರುವಾಯ ರಾಜ್ಯವನ್ನು ತಮ್ಮನಾದ ಚಿಕ್ಕಸಂಕಣ್ಣನ ವಶಕ್ಕೆ ಬಿಟ್ಟು, ತೀರ್ಥಯಾತ್ರೆಗಾಗಿಯೂ ದೇಶ ಸಂಚಾರಕ್ಕಾಗಿಯೂ ಹೋಗುವಂತೆ ಕಾವಿ ಶಾಲೆಯನ್ನು ಹೊದ್ದು ನಾಲ್ಕು ಜನ ಸೇವಕರೊಡಗೂಡಿ ಹೊರಟನು. ಬರುತಾ ದಿಲ್ಲಿಗೆ ಬಂದು ಆ ಪಟ್ಟಣದ ಸೌಂದರ್ಯವನ್ನೂ ಅಲ್ಲಿನ ಅರಸು ಕಟ್ಟನ್ನೂ ನೋಡುತಾ ಚಕ್ರವರ್ತಿಯಾದ ಅಕ್ಬರ ಬಾದಶಹನ ಅರಮನೇ ಬಾಗಿಲೆದುರಿಗೆ ಹೋಗಲಾಗಿ ಅಲ್ಲಿ ಒಂದು ಕತ್ತಿಯು ಕಟ್ಟಿತ್ತು. ಅದೇನೆಂದು ವಿಚಾರಿಸಲಾಗಿ—ಅಲ್ಲಿ ಅಂಕುಶಖಾನನೆಂಬ ಒಬ್ಬ ಶೂರ ಇದ್ದಾನೆ; ಈ ಕತ್ತಿಯನ್ನು ಯಾವ ಮನುಷ್ಯ ಕೀಳುತಾನೆಯೋ ಅಂಥವನು ತನ್ನೊಡನೆ ಕಾಳಗಕ್ಕೆ ಬರಬೇಕೆಂದು ಶಾಸನ ಬರೆಯಿಸಿದಾನೆ ಎಂದು ಅಲ್ಲಿನ ಕಾವಲುಗಾರರು ಹೇಳಿದರು. ಆ ಕೂಡಲೆ ದೊಡ್ಡ ಸಂಕಣ್ಣನಾಯಕನು ತನ್ನ ಆಳುಗಳ ಕೈಯಿಂದ ಆ ಕತ್ತಿಯನ್ನು ಕಿತ್ತು ಹಾಕಿಸಿದನು. ಹೀಗೆ ಗರ್ವಭಂಗವಾದ್ದನ್ನು ಕೇಳಿದ ಕೂಡಲೆ ಅಂಕುಶಖಾನನು ಹೆಚ್ಚಾಗಿ ರೌದ್ರವನ್ನು ತಾಳಿ ಅರಮನೆ ಬಾಗಿಲಿಗೆ ಬಂದು ನೋಡಿ ದೊಡ್ಡಸಂಕಣ್ಣನನ್ನು ತನ್ನೊಡನೆ ಕಾಳಗಕ್ಕೆ ಬರಬೇಕೆಂದು ಕರೆದನು. ದಿವಸ ಗೊತ್ತಾಯಿತು. ಬಾದಶಹನು ನೋಡುವುದಕ್ಕೆ ಬಂದು ಕೂತುಕೊಂಡನು. ಅನೇಕ ಜನ ನೆರೆಯಿತು. ದೊಡ್ಡಸಂಕಣ್ಣನಾಯಕನೂ ಅಂಕುಶಖಾನನೂ ರಂಗಸ್ಥಳದಲ್ಲಿ ಕತ್ತಿಯನ್ನು ಹಿರಿದುಕೊಂಡು ಬಂದು ನಿಂತರು. ಇಬ್ಬರಿಗೂ ದ್ವಂದ್ವ ಯುದ್ಧ ಮೊದಲಾಗಿ ಜರುಗುತಾ ಇರುವಾಗ, ಅತ್ಯಾಶ್ಚರ್ಯಕವಾದ ಒಂದು ಸಂಗತಿ ನಡೆಯಿತು. ಒಬ್ಬೊಬ್ಬನೂ ಕತ್ತಿ ತಿರುಗಿಸಿದ್ದೂ ಹೊಡೆದದ್ದೂ ಯಾರ ಕಣ್ಣಿಗೂ ಕಾಣಿಸದ ಹಾಗೆ ಪಟ್ಟಾಕತ್ತಿ ವರಸೆ ಅಷ್ಟು ವೇಗವಾಗಿ ಜರುಗುತಾ ಇರುವಾಗ, ತಟ್ಟನೆ ಉಭಯ ವೀರರೂ ಸುಮ್ಮನೆ ನಿಂತುಕೊಂಡರು. ಆಗ ಬಾದಶಹನು ಇದನ್ನು ಕಂಡು ಯಾಕೆ ಸುಮ್ಮನೆ ನಿಂತುಕೊಂಡೆ, ಖಾನನೊಡನೆ ಕಾಳಗ ಮಾಡವುದು ನಿನ್ನ ಕೈಯಲ್ಲಿ ಹರಿಯದೋ ಎಂದು ಬಾದಶಹನು ದೊಡ್ಡಸಂಕಣ್ಣನನ್ನು

ಕುರಿತು ಮೊದಲಿಸಿ ಮಾತನಾಡಲು, ಅದಕ್ಕೆ ಕೆಳದಿ ಧೀರನು—ತಾನು ಸತ್ತ ಹೆಣದ ಮೇಲೆ ಕಾಳಗ ಮಾಡುವಂಥಾ ಹೇಡಿಯಲ್ಲವೆಂದು ಉತ್ತರ ಹೇಳಿ, ಆ ರಂಗಸ್ಥಳದಲ್ಲಿ ಸುಮ್ಮನೆ ಕಣ್ಣನ್ನು ಬಿಟ್ಟುಕೊಂಡು ನಿಂತಿದ್ದ ಅಂಕುಶಖಾನನ ಶರೀರವನ್ನು ಸಂಕಣ್ಣ ತನ್ನ ಕತ್ತಿಯ ತುದಿಯಿಂದ ಸ್ವಲ್ಪ ಸೋಕಿಸಲು ಸೊಂಟದಿಂದ ಮೇಲೆ ಮೇಲಾಯವು ಅದರ ಕೆಳಗೆ ಕೀಳಾಯವೂ ಬೇರೆ ಬೇರೆಯಾಗಿ ಬಿದ್ದುಬಿಟ್ಟವು. ಹಾಗೆ ಎರಡಾಗಿ ಕತ್ತರಿಸಿ ಹೋಗಿದ್ದ ಶರೀರದ ತುಂಡುಗಳು ಒಂದರ ಮೇಲೆ ಒಂದು ಹೇಗೆ ನಿಂತಿದ್ದವೋ ಸಂಕಣ್ಣನ ಕತ್ತಿವರಸೆಯ ವೇಗ ಇನ್ನು ಎಂಥಾದ್ದೋ ಹೇಳಲಶಕ್ಯವಾಗಿದೆ. ಆಗ ಎಲ್ಲರೂ ಸಂಕಣ್ಣನ ಪರಾಕ್ರಮಕ್ಕೆ ಆಶ್ಚರ್ಯಪಟ್ಟು ಮರದ ಹಾಗೆ ನಿಂತುಕೊಂಡರು. ಬಾದಷಹನು ಸಂಕಣ್ಣನಿಗೆ ವಿಶೇಷ ಬಹುಮಾನ ಮಾಡಿದನು.

ಈ ಪಾಳೆಯಗಾರರ ವಿಷಯದಲ್ಲಿ ಇಂಥಾ ಪರಾಕ್ರಮದ ಸಂಗತಿಗಳನ್ನು ಗೊತ್ತಿಲ್ಲದಷ್ಟು ಹೇಳಬಹುದಾಗಿದೆ.

ನ್ಯಾಯಮೂರ್ತಿ ಅಗ್ಗಿತಿಮ್ಮನಾಯಕ

ಇದುವರೆಗೂ ಪರಾಕ್ರಮದ ವಿಷಯದಲ್ಲಿ ಕೆಲವು ಇತಿಹಾಸಗಳನ್ನು ಹೇಳಿ ತಮಗೆ ಅಸಹ್ಯವನ್ನು ಹುಟ್ಟಿಸಿದ ದೋಷ ಪರಿಹಾರಕ್ಕಾಗಿ ಈ ಪಾಳಯಗಾರರ ಬೇರೆ ಸದ್ಗುಣಗಳನ್ನು ವರ್ಣಿಸಲು ಯತ್ನಿಸುತ್ತೇನೆ. ದೊರೆತನ ಮಾಡುವವರು ಯಾರೇ ಆಗಲಿ ಪರಾಕ್ರಮವೋ, ಔದಾರ್ಯವೋ, ಕ್ಷಮೆಯೋ, ಸದಾಚಾರವೋ, ವಿದ್ಯಾಪಕ್ಷಪಾತತ್ವವೋ, ದಯಾರಸವೋ, ಔಚಿತ್ಯಜ್ಞಾನವೋ, ವಿನಯವೋ, ಪರೋಪಕಾರಬುದ್ಧಿಯೋ, ದಯಾಪರತ್ವವೋ, ಪೂರ್ವಾಪರಜ್ಞಾನವೋ, ದಂಭವೋ, ಕ್ರೋಧವೋ, ಪ್ರಜಾಹಿಂಸೆಯೋ, ಕ್ರೌರ್ಯವೋ, ಕಾಠಿಣ್ಯವೋ, ಅಲಕ್ಷ್ಯವೋ, ತೃಪ್ತಿಯಾಗದ ದ್ರವ್ಯಾಕಾಂಕ್ಷೆಯೋ, ಸ್ವಪ್ರಯೋಜನ ಪರಾಯಣತೆಯೋ, ಸ್ವಜನಾಭಿಮಾನವೋ, ದಾಕ್ಷಿಣ್ಯವೋ, ಬಡವರಲ್ಲಿ ತಿರಸ್ಕಾರವೋ, ಬಲ್ಲಿದರಲ್ಲಿ ದಾಸನಂಡವೋ ಇವೇ ಮೊದಲಾದ ಅನೇಕ ಗುಣದೋಷಗಳಿಗೆ ಪ್ರಖ್ಯಾತರಾಗಿದ್ದಾರೆ. ಆದರೆ ಪಕ್ಷಪಾತವಿಲ್ಲದೆ ನ್ಯಾಯ ವಿಮರ್ಶೆಯ ತೀರ್ಮಾನ ಮಾಡುವ ಗುಣವ ಮಾತ್ರ ಇವರಿಗೆ ಖ್ಯಾತಿ ಬಂದದ್ದು ಕೇವಲ ಅಪೂರ್ವವಾಗಿದೆ. ಯುಗಾಂತರ

ವಲ್ಲಿ ಜನಕಮಹಾರಾಯನು ಸಿಂಹಾಸನದ ಮೇಲೆ ಕೂತು ಒಂದು ಕಾಲನ್ನು ತಣ್ಣೀರಿನಲ್ಲಿಯೂ ಒಂದು ಕಾಲನ್ನು ಬಿಸಿನೀರಿನಲ್ಲಿಯೂ ಇಟ್ಟುಕೊಂಡು ಸಮತೂಕವಾಗಿ ನ್ಯಾಯವಿಮರ್ಶೆಯನ್ನು ಮಾಡುತ್ತಿದ್ದನೆಂದು ಪುರಾಣಗಳಲ್ಲಿ ಹೇಳಿದೆ. ಆದರೆ ಇಂಥಾ ಜನಕರಾಯ, ಸಗರಚಕ್ರವರ್ತಿ ಇವರ ಹೊರತು ಇನ್ನು ಯಾರ ಹೆಸರನ್ನೂ ಪುರಾಣಗಳೂ ಕೂಡ ಕೊಟ್ಟಿಲ್ಲ. ಈ ಜನಕ ಮಹಾರಾಯ, ಸಗರಚಕ್ರವರ್ತಿ ಇಂಥವರು ದೇವಾಂಶಸಂಭೂತರು. ಸಾಧಾರಣ ಹುಲುಮನುಜರ ಪಾಡನ್ನಂತೂ ಕೇಳತಕ್ಕದ್ದೇ ಇಲ್ಲ.

ಆದರೆ ಈ ವಿಧಿಗೆ ಪ್ರತಿಷೇಧದ ಪ್ರಭೆಯು ಗುಮ್ಮನಾಯಕನ ಪಾಳೆಯದ ಪಾಳಯಗಾರರ ವಂಶದಲ್ಲಿ ಹೊಳೆಯುತ್ತಿದೆ. ಈ ವಂಶದ ೧೩ನೇ ದೊರೆಯಾದ ಅಗ್ಗಿ ತಿಮ್ಮನಾಯಕನೆಂಬಾತನು ನ್ಯಾಯವಿಮರ್ಶೆಗೆ ಪ್ರಖ್ಯಾತಿಯನ್ನು ಹೊಂದಿದ ಮಹಾಪುರುಷನಾಗಿದ್ದಾನೆ. ಅಪರಾಧ ಮಾಡಿದವರಿಗೆ ಈತನು ಕ್ರೂರವಾದ ದಂಡನೆಯನ್ನು ಕೊಡಿಸುತಾ ಇದ್ದನು. ಈತನ ತಮ್ಮನಾದ ಕೃಷ್ಣಪ್ಪನಾಯಕನೆಂಬುವನು ಸುಂದರಿಯಾದ ಒಬ್ಬ ಸ್ತ್ರೀಯನ್ನು ಕೆಡಿಸಿ ಸ್ವಾಧೀನ ಮಾಡಿಕೊಂಡು ದುರ್ಮಾರ್ಗನಾಗಿದ್ದನು. ಆ ಹೆಂಗಸಿನ ಗಂಡನು ಇದನ್ನು ತಿಳಿದು ಅವಳ ಮೂಗನ್ನೂ ಮೊಲೆಯನ್ನೂ ಕುಯಿದುಬಿಟ್ಟನು. ಆ ಕೃಷ್ಣಪ್ಪನಾಯಕನು ಅವನ ಮೇಲಿನ ದ್ವೇಷದಿಂದ ಅವನ ಕಿವಿ, ಮೂಗುಗಳನ್ನು ಕುಯಿದನು. ಈ ಫಿರ್ಯಾದು ದೊರೆಯ ಮುಂದೆ ಬರಲು ತಿಮ್ಮನಾಯಕನು ಸಾಮಾಜಿಕರನ್ನು ಪಂಚಾಯಿತರನ್ನಾಗಿರಿಸಿಕೊಂಡು ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡಿ ತಮ್ಮನೆಂಬ ಅಭಿಮಾನಪಡದೆ ಕೃಷ್ಣಪ್ಪನಾಯಕನ ಕಿವಿ ಮೂಗುಗಳನ್ನು ಕುಯ್ಯಿಸಲು, ಮೂರು ದಿವಸದೊಳಗೆ ಆ ಕೃಷ್ಣಪ್ಪನು ಮೃತಪಟ್ಟನು.

ಈ ದೊರೆಯು ಹಿರೀಹೆಂಡತಿ ಹೊಟ್ಟೆಯಲ್ಲಿ ಹುಟ್ಟಿದ ಹಿರೀಮಗ ವಸಂತನಾಯಕನು ವಿದ್ಯಾವಂತ, ನೀತಿಜ್ಞ, ಸಾತ್ವಿಕ ಸ್ವಭಾವವುಳ್ಳವನು. ದೊರೆಯ ಎರಡನೇ ಹೆಂಡತೀ ಹೊಟ್ಟೆಯಲ್ಲಿ ಹುಟ್ಟಿದ ನಾಗಪ್ಪನಾಯಕನೆಂಬುವನಾದರೋ ದುರ್ಮಾರ್ಗ. ಅನೇಕ ದುಷ್ಕೃತ್ಯಗಳನ್ನು ಮಾಡಿದನು. ದೊರೆಯು ಇದನ್ನು ತಿಳಿದು ನಾಗಪ್ಪ ಮಾಡಿದ ಅಪರಾಧಕ್ಕೆ ಮಗನನ್ನು ಮೂರು ತಿಂಗಳ [illegible]ಗೆ ಕಾರಾಗೃಹವಾಸ ವಿಧಿಸಿದನು. ಆ ಗಡಬ [illegible] ಆ ನಾಗಪ್ಪನನ್ನು

ಎಷ್ಟು ಯೋಗ್ಯವಾದ ಸ್ಥಿತಿಯಲ್ಲಿಟ್ಟು ಅವನಿಗೆ ಬುದ್ಧಿ ಹೇಳಿಸಿದಾಗ್ಯೂ ಅವನು ತನ್ನ ದುಸ್ವಭಾವವನ್ನು ಬಿಡಲಿಲ್ಲ. ಮುಂದಕ್ಕೆ ತಾನು ದೊರೆತನವನ್ನು ಆಕ್ರಮಿಸಲು ಹಿರೀ ಅಣ್ಣನಾದ ವಸಂತನಾಯಕ ಅಡ್ಡಿಯಾಗಿದಾನೆಂದು ಯೋಚಿಸಿ, ಅವನಿಗೆ ಅಡಿಗೆಯವನ ಮೂಲಕ ಆಹಾರದಲ್ಲಿ ವಿಷವನ್ನು ಹಾಕಿಸಿದನು. ಇದು ದೊರೆಗೆ ತಿಳಿಯಿತು. ಅವನು ಮಗ ನಾಗಪ್ಪನನ್ನೂ, ಅಡಿಗೆಯವನನ್ನೂ ಕರೆಯಿಸಿ ಸಾಮಾಜಿಕರ ಮುಂದೆ ವಿಚಾರಣೆ ಮಾಡಿಸಿ, ಆ ಪಾಚಕನಿಗೂ ಮಗನಾದ ನಾಗಪ್ಪನಿಗೂ ಮರಣ ದಂಡನೆಯನ್ನು ವಿಧಿಸಿದನು. ಪಾಚಕನಿಗೇನೋ ಶಿರಚ್ಛೇದನವಾಯಿತು. ಆಗ ಮಹಾಸಾತ್ವಿಕನಾದ ಹಿರೀ ರಾಜಕುಮಾರ ವಸಂತನಾಯಕನು ತಂದೆಯ ಸಮೀಪಕ್ಕೆ ಬಂದು "ಬುದ್ಧೀ, ನನ್ನ ತಮ್ಮ ಮರಣದಂಡನೆ ಅನುಭವಿಸುವುದನ್ನು ನೋಡಿ ನಾನು ಸಹಿಸಲಾರೆ, ಅವನ ಅಪರಾಧವನ್ನು ಕ್ಷಮಿಸಬೇಕು, ಇಲ್ಲದಿದ್ದರೆ ನಾನು ಪ್ರಾಣತ್ಯಾಗ ಮಾಡಿಕೊಳ್ಳುತ್ತೇನೆ" ಎಂದು ಬೇಡಿಕೊಂಡನು. ಆಗ ದೊರೆಯು ದಯದಿಂದ ಆ ನಾಗಪ್ಪನೆಂಬ ದ್ರೋಹಿಗೆ ಮರಣ ದಂಡನೆಯನ್ನು ತಪ್ಪಿಸಿ ಅವನನ್ನು ಗಡೀಪಾರು ಮಾಡಿಸಿದನು. ಈ ದೊರೆಯ ನಿಷ್ಪಕ್ಷಪಾತಕ್ಕೂ ಅವನ ದರ್ಪಕ್ಕೂ ಸ್ವದೇಶೀಯರೂ, ಅನ್ಯದೇಶಿಯರೂ ಕೂಡ ನಡುಗುತ್ತಿದ್ದರು. ಇಂಥಾ ಪುಣ್ಯಾತ್ಮನಿಗೀಗ ನ್ಯಾಯಮೂರ್ತಿಯೆಂಬ ಬಿರುದು ಸಲ್ಲುವುದು. ಇದನ್ನು ಕೇಳಿದರೆ ಸಗರ ಚಕ್ರವರ್ತಿಯು ತನ್ನ ಮಗ ಅಸಮಂಜ ಪ್ರಜೆಗಳ ಮಕ್ಕಳನ್ನು ಸರಯೂ ನದಿಗೆ ತಳ್ಳಿ ಸಂತೋಷಪಡುತಾ ಇದ್ದದಕ್ಕಾಗಿ, ರಾಜಪುತ್ರನಿಗೆ ಕಣ್ಣನ್ನು ಕಟ್ಟಿಸಿ ಕಾಡಿಗೆ ಕಳುಹಿಸಿದ ಕಥೆ ಎಲ್ಲರಿಗೂ ಜ್ಞಾಪಕಕ್ಕೆ ಬರುವುದು ಆಶ್ಚರ್ಯವಲ್ಲ. ಹೀಗಿದ್ದ ಕಾರಣ ಈ ಪುರುಷಶ್ರೇಷ್ಠನಿಗೆ ಅಗ್ಗಿ ತಿಮ್ಮನಾಯಕನೆಂಬ ಹೆಸರು ಬಂದ ಹಾಗೆ ತೋರುವುದು. ಅಗ್ಗಿ ಎಂದರೆ ತೆಲುಗಿನಲ್ಲಿ ಬೆಂಕಿ ಎಂದು ; ಅರ್ಣ ಎಂದರೆ ಯಾರು ಮುಟ್ಟಿದರೂ ಪಕ್ಷಪಾತವಿಲ್ಲದೆ ಸುಡುವ ಬೆಂಕಿಯಂಥಾ ಪುರುಷನೆಂದು ಆ ಅಡ್ಡ ಹೆಸರಿಗೆ ಅರ್ಥವಾಗಬಹುದು.

೨. ವೈದ್ಯರ ಒಗ್ಗರಣೆ

ದಿ॥ ಪಂಜೆ ಮಂಗೇಶರಾಯರು : ೧೭-೨-೧೮೭೪ ; ೨೫-೧೦-೧೯೩೭

ವಲ್ಲಭಾಚಾರ್ಯರು ೧೮೭೨ರಲ್ಲಿ ಕಮಲಪುರದ ಅಮಲ್ದಾರರಾಗಿದ್ದರು. ಆ ಕಾಲದಲ್ಲಿ ಜನಗಳಿಗೆ ಕುಂಪಣಿ ಸರಕಾರದಲ್ಲಿ ಹುದ್ದೆ ದೊರಕುವುದಕ್ಕೆ ಅಷ್ಟೊಂದು ತೊಂದರೆ ಇರಲಿಲ್ಲ. ಜನಗಳಲ್ಲಿ ಸಾಕಷ್ಟು ಅನುಕೂಲತೆ ಇದ್ದಿತ್ತು ; ಹೊಟ್ಟೆತುಂಬಾ ಉಂಡು ಕೂತುಕೊಳ್ಳಬಹುದಾದಷ್ಟು ಇದ್ದಿತ್ತು. ಸರಕಾರಿ ಹುದ್ದೆಗಳಿಗೋಸ್ಕರ ಹೋರಾಟ ಇರಲಿಲ್ಲ. ಪೇಚಾಟ ಇರಲಿಲ್ಲ. ಇಂದಿನಂತೆ ಅನೇಕ ಪರೀಕ್ಷೆಗಳೂ ಇರಲಿಲ್ಲ. ಒಂದು ಬಹಿರಂಗ ಪರೀಕ್ಷೆ ; ಒಂದು ಅಂತರಂಗ ಪರೀಕ್ಷೆ—ಇಷ್ಟೆ. ವಲ್ಲಭಾಚಾರ್ಯರು ಬಹಿರಂಗ ಪರೀಕ್ಷೆಯನ್ನು ಮುಗಿಸಿದ್ದರು. ಕಲೆಕ್ಟರ್ ರೋರಿಂಗ್ ದೊರೆಗಳು ಇವರ ಅಂಗವನ್ನು ತಾನೆ ಸ್ವತಃ ನೋಡಿದ್ದರು. ಇವರ ಸ್ಥೂಲದೇಹ ; ಗೋಷ್ಪದ ಕೇಶ, ದೀರ್ಘನಾಮ, ಕರ್ಣ ತುಳಸಿ, ಗಂಧಲೇಪನ, ಲಂಬೋದರ—ಇವೇ ಅಮಲ್ದಾರ್ ಹುದ್ದೆಯ ಮುಖ್ಯ ಲಕ್ಷಣಗಳಾಗಿದ್ದವು. ರೋರಿಂಗ್ ದೊರೆಗಳು ಸಂಸ್ಕೃತಭಾಷಾ ಪ್ರಿಯರು, ದೇಶೀಯರ ಪ್ರಸನ್ನರು. ವಲ್ಲಭಾಚಾರ್ಯರು ಸಂಸ್ಕೃತ ಭಾಷಾಭಿಜ್ಞರೆಂದು ಕಲೆಕ್ಟರ್ ದೊರೆಗಳ ತಿಳುವಳಿಕೆಗೆ ಹೇಗೋ ಬಂದಿತ್ತು. ಆಚಾರ್ಯರು ಚತುರ್ವೇದಗಳ ಸಂಗ್ರಹಮಾಡಿ ಇಟ್ಟಿದ್ದರು. ಭಾರತ ರಾಮಾಯಣಗಳ ಕಥಾ ಭಾಗವನ್ನು ಬಾಲ್ಯದಲ್ಲಿಯೇ ಕೇಳಿದ್ದರು. ಹಾಗೂ ಸಂಸ್ಕೃತ ಸಂಧ್ಯಾವಂದನೆಯ ಪುಸ್ತಕ ಪಾಠವು ಅವರಿಗೆ ನಿರಂತರವೂ ಇದ್ದಿತ್ತು. ಕಮಲಪುರದ ಅಮಲ್ದಾರರಲ್ಲಿ ಇವರಷ್ಟು ಮಹಾಕೀರ್ತಿಯನ್ನು ಯಾರೂ ಪಡೆದಿರಲಿಲ್ಲ. ಅವರಿಗೆ ಇಂಗ್ಲಿಷು ಭಾಷಾಜ್ಞಾನವೂ ಇತ್ತೋ ಇಲ್ಲವೋ ನಾವು ಅರಿಯೆವು. ಇಂಗ್ಲಿಷು ಮಾತನಾಡಲು ತಿಳಿದಿತ್ತು ಎಂದು ನಮ್ಮ ಮನೆ ಅಜ್ಜಿಯೊಂದು ಈಗಲೂ ಹೇಳುತ್ತಿರುವಳು. ಇವರ 'ಜಡ್ಜ್‌ಮೆಂಟ್'ಗಳು ಬಹಳ ನೂತನವಾಗಿದ್ದುವೆಂದು ಬಜಾರಿನಲ್ಲಿ ಈಗಲೂ ವರ್ತಮಾನವಿದೆ. ವಲ್ಲಭಾಚಾರ್ಯರು 'ಪೀನಲ್ ಕೋಡನ್ನು' ಅಷ್ಟು

ಚೆನ್ನಾಗಿ ಮನ್ನಿಸುತ್ತಿರಲಿಲ್ಲ. ಆ ಕ್ರೋಡು ಬಿಳೇ ಜನರ ತಲೆಯ ಮೇಲೆ ಚೆನ್ನಾಗಿ ತೋರುವುದಲ್ಲದೆ, ನಾವು ಅದನ್ನು ಧರಿಸುವುದಕ್ಕೆ ಎತ್ತುಗಳಲ್ಲವೆಂದು ಅವರ ಅಭಿಪ್ರಾಯವಿತ್ತು. 'ಜಡ್ಜ್‌ಮೆಂಟು'ಗಳಲ್ಲಿ ಭಾರತ ರಾಮಾಯಣ ದಿಂದಲೇ ಬೇಕಾದಷ್ಟು ಆಧಾರಗಳನ್ನು ಕೊಟ್ಟು 'ಕೇಸುಗಳನ್ನು' (cases) ತೀರಿಸುತ್ತಿದ್ದರು. ಅವರು ನಿರಪರಾಧಿಗಳಿಗೆ ಆಧಾರರಾಗಿದ್ದರು. ದಂಪತಿಗಳ ವಾದ ವಿವಾದಗಳು ಕಚೇರಿಗೆ ಬಂದರೆ, ಅವರ ಮನಸ್ಸು ಇಂದಿನ ಸಮಾಜ ಸುಧಾರಕರ ಮನಸ್ಸಿನಂತೆ ಹೆಂಗಸಿನ ಪಕ್ಷವಾಗಿ ವಾಲುತ್ತಿರುವುದು. ಹೆಂಗಸರು ಸಾಕ್ಷಿಗಾರರಾಗಿದ್ದರೆ ಅವರನ್ನು ದಯಾದೃಷ್ಟಿಯಿಂದ ನೋಡಿ, ಅದರ ಆಧಾರ ದಿಂದಲೇ ಕಕ್ಷಿಗಳಿಗೆ ಗುಣ ಮಾಡುತ್ತಿದ್ದರು. ಅಮಲ್ದಾರರಿಗೆ ತಿಂಗಳಿಗೆ ಒಂದು ಬಾರಿ 'ಸರ್ಕೀಟ್' ತಿರುಗುವ ಸಂಪ್ರದಾಯವಿತ್ತು. ಈ 'ಸರ್ಕೀಟ್' ಸುಖ ಭೋಗದಲ್ಲಿ ಅಮಲ್ದಾರರ 'ಹೆಡ್ ಮುನಿಶಿ' ವೈಕುಂಠವ್ಯಾಸಾಚಾರ್ಯರಿಗೂ ಪಾಲಿತ್ತು. 'ಸರ್ಕೀಟಿಗೆ' ಸರಕಾರಿ ಉದ್ಯೋಗಸ್ಥರೂ ಅವರ ಆಪ್ತಮಿತ್ರರೂ- ಯಮನ ಮದುವೆಯ ದಿಬ್ಬಣದಂತೆ ಏಕತ್ರವಾಗಿ ಹೋಗುತ್ತಿದ್ದರು. ಅಂದು ಸರಕಾರದ ಉದ್ಯೋಗಸ್ಥರಿಗೆ ಸಂಬಳ ಕಡಿಮೆ ; 'ಸರ್ಕೀಟ್' ಹೆಚ್ಚು. ಅದು ಕಾರಣದಿಂದ ಉದರನಿರ್ವಾಹವು ಒಟ್ಟಾರೆ ಸರಿಹೋಗುತ್ತಲಿತ್ತು. ಗುಮಾಸ್ತ ಶ್ರೀರಂಗಸೂರಿಯವರ ಮಗಳ ಮದುವೆಯನ್ನು ನಿಶ್ಚಯಿಸಿ, ಅಮಲ್ದಾರ ರೊಡನೆ 'ಜಮಾಬಂದಿ'ಯ ಸರ್ಕೀಟಿಗೆ ಹೋಗಬೇಕೆಂದಿದ್ದರು. 'ಮುನಿಶಿ' ಹಯವದನರ ತಂದೆಯವರು ಬಿದ್ದುಹೋದ ದೇವಸ್ಥಾನದ ಜೀರ್ಣೋದ್ಧಾರ ಮಾಡಲು ಆಲೋಚಿಸಿ, ಈ ವರ್ಷ ಸಪ್ತಗ್ರಾಮದಲ್ಲಿ ನಡೆಯುವ 'ಜಮಾ ಬಂದಿ'ಯ ಮಹೋತ್ಸವಕ್ಕೆ ಮಗನೊಡನೆ ಹೊರಡಲಿದ್ದರು. ಆದರೆ ಈ ವರ್ಷ ಅಮಲ್ದಾರರು ಯಾರನ್ನೂ ಬರಲೀಯದೆ 'ಹೆಡ್ ಮುನಿಶಿ' ವೈಕುಂಠ ವ್ಯಾಸಾಚಾರ್ಯರ ಸಮೇತರಾಗಿ 'ಸರ್ಕೀಟಿಗೆ' ತೆರಳಿದರು. ಸಪ್ತಗ್ರಾಮವು ಕಮಲಪುರದಿಂದ ೪೦ ಮೈಲು ದೂರ. ಈಗ ಸಪ್ತಗ್ರಾಮಕ್ಕೆ ಹೋಗಲು ರಾಜಮಾರ್ಗವಿದೆ. ೩೦ ವರ್ಷಗಳ ಹಿಂದೆ ಸಪ್ತಗ್ರಾಮಕ್ಕೆ ಹೋಗುವವರು ಮೊದಲು ದೋಣಿ ಹತ್ತಿ, ವೀರಪುರದಲ್ಲಿ ಇಳಿಯಬೇಕಿತ್ತು. ರೋರಿಂಗ್ ದೊರೆಗಳು ಕುದುರೆಯನ್ನು ಏರಿ ವೀರಪುರಕ್ಕೆ ಹೋದರು. ವೀರಪುರದವರು ದೊರೆಗಳನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಕಳುಹಿಸಿದರು. ದೊರೆಗಳು ಮಹಾ

ವಾದ್ಯಘೋಷದೊಡನೆ ಸಪ್ತಗ್ರಾಮಕ್ಕೆ ಬಂದರು. ಊರಲ್ಲೆಲ್ಲಾ ತೋರಣಗಳ ಶೃಂಗಾರ; ಜೈನರ ಬಸ್ತಿಗಳಲ್ಲೆಲ್ಲಾ ಧ್ವಜಗಳ ಅಲಂಕಾರ. 'ಜಮಾಬಂದಿ'ಗೆ ಬಂದಿದ್ದ ಕಲೆಕ್ಟರ್ ದೊರೆಗಳು ನೋಡಬೇಕಾದ ಶಿಲ್ಪಚಿತ್ರಗಳನ್ನೆಲ್ಲಾ ನೋಡಿದರು; ಅವಶ್ಯವಿದ್ದ ಶಾಸನಗಳ ಪ್ರತಿಗಳನ್ನು ಸಂಪಾದಿಸಿದರು. ಬಸ್ತಿಯ ಭಂಡಾರದಲ್ಲಿದ್ದ ಪುಸ್ತಕಗಳನ್ನು ಕುರಿತು ಪ್ರಸ್ತಾಪ ಬಂತು. ಜೈನರ ಮುದಿಗುರುಗಳು ಅವನ್ನು ಹೊರಕೊಡುವುದಕ್ಕೆ ಒಪ್ಪಲಿಲ್ಲ. ದೊರೆಗಳು ಪುಸ್ತಕಗಳ ಆಶೆಯನ್ನು ಬಿಟ್ಟು 'ಜಮಾಬಂದಿ'ಯನ್ನು ಮುಗಿಸಿದರು.

'ಜಮಾಬಂದ್' ಎನ್ನುವುದು ಹಿಂದುಸ್ಥಾನಿ ಭಾಷೆಯ ಪದವು. ಸರಕಾರಕ್ಕೆ ವರ್ಷಂಪ್ರತಿ ಬರುವ ಭೂಮಿಯ ತೀರ್ವೆಯ ಜಮೆಯನ್ನು 'ಬಂದ್' ಮಾಡುವುದು (ಮುಗಿಸುವುದು) ಎಂಬ ಅರ್ಥವನ್ನು ಕೆಲವರು ಕಲ್ಪಿಸಿರುವರು. ಇದು ಶುದ್ಧ ತಪ್ಪು, 'ಜಬಾನ್ ಬಂದ್' ಎಂದರೆ ನಾಲಗೆಯನ್ನು ಕಟ್ಟುವುದು. ಇದುವೆ ಅಪಭ್ರಂಶವಾಗಿ 'ಜಮಾಬಂದ್' ಎಂದಾಯಿತು. ಜನಗಳ 'ಹಾಲ್ ಹವಾಲೆಯನ್ನು' ಹೇಳುವ ನಾಲಗೆಯನ್ನು ಕಟ್ಟುವುದು ಎಂಬ ಅರ್ಥ. ಈ ಅರ್ಥಕ್ಕೆ ಸರಿಯಾಗಿ ಮುಂಚಿನವರು ಕುಳುವಾರುಗಳ ಸ್ಥಿತಿಗತಿಗಳನ್ನೂ ಮೋರೆ, ಗೋಳನ್ನೂ ಕೇಳಿ, ದವಸ ತುಟ್ಟಿಯಾದ ಕಾಲದಲ್ಲಿ ತೀರ್ವೆಯಲ್ಲಿ ಬೇಕಾದಷ್ಟನ್ನು ಮುಜುರೆ ಕೊಟ್ಟು, ಅವರ ಬಾಯನ್ನೂ ಕೂಗನ್ನೂ ತಡೆಸುತ್ತಿದ್ದರು.

ಅಮಲ್ದಾರರು ಸರ್ಕೀಟಿಗೆ ಬರುವ ಹಾಗಿದ್ದರೆ, ಅವರಿಗೋಸ್ಕರ ಅಡಿಗೆ ಯವರನ್ನು ಒದಗಿಸುವುದು ಪಟೇಲನ ಕಷ್ಟತರದ ಕೆಲಸವಾಗಿತ್ತು. ವಲ್ಲಭಾಚಾರ್ಯರು ಸ್ತ್ರೀಪಾಕ ನಿಯಮಿಷ್ಟರು ; ಅವರಿಗೆ ಹೆಂಗಸರ ಅಡಿಗೆ ಮೆಚ್ಚುತ್ತಿತ್ತಲ್ಲದೆ, ಗಂಡಸರ ಅಡಿಗೆಯು ರುಚಿಸುತ್ತಿರಲಿಲ್ಲ, ಆದುಕಾರಣದಿಂದ ಆಚಾರ್ಯರು ಹೋಗುವ ಸ್ಥಳಗಳಲ್ಲಿ ಅವರ ಬಗ್ಗೆ ಅಡಿಗೆಯ ಹೆಂಗಸರನ್ನು ಪಟೇಲರು ಗೊತ್ತುಹಚ್ಚುತ್ತಿದ್ದರು. ಆದರೆ ಒಂದೆರಡು ದಿನಗಳ 'ಚಾಕ್ರಿಗೆ' ಹೆಂಗಸರು ನಿಲ್ಲುವುದಕ್ಕೆ ಈಚೀಚೆಗೆ ಒಪ್ಪುತ್ತಿರಲಿಲ್ಲ. ಒಂದೊಂದು ಪ್ರಸಂಗದಲ್ಲಿ ವಲ್ಲಭಾಚಾರ್ಯರಿಗೆ ಅಡಿಗೆ ಮಾಡಲು ಹೋದ ಹೆಂಗಸನ್ನು ಗಂಡನು ವಿನಾ ಕಾರಣವಾಗಿ ಬಿಟ್ಟುಬಿಡುತ್ತಿದ್ದನು ; ಒಂದೊಂದು ಪ್ರಸಕ್ತಿಯಲ್ಲಿ ಅಂಥಾ ಹೆಂಗಸನ್ನು ಬಹಿಷ್ಕಾರ ಪ್ರಕರಣಕ್ಕೆ ಜಾತಿಗೃಹಸ್ಥರು ಒಳಗಾಗಿಸುತ್ತಿದ್ದರು.

ಅವೂ ಅಲ್ಲದೆ ಸಪ್ತಗ್ರಾಮದಲ್ಲಿ ಬ್ರಾಹ್ಮಣರು ಕಡಿಮೆ. ಪಟೇಲನು ಎಷ್ಟು ಪ್ರಯತ್ನ ಮಾಡಿದರೂ ಅಡಿಗೆಯವಳು ಒಬ್ಬಳಾದರೂ ಸಿಕ್ಕದೆ ಹೋದಳು. ಹೊತ್ತು ಏರಿಬಂತು. ಅಮಲ್ದಾರರು ಕಚೇರಿಯಿಂದ ಕೆಲಸ ಮುಗಿಸಿ ಬರುವ ಮೊದಲು, ಸಂತೋಷಚಿತ್ತರಾಗಿ ಹಾಡುವ ಅಭ್ಯಾಸವಿತ್ತು. ಹೊರಗಿದ್ದ ಪಟೇಲನಿಗೆ ಹಾಡುವ ಕೇಳಿಸುತ್ತಿತ್ತು—

ತರವೇಕು ತರುಣಿಯಳ—ಕಾಮನ ಮುಂಗೈ
ಅರಗಿಣಿಯಂತಹಳ ॥
ಸ್ಮರನ ಸಿಂಗಾಡಿ ಪುರ್ಬಿನ, ನೀರೆ ಮಲ್ಲಿಗೆ
ಪರಿಮಳಿಸುವ ಮೈಯ್ಯ ವರಕರಿಗಮನೆಯ ॥

ಹೀಗೆ ಹಾಡುತ್ತ ಕಟ್ಟಿಟ್ಟ ದಪ್ತರದ ಮೇಲೆ ಕೈಬಡಿದು ತಾಳಹಾಕುತ್ತ ಲಿದ್ದರು.

ಅಮಲ್ದಾರರು ಮನೆಗೆ ಬರುವ ಹೊತ್ತಾಯಿತೆಂದು ಪಟೇಲನು ಅರಿತನು. ಆದರೆ ಅಡಿಗೆಯು ಏನೋ ಸಿದ್ಧವಾಗಲಿಲ್ಲ. ಪಟೇಲನು ಜಾತಿಯಲ್ಲಿ ಜೈನ, ತಾನೇ ಅಡಿಗೆ ಮಾಡುವುದಕ್ಕೆ ಉಪಾಯವಿಲ್ಲ. ಅಮಲ್ದಾರರು ಮಾರ್ಗಕ್ಕೆ ಇಳಿದರು. ಪಟೇಲನು ಎರಡೂ ಕೈಗಳನ್ನು ಸರಿಯಾಗಿ ಜೋಡಿಸಿ ದೊಡ್ಡ ನಮಸ್ಕಾರವನ್ನು ಮಾಡಿದನು. ನಮಸ್ಕಾರ ಮಾಡಿದಷ್ಟಕ್ಕೆ ಅಮಲ್ದಾರರ ಸಿಟ್ಟು ಇಳಿಯುವುದೆಂದು ಪಟೇಲನು ತಿಳಿದಿದ್ದನು. ಅಮಲ್ದಾರರು ಪಟೇಲನನ್ನು ನೋಡಿ "ಪದ್ಮರಾಜಾ! ಈವತ್ತು ಅಡಿಗೆಗೆ ಯಾರು?" ಎಂದು ಕೇಳಿದರು.

ಪಟೇಲನು ಮತ್ತೊಂದು ನಮಸ್ಕಾರವನ್ನು ಸಮರ್ಪಿಸಿ, "ಬುದ್ಧಿ! ಇಂದು ಎಲ್ಲೆಲ್ಲಿ ಹುಡುಕಿದ್ರೂ ಯಾರೂ ಸಿಕ್ಕಲಿಲ್ಲಾ" ಎಂದು ಹೇಳಿ ಪುನಃ ಕೈಮುಗಿದನು.

ಅಮಲ್ದಾರ: "ಅದೇನು ಸಂಗ್ತಿ? ಈಗ ಹೊತ್ತೇರಿತು. ಅನ್ನವಿಲ್ಲದೆ ಉಪವಾಸ ಬೀಳೋದೇನು?"

ಪಟೇಲನು: ಅಪ್ಪಣೆಯಾದಂತೆ ನಡಕೊಳ್ಳುತ್ತೇನೆ. ಇಲ್ಲಿ ಬ್ರಾಹ್ಮಣರು ಯಾರೂ ಇಲ್ಲ ಬುದ್ಧಿ! ಎಲ್ಲರೂ ಶ್ರೀಕಾಂತ ಜಾತ್ರೆಗೆ ನಡೆದು

ಬಿಟ್ಟಿದ್ದಾರೆ ಬುದ್ಧಿ !" ಎಂದು ಹೇಳಿ, ಕೈಜೋಡಿಸಿ, ಮತ್ತೆ ತನ್ನ ಮಣಿಗಂಟನ್ನು ಸವರುತ್ತಾ ನಿಂತಿದ್ದನು.

ಅಮಲ್ದಾರ: "ಈಗ ಯಾರನ್ನಾದ್ರೂ ಹಿಡಿದಿದ್ರೆ ಉಪಾಯವಿಲ್ಲ ಪಷ್ಟೆ. ಯಾರನ್ನಾದ್ರು ಬಿಟ್ಟಿಗೆ ಹಿಡಿದ್ರೆ ಸರಿ."

ಪಟೇಲ: "ಹಣ ಕೊಟ್ರೆ ಆಳು ಸಿಕ್ಕೋಲ್ಲ. ಇಲ್ಲಿ ಬಿಟ್ಟಿಗೆ ಯಾರು ಬರ್ತಾರೆ ?"

ಪಟೇಲನು ಈಸಲ ನಮಸ್ಕಾರ ಮಾಡಲಿಲ್ಲ. ಅಮಲ್ದಾರರು ಸಿಟ್ಟಿಗೆದ್ದರು. ಪಟೇಲನ ಮಾತುಗಳಲ್ಲಿ 'ಬುದ್ಧಿ ; ಖಾವಂದ್ರೆ' ಎಂಬ ನುಡಿಗಳೂ ಇರಲಿಲ್ಲ.

ಅಮಲ್ದಾರರು : "ಎಲಾ ! ಯಾರಿಗಾದ್ರೂ ಬಿಟ್ಟಿಗೆ ಹಿಡಿದು ತಂದ್ರೆ ಸರಿ ! ಇಲ್ಲಾಂದ್ರೆ ನಿನ್ನ ಕೆಲಸಕ್ಕೆ ರಾಜೀನಾಮೆ ಕೊಡು, ನಡಿ !" ಎಂದು ಗದರಿಸಿದರು.

ಅಮಲ್ದಾರರಿಗೂ ಪಟೇಲನಿಗೂ ಈ ರೀತಿ ಮಾತು ನಡೆಯುತ್ತಲಿದ್ದುದನ್ನು ದಾರಿಗನೊಬ್ಬನು ನೋಡಿ, ಅಲ್ಲಿಯೇ ತಳುವಿದನು. ಅವನು ಶ್ರೀಕಾಂತ ಜಾತ್ರೆಗೆ ಹೋಗುವವನು. ಅವನ ವಿಷಯವಾಗಿ ಸವಿಸ್ತಾರವಾಗಿ ಮತ್ತೆ ಹೇಳುವೆವು. ಅವನು ಅಮಲ್ದಾರರನ್ನು ನೋಡಿ ಕೈಮುಗಿಯದೆ ಏನೋ ಕಾರಣದಿಂದ ನಗುತ್ತ ಹೋಗುತ್ತಿದ್ದನು. ಅವನ ನಗುವಿನಿಂದ ಅಮಲ್ದಾರರ ಹಸಿದ ಹೊಟ್ಟೆಗೆ ಬಿಸಿ ಕೆಂಡವಿಟ್ಟಂತಾಯಿತು. ಅಮಲ್ದಾರರು ಪಟೇಲನೊಡನೆ "ಇಕೋ ! ಪದ್ಮರಾಜಾ ! ಅತ್ತ ಹೋಗುವವನನ್ನು ಬಿಟ್ಟಿಗೆ ಹಿಡಿ" ಎಂದು ಕಟ್ಟಾಜ್ಞೆ ಮಾಡಿದರು.

ಆ ಕಾಲದಲ್ಲಿ ಪಟೇಲನಿಗೆ ಸರಕಾರದಿಂದ ಪೇದೆ ಸಿಕ್ಕುತ್ತಿರಲಿಲ್ಲ. 'ಪೇದೆಯ ಚಾಕ್ರಿಯನ್ನು' ಪಟೇಲನೇ ಮಾಡಬೇಕಾಗಿತ್ತು. ಪ್ರತಿಯಾಗಿ ವರ್ಷಕ್ಕೆ ಒಂದು ವರಹ ಸಂಬಳ ಹೆಚ್ಚು ಸಿಕ್ಕುತ್ತಿತ್ತು. ಪಟೇಲನು ದಾರಿಗನನ್ನು ಮುಂದುವರಿಸಲೀಯದೆ ತಡೆದನು.

ದಾರಿಗ : "ಇದೇನಪ್ಪಾ ? ನನ್ನನ್ನು ಹೋಗಬಿಡೋದಿಲ್ಲ ?"

ಪಟೇಲ : "ಹೆಚ್ಚು ಮಾತು ಬೇಡ ! ಹೇಳಿದ ಹಾಗೆ ಕೇಳಿದ್ರೆ ಸರಿ !"

ದಾರಿಗ : "ಯಾರು ಹೇಳಿದ ಹಾಗೆ ಕೇಳಬೇಕು ? ಹಾಗೆ ಕೇಳಲಿಕ್ಕೆ ನಾನು ನಿಮ್ಮ ಅಡಿಗೆ ಭಟ್ಟನೇ ?"

ಪಟೇಲ : "ಯಾರಾದ್ರೆ ನಮಗೇನು ? ಈಗ ನೀನು ಅಡಿಗೆ ಭಟ್ಟ ನಾಗಲೇಬೇಕು."

ದಾರಿಗ : "ನಾನು ಅಡಿಗೆಯುವನಲ್ಲಯ್ಯ ! ನಾನು ವೈದ್ಯ. ನಾನು ಮದ್ದು ಕೊಡುವೆ ; ಅಡಿಗೆ ಮಾಡಲಾರೆ ! ನನ್ನನ್ನು ಬಿಡಿ, ಅಯ್ಯಾ ! ನನಗೆ ಶ್ರೀಕಾಂತ ಜಾತ್ರೆಗೆ ಇಂದು ಹೋಗದೆ ನಿರ್ವಾಹವಿಲ್ಲ."

ಪಟೇಲ: "ನಿರ್ವಾಹವಿಲ್ಲ ! ಬಾಯ್ಮುಚ್ಚು ! ಕಳ್ಳವೈದ್ಯ ನೀನು ? ಎಂಥಾ ವೈದ್ಯ ? ಸುಮ್ಮನೆ ನನ್ನ ಹಿಂದೆ ಬಂದ್ರೆ ಸರಿ. ಇಲ್ಲಾದ್ರೆ ಕೈಗೆ ಕೋಳಾ ಹಾಕಿಸುವೆ."

ವೈದ್ಯರು ಸುಮ್ಮನಾದರು ; ಗುದ್ದು ಕೊಟ್ಟರೆ ಮದ್ದು ಇಲ್ಲವೆಂದು ಸುಮ್ಮನಾದರು. ಸರಕಾರದ ಹುದ್ದೆದಾರರೊಡನೆ ದಂಡೋಪಾಯ ನಡೆಸಿದರೆ ಪ್ರಯೋಜನವಿಲ್ಲವೆಂದು ತಿಳಿದು, ವೈದ್ಯರು ಪಟೇಲನ ಆಜ್ಞೆಗೆ ಒಳಗಾದರು. ವೈದ್ಯರು ಅಮಲ್ದಾರರಿಗೆ ಅಡಿಗೆ ಮಾಡಲು ಒದಗಿಸಿದ ಮನೆಗೆ ಉಸಿರೆತ್ತದೆ ನಡೆದರು.

ವೈದ್ಯರ ಹೆಸರು ಕೃಷ್ಣ. ಕೃಷ್ಣವೈದ್ಯ ಎಂದು ವಾಡಿಕೆಗೆ ಕರೆಯುತ್ತಿದ್ದರು. ಕೃಷ್ಣವೈದ್ಯರು ಸ್ವತಃ ಆಯುರ್ವೇದವನ್ನು ಓದಿರಲಿಲ್ಲ. ಇವನ ಮುತ್ತಜ್ಜನು ಮಾತ್ರ ಹಾವಿನ ವಿಷಕ್ಕೆ ಔಷಧ ಬಲ್ಲವನೆಂದು ಖ್ಯಾತಿಗೊಂಡಿದ್ದನು. ಅದುಕಾರಣದಿಂದಲೇ ಜನಗಳಿಗೆ ಕೃಷ್ಣವೈದ್ಯರ ಮೇಲೆ ಸ್ವಲ್ಪ ಅಭಿಮಾನವಿದ್ದಿತು. ಅದಲ್ಲದೆ ಕೃಷ್ಣವೈದ್ಯರು ಬಾಲ್ಯದಲ್ಲಿ ಕಮಲಪುರದ ಅನಂತವೈದ್ಯರ ಕಾಲುಬುಡದಲ್ಲಿ ಕೆಲವು ಕಾಲ ಶಿಕ್ಷಣವನ್ನು ಹೊಂದಿದ್ದರು. ವೈದ್ಯಶಾಸ್ತ್ರವನ್ನು ಕಲಿಯುವ ಮೊದಲು ಸೂಪಶಾಸ್ತ್ರದ ಅನುಭವವು ಅಗತ್ಯವೆಂದು ಗುರುಗಳು ಹೇಳಿದುದರಿಂದ, ಕೃಷ್ಣವೈದ್ಯರು ಸುಮಾರು ೫ ವರ್ಷಗಳವರೆಗೆ ಅನಂತವೈದ್ಯರ ಮನೆಯಲ್ಲಿ ಸ್ವಯಂಪಾಕ ವಿಧಿ ವಿಧಾನಗಳನ್ನು ಕಲಿಯಬೇಕಾಯಿತು. ಅಷ್ಟು ಶೀಘ್ರ ಕಾಲವಲ್ಲಿಯೇ ವೈದ್ಯರು ಸೂಪಶಾಸ್ತ್ರವನ್ನೂ ವೈದ್ಯಶಾಸ್ತ್ರವನ್ನೂ ಕರತಲಾಮಲಕವಾಗಿ ಮಾಡಿದರು. ಪ್ರಕೃತದಲ್ಲಿ ವೈದ್ಯರು ಅನೇಕರಿಗೆ ಪ್ರಯೋಜನಕ್ಕೆ ಬೀಳುತ್ತಿದ್ದರು. ಮದುವೆಯಾಗದವರು,

ಗಂಡ ಸತ್ತವರು, ಧನಿಕರು, ಮಠಾಧೀಶರು ಮೊದಲಾದವರಲ್ಲಿ ಕೆಲವು ಆಶ್ರಯದಿಂದ ವೈದ್ಯರ ಜೀವನನಿರ್ವಾಹವು ನಡೆಯುತ್ತಲಿತ್ತು. ಕ್ಷೇತ್ರದಲ್ಲಿ ಲಿಂಗರಾಜ ಹೆಗ್ಗಡೆಯವರು ಕೃಷ್ಣವೈದ್ಯರನ್ನು ಚಿರಕಾಲ ತನ್ನ ಬಳಿಯಲ್ಲಿರಿಸಿ ದರು. ಹೆಗ್ಗಡೆಯವರಿಗೆ ಗುಣಾಂಶ ಸಿಕ್ಕಿತೋ ಇಲ್ಲವೋ ನಾವು ಅರಿಯೆವು. "ಇನ್ನೂ ತನಗೆ ವೈದ್ಯರ ಹಂಗೇನು ?" ಎನ್ನುತ್ತಿದ್ದರು ಹೆಗ್ಗಡೆಯವರು. ಸಾಧಾರಣ ಜನಗಳ ಅನುಭವಕ್ಕೆ ನೋಡಸಿಕ್ಕುವ ರೋಗಗಳಿಗೆ ಕೃಷ್ಣವೈದ್ಯರು ಚಿಕಿತ್ಸೆಯನ್ನು ಮಾಡಬಲ್ಲರೆಂದು ಸಮಾಚಾರವಿದ್ದುದರಿಂದ. ಶ್ರೀಕಾಂತ ದೇವಸ್ಥಾನದ ಪಾರುಪತ್ಯಗಾರರು ಇವರನ್ನು ಬರಮಾಡಿದ್ದರು. ಇವರ ಅಭಿಪ್ರಾಯದಲ್ಲಿ ಪ್ರಕೃತಿಯು 'ಪಿತ್ತ','ವಾತ','ಕಫ'ಎಂದು ತ್ರಿಗುಣಾತ್ಮಕ ವಾಗಿರಲಿಲ್ಲ. ಎಲ್ಲವೂ 'ಮೋಹ'ಮಯವಾಗಿರುವುದು. ಈ 'ಮೋಹ'ವೇ [illegible] ದಲ್ಲಿ 'ಮೋಹ'ವಾಗಿತ್ತು. ಬ್ರಹ್ಮಾಂಡ ಸೃಷ್ಟಿಯಲ್ಲಿ 'ಮೋಹ'ವೇ ಮುಖ್ಯ ಹೇತುವಾದುದರಿಂದ ಮಾನವ ಪ್ರಕೃತಿಯಲ್ಲಿ 'ಮೋಹ'ವೇ ಸರ್ವರೋಗಗಳಿಗೂ ಮೂಲಕಾರಣವಾಯಿತು.

"ಕೃಷ್ಣವೈದ್ಯರನ್ನು ಬಲಾತ್ಕಾರದಿಂದ ಅಡಿಗೆ ಮಾಡುವುದಕ್ಕೆ ಹಿಡಿದುದು ನಮ್ಮ ತಪ್ಪಾಗಬಹುದೇ ?" ಎಂದು 'ಹೆಡ್ ಮಾಸ್ಟರ್' ವೈಕುಂಠ ವ್ಯಾಸಾಚಾರ್ಯರು ಅಮಲ್ದಾರರೊಡನೆ ಚರ್ಚಿಸಿದನು. ಅದು ತಪ್ಪಲ್ಲೆಂದು ಅಮಲ್ದಾರರು ಆಧಾರ ಕೊಟ್ಟು ಹೇಳಿದರು. "ವಿರಾಟರಾಯನು ಭೀಮಸೇನ ನನ್ನು ಅಡಿಗೆಗೆ ನಿಲ್ಲಿಸಿರಲಿಲ್ಲವೇ ? ನಳಚಕ್ರವರ್ತಿ ಸ್ವಯಂಪಾಕ ಮಾಡ ಲಿಲ್ಲವೇ ? ಶ್ರೀಕೃಷ್ಣದೇವರು ಮೋಹಿನಿ ರೂಪದಿಂದ ದೇವಾಸುರರಿಗೆ ಅಮೃತ ವನ್ನು ಬಡಿಸಿರಲಿಲ್ಲವೇ ?" ಎಂದು ಅಮಲ್ದಾರರು ತಮ್ಮ 'ಸೀನಿಯರ್ ಕೋರಿ ನಿಂದ' ಆಧಾರಗಳನ್ನು ಕೊಟ್ಟು, ತಮ್ಮ ಕಾರ್ಯವನ್ನು [illegible] [illegible] [illegible] ಇತ್ತ ಕೃಷ್ಣವೈದ್ಯರು ಉಪಾಯವಿಲ್ಲದೆ ಅಡಿಗೆ ಮಾಡತೊಡಗಿದರು. [illegible] [illegible] ಹೋಗಿ, ಪಾತ್ರೆ ಎತ್ತಬೇಕಾಯಿತು. [illegible] [illegible] [illegible] ರೊಳಗೆ ಅಡಿಗೆ ಸಿದ್ಧವಾಗದೆ ಹೋಗಲಿಲ್ಲ. ಅಮಲ್ದಾರರು [illegible] ಊಟಕ್ಕೆ ಕೂತುಕೊಳ್ಳುವುದಕ್ಕೆ ಬಂದರು. ಊಟಕ್ಕೆ ಬಂದ [illegible] ಉಲ್ಲಾಸದಿಂದ—

"ಮಡದಿ ತಾ ಚೆಲುವಾಗಿ ಅಡಿಗೆ [illegible]."

ಎಂದು ನಿತ್ಯವೂ ದಾಸರ ಪದದ ಸೊಲ್ಲು ಹಾಡುವ ಹವ್ಯಾಸ. ಅದರಂತೆ ಈ ಹೊತ್ತೂ ಅವನ್ನೇ ಹಾಡಿದರು. ಒಡನೆ ಅಡಿಗೆಯವನ ಮುಖವನ್ನು ನೋಡಿ, ತನ್ನ ಹಾಡು ಈ ಹೊತ್ತು ಅನುಚಿತವಾಯಿತೆಂದು ವ್ಯಸನರಾದರು.

ಎರಡು ದಿನಗಳು ನಿಲ್ಲದೆಯೆ ಕಳೆದುವು. ವಲ್ಲಭಾಚಾರ್ಯರ 'ಜಮಾಬಂದಿಯ' ಕೆಲಸವೇನೂ ಮುಗಿಯಲಿಲ್ಲ. ಪಟೇಲ ಪದ್ಮರಾಜನಿಗೆ ಮತ್ತೊಬ್ಬ ಅಡಿಗೆಯವನು ಇನ್ನೂ ಸಿಕ್ಕಲಿಲ್ಲ. ಆದಕಾರಣದಿಂದ ಹುದ್ದೇದಾರರು ಇದ್ದಷ್ಟು ದಿನ ವೈದ್ಯರು ಒಲೆಯ ಬಳಿ ಹೆಂಗಸಿನಂತೆ ಬೇಯಬೇಕಾಯಿತು. ಮೂರನೆಯ ಮಧ್ಯಾಹ್ನದಲ್ಲಿ ಕೃಷ್ಣವೈದ್ಯರು ಯಾವುದನ್ನೋ ನೆನಸುತ್ತ ಕುಳಿತಿದ್ದರು. ಅಮಲ್ದಾರರು ಮನೆಯ ಇನ್ನೊಂದು ಕೊಠಡಿಯಲ್ಲಿ ಇದ್ದರು. ವೈದ್ಯರು ತುಟಿಯೊಳಗೆ ನಗುತ್ತಿದ್ದರು. ಬಲೆಯನ್ನು ಬೀಸಿ ಮೀನನ್ನು ಎದುರು ನೋಡುತ್ತಿದ್ದ ಅಂಬಿಗನ ಮೋರೆಯಲ್ಲಿ ತೋರುವ ನಗುವು ವೈದ್ಯರ ಮುಖದಲ್ಲಿ ಮೊನೆಯೂರಿತ್ತು. ವೈದ್ಯರು ಏನೋ ಉಪಾಯವನ್ನು ಕಂಡುಹಿಡಿದು ಜಾತ್ರೆಗೆ ತೆರಳಬೇಕೆಂದು ಉಕ್ಕುತ್ತಿದ್ದರು. ಹಗೆಯವನು ವೈದ್ಯನೊಡನೆ ಮದ್ದು ಕೇಳಲು ಬಂದರೆ, ವೈದ್ಯನು ಮನಸ್ಸಿನಲ್ಲಿ ಯಾವ ಪ್ರಕಾರ ಉಲ್ಲಾಸಗೊಳ್ಳುವನೋ, ಆ ಪ್ರಕಾರದಲ್ಲಿ ಕೃಷ್ಣವೈದ್ಯರು ಮನಸ್ಸಿನಲ್ಲಿ ಉಕ್ಕುತ್ತಿದ್ದರು.

ಅಷ್ಟರಲ್ಲಿ ಯಾರೋ ಒಬ್ಬನು ಬಂದು "ಎಲಾ! ಬಾ! ಬಾ ಬಾ! ಏಳೇಳು!" ಎಂದು ಗಾಬರಿಗೊಳ್ಳುವಂತೆ ಹೇಳಿದನು. ಕೃಷ್ಣವೈದ್ಯರು ಸಾವಧಾನಚಿತ್ತರಾಗಿ, "ಏನು ಸಂಗ್ತಿ? ಅವಸರ ಮಾಡ್ತಿ ಯಾಕೆ?" ಎಂದು ಪ್ರಶ್ನೆ ಮಾಡಿದರು.

ಬಂದವ: "ಅಯ್ಯೋ! ಬೇಗ ಏಳು! ಅಮಲ್ದಾರರು ಅಯ್ಯೋ! ಅಮಲ್ದಾರರು—"

ವೈದ್ಯ: "ಏನು ಸತ್ತರೇ?"

ಬಂದವ: "ಪ್ರಾಣಾಂತಿಕ, ನೀನು ಬಾರದೆ ಆಗದು."

ವೈದ್ಯರು ಸ್ವಲ್ಪ ಅಸಮಾಧಾನಗೊಂಡು, ನಾನು ಖಾಯಂ ಅಡಿಗೆಯ ಭಟ್ಟನಲ್ಲ. ನಾನು ಹೆಣ ಹೊರಲಾರೆ" ಎಂದು ಹೇಳಿಬಿಟ್ಟರು.

ಬಂದವ: "ಏನು ಹರಟುವೆ ನೀನು? ಅಮಲ್ದಾರರು ನಿನ್ನನ್ನು ಕರಕೊಂಡು ಬರಬೇಕೆಂದು ಹೇಳಿದ್ದಾರೆ. ಬಾ! ಬಾ!"

ಬಂದವನ ಆಶೆಯ ಪ್ರಕಾರ ಕೃಷ್ಣವೈದ್ಯರು ಕೊಠಡಿಗೆ ಹೋದರು. ವಲ್ಲಭಾಚಾರ್ಯರು ನೆಲದ ಮೇಲೆ ಹೊರಳಾಡುತ್ತಿದ್ದರು. ಮೋರೆಯು ನೋವಿನಿಂದ ತಿರುಚಿದಂತಿತ್ತು. ಅಮಲ್ದಾರರು ವೈದ್ಯರನ್ನು ನೋಡಿ "ಅಯ್ಯೋ! ಸತ್ತೆ! ಏ ದೇವ್ರೇ ಸತ್ತೆ!" ಎಂದು ಗೋಳಿಡುತ್ತಿದ್ದರು.

ವೈದ್ಯರು: "ರಾಯ್ರೆ! ಏನ್ ಬೇಕು? ಬೆಳಗಿನ ಕೇಶರಾನ್ನ ಇಷ್ಟು ತರಲೆ?" ಎಂದು ಕೈಮುಗಿದು ಬಿನ್ನವಿಸಿದರು.

ಅಮಲ್ದಾರರು: "ಕೇಶರಾನ್ನ? ಕೇಶರಾನ್ನ ಸುಡು! ನನಗೆ ಒಂದು ಔಷಧ ಕೊಡು, ಮಹಾರಾಯ!" ಎಂದು ಹೇಳುತ್ತ, "ಹೊಟ್ಟೆನೋವು—ಅಯ್ಯೋಯ್ಯೋ! ಉದರ ಶೂಲೆ—ಏನೂ ತಾಳಲಾರೆ" ಎಂದು ತನ್ನ ಅವಸ್ಥೆಯನ್ನು ಒಪ್ಪಿಸಿದರು.

ವೈದ್ಯ: "ನಾನು ವೈದ್ಯನಲ್ಲ, ಮಹಾಸ್ವಾಮಿ! ನಾನು ಅಡಿಗೆಯವ ಖಾವಂದರಿಗೆ ವೇದ್ಯವಾಗಿದೆ."

ಅಮಲ್ದಾರರು ಹೊರಳುತ್ತ ತೆವಳುತ್ತ "ನೀನು ಮದ್ದು ಕೊಡೋದಿಲ್ಲವಾದ್ರೆ, ಈಗ ಕೋಳಾ ಹಾಕಿಸುವೆ."

ವೈದ್ಯರು ತಲೆಯಲ್ಲಾಡಿಸಿದರು. "ನನ್ನನ್ನು ಅಡಿಗೆಯವನೆಂದು ಇಲ್ಲಿ ಹಿಡಿದಿರುವರು" ಎಂದು ಮೆಲ್ಲನೆ ಹೇಳಿದನು.

"ಅಯ್ಯೋಯ್ಯೋ! ನಾನು ಸಾಯ್ತೀನೆ! ಏನಾದ್ರು ಮದ್ದು ಕೊಡು! ಒಂದು ಔಷಧ ಕೊಡು" ಎಂದು ಅಮಲ್ದಾರರು ಹೊರಳಾಡಿದರು.

ವೈದ್ಯ: ನನ್ನ ಬಳಿ ಒಂದು ಮದ್ದುಂಟು. ಖರ್ಚು ಬೀಳುತ್ತೆ. ಹಣ ಕೊಡದೆ ಮಾತ್ರ ಸಿಕ್ಕಲಾರದು."

ಅಮಲ್ದಾರ: "ಇಕೊ! ೨೫ ರೂಪಾಯ್ ಕೊಡ್ತೇನೆ. ಬೇಗ ಮದ್ದು ಕೊಡು. ಅಯ್ಯಯ್ಯೋ! ಓ! ವೈಕುಂಠವಾಸ! ವೈಕುಂಠವಾಸ!"

ಕೃಷ್ಣವೈದ್ಯರು ಸಮೀಪಕ್ಕೆ ಬಂದು "ಮದ್ದು ಪ್ರಾರಂಭಿಸುವ ವೇಳೆಯಲ್ಲಿ ರೋಗಿಗಳು ವೈಕುಂಠವಾಸದ ನೆನಪನ್ನು ಮಾಡಬಾರದು ಎಂದು ಮೆಲ್ಲನೆ ಸೂಚಿಸಿದರು.

ಅಮಲ್ದಾರರು ವೈಕುಂಠವ್ಯಾಸಾಚಾರ್ಯರನ್ನು ಕೂಗಿ ಕರೆದಿದ್ದರು. ...ಚಾರ್ಯರು ಸಮೀಪದಲ್ಲಿ ಇದ್ದಿರಲಿಲ್ಲ.

ವೈದ್ಯ : "ರಾಯರೇ ! ನನ್ನ ಔಷಧಿ ಕಹಿ ಎಂದು ಬೇಸರಮಾಡಬಾರದು. ಈ ಒಂದು ಮಾತ್ರೆ ಕೊಟ್ಟು ನಾಳೆಗೇನೇ ಶ್ರೀಕಾಂತ ಜಾತ್ರೆಗೆ ಹೋಗುವ ಹಾಗೆ ಮಾಡುವೆ ಬಲ್ರೋ ?"

ಅಮಲ್ದಾರರಿಗೆ ಈ ಮಾತು ತಾನೇ ರುಚಿಸಲಿಲ್ಲ.

ವೈದ್ಯರು ತಮ್ಮ ಕಂತೆಯೊಳಗಿಂದ ಔಷಧವನ್ನು ತೆಗೆದು ರೋಗಿಯ ನಾಡಿಯನ್ನು ಹಿಡಿದು "ಈ ರೋಗವು ಮೇಹೋದರ ಶೂಲೆ" ಎಂದರು.

ಅಮಲ್ದಾರರು ನಿರಾಶೆಯಿಂದ "ಮೇಹೋದರವೊ ? ಮಹೋದರವೊ ? ಇದರಲ್ಲಿ ಜನಗಳು ಬದುಕುತ್ತಾರೊ ?" ಎಂದು ಕೇಳಿದರು.

ವೈದ್ಯ : "ಅಪಾಯವುಂಟು. ಶೇಕಡಾ ಒಂದ್ರಂತೆ ಬದುಕುತ್ತಾರೆ, ಇದು ಮೇಹೋದರವೇ."

ಅಮಲ್ದಾರ : "ವೈದ್ಯರೇ ! ಇದು ಯಾವದ್ರಿಂದ ಉಂಟಾಯಿತು ?"

ವೈದ್ಯ : ಕಾಯಿ ಕಿಚಡಿ ತಿಂದ್ರೆ ಉಂಟಾಗುತ್ತೆ. ದುಡ್ಡು ತಿಂದ್ರೆ ಜೀರ್ಣ್ವಾಗ್ಕ ಬಾರದೆ ಉಂಟಾಗುತ್ತೆ" ಎಂದು ತನ್ನೊಳಗೇನೇ ಹೇಳಿದರು.

ಅಮಲ್ದಾರರು ಈ ವಿಧವಾಗಿ ಅವಸ್ಥೆಪಡುತ್ತಿರುವಾಗ ಪಟೇಲನು ಬಂದು "ಬೇಗ ಬನ್ನಿ ! ಏಳಿ ! ಏಳಿ ! ವೈಕುಂಠವ್ಯಾಸಾಚಾರ್ಯರಿಗೆ ಕಾಹಿಲೆ; ಪ್ರಾಣಾಂತಿಕ ಕಾಹಿಲೆ" ಎಂದು ಅವಸರಗೊಂಡನು.

ಕೃಷ್ಣವೈದ್ಯರು ವ್ಯಾಸಾಚಾರ್ಯರ ಹತ್ತಿರಕ್ಕೆ ಬಂದು "ಏನಯ್ಯಾ ! ನಮಗೆ ಯಾಕೆ ತೊಂದರೆ ಕೊಡುತ್ತೀರಿ ?" ಎಂದರು.

ವ್ಯಾಸಾಚಾರ್ಯರು ಚಾಪೆಯ ಮೇಲೆ ಹೊರಳಾಡುತ್ತಿದ್ದರು. ಅವರು ವೈದ್ಯರನ್ನು ನೋಡಿ "ಒಂದಿಷ್ಟು ಮದ್ದು ಕೊಡಿ ! ಸಾಯ್ತೀನೆ" ಎಂದರು.

ವೈದ್ಯ : ಹಾಗಾದ್ರೆ ಔಷಧ ಯಾಕೆ? ಕೆಡುವ ಕಾಲಕ್ಕೆ ಬುದ್ಧಿ ಇಲ್ಲ. ಮರಣ ಕಾಲಕ್ಕೆ ಮದ್ದು ಇಲ್ಲ—ಎಂದು ಗೊತ್ತಿಲ್ಲವೆ ?"

ವ್ಯಾಸಾಚಾರ್ಯ : "ಅಕಟಾ ! ನಿಮ್ಮ ಮಾತು ಬೇಡ ! ಒಂದು ಔಷಧ ಕೊಡಿ."

ವೈದ್ಯ : "ಇದ್ದದ್ದು ಹೋಯಿತು ಮದ್ದಿನ ಗುಣ ಎಂದಾಯಿತು. ನಿಮಗೆ ಮಗ್ಗಿ ಬರುವ್ರದೇ ?"

ವ್ಯಾಸಾಚಾರ್ಯ : "ಇಲ್ಲಪ್ಪಾ ಇಲ್ಲಾ !"

ವೈದ್ಯ : “ಮಗ್ಗಿ ಬಾರದವನಿಗೆ ನುಗ್ಗೇಕಾಯಿ ಮದ್ದೇ? ಎಂಬ ಗಾದೆಯುಂಟು. ನುಗ್ಗೇಕಾಯಿ ಆಗೋದಿಲ್ಲ. ನಿಮ್ಮ ನಾಡಿ ನೋಡ್ತೇನೆ. ನಾಡಿ ನೋಡದೆ ಮದ್ದು ಕೊಟ್ಟರೆ, ಕಾಡುರೋಗ ಬರುವುದೆಂದು ಗಾದೆ ಇದೆ.”

ವ್ಯಾಸಾಚಾರ್ಯ : “ನಿಮ್ಮ ಗಾದೆ ಸಾಕುಮಾಡಿ !”

ವೈದ್ಯರು “ಮದ್ದು ಕೊಟ್ಟರೆ ಎದ್ದು ನಿಲ್ಲಬೇಕು” ಎಂದು ಹೇಳಿ ಕಂತೆಯಿಂದ ಔಷಧ ಕೊಟ್ಟರು.

ಎರಡು ದಿನಗಳವರೆಗೆ ಅಮಲ್ದಾರರೂ ವ್ಯಾಸಾಚಾರ್ಯರೂ ಕಾಯಿಲೆಯಿಂದ ಬಹಳ ಬೇಸತ್ತರು. ವೈದ್ಯರ ಕಹಿಮದ್ದಿನಿಂದಲೂ ಗಂಜಿನೀರಿನಿಂದಲೂ ಇಬ್ಬರ ನಾಲಿಗೆಯೂ ರುಚಿ ಕೆಟ್ಟುಹೋಯಿತು. ನಡುನಡುವೆ ವೈದ್ಯರು ಇಬ್ಬರ ಹಾಸಿಗೆಯ ಬಳಿಗೆ ಬಂದು, “ಜನಗಳನ್ನು ಬಿಟ್ಟಿಗೆ ಹಿಡಿದರೆ ಉಂಟಾಗುವ ಫಲವನು ಕುರಿತು” ಸಣ್ಣ ಕತೆಗಳನ್ನು ಹೇಳಿ ಉಲ್ಲಾಸಗೊಳಿಸುತ್ತಿದ್ದರು. ನಾಲ್ಕನೆಯ ದಿನ ಇಬ್ಬರೂ ಪೂರ್ಣಗುಣಹೊಂದಿದರು.

ಕೃಷ್ಣವೈದ್ಯರು ಇಬ್ಬರ ಅಪ್ಪಣೆಯನ್ನು ಹೊಂದಿ ಶ್ರೀಕಾಂತ ಜಾತ್ರೆಗೆ ಹೊರಟರು. ಹಾದಿಯಲ್ಲಿ ಪಟೇಲ ಪದ್ಮರಾಜನು ಅವರ ಬಳಿಗೆ ಬಂದು “ಹುದ್ದೇದಾರರಿಗೆ ಈ ಅವಸ್ಥೆ ಆಗಲಿಕ್ಕೆ ಕಾರಣವೇನು ?” ಎಂದು ಕೇಳಿದನು.

ವೈದ್ಯ : ಔಷಧಕಾರರನ್ನು ಅಡಿಗೆಗೆ ಹಿಡಿದದ್ದರಿಂದ.”

ಪಟೇಲ : “ಅದು ಹ್ಯಾಗೆ ?”

ವೈದ್ಯ : “ನನಗೆ ಅಡಿಗೆಯ ಅನುಭವ ಇಷ್ಟಿಲ್ಲ. ಹಿಂಗಿನ ಒಗ್ಗರಣೆ ಹಾಕಲಿಕ್ಕೆ ಮರೆತು, ಮಣಿಮಂತ ಚೂರ್ಣವನ್ನು ಬೆರಸಿಬಿಟ್ಟೆ” ಹೀಗೆಂದು ಹೇಳಿ ಕೃಷ್ಣವೈದ್ಯರು ಶ್ರೀಕಾಂತ ಜಾತ್ರೆಯ ಹಾದಿಹಿಡಿದರು.

೪. ಕನ್ನಡವನ್ನುದ್ಧರಿಸಿದ ಪುಣ್ಯಪುರುಷರು

ಮುದವೀಡು ಕೃಷ್ಣರಾಯರು : ೧೮೭೪–೧೯೪೭

ಧಾರವಾಡ—ನನ್ನ ನಚ್ಚುಮೆಚ್ಚಿನ ಧಾರವಾಡ—ಚಿಕ್ಕಂದಿನಲ್ಲಿ ನಾನು
ಚಿಣಿಕೋಲು ಚೆಂಡು ಬೊಗರೆಗಳನ್ನಾಡುತ್ತ ನಲಿದಾಡಿದ ಧಾರವಾಡ—
ಬರವಣಿಗೆಯ ಅಕ್ಕರಗಳನ್ನು ಮೊದಲಿಗೆ ಕಲಿತು ಮುಂದೆ ನಾಲ್ಕನೆಯ
ವರ್ಗದಲ್ಲಿ ಮಹಾರಾಷ್ಟ್ರದ ಚರಿತ್ರೆಯನ್ನೇ ಕನ್ನಡದಲ್ಲಿ ಓದಿ ದೊಡ್ಡವನಾದ
ಧಾರವಾಡ—ಇಂಗ್ಲಿಷ ಶಾಲೆಯಲ್ಲಿ ಅಭ್ಯಾಸಮಾಡುವಾಗ ಇಂಗ್ಲಿಷನ್ನೂ
ಜೊತೆಗೆ ನಸು ತುಸು ಸಂಸ್ಕೃತವನ್ನೂ ಗುರುಮುಖದಿಂದ ಅಧ್ಯಯನಮಾಡಿ
ನಾನು "ಮರ ಪಂಡಿತ"ನಾದ ಧಾರವಾಡ—ಇಲ್ಲಿ ಆ ಕಾಲದಲ್ಲಿ ನಡೆಯುತ್ತಿದ್ದ
ಸಭೆ ಪರಿಷತ್ತುಗಳಲ್ಲೆಲ್ಲ ಮರಾಠೀ ಭಾಷಣಗಳ ಸುರಿಮಳೆಯು ಕೇಸರಿಡು
ತ್ತಿದ್ದ ಧಾರವಾಡ—ಇಂದು, ಹೊಸಗನ್ನಡದ ಮೈರಿಸಿಯ ತುಂಬಾ ಬೆಳೆಯುತ್ತ
ನಡೆದಿರುವ ಈ ಹೊಸಗಾಲದಲ್ಲಿ, ಕನ್ನಡನಾಡಿನ ಬಡಗು ಸೀಮೆಯಲ್ಲೆಲ್ಲ
ಕನ್ನಡ ಸಂಸ್ಕೃತಿಯ ಗಂಡುಮೆಟ್ಟೆಂಬ ಹೆಸರು ಹೊಂದಿದೆ ; ಕನ್ನಡ
"ಸರಸತಿಯ ಸಿಲುದಾಣ"ವೆಂಬ ಕೀರ್ತಿವೆತ್ತಿದೆ. ನನ್ನ ಜೀವಮಾನದೊಳಗಿನ
ಅರವತ್ತು ವರುಷಗಳನ್ನು ಧಾರವಾಡದಲ್ಲಿಯೇ ಬಹುಶಃ ಕಳೆಯುವ ಪ್ರಸಂಗವು
ಬಂದ ನನಗೆ ಇಲ್ಲಿ ನಡೆದುಹೋದ ಕನ್ನಡದ ಬಗ್ಗು ತಗ್ಗು ಕುಗ್ಗು ಮುಗ್ಗು
ಗಳೆಲ್ಲ ಕಣ್ಣಿಗೆ ಕಟ್ಟಿರುವುದರಿಂದ ಇಂದು ಇಲ್ಲಿ ಕಾಣುವ ಅದರ ಸುಗ್ಗಿಯ
ಸೌಭಾಗ್ಯವು ಸಗ್ಗದ ಸುಖದಂತೆ ಹಿಗ್ಗಿನ ಹೆಚ್ಚಳವಾಗಿದೆ. ಸಾವಿರ ವರುಷ
ಗಳಿಂದಲೂ ನಮ್ಮ ಹಿರಿಯ ಕನ್ನಡ ಕವಿಗಳು "ತಿರುಳುಗನ್ನಡ ನಾಡು"
ಎಂದು ಬಣ್ಣಿಸಿರುವ ಪ್ರದೇಶದೊಳಗಿನ ನಡುವೂರಾಗಿ ನಿಂತಿರುವ ಈ ನಮ್ಮ
ಧಾರವಾಡವು ಅಂದಿನಿಂದ ಇಂದಿನವರೆಗೆ ಒಂದೇ ಸಮನೆ ಕನ್ನಡದ ಹಿರಿಮೆ
ಯನ್ನು ಕಾಯ್ದು ಹಿಡಿದುಕೊಂಡೇ ಬಂದಿರುವುದೆಂದು ಮಾತ್ರ ಯಾರೂ
ತಿಳಿಯಕೂಡದು. ಇಂದು ತಿಳಿಯುತ್ತಿರುವಂತೆ ಉತ್ತರದ ಸಿಂಧುವಿನ ನೆರೆ

ಹೊರೆಯಿಂದಲೋ ನಡುವಣ ವಿಂಧ್ಯಾದ್ರಿ ಪರ್ವತದ ಎಡಬಲದಿಂದಲೋ ಎಲ್ಲಿಂದಲೋ ಎಂದಿನಿಂದಲೋ ಕೆಳಕ್ಕೆ ಇಳಿಯುತ್ತ ಬಂದಿರುವ ನಮ್ಮ ಕನ್ನಡ ನುಡಿಯು ಗೋದಾವರಿಯ ಅಕ್ಕಪಕ್ಕಗಳಿಂದಲೂ ಹೊರದೂಡಲ್ಪಟ್ಟು ಇಂದಿಗೆ ಸುಮಸುಮಾರು ಕೃಷ್ಣಾ ಭೀಮಾ ನದಿಗಳ ತೆಂಕಣ ದಿಕ್ಕಿನಲ್ಲಿ ಜೀವ ಹಿಡಿದು ಕೊಂಡು ನಿಂತಿದೆ. ಅದು ಹೀಗೆ ನಿಲ್ಲುವುದಕ್ಕೆ ಅವರ ಕೆಲವು ಜನ ಕೆಚ್ಚೆದೆಯ ಬಂಟರು ಕಳೆದ ೮೦ ವರ್ಷಗಳಲ್ಲಿ ಅಸಿಮಿಸಿ ಇಲ್ಲದೆ ಮಾಡಿದ ಅಖಂಡ ಪ್ರಯತ್ನವೂ ನಡಸಿದ ಹೋರಾಟವೂ ಕಾರಣವಾಗಿದೆ. ಕನ್ನಡದ ಬಂಟರ ಈ ಪಡೆಯ ಪರಂಪರೆಯು ಈ ಭಾಗದಲ್ಲಿ ಹುಟ್ಟಿ ಬೆಳೆದು ಮುಂದುವರಿಯ ದಿದ್ದರೆ ಇನ್ನೂ ಕೆಳಗೆ ತುಂಗಭದ್ರೆಯವರೆಗೆ ಕನ್ನಡ ಬದುಕಿ ಬಾಳುವುದಕ್ಕೆ ಅವಕಾಶವೇ ದೊರೆಯುತ್ತಿರಲಿಲ್ಲವೆಂಬುದು ಖಂಡಿತ. ನಮ್ಮ ಉತ್ತರ ಕರ್ನಾಟಕದಲ್ಲಿ ಇಂದಿಗೂ ಪರಭಾಷೆಗಳ ಹಾವಳಿಗೆ ಎಡೆಯಾಗಿ ಅಲ್ಲಿಯ ಕನ್ನಡ ಹಿರಿಯರ ಹುರುಳು ಕಸುಳಿಲ್ಲದ ಬರಡು ಬಾಳುವೆಯಿಂದ ತಮ್ಮ ಹುಟ್ಟುಗನ್ನಡತನಕ್ಕೇ ಎರವಾಗುವಂತಹ ಪರಿಸ್ಥಿತಿಗೆ ಇನ್ನೂ ಒಳಗಾಗಿರುವ ಪ್ರದೇಶಗಳನ್ನು ನಾವು ನೋಡುತ್ತೇವಷ್ಟೆ? ಇತ್ತಕಡೆಗೂ ಅದೇ ಅವಸ್ಥೆ ಯಾಗುವಂತಹ ಸಂದರ್ಭ ಒದಗಿದಾಗ ಕನ್ನಡದ ಉಳಿವಿಗಾಗಿ ಜೀಡಿ ಕಾಡಿ ಕಾದಿ ಹೋರಾಡಿದ ಮಹಾನುಭಾವರು ಕೆಲವರು ಈ ಭಾಗದಲ್ಲಿ ಹುಟ್ಟಿ, ಕನ್ನಡಕ್ಕೆ ಇಲ್ಲಿ ಬಂದಿದ್ದ ಹೆರವರ ಎದ್ದಲಗಾಟವನ್ನು ತಪ್ಪಿಸಿ, ಅದಕ್ಕೆ ಇಲ್ಲಿ ಚೆನ್ನಾಗಿ ಕಾಲೂರಿ ನಿಲ್ಲಲು ಎಡೆಯನ್ನುಂಟುಮಾಡಿಕೊಟ್ಟಿದ್ದಾರೆ. ಗತಕಾಲದ ಇಂತಹ ಕನ್ನಡದ ಕಲಿಗಳೇ ಈ ಕಾಲದ ಇತ್ತಕಡೆಯ ಕನ್ನಡ ಸಂತತಿಗೆ ಪ್ರಾತಃಸ್ಮರಣೀಯರಾದ "ಪುಣ್ಯಪುರುಷ"ರಾಗಿದ್ದಾರೆಂದರೆ ತಪ್ಪಲ್ಲವಷ್ಟೆ?

ವಿಜಯನಗರ ಸಾಮ್ರಾಜ್ಯ ವಿನಾಶದಿಂದ ಈ "ತಿರುಳ್ಗನ್ನಡ" ನಾಡಿಗೆ ಕನ್ನಡ ರಾಜ್ಯಲಕ್ಷ್ಮಿಯ ಆಸರೆ ತಪ್ಪಿದಂತಾಯಿತು. ವಿಜಾಪುರದ "ಆದಿಲ ಶಾಹೀ" ರಾಜ್ಯದಲ್ಲಿಯೂ, "ಮಹಾರಾಷ್ಟ್ರ ಸರದಾರ"ರ ರಾಜನೀತಿಯ ಪರ್ವಸ್ಪರ್ಶವೇ ವ್ಯವಹಾರದಲ್ಲಿ ಬೆಳೆದುಬಂದುದರಿಂದ ಇತ್ತಕಡೆಯ ಹುಟ್ಟು ಗನ್ನಡ ಮಾಂಡಲಿಕರಾಗಿದ್ದ ದೇಸಾಯಿ ದೇಶಪಾಂಡೆ ಮೊದಲಾದ ಮನೆತನ ಗಳಲ್ಲಿ ಮರಾಠಿಯ ಪ್ರಭಾವವು ಹಬ್ಬಲನುವಾಯಿತು. ಮುಂದೆ ಮರಾಠರ ... ಕಾಲಕ್ಕೆ ಇತ್ತಕಡೆಯ ನಾಡ ... ಅದೇ ಬೆಳೆ... ...ದಯು

ಬಲಿತು ಪ್ರಬಲವಾಗಹತ್ತಿತ್ತು. ಮಹಾರಾಷ್ಟ್ರ ಸಾಮ್ರಾಜ್ಯದ ಕಡೆಗಾಲದಲ್ಲಿ ಕರ್ನಾಟಕದ ಕೊನೆಯ "ಸುಲ್ತಾನ"ನಾಗಿದ್ದ ಟೀಪುವಿಗೂ ಇತ್ತ ಪೇಶ್ವೆಯರಿಗೂ ನಡೆದ ರಾಜಕೀಯ ಏರಾಟದ ಹೋರಾಟದಲ್ಲಿ ಈ ಭಾಗವು ಎಡೆ ಬಿಡದೆ ಕಾಳಗದ ಕಳವೇ ಆಗಿ ನಿಂತುದರಿಂದ ಪೇಶ್ವೆಯರ ಮರಾಠೀ ದಂಡನಾಯಕರು ಇಲ್ಲಿ ಗಡಿ ದುರ್ಗಗಳನ್ನು ಮಾಡಿಕೊಂಡು ಅಲ್ಲಲ್ಲಿ ನೆಲಸಿದುದರಿಂದ ಹಳ್ಳಿಪಳ್ಳಿಗಳ ಗೌಡ ಶಾನುಭೋಗರಲ್ಲಿಯೂ ಮರಾಠಿಯ ರಾಜಕೀಯ ವರ್ಚಸ್ಸವು ನೆಲೆಯೂರಲು ಆಸ್ಪದವಾಯಿತು. ಈ ಮೋಹಕ್ಕೆ ಬಲಿ ಬಿದ್ದವರಲ್ಲಿ ಬ್ರಾಹ್ಮಣ ಕುಲದ ಉಂಬುಳಿಗಾರ ದೇಸಾಯಿ ದೇಶಪಾಂಡೆ ಕುಲಕರ್ಣಿಗಳ ಮನೆತನಗಳೇ ಪ್ರಮುಖವಾದವುಗಳೆಂದು ಹೇಳಬಹುದು. ಈ ಇಪ್ಪತ್ತೈದು ವರ್ಷಗಳ ಅವ್ಯಾಹತ ಪರಿಶ್ರಮದ ಫಲವಾಗಿ ಈ ಭಾಗದಲ್ಲಿ ಕನ್ನಡವು ಬಲುಮಟ್ಟಿಗೆ ತನ್ನ ಪ್ರಭುತ್ವವನ್ನು ಪ್ರಸ್ಥಾಪಿಸಿರುವುದು ಕಂಡುಬರುತ್ತಿರುವುದಾದರೂ ಬೆಳಗಾಂವಿ ಜಿಲ್ಹೆಯ ಪಡುವಣ ಗಡಿಯಲ್ಲಿ ಇಂದಿಗೂ ಕನ್ನಡಕ್ಕೆ ಕಾಲ್ತೊಡಕುಗಳು ಬಹುಶಃ ಇವೇ ಮನೆತನಗಳಿಂದ ಉಂಟಾಗುತ್ತಿರುವುದು ನಿದರ್ಶನಕ್ಕೆ ಬರುತ್ತದೆ. ಮುಂದೆ ಮರಾಠರ ಸಾಮ್ರಾಜ್ಯವು ನಿರ್ನಾಮವಾಗಿ ಇಂಗ್ಲಿಷರ ಈಸ್ಟ ಇಂಡಿಯಾ ಕಂಪೆನಿಯ ಆಳಿಕೆಗೆ ಆರಂಭವಾಗಲು ಇತ್ತಕಡೆಯ ಜನರ ನುಡಿಯು ಕನ್ನಡವೆಂಬ ಅರಿವು ಕೂಡ ಆಗಿನ ಪ್ರಮುಖ ರಾಜ್ಯಾಧಿಕಾರಿಗಳಿಗೆ ಇಲ್ಲದಾಗಿ ಇಲ್ಲಿಯ ಜನಜೀವನದ ಭಾಷೆ ಮರಾಠಿಯೆಂಬ ಭ್ರಮೆಯಿಂದ ಇಲ್ಲಿಯ ಸಾರ್ವಜನಿಕ ಶಿಕ್ಷಣವು ಮರಾಠಿಯಲ್ಲಿಯೇ ಆರಂಭಿಸಲ್ಪಟ್ಟಿತು. ಸುಮಾರು ೨೫ ವರ್ಷಗಳಿಗಿಂತ ಹೆಚ್ಚು ಕಾಲ ಈ ಅನವಸ್ಥೆಯಲ್ಲಿ ಹೋದನಂತರ ಧಾರವಾಡದ "ಡೆಪ್ಯುಟೀ" ಚೆನ್ನಬಸಪ್ಪನವರೆಂಬ ಮಹಾನುಭಾವರೊಬ್ಬರು ಇಲ್ಲಿಯ ವಸ್ತುಸ್ಥಿತಿಯನ್ನು ಆ ಕಾಲದ ಶಿಕ್ಷಣಾಧಿಕಾರಿಗಳಿಗೆ ಮನದಟ್ಟು ಮಾಡಿಕೊಟ್ಟು ಮುಂಬಯಿ ಸರಕಾರದೊಂದಿಗೆ ಹೋರಾಟವನ್ನೇ ಹೂಡಿ ಇಲ್ಲಿ ಕನ್ನಡ ಶಾಲೆಗಳಾಗುವಂತೆ ಮಾಡಿದರು. ಆಗ "ಸಂನ್ಯಾಸಿಯ ಮದುವೆಗೆ ಜುಟ್ಟು ಜನಿವಾರಗಳಿಂದ ಆರಂಭ"ವಾಗಬೇಕಾಗುವಂತೆ ಕನ್ನಡ "ಅಂಕಲಿಪಿ" ಅಂದರೆ ಈಗಿನ "ಬಾಲಬೋಧಿನಿ"ಯಿಂದ ಎಲ್ಲ ತರಗತಿಯ ಶಾಲೆಯ ಪುಸ್ತಕಗಳೂ ಹುಟ್ಟಿ ಬೆಳೆಯಬೇಕಾಯಿತು. ಆಗ ಚೆನ್ನಬಸಪ್ಪನವರ ನೆರವಿಗೆ ನಿಂತ ಗಂಗಾಧರ ಮಡಿ-

ಪಾಳೇಶ್ವರ ತೂರವಾರಿಯವರೂ, ವೀರಭದ್ರ ಮಡಿವಾಳೇಶ್ವರ ಪಂಡಿತರೂ, ಶಾಂತಿವೀರ ರಾಚಿದೇವ ಕಿತ್ತೂರವರೂ, ವೆಂಕಟರಂಗೋ ಕಟ್ಟಿಯವರೂ ಶಾಲೆಗಳಿಗೆ ಬೇಕಾಗುವ ಕ್ರಮಿಕ ಪಠ್ಯಪುಸ್ತಕಗಳನ್ನೂ ಇತಿಹಾಸ ಭೂಗೋಲ ವ್ಯಾಕರಣ ಗಣಿತ ಮೊದಲಾದ ಶಾಸ್ತ್ರೀಯ ವಿಷಯಗಳ ಅಭ್ಯಾಸಕ್ಕೆ ಬೇಕಾಗುವ ಎಲ್ಲ ಬಗೆಯ "ಶಾಲೋಪಯೋಗೀ" ಪುಸ್ತಕಗಳನ್ನೂ ಬರೆದು ಸಜ್ಜುಗೊಳಿಸಿದರು. ಪುಸ್ತಕಗಳು ಬರೆದು ಸಿದ್ಧವಾದರೂ ಅವುಗಳನ್ನು ಮುದ್ರಿಸುವುದಕ್ಕೆ ಗತಿಯೇನು? ಕೊನೆಗೆ ಈ ಭಾಗದ ಎಜ್ಯುಕೇಶನಲ್ ಇನ್ಸ್‌ಪೆಕ್ಟರರಾಗಿದ್ದ ರಸೆಲ್ ಅವರು ಇಂಗ್ಲೆಂಡ್ ಜರ್ಮನಿಗಳ ಮುದ್ರಣಕಾರರೊಡನೆ ಸಂಧಾನ ಹಚ್ಚಿ ಮುಂಬಯಿಯ "ಎಜ್ಯುಕೇಶನ್ ಸೊಸೈಟಿಯ ಮುದ್ರಣಾಲಯದಲ್ಲಿ". ಕನ್ನಡ ಪುಸ್ತಕಗಳ ಮುದ್ರಣಕ್ಕೆ ಅವಕಾಶವನ್ನು ಕಲ್ಪಿಸಿಕೊಳ್ಳಬೇಕಾಯಿತು. ಈ ಕೆಲಸದಲ್ಲಿ ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್ಸಿನ ಉಪಯೋಗವನ್ನು ನಮ್ಮಿತ್ತ ಕಡೆಯವರು ಬಹಳವಾಗಿ ಹೊಂದಿದರು. ಈಗಿನಂತೆ ರೈಲು ಮೋಟಾರುಗಳ ಪ್ರವಾಸದ ಅನುಕೂಲವಿಲ್ಲದ ಆ ಕಾಲದಲ್ಲಿ ಇತ್ತ ಮುಂಬಯಿ ಅತ್ತ ಮಂಗಳೂರುಗಳ ಅಂತರದ ಅನಾನುಕೂಲತೆಯನ್ನು ಮನಗಂಡು ವೆಂಕಟರಂಗೋ ಕಟ್ಟಿಯವರು ತಮ್ಮ ಸ್ವಂತ ಪರಿಶ್ರಮದಿಂದ ಕನ್ನಡ ಅಕ್ಷರಗಳ ಮಾತೃಕೆಯನ್ನು ಇಲ್ಲಿಯೇ ಮಾಡಿಸಿ ಒಂದು ಮುದ್ರಣಾಲಯವನ್ನು "ಜ್ಞಾನಸವರ್ಧಕ ಪ್ರೆಸ್" ಎಂಬ ಹೆಸರಿನಿಂದ ನಿರ್ಮಾಣ ಮಾಡಿದರು.

ಕನ್ನಡದ ಪುನರುಜ್ಜೀವನಕ್ಕೆ ಈ ಬಗೆಯ ಸಾಹಸವು ಇಲ್ಲಿ ನಡೆದಾಗಲೂ ಮರಾಠಿಯ ಸುಗ್ಗಾಟವು ತೆರಪಿಲ್ಲದೆ ನಡೆದೇ ಇತ್ತು. ಶಿಕ್ಷಣ ಶಾಖೆಯ ವರಿಷ್ಠ ಅಧಿಕಾರಿಗಳೆಲ್ಲರೂ ಆಡಳಿತೆಯ ಕೇಂದ್ರವಾದ ಪುಣೆಯಿಂದಲೇ ಬರಬೇಕು. ಕನ್ನಡ ಶಿಕ್ಷಕರ ಶಿಕ್ಷಣಾಲಯವು "ನಾರ್ಮಲ್ ಸ್ಕೂಲ್" ಎಂಬ ಹೆಸರಿನಿಂದ ಬೆಳಗಾಂವಿಯಲ್ಲಿ ಪ್ರಾರಂಭಿಸಲ್ಪಟ್ಟಾಗ ಅದಕ್ಕೆ ಮುಖ್ಯಾಧ್ಯಾಪಕರೂ ಒಬ್ಬ ಮರಾಠೀ ಮನುಷ್ಯನೇ ಬಂದನು. ಮೇಲೆ ಹೇಳಿದ ವೆಂಕಟರಂಗೋ ಕಟ್ಟಿಯವರೂ ಪುಣೆಯ ಮರಾಠೀ ಟ್ರೇನಿಂಗ್ ಸ್ಕೂಲಿನಲ್ಲಿ ಶಿಕ್ಷಕರಾಗಿದ್ದವರೇ. ಇವರು ಮುಂಘೋಳದವರಾಗಿದ್ದುದರಿಂದ, ಕನ್ನಡ ಮಾತನಾಡಲು ಬರುತ್ತಿದ್ದುದರಿಂದ, ಕನ್ನಡ ನಾರ್ಮಲ್

ಸ್ಕೂಲಿನಲ್ಲಿ ಇವರಿಗೂ ಸ್ಥಾನ ದೊರೆಯಿತು. ಇಲ್ಲಿಯ ಬೇರೆ ಕನ್ನಡ ಪಂಡಿತರ ಪರಿಚಯ ಸಹವಾಸಗಳಿಂದ ಇವರೂ ಹೊಸಗನ್ನಡದ ಶ್ರೇಷ್ಠ ನಿರ್ಮಾಣಕರ್ತರುಗಳಲ್ಲೊಬ್ಬರಾದರು. ಇವರು ಬರೆದ ಆರನೆಯ ಪುಸ್ತಕ, ಲಘುವ್ಯಾಕರಣ, ಪ್ರಾಕೃತಿಕ ಭೂಗೋಲ, ಮುಂಬಯಿ ಇಲಾಖೆ ಹಿಂದುಸ್ಥಾನ ಹಾಗು ಜಗತ್ತಿನ "ಭೂಗೋಲ ವಿದ್ಯೆ"ಯ ಮೂರು ಭಾಗಗಳು ಇನ್ನೂ ಅಲ್ಲಲ್ಲಿ ಕಣ್ಣಿಗೆ ಬೀಳುತ್ತವೆ. ಕನ್ನಡ ಶಾಲೆಗಳಲ್ಲಿ ಮಹಾರಾಷ್ಟ್ರದ ಇತಿಹಾಸವನ್ನೇ ನಾನು ಕಲಿತದ್ದನ್ನು ಮೇಲೆ ಹೇಳಿದೆನಷ್ಟೆ? ಇತ್ತ ಕಡೆಯ ಪ್ರದೇಶಕ್ಕೆಲ್ಲ ಕಂಪನಿ ಸರಕಾರದ ಆಡಳಿತೆಯಲ್ಲಿ ಮೊದಲು ಕೊಡಲಾಗಿದ್ದ "ದಕ್ಷಿಣ ಮಹಾರಾಷ್ಟ್ರ"ವೆಂಬ ಹಂಡ ಬಂಡವೆಂಬ ಹೆಸರಿನ ಪ್ರಭಾವವೇ ಇದಕ್ಕೆ ಕಾರಣವೆಂಬುದು ಸ್ಪಷ್ಟವಾಗಿದೆ. ಈ ಪ್ರದೇಶವೆಲ್ಲ ಕರ್ನಾಟಕದ ಭಾಗ; ಇಲ್ಲಿ ಶಾಲೆಗಳಲ್ಲಿ ಪ್ರಾಂತಿಕ ಇತಿಹಾಸವೆಂಬುದು ಕರ್ನಾಟಕದ್ದೇ ಕಲಿಸಲಾಗಬೇಕೆಂಬ ಭಾವನೆಯಿಂದ "ಸಂಕ್ಷಿಪ್ತ ಕರ್ನಾಟಕದ ಇತಿಹಾಸ"ವನ್ನು ಮೊದಲು ಬರೆದವರು ಇವರೇ ಬೆಳಗಾಂವಿಯ ನಾರ್ಮಲ್ ಸ್ಕೂಲು ಟ್ರೇನಿಂಗ್ ಕಾಲೇಜಾಗಿ ಧಾರವಾಡಕ್ಕೆ ಬರಲು ಹುಯಿಲಗೋಳ ಭುಜಂಗರಾಯರು ಪ್ರಿನ್ಸಿಪಾಲರಾಗಿಯೂ ವೆಂಕಟರಂಗೋ ಕಟ್ಟಿಯವರು ಕನ್ನಡ ಟ್ರಾನ್ಸಲೇಟರರಾಗಿಯೂ ಇಲ್ಲಿಗೆ ಬಂದನಂತರ ಇತ್ತ ಕಡೆಗೆಲ್ಲ ಕನ್ನಡಕ್ಕೆ ಚೆನ್ನಾಗಿಯೇ ಕಳೆಕಟ್ಟಹತ್ತಿತು. ಅಲ್ಲಿಯವರೆಗೂ ಕನ್ನಡ ಶಾಲೆಗಳ ಶಿಕ್ಷಕರೂ ಮೇಲ್ವಿಚಾರಕರೂ ಪರೀಕ್ಷಕರೂ ಬಹುಶಃ ಮರಾಠಿಗರೇ ಇರುತ್ತಿದ್ದರೆಂಬ ಸಂಗತಿಯು ಆಗಿನ ಕಾಲದ ಪರಿಷ್ಠಾಧಿಕಾರಿಗಳ ವರದಿಯಲ್ಲಿಯೇ ನಿರ್ದೇಶಿಸಲಾಗಿದೆ.

ಇಂತಹ ಪ್ರತಿಕೂಲಸ್ಥಿತಿಯಲ್ಲಿಯೂ ಕನ್ನಡವನ್ನು ಬದುಕಿಸಲು ಮಿತಿಮೀರಿ ಹೆಣಗಿದ ಸತ್ಪುರುಷರ ಸಾಹಸವೆಂತಹುದಿರಬಹುದೆಂಬುದನ್ನು ನಾವು ಶೋಧಿಸಿ ನೋಡಬೇಕು. ಹೊಸಗನ್ನಡದ "ಆದಿಪುರುಷ" ಚೆನ್ನಬಸಪ್ಪನವರು ಆಗಲೂ "ಕನ್ನಡದ ಹುಲಿ" ಎಂದು ಹೆಸರಾಗಿದ್ದರು. ಕೈಕೆಳಗಿನ ಶಿಕ್ಷಕರು ತಮ್ಮ ಸಂಬಳದ ಹೆಚ್ಚಳವನ್ನು ಬೇಡಿಕೊಳ್ಳಲು ಬಂದಾಗ "ಪಗಾರ" ಅಂದರೆ "ಸಂಬಳ ಅನ್ನು" ಎಂದು ಅವರು ಹೇಳುತ್ತಿದ್ದರು. ಸಂಬಳದ ಸಂಖ್ಯೆಯನ್ನು "ದಹಾ", "ಚಾರ" ಎಂದು ಮರಾಠೀ ಅಂಕೆಗಳಲ್ಲಿ ಹೇಳಿದರೆ "ಹತ್ತು",

"ಹನ್ನೆರಡು" ಎಂದು ಹೇಳಲು ಕಲಿಸುತ್ತಿದ್ದರಂತೆ! ನಾಲ್ಕೆಂಟು ಸಾರೆ ಎಚ್ಚರ ಕೊಟ್ಟರೂ ಮೈಮರೆತ ಶಿಕ್ಷಕರಿಗೆ ಒಂದೆರಡು ಆಣೆಗಳ ದಂಡವನ್ನೂ ಕಟ್ಟಿ ಅವರನ್ನು ಹಾದಿಗೆ ತರುತ್ತಿದ್ದರಂತೆ! ಚೆನ್ನಬಸಪ್ಪನವರ ಕೈಕೆಳಗೆ ಕೆಲಸ ಮಾಡುತ್ತಿದ್ದ ಬೀಳಗೀ ರುದ್ರಪ್ಪನವರು ಕನ್ನಡದ ಅಭಿಮಾನದಲ್ಲಿ ಹೆಚ್ಚಿನವರಾಗಿದ್ದರೆಂದು ಚೆನ್ನಬಸಪ್ಪನವರ ತರುವಾಯ ಡೆಪ್ಯೂಟೀ ಇನ್ಸ್ಪೆಕ್ಟರರಾಗಿದ್ದ ರೊಡ್ಡ ಶ್ರೀನಿವಾಸರಾಯರು ಹೇಳುತ್ತಿದ್ದರು. ಇವರೂ ಹಿಂದಿನ ಪರಂಪರೆಯನ್ನು ಚೆನ್ನಾಗಿಯೇ ಎತ್ತಿಹಿಡಿದು ಧಾರವಾಡ ಜಿಲ್ಲೆಯಲ್ಲಿ ಕನ್ನಡ ಶಾಲೆಗಳನ್ನು ಬಹುವಾಗಿ ಹೆಚ್ಚಿಸಿ, ಮುಂದೆ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದಾಗ ಅದನ್ನೂ ಬಹಳವಾಗಿ ಬೆಳಸಿ ಕೀರ್ತಿಯನ್ನು ಗಳಿಸಿದರು. "ಶಾಂತಕವಿ" ಗಳೆಂದು ಪ್ರಸಿದ್ಧರಾಗಿರುವ ಸಕ್ಕರೀ ಬಾಳಾಚಾರ್ಯರು, ಘೋಂಡೋ ನರಸಿಂಹ ಮುಳಬಾಗಿಲರವರು, ವಲ್ಲಭ ಮಹಾಲಿಂಗ ಕಟ್ಟಿಯವರು, ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿಯವರು, ವೆಂಕಟೇಶ ತಿರಕೋ ಕುಲಕರ್ಣಿ, ಗಳಗನಾಥರವರು—ಇವರೇ ಮೊದಲಾದ ಹೊಸಗನ್ನಡದ ಗದ್ಯ ಪದ್ಯ, ಲೇಖಕರು ಧಾರವಾಡದ ಟ್ರೇನಿಂಗ್ ಕಾಲೇಜಿನಿಂದ ಹೊಸದಾಗಿ ಹೊರಬಿದ್ದ ಹೊಸ ಹುರುಪಿನ ಕನ್ನಡ ವೀರರಾಗಿದ್ದರು.

ಸರಕಾರದ ಶಿಕ್ಷಣ ಖಾತೆಯಲ್ಲಿ ಕನ್ನಡವು ಹೀಗೆ ಬೆಳೆಯುತ್ತ ನಡೆದಂತೆಯೇ ಇತ್ತ ಕಡೆಯ ಜನಜೀವನದಲ್ಲಿಯೂ ಕನ್ನಡದ ಅಭಿಮಾನವು ತಲೆಯೆತ್ತಲಾರಂಭಿಸಿತ್ತು. ತೂರಮುರಿ ಶೇಷಗಿರಿರಾಯರು ಕಾಲಿದಾಸನ ಶಾಕುಂತಲ ನಾಟಕವನ್ನು ಈ ಭಾಗದಲ್ಲಿ ಆಗ ಪ್ರಚಾರದಲ್ಲಿದ್ದ "ದೇಸೀ" ಶೈಲಿಯನ್ನೇ ಅನುಸರಿಸಿ ಕನ್ನಡಕ್ಕೆ ಭಾಷಾಂತರಿಸಿ ೧೮೭೦ರಲ್ಲಿ ಮುಂಬಯಿ ಎಜ್ಯುಕೇಶನ್ ಸೊಸೈಟಿಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು. ಈ ತಮ್ಮ ಕೃತಿಗೆ ಅವರು ಜೋಡಿಸಿದ ಪ್ರಸ್ತಾವನೆಯಲ್ಲಿ "ಇದಭಿಜ್ಞಾನ ಶಾಕುಂತಲೆಂಬ ಕೃತಿಯಂ ಭಾಷಾಂತರಂ ತಮ್ಮ ತಮ್ಮದರೊಳ್ ಮಾಡಿಪರೆಲ್ಲ ನಾಡಿನ ಜನರ್ ಕರ್ನಾಟಕದೋಳಿಲ್ಲೆಲೈ" ಎಂದು ಉಸುರು ಗರೆದು ಕನ್ನಡಿಗರಿಗಾಗಿ ತಾವು "ಸಿಕ್ಕಿದ ಶಬ್ದಗಳನ್ನಿಟ್ಟು ಶೀಘ್ರತರದಿಂದೀ ಕೃತ್ಯಮಂ ಗೈದೆ ನಾಂ" ಎಂದು ಹೇಳಿದ್ದಾರೆ. ಸರಕಾರದ ವ್ಯವಹಾರದಲ್ಲಿ ಈ ಭಾಗವು "ಕಾಲು ಚಾಚಿದ ಮಹಾರಾಷ್ಟ್ರ" ಎಂಬ ಭಾವಬೋಧಕವಾದ

ರೀತಿಯಲ್ಲಿ ಹೆಸರಿಸಲಾಗಿದ್ದರೂ ಇದೂ ಕರ್ನಾಟಕದ ಭಾಗವೇ ಎಂಬ ಅರಿವು ಆಗಿನ ಕಾಲದ ಸುಸಂಸ್ಕೃತ ಜನಾಂಗದಲ್ಲಿ ಕೂಡ ಇದ್ದಿತೆಂಬುದಕ್ಕೆ ಈ ಮಾತು ಸಾಕ್ಷಿಯಾಗಿದೆ. ೧೮ನೆಯ ಶತಮಾನದ ತಮ್ಮ ಸಾಮ್ರಾಜ್ಯ ವಿಸ್ತರಣದಮೃತ ಮಹತ್ವಾಕಾಂಕ್ಷೆಯನ್ನು ಇನ್ನೂವರೆಗೆ ಎದೆಗವಚಿಕೊಂಡು "ತುಂಗಭದ್ರೆಯವರೆಗೆ ಮಹಾರಾಷ್ಟ್ರವು ಹಿಂದಿನಿಂದಲೂ ಇತ್ತು ; ಇಂದಿಗೂ ಉಂಟು" ಎಂದು ಹಟಮಾರಿತನದಿಂದ ಸಾಧಿಸುತ್ತಿರುವ ಇಂದಿನ ಮರಾಠೀ ಪ್ರೇಮಿಗಳು ಈ ಮಾತನ್ನು ಅಗತ್ಯ ಗಮನಿಸಬೇಕು. ಹಾಗೆಯೇ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ್ದ ಶೇಷಗಿರಿರಾಯರು ತಮ್ಮ ಈ ಕಾವ್ಯಕೃತಿಯನ್ನು ತಮ್ಮ ವಿದ್ಯಾಗುರುಗಳಾಗಿದ್ದ ಡೆಪ್ಯೂಟೀ ಚೆನ್ನಬಸಪ್ಪನವರಿಗೆ ಕಾಣಿಕೆಯಾಗಿ ಸಲ್ಲಿಸುತ್ತ,

> ಕಡುಗುರುಭಕ್ತಿಯಿಂ ತುಮರೀತ್ಯುಪನಾಮಕ ರಾಮಚಂದ್ರಜಂ।
> ಜಡಮತಿ ಕಬ್ಬಿ ಶೇಷಗಿರಿಯೆಂಬವನೀ ಕೃತಿಗೈದು ಮಾಡಿದಂ॥
> ಬಡವರ ವಿದ್ಯೆಗಾಗಿ ತನುವಿಂ ಮನದಿಂ ಧನದಿಂದೆ ಸಾಧಕಂ।
> ಬಡುತಿಹ ಧೀರ ಚೆನ್ನಬಸವೇಶ್ವರ ದಿವ್ಯರ ಪಾದಭೂಷಣಂ॥

ಎಂದು ಅಸದೃಶವಾದ ಗುರುಭಕ್ತಿ ಭಾವವನ್ನು ತಮ್ಮ ಪ್ರಸ್ತಾವನೆಯ ಕೊನೆಯಲ್ಲಿ ವ್ಯಕ್ತಗೊಳಿಸಿರುವುದರಿಂದ ಆಗಿನ ಕಾಲದ ಬ್ರಾಹ್ಮಣ ಲಿಂಗಾಯತ ಜನಾಂಗಗಳಲ್ಲಿ ಯಾವ ಉಚ್ಚತರದ ಸಹೃದ್ಭಾವನೆಯಿದ್ದಿತೆಂಬುದು ಈಗಿನವರಿಗೆ ಚೆನ್ನಾಗಿಯೇ ಬುದ್ಧಿಗಲಿಸುವ ಪ್ರಮಾಣವಾಕ್ಯವಲ್ಲವೆ ? ಗಂಗಾಧರ ಮಡಿವಾಳೇಶ್ವರ ತೂರಮರಿಯವರು ಬಾಣಕವಿಯ ಸಂಸ್ಕೃತ ಕಾದಂಬರಿಯ ಕಥೆಯನ್ನೂ ಅತ್ಯಂತ ಹೃದಯಂಗಮವಾದ ಹೊಸಗನ್ನಡದಲ್ಲಿ ಸಂಕ್ಷೇಪವಾಗಿ ಬರೆದು ಮುದ್ರಿಸಿದರು. ಕನ್ನಡ "ಶಬ್ದಮಂಜರೀ" ಎಂಬ ಈಗಿನ "ಡಿಕ್ಶನರೀ" ಮಾದರಿಯ ಶಬ್ದಕೋಶವನ್ನು ಇವರೇ ಸಿದ್ಧಪಡಿಸಿ ಪ್ರಸಿದ್ಧಿಸಿದ್ದುಂಟು. ಶಾಂತವೀರ ರಾಚದೇವ ಕಿತ್ತೂರವರು ಷಡಕ್ಷರಿಯ ರಾಜಶೇಖರ ವಿಳಾಸಕ್ಕೆ ಟೀಕೆ ಬರೆದದ್ದುಂಟು. ಘೋಂಡೋನರಸಿಂಹ ಮುಳಬಾಗಿಲದವರು ಶೂದ್ರಕನ "ಮೃಚ್ಛಕಟಿಕ", ಭವಭೂತಿಯ "ಉತ್ತರ ರಾಮಚರಿತ್ರ", ಕಾಲಿದಾಸನ "ಮಾಲವಿಕಾಗ್ನಿಮಿತ್ರ" ನಾಟಕಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

ನುಡಿಯ ಮುನ್ನಡಿಗೆ ಗ್ರಂಥಗಳಿಗಿಂತಲೂ ಪತ್ರಿಕೆಗಳು ಹೆಚ್ಚಾಗಿ ಗತಿಕೊಡುವವೆಂಬ ಸಂಗತಿಯನ್ನು ಯಾರೂ ಅಲ್ಲಗಳೆಯಲಾರರು. ಇಲ್ಲಿ ಹೊರಟಿದ್ದ ಮರಾಠೀ ಪತ್ರಿಕೆಗಳ ಪ್ರಸಾರದಿಂದ ಕನ್ನಡವು ಹಿಮ್ಮೆಟ್ಟಲವ ಕಾಶವಾಗಬಹುದೆಂಬ ಶಂಕೆಯಿಂದ ಮಾದನಸೆಟ್ಟಿ ಕಲ್ಯಾಣಪ್ಪನವರು, ವಿಭೂತೀಹುಚ್ಚಯ್ಯನವರು ಕಲ್ಲಿನ ಅಚ್ಚುಕೂಟಗಳನ್ನು ಸ್ಥಾಪಿಸಿ "ಪುಷ್ಪ ಮಾಲಿಕೆ", "ಚಂದ್ರೋದಯ" ಪತ್ರಿಕಗಳನ್ನು ಪ್ರಕಟಿಸಹತ್ತಿದರು. ದೇಸಾಯಿ ಶಿವನಪ್ಪನವರು "ಕರ್ನಾಟಕ ಪತ್ರ"ವನ್ನು ಆರಂಭಿಸಿದರು. ಇಲ್ಲಿಯ ಮಿತ್ರ ಸಮಾಜದ ಮುಖಪತ್ರವೆಂದು ವೆಂಕಟರಂಗೋ ಕಟ್ಟಿಯವರು "ಲೋಕ ಶಿಕ್ಷಕ" ಮಾಸಪತ್ರಿಕೆಯನ್ನು ಹೊರಡಿಸಿದರು. ಅಲ್ಲಿಂದ ಮುಂದೆ ೧೮೮೫ ರಲ್ಲಿಯೇ "ಕರ್ನಾಟಕ ಬುಕ್ ಡಿಪೋ ಪ್ರೆಸ್" ಎಂಬ ದೊಡ್ಡ ಮುದ್ರಣಾಲಯ ವನ್ನು ಸ್ಥಾಪಿಸಿದ ಆನಾಡ ಚೆನ್ನವೀರಪ್ಪನವರು "ಕರ್ನಾಟಕ ವೃತ್ತ"ವನ್ನು ಹೊರಡಿಸಿದರು. ಮಮದಾಪುರ ಗುರುರಾಯರು ತಮ್ಮ "ಪ್ರಸಾದ ರಾಘವ" ಮುದ್ರಾಲಯದಿಂದ "ಲೋಕಬಂಧು"ವನ್ನು ಪ್ರಕಟಿಸಹತ್ತಿದರು. "ಹಿಂದೂ ಪ್ರಿಂಟಿಂಗ್ ವರ್ಕ್ಸ" ಮುದ್ರಣಾಲಯದಲ್ಲಿ ವಕೀಲ ಬಳ್ಳಾರಿ ರಾಮರಾಯರ "ರಾಜಹಂಸ" ವಾರಪತ್ರಿಕೆಯನ್ನು ಹೊರಡಿಸಿದರು. "ರಾಜಹಂಸ"ದ ಮೂಲಕ ಬರಹಗಾರತನದಲ್ಲಿ ದರಗಂಡ ಹೊಸಕೇರೀ ಅಣ್ಣಾಚಾರ್ಯರ "ಧನಂಜಯ" ಪತ್ರಿಕೆಗೆ ಜನ್ಮಕೊಟ್ಟರು. ಹುಬ್ಬಳ್ಳಿಯಲ್ಲಿ "ಕನ್ನಡ ಕೇಸರಿ" ವಾರ ಪತ್ರಿಕೆಯೂ "ಸಚಿತ್ರ ಭಾರತ" ಮಾಸಿಕವೂ ಬಾಗಲಕೋಟೆಯ ಕೆರೂರ ವಾಸುದೇವಾಚಾರ್ಯರ ಸಂಪಾದಕತ್ವದಲ್ಲಿ ಹೊರಟವು. ವಾಸುದೇವಾ ಚಾರ್ಯರ ಸ್ವಯಂಪೂರ್ಣ ಪ್ರತಿಭೆಯಿಂದ ಅನೇಕ ಕಾದಂಬರಿಗಳೂ ನಾಟಕ ಗಳೂ ಹುಟ್ಟಿ ಬೆಳಕು ಕಂಡಿವೆ ; ಇನ್ನೂ ಕಾಣತಕ್ಕುವುಗಳಿವೆ. ಇವರಿಂದಲೇ ಮುಂದೆ ಧಾರವಾಡವು "ಶುಭೋದಯ"ವನ್ನು ಕಂಡಿತು. ಅಲ್ಲಿಂದ ಮುಂದೆ ದಿವಾಕರ ರಂಗರಾಯರೂ ಕಬ್ಬೂರ ಮಧ್ವರಾಯರೂ "ಕರ್ಮವೀರ"ಕ್ಕೆ ಜನಕರಾದರು. ಗದುಗಿನಲ್ಲಿ ಉಮಚಗೀ ಶೀನಪ್ಪನವರು "ರಸಿಕರಂಜಿನಿ" ಎಂಬ ವಾರಪತ್ರಿಕೆಯ ಸಂಪಾದಕರಾಗಿದ್ದರು. "ಕರ್ನಾಟಕ ವೈಭವ"ವು ಇದೇ ಕಾಲಕ್ಕೆ ವಿಜಾಪುರದಲ್ಲಿ ಉದಯವಾಯಿತು. ಹುನಗುಂದ ಕೃಷ್ಣ ರಾಯರೇ ಮೊದಲಾದ ಮೂವರು "ಭಾಷಾಸೇವಕ"ವೆಂಬ ಮಾಸ ಪತ್ರಿಕೆ

ಯನ್ನು ಹೊರಡಿಸಿ ಸಂಸ್ಕೃತದ ಮಾಲತೀ ಮಾಧವ ಮತ್ತು ಶಕುಂತಲ ನಾಟಕಗಳ ಕಥೆಗಳನ್ನು "ಕುರುಹಿನ ಬಕುಳಹಾರ", "ಕೇಡುತಂದ ಉಂಗುರ" ಎಂಬ ಹೆಸರುಗಳಿಂದ ಕನ್ನಡಿಗರಿಗೆ ಒದಗಿಸಿಕೊಟ್ಟರು. ಬೆಳಗಾಂವಿಯಲ್ಲಿ ಕರಗುಪ್ಪೀ ಕೃಷ್ಣರಾಯರು "ಮಾತೃಭೂಮಿ"ಯೆಂಬ ಮಾಸಪತ್ರಿಕೆಯನ್ನು ಹೊರಡಿಸಿದರು. ಡಾಕ್ಟರ ಸವಣೂರ ಹಣಮಂತರಾಯರ ಪರಿಶ್ರಮದ ಫಲವಾಗಿ ಬೆಳಗಾಂವಿಯಲ್ಲಿ "ಕರ್ನಾಟಕ ಮಿತ್ರ"ವು ಹುಟ್ಟಿತು. ಕುಮಟೆಯಲ್ಲಿ "ಕರ್ನಾಟಕ ಧುರೀಣ"ದ ಅವತಾರವಾಯಿತು. "ಕಾನಡಾವೃತ್ತ"ವು ಇನ್ನೂ ಆತ್ತ ಕಡೆಯ ಕನ್ನಡತನವನ್ನು ಕಾಯುತ್ತ ನಿಂತಿರುವ ಕಾವಲುಗಾರವಾಗಿದೆ. ಇವೆಲ್ಲ ಪತ್ರಿಕೆಗಳ ಸಂಸ್ಥಾಪಕರೂ ಸಂಪಾದಕರೂ ಇತ್ತ ಕಡೆಯ ಕನ್ನಡದ ಬೆಳವಣಿಗೆಗೆ ಕಾರಣ ಪುರುಷರಾಗಿದ್ದಾರೆ.

ಹೀಗೆ ನಮ್ಮಾ ಉತ್ತರ ಕರ್ನಾಟಕದಲ್ಲಿ ಕನ್ನಡದ ಹುಟ್ಟು ಅಡಗುವ ಹೊತ್ತು ಬಂದಾಗಿನಿಂದ ಅದನ್ನು ಉಳಿಸಲೂ ಬೆಳೆಸಲೂ ಅದಕ್ಕೆ ಕಳೆಯೇರಿಸಲೂ ಅನೇಕ ಜನ ಮಹಾನುಭಾವರು ಬಗೆ ಬಗೆಯಿಂದ ಪ್ರಯತ್ನ ಮಾಡಿ ಅನೇಕ ವಿಧದ ಸೇವೆಯನ್ನು ಸಲ್ಲಿಸಿ ಪರಿಶ್ರಮಪಟ್ಟ ಇತಿಹಾಸವು ಬಲು ದೊಡ್ಡದಾಗಿದೆ. ಹೀಗೆ ಅಖಂಡವಾಗಿ ನಡೆದ ಕನ್ನಡ ಶರಣರ ತಪಸ್ಸಿನ ಪುಣ್ಯಪ್ರಭಾವದಿಂದ ಇತ್ತ ಕಡೆಗೆ ಕನ್ನಡ ಬೆಳವಣಿಗೆಯಾಗುತ್ತ ನಡೆದರೂ ಅದಕ್ಕೆ ಸಾರ್ವಜನಿಕ ಜೀವನದಲ್ಲಿ ಮನ್ನಣೆಯೆಂಬುದು ಅಷ್ಟು ಕಷ್ಟ ಉಂಟಾದುದು ಕಂಡುಬರುತ್ತಿತ್ತು. ಸರಕಾರದ ಅಧಿಕಾರಗಳಲ್ಲಿಯೂ ಸಾರ್ವಜನಿಕ ಚಟುವಟಿಕೆಗಳಲ್ಲಿಯೂ ಮಹಾರಾಷ್ಟ್ರದತ್ತ ಕಡೆಯಿಂದ ಬರುತ್ತಿದ್ದ ಮರಾಠೀ ಜನರ ಪ್ರಾಬಲ್ಯವೇ ವಿಶೇಷವಾಗಿರುತ್ತಿದ್ದುದರಿಂದ ಇಲ್ಲಿಯ ಸಾರ್ವಜನಿಕ ಜೀವನದಲ್ಲಿ ಮರಾಠಿಗೇ ಪ್ರಮುಖಸ್ಥಾನ—ಕನ್ನಡವು ಅದರ ತೊತ್ತಿನಂತೆ ನಡುನಡುವೆ ತಲೆ ಚಾಚಬೇಕು. ಇತ್ತ ಕಡೆಯ ಕನ್ನಡಿಗ ಪ್ರಮುಖ ಕಾರ್ಯಕರ್ತರಲ್ಲಿಯೂ ಸೇರಿಕೊಂಡಿದ್ದ ಈ ಆತ್ಮವಂಚಕ ಹೀನಾಯಭಾವನೆಯನ್ನು ಬೇರುಸಹಿತ ಕಿತ್ತು ಬಿಸುಟಿದ ವೀರರು ಆಲೂರ ವೆಂಕಟರಾಯರು. ಇವರ ವಿದ್ಯಾರಣ್ಯರ ಚರಿತ್ರೆಯೂ ಕರ್ನಾಟಕದ "ಗತವೈಭವ"ವೂ ಆ ಕಾಲದ ಕನ್ನಡ ತರುಣರ ಅಭಿಮಾನದ ಕಿಡಿಯನ್ನು ಹೊತ್ತಿಸಿ ಪ್ರಜ್ವಲಿಸುವಂತೆ ಮಾಡಿದವು. ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಕನ್ನಡಕ್ಕೇ ಪ್ರಥಮಸ್ಥಾನವಿರ

ಬೇಕೆಂಬ ಹಟದಿಂದ ಲೋಕಮಾನ್ಯ ತಿಲಕರೊಂದಿಗೆ ಕೂಡ ಹೋರಾಡಿ ಅವರ ಪ್ರಭಾವಳಿಯೊಳಗಿನ ಮರಾಠಿಗೆ ಮನಸೋತ "ಕರ್ನಾಟಕ ಧುರಂಧರ"ರ ದುರ್ಭೇದ್ಯ ಮುತ್ತಿಗೆಯನ್ನು ಭೇದಿಸಿ ಮೊದಲಿನ ವಿಜಯವನ್ನು ಸಂಪಾದಿಸಿ ದವರು ಆಲೂರ ವೆಂಕಟರಾಯರು. ಲೋಕಮಾನ್ಯರ "ಹೋಮರೂಲ" ಚಳವಳಿಯಲ್ಲಿ ಕರ್ನಾಟಕ ಪ್ರಾಂತ್ಯಕ್ಕೇ ಸ್ವತಂತ್ರ ಶಾಖೆಯನ್ನು ದೊರಕಿಸಿದ ಶ್ರೇಯಸ್ಸು ವೆಂಕಟರಾಯರದು. ಆಗಿನಿಂದ ಇತ್ತಕಡೆಯ ಕನ್ನಡ ಚಟುವಟಿಕೆ ಗಳ ಬಣ್ಣವೇ ಬದಲಾಯಿತು. ಕನ್ನಡಕ್ಕೆ ಸ್ವತಂತ್ರ ಸ್ಥಾನದ ಮನ್ನಣೆ ದೊರೆಯಲನುವಾಯಿತು. ಶಾಂತಕವಿಗಳ ವಿದ್ಯಾರಣ್ಯರ ಚರಿತ್ರ ಕೀರ್ತನೆಯ ದಿವ್ಯವಾಣಿಯಿಂದ ಈ ಮನ್ನಣೆಯ ಪ್ರಭಾವವು ದಿನದಿನಕ್ಕೆ ಬೆಳೆಯಲಾರಂಭಿ ಸಿತು. ಕನ್ನಡ ಜನಾಂಗವನ್ನೊಂದುಗೂಡಿಸಿ ಹೊಸಗನ್ನಡದ ನಾಡನ್ನು ಸ್ವತಂತ್ರವಾಗಿ ಕಟ್ಟಬೇಕೆಂಬ ಸಂಕಲ್ಪವನ್ನು ಕೈಗೊಂಡು ಕನ್ನಡದ ಧ್ವಜ ವನ್ನೆತ್ತಿ ಹಿಡಿದು ಹುಮ್ಮಸ್ಸಿನಿಂದ ಮುಂದುವರಿದ ಕಡಪಾ ರಾಘವೇಂದ್ರ ರಾಯರ ಪ್ರಭಾವಶಾಲಿಯಾದ ಕರ್ತೃತ್ವವು ಇತ್ತಕಡೆಗೆಲ್ಲ ಕ್ರಾಂತಿಯನ್ನೇ ಎಬ್ಬಿಸಿಬಿಟ್ಟಿತು. ಕರ್ನಾಟಕದ ಜನಜೀವನದಲ್ಲಿ ಕರ್ನಾಟಕದ ಮುಖಂಡರೂ ಕಾರ್ಯಕರ್ತರೂ ಎನಿಸುವವರ ಸಾರ್ವಜನಿಕ ನಡೆನುಡಿಗಳಲ್ಲಿ ಕನ್ನಡಕ್ಕಲ್ಲದೆ ಬೇರೆ ಹೊರನುಡಿಗಳಿಗೆ ಅವಕಾಶವೇ ಇರಕೂಡದೆಂಬ ಸೂತ್ರವು ರಾಘವೇಂದ್ರ ರಾಯರಿಂದ ಪ್ರತಿಪಾದಿತವಾಗಿ ಸರ್ವಸಾಮಾನ್ಯವಾಗಿ ಅಂಗೀಕರಿಸಲಾಯಿತು. ಕನ್ನಡಿಗರ ಸ್ವಾತಂತ್ರ್ಯಕ್ಕೂ ಕನ್ನಡದ ಅಪ್ರತಿಬಂಧ ಬೆಳವಣಿಗೆಗೂ ಕರ್ನಾಟಕ ಸಂಸ್ಕೃತಿಯ ನಿರಾಬಾಧಕ ಸಂರಕ್ಷಣೆಗೂ ಮೂಲಾಧಾರವಾದ ಈ ಸೂತ್ರವನ್ನೇ ಅನುಸರಿಸಿ ನಡೆಯುವ ದೃಢನಿಶ್ಚಯದಿಂದ ಮುಂದುವರಿಯು ವಾಗ ಅನೇಕ ಚಕಮಕಿಗಳಾದವು ; ಬಡಿದಾಟ ಹೊಡೆದಾಟಗಳಾದವು ; ಎಷ್ಟೊಂದು ಸಾರ್ವಜನಿಕ ಸಭೆಗಳು ಮುರಿದವು ! ಪರಿಷತ್ತು ಸಮ್ಮೇಳನ ಗಳಲ್ಲಿ ಕೂಗಿನ ಕೋಲಾಹಲ ಕೈಮೈಗಳ ಕಾದಾಟಗಳೆದ್ದವು ! ಇಷ್ಟೆಲ್ಲ ವಿಪರೀತವಾದ ವಿರೋಧವನ್ನು ಎದೆಗೊಟ್ಟು ಎದುರಿಸಿ, ಎದುರಾಳಿಗಳನ್ನೆಲ್ಲ ಚೆದುರಿಸಿ ಕನ್ನಡದ ಮುನ್ನಡೆಗೆ ಕಾಲ್ತೊಡಕಾಗಿದ್ದ ಪರ ಭಾಷೆಗಳ ಪ್ರಭಾವ ವನ್ನು ಬದಿಗೆ ಸರಿಸಿ, ಕನ್ನಡ ಜನಾಂಗವು ತನ್ನ ಉನ್ನತಿಯ ಹಾದಿಯನ್ನು ನಿಷ್ಕಂಟಕವಾಗಿ ಹದಗೊಳಿಸಿ, ಗೆಲುವನ್ನು ದೊರಕಿಸುತ್ತ ಮುಂದಾಗಬೇಕಾ

ಮಿತು. ಇತ್ತಕಡೆಯು ಕನ್ನಡಿಗರ ಸ್ವಸಂರಕ್ಷಣೆಯ, ಆತ್ಮೋದ್ಧಾರದ ಹೋರಾಟದ ಅತ್ಯಂತ ಸಂಕ್ಷಿಪ್ತವಾದ ವಿವರಣೆಯು ಹೀಗೆಂದು ಕೈಯೆತ್ತಿ ಹೇಳಬಹುದಾಗಿದೆ. ಈ ಹೋರಾಟದಲ್ಲಿ ಪಾಲುಗಾರರಾಗಿದ್ದ ಕನ್ನಡ ಕುಲದೀಪಕರೆಲ್ಲರೂ ಮುಂದಿನ ಕನ್ನಡ ಜನಾಂಗಕ್ಕೆ ನಿಜವಾಗಿ "ಪುಣ್ಯ ಪುರುಷರು."

೪. ತರುಣರ ಕೈಗನ್ನಡಿ

ಡಾ॥ ಹರ್ಡೇಕರ ಮಂಜಪ್ಪನವರು: ೧೮೮೬–೧೯೪೭

ಜೀವನದ ಗುರಿ

ಎಲ್ಲ ಪ್ರಾಣಿಗಳೂ ಸುಖವನ್ನೇ ಅಪೇಕ್ಷಿಸುತ್ತವೆ. ಯಾವುದೂ ದುಃಖವನ್ನು ಅನುಭವಿಸಲು ಇಚ್ಛಿಸುವುದಿಲ್ಲ. ಮನುಷ್ಯನು ಕೂಡ ಒಂದು ಪ್ರಾಣಿಯೇ ಆಗಿದ್ದಾನೆ. ಅದರಲ್ಲಿಯೂ ಹೆಚ್ಚಿನ ಪ್ರಾಣಿ; ಮಾತನಾಡುವ ಪ್ರಾಣಿ; ಬಹು ಬುದ್ಧಿಯುಳ್ಳ ಪ್ರಾಣಿ. ಹೀಗಿದ್ದರೂ ಬೇರೆ ಪ್ರಾಣಿಗಳಂತೆ ಸುಖವನ್ನೇ ಅಪೇಕ್ಷಿಸದೆ ದುಃಖವನ್ನೇನಾದರೂ ಇಚ್ಛಿಸುತ್ತಿದ್ದಾನೆಯೆ ? ಇಲ್ಲವೇ ಇಲ್ಲ.

ಬೇರೆ ಪ್ರಾಣಿಗಳಿಗಿಂತ ಮನುಷ್ಯನ ಸುಖಾಪೇಕ್ಷೆಯು ವಿಪರೀತ ಹೆಚ್ಚು. ಅದಕ್ಕೆ ಮಿತಿಯೇ ಇಲ್ಲ. ಪಶು-ಪಕ್ಷಿ ಮುಂತಾದ ಮನುಷ್ಯೇತರ ಪ್ರಾಣಿಗಳಿಗೆ ಹೊಟ್ಟೆಯ ಚಿಂತೆಯೊಂದೇ ಬಹುಮುಖ್ಯ. ಅವುಗಳಿಗೆ ಬೇಕಷ್ಟು ಹೊಟ್ಟೆಗೆ ದೊರೆತರೆ ತೀರಿತು. ಅದೇ ಸುಖದ ಸುಗ್ಗಿ. ಹೊಟ್ಟೆಗೆ ಆಹಾರ ಇಲ್ಲದಿದ್ದರೆ ಅದೇ ಅವುಗಳಿಗೆ ಮಹಾದುಃಖ. ಈ ಸುಖದುಃಖಗಳಾದರೋ ಅವುಗಳಿಗೆ ಮುಖ್ಯವಾಗಿ ತಮ್ಮ ತಮ್ಮ ಹೊಟ್ಟೆಗೆ ಮಾತ್ರ.

ಮನುಷ್ಯನ ರೀತಿಯಾದರೋ ಅವುಗಳಿಗಿಂತ ಬಹು ಭಿನ್ನವಾದುದು. ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆಗಳೇನೋ ಬೇಕೇ ಬೇಕು. ಆದರೆ ಅವುಗಳಿಗೇನಾದರೂ ಮಿತಿ ಇದೆಯೇ ? ಇಲ್ಲವೇ ಇಲ್ಲ. ಈ ದಿವಸ ಬೇಕಾದ ಆಹಾರ ನಾಳೆ ಬೇಡ. ಬೆಳಿಗ್ಗೆ ಬೇಕಾದುದು ಮಧ್ಯಾಹ್ನ ಬೇಡ. ಎಷ್ಟು ಹೊಸತರಹದ, ರುಚಿಭಿನ್ನವಾದ ಆಹಾರವಿದ್ದರೂ ಸಾಲದು. ಮತ್ತೆ ಮತ್ತೆ ಹೊಸ ರೀತಿಯನ್ನೇ ಅಪೇಕ್ಷಿಸುತ್ತಿದ್ದಾನೆ. ತನ್ನ ಬುದ್ಧಿಶಕ್ತಿಯಿಂದ ತರತರದ ಆಹಾರಗಳನ್ನು ಮಾಡಿಕೊಂಡು ಉಂಡು ಸುಖವನ್ನೂ ಹೊಂದುತ್ತಿದ್ದಾನೆ.

ಒಂದು ಜನಾಂಗದ ಸಾವಿರಾರು ವರುಷಗಳ ಹಿಂದಿನ ಆಹಾರ ಪದಾರ್ಥಗಳಿಗೂ ಅದೇ ಜನಾಂಗದ ಹೊಸ ಆಹಾರ ಪದಾರ್ಥಗಳಿಗೂ ಹೋಲಿಸಿ ನೋಡಿದರೆ ಭೂಮಿಗೂ ಆಕಾಶಕ್ಕೂ ಇರುವಷ್ಟು ವ್ಯತ್ಯಾಸ. ಮನುಷ್ಯನು

ಒಂದು ಕಾಲದಲ್ಲಿ ಪಶು-ಪಕ್ಷಿಗಳನ್ನು ಕೊಂದು ತಿನ್ನುತ್ತಿದ್ದನು ; ಆಗ ಆತನ ಆಹಾರಪದಾರ್ಥವು ಅಷ್ಟೇ ಇದ್ದಿತು. ಮೈಗೆ ಪಶುಗಳ ಚರ್ಮವನ್ನು ಹೊದ್ದುಕೊಳ್ಳುತ್ತಿದ್ದನು ; ಆತನ ಉಡುಪು ಕೂಡ ಆಗ ಅಷ್ಟು ಮಾತ್ರವೇ ಇದ್ದಿತು.

ಆದರೆ ಈಗ ಆಹಾರದ ವಸ್ತುಗಳೆಷ್ಟು? ಉಡುಪಿನ ಬಟ್ಟೆಗಳೆಷ್ಟು. ಅವುಗಳ ಅಂದಚಂದದ ಪ್ರಕಾರಗಳೆಷ್ಟು? ದಿನದಿನಕ್ಕೆ ಆಹಾರದಲ್ಲಿಯೂ ಉಡುಪಿನಲ್ಲಿಯೂ ಹೊಸ ಹೊಸ ರೀತಿಗಳೇ ಬರುತ್ತಿವೆಯಲ್ಲವೆ? ಅವುಗಳನ್ನು ಉಂಡುಟ್ಟು ಸುಖಪಡಬೇಕೆಂದೇ ಎಲ್ಲರೂ ಇಚ್ಛಿಸುತ್ತಿದ್ದಾರೆ. ಹೀಗೆ ಉಣ್ಣುವುದು, ಉಡುವುದು, ಇಡುವುದು, ತೊಡುವುದು ಮುಂತಾದ ಎಲ್ಲ ವಿಧ ಭೋಗಗಳಲ್ಲಿಯೂ ಮನುಷ್ಯನ ಇಚ್ಛೆಯು ಹೆಚ್ಚುತ್ತಾ ಬಂದಿದೆ, ಹೆಚ್ಚುತ್ತಾ ಇದೆ ; ಮುಂದೆಯೂ ಹೆಚ್ಚುತ್ತಾ ಹೋಗುವುದು.

ಈ ಉಣ್ಣುವ, ಉಡುವ ಮೊದಲಾದ ವಸ್ತುಗಳಲ್ಲಿ ನಿಜವಾದ ಸುಖವಿಲ್ಲವೆಂದೂ ಮನುಷ್ಯನು ಇವುಗಳನ್ನು ಹಿಂಬಾಲಿಸದೆ ಸುಖದ ಸ್ಥಾನವು ತನ್ನಲ್ಲಿಯೇ ಇದೆಯೆಂದು ತಿಳಿದು ಬಹಿರ್ಮುಖವಾದ ದೃಷ್ಟಿಯನ್ನು ಅಂತರ್ಮುಖ ಮಾಡಿ ಆತ್ಮಾನುಸಂಧಾನದಿಂದ ನಿತ್ಯಾನಂದವನ್ನು ಅನುಭವಿಸಬೇಕೆಂದೂ ಕೆಲವರು ಹೇಳುತ್ತಿದ್ದಾರೆ. ಈ ಮಾರ್ಗವನ್ನು ಜನಸಾಮಾನ್ಯರು ಅನುಸರಿಸಲಿಕ್ಕಾಗುವುದಿಲ್ಲ. ಎಲ್ಲಿಯೋ ಕೋಟಿಗೊಬ್ಬರು ಈ ರೀತಿಯಾಗಿರಬಹುದು. ಜನಾಂಗವೆಲ್ಲವೂ ಉಣ್ಣುವ, ಉಡುವ, ಇಡುವ, ತೊಡುವ ಮೊದಲಾದ ವಿವಿಧ ವಸ್ತುಗಳನ್ನು ಸಂಪಾದಿಸುವುದೂ ಸಂಗ್ರಹಿಸುವುದೂ ಉಪಭೋಗಿಸುವುದೂ ತನ್ನ ಮುಖ್ಯ ಗುರಿಯನ್ನಾಗಿಯೇ ಇಟ್ಟುಕೊಂಡಿದೆ. ಮನುಷ್ಯನ ಜೀವಿತದಲ್ಲಿ ಇದು ಮೊದಲು ಕಾಣುವ ಗುರಿ.

ಮನುಷ್ಯನ ಸುಖಾಪೇಕ್ಷೆಯು ಇಷ್ಟಕ್ಕೇ ಮುಗಿಯುವುದಿಲ್ಲ. ತನ್ನಂತೆಯೇ ತನ್ನ ಹೆಂಡತಿ ಮಕ್ಕಳಿಗೂ, ಬಂಧು ಬಾಂಧವರಿಗೂ ಈ ಎಲ್ಲ ಸುಖೋಪಭೋಗದ ವಸ್ತುಗಳೂ ದೊರೆಯಬೇಕೆಂಬುದೂ ಆತನ ಹಂಬಲ ಆಸೆ. ಅಷ್ಟಕ್ಕಾದರೂ ಮುಗಿಯುವುದೆ? ಇಲ್ಲವೇ ಇಲ್ಲ. ತನ್ನ ನಂತರದವರೂ ನಿರಂತರ ಎಲ್ಲ ಸುಖಸಂಪತ್ತುಗಳನ್ನು ಅನುಭವಿಸುತ್ತಿರಬೇಕೆಂದೂ ಈತನ

ಸುಖೋಪ ಭೋಗದ ವಸ್ತುಗಳನ್ನು ವಿಪುಲವಾಗಿ ಹೊಂದಿರಬೇಕೆಂದ ಆತನ ಮಹತ್ವಾಕಾಂಕ್ಷೆ. ಇದು ಮನುಷ್ಯನ ದೃಷ್ಟಿಗೆ ಬಹುದೂರದ ಕಾಣುವ ಕೊನೆಯ ಗುರಿ.

ಈ ಪ್ರಕಾರ ಮನುಷ್ಯನ ಸುಖಾಪೇಕ್ಷೆಯು ಉಪಭೋಗದ ವಸ್ತುಗ ವಿಷಯದಲ್ಲಿಯೇ ವಿಕಾಸವಾಗುತ್ತಾ ಹೋಗುತ್ತದೆಂದಲ್ಲ. ತನಗೆ ಅನ್ಯರ ಮಾನ ಮನ್ನಣೆಗಳು ದೊರೆಯಬೇಕೆಂಬ ಅಪೇಕ್ಷೆಯೂ ಹೀಗೆಯೇ ಹೆಚ್ಚುತ್ತಾ ಹೋಗುತ್ತದೆ. ಈ ತನ್ನ ಘನತೆಯು ತಾನು ಜೀವಿಸಿರುವ ಮಟ್ಟಿಗೇ ಮಾತ್ರವೂ ಅಲ್ಲ; ತನ್ನ ಮರಣದ ನಂತರ ಕೂಡ ತನ್ನ ಕೀರ್ತಿಯನ್ನು ಜಗತ್ತು ಹೊಗಳುತ್ತಿರಬೇಕೆಂದೇ ಆತನ ಘನತರವಾದ ಆಸೆ!

ಹೀಗೆ ಮನುಷ್ಯ ಪ್ರಾಣಿಯಲ್ಲಿರುವ ತಾನು, ತನ್ನದು ಎಂಬ ತಿಳಿ ಕೆಯು ಯಾವುದರಲ್ಲಿ ಎಷ್ಟೆಷ್ಟು ವಿಕಾಸವಾಗುತ್ತಾ ಹೋಗುತ್ತದೆಯೋ ಅಷ್ಟಷ್ಟು ಅವರವರ ಸುಖಾಪೇಕ್ಷೆಯೂ ಹೆಚ್ಚುತ್ತಾ ಹೋಗುತ್ತದೆ. ಸುಖಾಪೇಕ್ಷೆಯ ವಿಕಾಸವು ಮನುಷ್ಯನ ಉನ್ನತಿಯ ಅಂತಸ್ತುಗಳನ್ನು ತಿ ತಕ್ಕುದಾಗಿದೆಯೆಂದೂ ಹೇಳಬಹುದು.

ಕೇವಲ ತನ್ನ ಹೊಟ್ಟೆ-ಬಟ್ಟೆಗಳ ಚಿಂತೆಯಲ್ಲಿಯೇ ಇದ್ದು ಅವುಗಳ ಸಂಪಾದಿಸಿ ಸುಖೋಪಭೋಗದಲ್ಲಿಯೇ ಮಗ್ನನಾಗಿದ್ದರೆ ಆತನಿಗೆ ಮನುಷ್ಯನೆನ್ನಬೇಕು. ಕಲ್ಲು ಒಂದು ಸ್ಥಳದಲ್ಲಿ ಬಿದ್ದರೆ ಅಲ್ಲಿಯೇ ಇರುತ್ತದಲ್ಲವೆ? ಹಾಗೆಯೇ ಆ ಕಲ್ಲುಮನುಷ್ಯನಲ್ಲಿದ್ದ ತನ್ನತನವು ದೇಹದ ಮಟ್ಟಿಗೇನೇ ಇರುತ್ತದೆಯೇ ವಿನಾ ಸ್ವಲ್ಪವೂ ಮುಂದಕ್ಕೆ ಹೋ ವುದಿಲ್ಲ.

ಇನ್ನು ತನ್ನ ಮತ್ತು ತನ್ನ ಹೆಂಡತಿ-ಮಕ್ಕಳು ಬಂಧುಬಾಂಧ ಹಿತವನ್ನು ಮಾತ್ರ ಅಪೇಕ್ಷಿಸುತ್ತಾರೆಯೋ ಅವರು ಗಿಡಮನುಷ್ಯರೆ ನಿಸುವರು. ಏಕೆಂದರೆ ಗಿಡಗಳು ಒಂದೇ ಸ್ಥಳದಲ್ಲಿಯೇ ಇದ್ದರೂ ತ ಬೇರುಕೊಂಬೆಗಳನ್ನು ಎಲ್ಲೆಲ್ಲೂ ಮುಂದಕ್ಕೆ ಚಾಚುತ್ತವಲ್ಲ. ಪ್ರಕಾರ ಈ ಗಿಡಮನುಷ್ಯನ ತನ್ನತನವು ಆತನ ಹೆಂಡತಿ ಮಕ್ಕಳು ಬಾಂಧವರವರೆಗೆ ಮಾತ್ರ ಮುಂದುವರಿಯುತ್ತದೆ.

ಯಾರು ತಮ್ಮ ಬಂಧುಬಾಂಧವರ ಸುಖವನ್ನಷ್ಟೇ ಇಚ್ಛಿಸದೆ ತಮ್ಮ ಜಾತಿ ಮತ ಧರ್ಮದವರ ಹಿತವನ್ನೂ ಕೋರುತ್ತಾರೆಯೋ ಅವರು ಪ್ರಾಣಿ ಮನುಷ್ಯರೆಂದು ತಿಳಿಯಬೇಕು. ಪ್ರಾಣಿಗಳು ಹೇಗೆ ಎಷ್ಟೋ ದೂರದವರೆಗೆ ಹೋಗುತ್ತವೆಯೋ ಹಾಗೆಯೇ ಇವರ ತನ್ನತನವು ಎಷ್ಟೋ ದೂರದವರೆಗಿರುತ್ತದೆ. ಯಾರು ತಮ್ಮ ರಾಷ್ಟ್ರದ ಎಲ್ಲ ಜನರ ಹಿತವನ್ನು ಇಚ್ಛಿಸುತ್ತಾರೆಯೋ ಅವರು ಮನುಷ್ಯತ್ವವುಳ್ಳ ಮನುಷ್ಯರು. ಅವರ ತನ್ನತನವು ರಾಷ್ಟ್ರವನ್ನೇ ವ್ಯಾಪಿಸಿರುತ್ತದೆ.

ಈ ತನ್ನತನವು ಅದಕ್ಕೂ ಮುಂದರಿದು ಅಖಿಲ ಮಾನವ ಕುಟುಂಬದ ಹಿತವನ್ನೇ ಇಚ್ಛಿಸಿದ್ದಾದರೆ ಅದು ದೇವತ್ವವನ್ನು ಹೊಂದಿತೆಂದು ತಿಳಿಯಬೇಕು. ಅಂಥ ಮನುಷ್ಯನು ದೇವಮಾನವನು. ಆತನು ಮನುಷ್ಯೇತರ ಪ್ರಾಣಿಗಳ ಕ್ಷೇಮವನ್ನೂ ಚಿಂತಿಸುವನು. ಆತನಿಗೆ ವಿಶ್ವಬಂಧುವೆಂದರೂ ಸಲ್ಲುವುದು.

ಮನುಷ್ಯಪ್ರಾಣಿಯು ಮೊದಲು ಕಲ್ಲುಮನುಷ್ಯನಾಗಿದ್ದು ತನ್ನತನದ ವಿಕಾಸವಾಗುತ್ತಾ ಬಂದಂತೆ ಕೊನೆಗೆ ದೇವಮನುಷ್ಯನಾಗುತ್ತಾನೆ. ಹೀಗೆ ಮನುಷ್ಯಜಾತಿಯು ದೇವಮನುಷ್ಯನಾಗುವ ಗುರಿಯನ್ನು ತನ್ನ ಮುಂದಿಟ್ಟುಕೊಳ್ಳುವ ಕಾಲ ಕಣ್ಣಿಗೆ ಕಾಣದಷ್ಟು ಬುದ್ಧಿಗೆ ನಿಲುಕದಷ್ಟು ದೂರ ಇದೆ. ಈಗ ಮನುಷ್ಯಜಾತಿಯು ಗಿಡಮನುಷ್ಯನ ಅಂತಸ್ತಿಗೆ ಬಂದಿದೆ. ಎಂದರೆ ತನ್ನ ಮತ್ತು ತನ್ನ ದಂಪತಿ-ಮಕ್ಕಳು ಬಂಧು-ಬಾಂಧವರ ಹಿತಾಪೇಕ್ಷೆಯನ್ನಷ್ಟೇ ನೋಡುವ ಸ್ಥಿತಿಯಲ್ಲಿದೆ.

ತನ್ನ ಜಾತಿ-ಮತ-ಧರ್ಮದವರ ಹಿತವನ್ನೇ ತನ್ನ ಜೀವಿತದ ಗುರಿಯೆಂದು ತಿಳಿದವರು ಬಹಳ ಕಡಿಮೆ. ತನ್ನ ರಾಷ್ಟ್ರದ ಅಭ್ಯುನ್ನತಿಗಾಗಿಯೇ ತಾನು ಬದುಕಬೇಕಾಗಿದೆಯೆಂದು ತಿಳಿದವರಂತೂ ಮತ್ತೂ ವಿರಳ. ಅಖಿಲ ಮಾನವ ಜಾತಿಯ ಹಿತಾರ್ಥವಾಗಿ ಪ್ರಯತ್ನಿಸುವ ಮಹಾತ್ಮರಂತೂ ಮನುಷ್ಯ ಜಾತಿಯಲ್ಲಿ ಎಂದೋ ಒಬ್ಬರು ಜನ್ಮವೆತ್ತುವರೂ ಅಪರೂಪ.

ಲಕ್ಷ್ಯಾಂತರ ವರುಷಗಳಿಂದ ಮನುಷ್ಯಪ್ರಾಣಿಯು ತನ್ನ ಜೀವಿತದ ಗುರಿಯನ್ನು ವಿಕಾಸಗೊಳಿಸುತ್ತಾ ಈಗ ಈ ಸ್ಥಿತಿಗೆ ಬಂದಿದೆ. ಇನ್ನು ಮುಂದೆ [illegible] ವರ್ಷಾವಧಿಯವರೆಗೂ ಹೀಗೆಯೇ ಮುಂದೆ ಸಾಗುವುದು.

ಈ ಪ್ರಪಂಚವು ಒಂದು ರಣಕ್ಷೇತ್ರ. ಪ್ರತಿಯೊಂದು ವ್ಯಕ್ತಿಯೂ ಯಾವುದಾದರೊಂದು ತನ್ನ ಜೀವಿತದ ಗುರಿಯನ್ನಿಟ್ಟುಕೊಂಡು ಅದನ್ನು ಸಾಧಿಸಲು ಹೋರಾಡುತ್ತಲೇ ಇರುತ್ತದೆ. ಆಳಿನಿಂದ ಅರಸಿನವರೆಗೂ ಪಾಮರನಿಂದ ಪಂಡಿತನವರೆಗೂ ಹಳ್ಳಿಗಳಿಂದ ಪಟ್ಟಣಿಗನವರೆಗೂ ಜಗತ್ತಿನ ಎಲ್ಲ ಮನುಷ್ಯರೂ ತಮ್ಮ ಬಾಳಿನಲ್ಲಿ ತಮ್ಮ ಶಕ್ತಿ-ಸ್ಥಿತಿಗಳಿಗನುಸರಿಸಿ ಹೋರಾಟವನ್ನೇ ನಡೆಯಿಸಿದ್ದಾರೆ.

ಕಾಲಸ್ಥಿತಿಯಂತೆ ಮನುಷ್ಯನ ಜೀವಿತದ ಗುರಿಯೂ ಬೇರೆಯಾಗುತ್ತದೆ. ಆಸೆ-ಆಕಾಂಕ್ಷೆಗಳು ವಿವಿಧ ರೂಪಗಳನ್ನು ಹೊಂದುತ್ತವೆ. ಒಂದು ಹಳ್ಳಿಯಲ್ಲಿರುವ ತರುಣನ ಕಲ್ಪನೆಯಲ್ಲಿ ಕೂಡ ಯಾವ ಸಂಗತಿಯು ಬರಲಾರದೋ ಅದು ಪಟ್ಟಣದ ತರುಣನ ಜೀವಿತದ ಗುರಿಯೇ ಆಗಬಹುದು. ಹೀಗೆ ಮನುಷ್ಯನು ತನ್ನ ನೆರೆಯವರ ಸಂದರ್ಶನ ಸಹವಾಸಗಳಿಂದಲೂ ತನ್ನ ಜೀವಿತದ ಗುರಿಯನ್ನು ಗೊತ್ತುಮಾಡಿಕೊಳ್ಳುತ್ತಿರುತ್ತಾನೆ. ಮನುಷ್ಯನು ಅನುಕರಣಶೀಲ ಪ್ರಾಣಿಯಾಗಿರುವುದರಿಂದ ಜೀವಿತದ ಗುರಿಯು ಬೇರೆ ಬೇರೆಯಾಗುತ್ತ ಹೋಗುವುದೂ ಉಂಟು. ಮನಸ್ಸಿನ ಇಂಥ ಹೊಯಿದಾಟವೆಲ್ಲ ಮುಖ್ಯವಾಗಿ ತಾರುಣ್ಯದಲ್ಲಿಯೇ ಹೆಚ್ಚು.

ದೇಶಭಕ್ತರೂ ಘನಗೌರವ ಹೊಂದುತ್ತಿರುವುದನ್ನು ನೋಡಿ ತಾನೂ ರಾಷ್ಟ್ರದ ಮುಖಂಡನಾಗಬೇಕೆಂದು ಒಮ್ಮೆ ಯೋಚನೆ. ಅಧಿಕಾರಿಗಳು ಜನರಲ್ಲಿ ಮನ್ನಣೆ ಹೊಂದಿ ಬಹು ಜನರ ಮೇಲೆ ಅಧಿಕಾರ ನಡೆಸುತ್ತಿದ್ದುದನ್ನು ನೋಡಿ ತಾನೂ ದೊಡ್ಡ ಅಧಿಕಾರಿಯಾಗಬೇಕೆಂದು ಮತ್ತೊಮ್ಮೆ ಯೋಚನೆ. ಶ್ರೀಮಂತರು ಹೊಂದುತ್ತಿರುವ ಅನೇಕ ಸುಖೋಪಭೋಗಗಳನ್ನು ನೋಡಿ ತಾನೂ ಘನಶ್ರೀಮಂತನಾಗಬೇಕೆಂದು ಇನ್ನೊಮ್ಮೆ ಯೋಚನೆ.

ಭೋಗಿಗಳ ಕಂಡರೆ ಭೋಗಿಯಾಗಬೇಕೆಂದೂ ಯೋಗಿಗಳ ಕಂಡರೆ ಯೋಗಿಯಾಗಬೇಕೆಂದೂ ಹೀಗೆ ಒಬ್ಬೊಬ್ಬರನ್ನು ಕಂಡಾಗ ಒಂದೊಂದು ವಿಧವಾದ ಯೋಚನೆ ಮಾಡಿ ಜೀವಿತದ ಗುರಿಯನ್ನೇ ನಿಶ್ಚಯಿಸಿಕೊಳ್ಳದಿರುವವರೂ ಬಹು ಜನರು. ಅವರ ಬಾಳುವೆಯು ಬಿರುಗಾಳಿಗೆ ಸಿಕ್ಕ ಹಡಗಿನಂತೆ ಗೊತ್ತುಗುರಿಯಿಲ್ಲದೆ ಸಾಗುತ್ತಿರುತ್ತದೆ.

ಮನುಷ್ಯನ ತಾರುಣ್ಯದಲ್ಲಿಯೇ ಹೀಗೆ ಗೊತ್ತುಗುರಿಗಳಿಲ್ಲದೆ ಸಾಗುತ್ತಿರುವುದು ಹೆಚ್ಚು. ಆದುದರಿಂದ ತಾರುಣ್ಯದಲ್ಲಿಯೇ ಮನುಷ್ಯನು ತನ್ನ ಶಕ್ತಿ ಮತ್ತು ಸ್ಥಿತಿಗಳನ್ನು ಚೆನ್ನಾಗಿ ತಿಳಿದುಕೊಂಡು, ತನ್ನ ಹಿತಚಿಂತಕರಾದ ಅನುಭವಿಗಳ ಸಲಹೆ ಸೂಚನೆಗಳನ್ನು ಕೇಳಿ, ತನ್ನ ಜೀವಿತದ ಗುರಿಯನ್ನು ಗೊತ್ತುಪಡಿಸಬೇಕು. ಮತ್ತು ಅದನ್ನೇ ಸಾಧಿಸಲು ಹಗಲಿರುಳೂ ಪ್ರಯತ್ನಿಸಬೇಕು

ತಾನು ಶಕ್ತಿಶಾಲಿಯಾಗದೆ ತನ್ನ ಯಾವ ಗುರಿಯನ್ನೂ ಮನುಷ್ಯನು ಮುಟ್ಟಲಾರನು. ತಾನು ಸೇವಿಸಿದ ಆಹಾರವನ್ನು ಹೇಗೆ ತಾನೇ ಜೀರ್ಣಿಸಿಕೊಳ್ಳಬೇಕಾಗಿದೆಯೋ ಹಾಗೆಯೇ ತಾನು ಗೊತ್ತುಮಾಡಿಕೊಂಡ ಗುರಿಯನ್ನು ತನ್ನ ಬಲದಿಂದಲೇ ಮುಟ್ಟಬೇಕಾಗುವುದು. ಅನ್ಯರ ಸಲಹೆ-ಸೂಚನೆಗಳು ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲಿಕ್ಕೂ ಅದನ್ನು ಸರಿಯಾದ ದಾರಿಯಲ್ಲಿ ನಡೆಸಲಿಕ್ಕೂ ಅನುಕೂಲವಾಗಬಹುದು.

ತನ್ನಲ್ಲಿಯೇ ಶಕ್ತಿಯಿಲ್ಲದಿದ್ದರೆ ಯಾರ ಸಲಹೆ ಸೂಚನೆಗಳಾದರೂ ಎಷ್ಟರ ಮಟ್ಟಿಗೆ ಪ್ರಯೋಜನವಾಗುವುವು ? ಯಾರು ಶಕ್ತಿಶಾಲಿಗಳೋ ಅವರೇ ಈ ಜೀವಿತದ ಹೋರಾಟದಲ್ಲಿ ಜಯಹೊಂದುವರು. ತಮ್ಮ ಜೀವಿತದ ಗುರಿಯನ್ನು ಮುಟ್ಟಲು ಅವರೇ ಸಮರ್ಥರು. ಬಲಹೀನರ ಆಸೆ ಆಕಾಂಕ್ಷೆಗಳು ಕನಸಿನಲ್ಲಿ ಕಂಡ ಹೂವು ಹಣ್ಣುಗಳಂತೆ. ಅವುಗಳನ್ನೇನೂ ಹೊಂದಿ ಅವರು ಸುಖಿಸಲಾರರು.

ತರುಣರು ಮೊದಲು ತಮ್ಮ ಜೀವಿತದ ಗುರಿಯನ್ನು ಗೊತ್ತುಮಾಡಿಕೊಳ್ಳುವುದು ಅತ್ಯಗತ್ಯ. ಗುರಿಯಿಲ್ಲದ ಜೀವಿತವು ಶೂನ್ಯ. ಆ ಗುರಿಯಾದರೋ ತನ್ನತನವನ್ನು ವಿಕಾಸಗೊಳಿಸತಕ್ಕದ್ದಾಗಿರಬೇಕು. ಅಂಥ ಗುರಿಯನ್ನು ಸಾಧಿಸಲು ಬೇಕಾದ ಎಲ್ಲ ಶಕ್ತಿಗಳನ್ನೂ ಹೊಂದಲು ಪರಿಶ್ರಮಪಡಬೇಕು. ತಮ್ಮ ಮುಂದಿಟ್ಟುಕೊಂಡ ಗುರಿಯಲ್ಲಿಯೇ ದೃಷ್ಟಿಯನ್ನಿಟ್ಟು ದೃಢನಿಷ್ಠೆಯಿಂದ ಅದನ್ನು ಹೊಂದಲು ಮುಂದುವರಿಯಬೇಕು.

ವೀರನು ರಣಭೂಮಿಯಲ್ಲಿ ಹೇಗೆ ವೈರಿತರು ಹೋರಾಡುತ್ತಿರುತ್ತಾನೆಯೋ ಹಾಗೆಯೇ ಘನವಾದ ತನ್ನ ಗುರಿಯನ್ನು ಸಾಧಿಸಲು ಎಂಥ ಪ್ರತಿಕೂಲಗಳನ್ನಾದರೂ ಲಕ್ಷಿಸದೆ ಅವುಗಳನ್ನೆಲ್ಲ ತಳ್ಳುತ್ತ ಮುಂದೆ ಸಾಗಬೇಕು.

ಜೀವಿತವು ಗುರಿಯನ್ನು ಮುಟ್ಟಿದಾಗ ಪ್ರಭಾವಶಾಲಿಯಾಗುವುದಿಲ್ಲ. ಅದನ್ನು ಮುಟ್ಟುವ ಮುಂಚೆ ಮಾಡುವ ಸಾಹಸದ ಕಾಲಕ್ಕೇನೇ ಅದು ತೇಜೋಮಯವಾಗುತ್ತದೆ. ಮನುಷ್ಯನಲ್ಲಿರುವ ದಿವ್ಯಶಕ್ತಿಯು ಹೋರಾಟದ ಕಾಲದಲ್ಲಿಯೇ ಹೊರಬೀಳುತ್ತದೆ

ಅಂತೆಯೇ ಮೊದಲು ಶ್ರೇಷ್ಠವಾದ ಗುರಿಯು ನಮ್ಮ ಮುಂದಿರಬೇಕು. ಆ ಗುರಿಯಲ್ಲಿ ದೃಢವಾದ ನಿಷ್ಠೆ ಇರಬೇಕು. ಅದನ್ನು ಸಾಧಿಸಿಯೇ ತೀರುವೆನೆಂಬ ದೃಢಪ್ರತಿಜ್ಞೆಯಿಂದ ಎಂಥ ಪ್ರತಿಕೂಲಗಳಿಗೂ ಬಾಗದಂಥ ಪ್ರಚಂಡ ಶಕ್ತಿಯನ್ನು ಸಂಪಾದಿಸಬೇಕು. ಹಾಗಾದರೆ ನಮ್ಮ ಬಾಳಿನಲ್ಲಿ ಬೆಳಕು ತೋರಿ ಸುಖ-ಶಾಂತಿಗಳು ನೆಲೆಸುವುವು.

ಶಕ್ತಿ ಸಂಪಾದನೆ

ಮನುಷ್ಯನು ತನ್ನ ಜೀವಿತದ ಯಾವ ಗುರಿಯನ್ನು ಮುಟ್ಟಬೇಕಾದರೂ ಅದಕ್ಕೆ ಅವಶ್ಯಕವಾದ ಶಕ್ತಿಯು ಬೇಕೇಬೇಕಷ್ಟೆ. ಆ ಶಕ್ತಿಯಾದರೋ ಒಂದೇ ವಿಧವಾಗಿಲ್ಲ. ಅದು ಮುಖ್ಯವಾಗಿ ಶಾರೀರಿಕ, ಬೌದ್ಧಿಕ ಮತ್ತು ಮಾನಸಿಕ ಎಂದು ಮೂರು ಪ್ರಕಾರವಾಗಿದೆ. ಯಾವ ಕಾರ್ಯಕ್ಕಾದರೂ ಈ ಮೂರು ಶಕ್ತಿಗಳು ಹೆಚ್ಚು ಕಡಿಮೆಯಾಗಿ ಬೇಕೆಬೇಕು. ಆದುದರಿಂದ ಇವುಗಳನ್ನು ಸಂಪಾದಿಸುವುದು ಪ್ರತಿಯೊಬ್ಬನ ಕರ್ತವ್ಯವೇ ಆಗಿದೆ.

ಈ ಮೂರು ಶಕ್ತಿಗಳಲ್ಲಿ ಮೊದಲನೆಯದು ಶಾರೀರಿಕ ಶಕ್ತಿ. ದೇಹವು ಬಲವುಳ್ಳದಾಗಿದ್ದರೇನೇ ಬುದ್ಧಿಶಕ್ತಿಯನ್ನೂ ಮನಸ್ಸಿನ ಸಾಮರ್ಥ್ಯವನ್ನೂ ಹೆಚ್ಚಿಸಿಕೊಳ್ಳುವುದು ಶಕ್ಯ. ರೋಗದಿಂದ ಶರೀರವೇ ಕ್ಷೀಣವಾಗುತ್ತಿದ್ದಾಗ ಯಾವ ಕಾರ್ಯವನ್ನು ತಾನೆ ಕೊನೆಗಾಣಿಸುವನು? ನಿರ್ಬಲನಿಗೆ ಜೀವಿತವೇ ಭಾರವಾಗಿ ಪರಿಣಮಿಸುವುದರಿಂದ ಆತನು ತನ್ನ ಗುರಿಯನ್ನು ಸಾಧಿಸುವ ಸಾಹಸವನ್ನೇನು ಮಾಡಬಲ್ಲನು?

ಈ ಶರೀರವೇ ಎಲ್ಲ ಕಾರ್ಯಗಳನ್ನು ಸಾಧಿಸಲು ಮೂಲಸಾಧನ. ಕುರುಡನಿಗೆ ಕೈಕೋಲು ಹೇಗೆ ಮುಂದೆ ಹೋಗಲು ಸಾಧನವೋ ಹಾಗೆಯೇ ಈ ದೇಹವು ಜೀವನಿಗೆ ಮುಂದುವರಿಯಲು ಸಾಧನವು. ಇದು ಭದ್ರವಾಗಿಯೂ ಬಲವಾಗಿಯೂ ಇದ್ದರೇನೇ ಮುಂದೆ ಯಾವ ಶಕ್ತಿಯನ್ನಾದರೂ ಹೊಂದ-

ಬಹುದು. ಅಂತೆಯೇ ಪ್ರಯತ್ನಪೂರ್ವಕವಾಗಿ ಮೊದಲು ದೇಹಶಕ್ತಿಯನ್ನು ಸಂಪಾದಿಸಬೇಕು.

ಈ ಶಾರೀರಿಕ ಶಕ್ತಿ ಸಂಪಾದನೆಯನ್ನಾದರೋ ತಾರುಣ್ಯದಲ್ಲಿಯೇ ಮಾಡಿಕೊಳ್ಳಬೇಕು. ದೇಹಬಲವನ್ನು ಹೊಂದಲು ಯೌವನವೇ ಯುಕ್ತವಾದ ಕಾಲ. ಆಗಲೇ ದೇಹವು ಬಲಿಯುತ್ತಿರುತ್ತದೆ. ಅಂಥ ಸಮಯದಲ್ಲಿಯೇ ಯುಕ್ತವಾದ ಆಹಾರ-ವಿಹಾರಾದಿಗಳಿಂದ ಅದನ್ನು ಪವಿತ್ರವಾಗಿಯೂ ಗಟ್ಟಿ ಮುಟ್ಟಾಗಿಯೂ ಇಟ್ಟುಕೊಂಡದ್ದಾದರೆ ಜೀವಿತದಲ್ಲಿಯ ಒಂದು ಮುಖ್ಯ ಕಾರ್ಯವನ್ನೇ ಮಾಡಿದಂತಾಗುವುದು.

ತಾರುಣ್ಯದಲ್ಲಿ ದೇಹಶಕ್ತಿಯ ಕಡೆಗೆ ನಿರ್ಲಕ್ಷಿಸಿ ಮನಬಂದಂತೆ ನಡೆದು ಶರೀರವು ಅನೇಕ ದುಶ್ಚಟಗಳಿಗೂ ನಾನಾ ರೋಗಗಳಿಗೂ ತವರುಮನೆಯಾಗುವಂತೆ ಮಾಡಿಕೊಂಡರೆ ತನ್ನ ಜೀವಿತವನ್ನೇ ವ್ಯರ್ಥಮಾಡಿಕೊಂಡಂತಾಗುವುದು. ಆ ಮೇಲೆ ಎಷ್ಟು ಮರುಗಿದರೂ ಪ್ರಯೋಜನವಿಲ್ಲ. ಮುಪ್ಪಿನಲ್ಲಿ ದೇಹಬಲವನ್ನು ಹೆಚ್ಚಿಸಿಕೊಳ್ಳಲಿಕ್ಕಾಗುವುದಿಲ್ಲ. ಇದ್ದ ಶಕ್ತಿಯನ್ನೇ ಕಾಯ್ದುಕೊಳ್ಳುವುದು ಕಷ್ಟ. ಆದಕಾರಣ ತರುಣರು ಮೊದಲು ತಮ್ಮ ದೇಹಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಬೇಕು.

ದೇಹಬಲವೇ ಕಡಿಮೆಯಾಗುತ್ತಲಿದೆ.
ಇತ್ತೀಚೆಗೆ ನಮ್ಮ ದೇಶದ ಜನರ ರೋಗಿಗಳ ಸಂಖ್ಯೆ ವಿಪರೀತ. ಅಲ್ಪಾಯುಗಳೇ ಹೆಚ್ಚು. ಇಂಗ್ಲೆಂಡ್ ಮೊದಲಾದ ಸುಧಾರಿಸಿದ ದೇಶಗಳಲ್ಲಿಯ ಜನರ ಆಯುಷ್ಯದ ಸರಾಸರಿಯು ೬೫ ವರುಷವಿದೆ; ನಮ್ಮ ದೇಶದ ಜನರ ಆಯುಷ್ಯದ ಸರಾಸರಿಯಾದರೋ ೨೫ ವರುಷಕ್ಕೆ ಇಳಿದಿದೆ. ಈ ಶೋಚನೀಯ ಸ್ಥಿತಿಯು ನಿವಾರಣೆಯಾಗಬೇಕಾದರೆ ತರುಣರು ದೇಹಬಲವುಳ್ಳವರಾಗುವುದು ಅತ್ಯಗತ್ಯ.

ಆಯುಷ್ಯದ ಮೊದಲನೆಯ ೨೫ ವರ್ಷಗಳಂತೂ ಬಹು ಮುಖ್ಯವಾದುವುಗಳು. ನಮ್ಮ ಜೀವಿತದ ಕಟ್ಟಡಕ್ಕೆ ಈ ಕಾಲವೇ ನೆಲಗಟ್ಟು. ಇದು ಶುದ್ಧವಾಗಿಯೂ ಭದ್ರವಾಗಿಯೂ ಇದ್ದರೇನೇ ಆ ಕಟ್ಟಡವು ಹೆಚ್ಚು ಕಾಲ ಬಾಳುವುದು. ಇಲ್ಲದಿದ್ದರೆ ಬಹುಬೇಗನೆ ಅಳಿಯುವುದು. ಬೇರಿಗೆ ಗೆದ್ದಲು ಹತ್ತಿದ ಗಿಡವು ಹೇಗೆ ಬೆಳೆದು ಹೂವು ಕಾಯಿಗಳನ್ನು ಬಿಟ್ಟು ಶೋಭಿಸಲಾರದೋ ಹಾಗೆಯೇ ಈ ನಮ್ಮ ಜೀವಿತವೆಂಬ ಗಿಡಕ್ಕೆ ಬೇರಿನಂತಿದ್ದ

ಯೌವನವು ದುಷ್ಚಟಗಳೆಂಬ ಗೆದ್ದಲುಗಳಿಗೆ ಈಡಾದರೆ ಮುಂದೆ ಮನೋಹರವಾದ ಮತ್ತು ಫಲದಾಯಕವಾದ ಜೀವನವೃಕ್ಷವಾಗುವುದೆಂತು ?

ಮುಖದ ಮೇಲೆ ಪ್ರಾಯದ ಕಳೆಯೇ ಇಲ್ಲ. ಕಣ್ಣುಗಳು ಒಳಹೊಕ್ಕಿವೆ. ಕೆನ್ನೆಗಳು ಸುಕ್ಕಾಗಿವೆ. ತುಟಿ ಬಾಡಿವೆ. ಕುತ್ತಿಗೆಯ ಎಡಬಲಗಳಲ್ಲಿ ಎಲುಬುಗಳೇ ಎದ್ದು ಕಾಣುತ್ತಿವೆ. ಎದೆಗೂಡುಗಟ್ಟಿದೆ. ಪಕ್ಕೆಗಳು ಎಲುಬಿನ ಹಂದರವಾಗಿವೆ. ಕೈಕಾಲುಗಳು ಸಣ್ಣಿಸಿವೆ. ಇಂಥ ತರುಣರೇ ನಮ್ಮ ನಾಡಿನಲ್ಲಿ ಹೆಚ್ಚಾಗಿದ್ದಾರಲ್ಲವೆ ?

ಇಂಥವರು ತಲೆಕೂದಲನ್ನು ಹೇಗೆ ಬಿಟ್ಟರೇನು ? ಎಂಥ ಉಪನೇತ್ರವನ್ನು ಹಾಕಿಕೊಂಡರೇನು ? ಎಷ್ಟು ಬಟ್ಟೆಗಳನ್ನು ಯಾವ ಪ್ರಕಾರ ತೊಟ್ಟರೇನು ? ಚಂದ ಕಾಣುವರೆ ? ತಾರುಣ್ಯದ ತೇಜವೇನಾದರೂ ಬೆಳಗುವುದೆ ? ಪ್ರಾಯದ ಹುಮ್ಮಸವೇನಾದರೂ ತೋರುವುದೆ ? ಪಾಪ ! ಅವರಿಗೇನೇ ತಮ್ಮ ಬಡದೇಹದ ಲಕ್ಷಣ ಹೇಗಿದೆಯೆಂಬುದು ಗೊತ್ತು. ಅಂತೆಯೇ ಮೈತೆರೆದು ಓಡಾಡಲು ನಾಚಿಕೆ. ಯಾವಾಗಲೂ ಮೈತುಂಬ ಬಟ್ಟೆಯು ಇದ್ದೇ ಇರಬೇಕು. ಊಟದ ಕಾಲದಲ್ಲಿ ಕೂಡ ತೆಗೆಯಲು ನಾಚಿಕೆ. ಹೆಣ್ಣುಮಕ್ಕಳು ನೋಡಿ ಎಲ್ಲಿ ನಗುವರೋ ಎಂಬ ಯೋಚನೆ ಕೆಲವರಿಗೆ !

ಕಾಯಪುಷ್ಟನಾದ ತರುಣನ ಕಳೆಯೇ ಬೇರೆ. ಆತನ ಉತ್ಸಾಹ ಸಾಹಸಗಳ ಮಾತೇ ಬೇರೆ. ಆತನು ಬರಿಮೈಯಲ್ಲಿದ್ದರೂ ಚಂದ ; ಬಟ್ಟೆ ಹಾಕಿಕೊಂಡರೂ ಚಂದ. ಎಲ್ಲ ಅವಯವಗಳೂ ಸರಿಯಾಗಿ ಬಲಿತು ಕಳೆ ತುಂಬಿರುತ್ತವೆ. ಮುಖದ ಮೇಲೆ ರಕ್ತ ಚಿಮ್ಮುತ್ತಿರುತ್ತದೆ. ಬಡಕನಿಗೆ ಗುಡ್ಡದಂತೆ ತೋರುವ ಕಾರ್ಯ ಈತನಿಗೆ ಕಡ್ಡಿಯಂತೆ ಕಾಣುತ್ತಿರುತ್ತದೆ.

ಆದುದರಿಂದ ಕಾರ್ಯಸಾಧಕರು ಬಲಶಾಲಿಗಳಾಗಿರಬೇಕಾದುದು ಅತ್ಯಗತ್ಯ. ಈ ದೇಹಬಲವನ್ನು ಯೌವನ ಕಾಲದಲ್ಲಿ ಹೆಚ್ಚಿಸಿಕೊಳ್ಳಲು ಈ ಕೆಳಗಿನ ಸಂಗತಿಗಳನ್ನು ಚೆನ್ನಾಗಿ ಲಕ್ಷಿಸಬೇಕು.

ವೀರ್ಯವು ಬಲಕ್ಕೆ ಬಹು ಮುಖ್ಯವಾದುದು. ಅದನ್ನು ಬಹು ಪ್ರಯತ್ನ ಪೂರ್ವಕವಾಗಿ ರಕ್ಷಿಸಿಕೊಳ್ಳಬೇಕು. ವೀರ್ಯನಾಶವಾಗುವಂತಹ ಯಾವ ದುರಭ್ಯಾಸಗಳಿಗೂ ಒಳಗಾಗಬಾರದು. ನಮ್ಮ ನಾಡಿನ ಕಡುಗಲಿ ಹನುಮಂತನು ವಜ್ರದೇಹಿಯಾಗಿದ್ದನೆಂದು ಹೇಳುವುದೇಕೆ ? ಆತನು ನೈಷ್ಠಿಕ

ಬ್ರಹ್ಮಚಾರಿಯಾಗಿದ್ದನು. ಆತನು ಪ್ರಾಣದೇವರೆಂದು ಕರೆಯಲ್ಪಡುತ್ತಿದ್ದಾನಷ್ಟೆ. ಆ ಮಾತು ಸತ್ಯ.

ವೀರ್ಯವೇ ಪ್ರಾಣಕ್ಕೆ ಮೂಲ. ವೀರ್ಯರಕ್ಷಣೆಯೇ ಜೀವಿತ ; ವೀರ್ಯನಾಶವೇ ಮರಣ. ಆ ವೀರಹನುಮನು ವೀರ್ಯಶಾಲಿಯಾಗಿದ್ದುದರಿಂದಲೇ ಪ್ರಾಣದೇವರೆಂದು ಹೇಳಿದುದು. ಪ್ರತಿಯೊಂದು ಊರಮುಂದೆ ಆತನ ಪ್ರತಿಮೆಯನ್ನು ಇಟ್ಟಿದು ಕೂಡ ಎಲ್ಲರೂ ಆತನ ಬಲವನ್ನು ನೆನಸಿಕೊಂಡು ವೀರ್ಯರಕ್ಷಕರಾಗಲೆಂದು. ಶನಿವಾರ ಹನುಮಪ್ಪನ ಪೂಜಿಸಿದರೆ ತನಿಕಾಟ ಹೋಗುತ್ತದೆಂದರೆ ಹನುಮಂತನಂತೆ ವೀರ್ಯರಕ್ಷಿಸಿಕೊಂಡರೆ ಎಲ್ಲ ನಿರ್ಬಲಗಳ ಕಾಟವೂ ದೂರಾಗುತ್ತದೆಂದು.

ಬೀಡಿ, ಸಿಗರೇಟು, ಚಹಾ, ಕಾಫಿ ಇವುಗಳ ಚಟವು ಈಗ ವಿಪರೀತ. ಇವುಗಳಿಗೆ ಸಿಕ್ಕಿಕೊಳ್ಳದಿರುವವರೇ ಅಪರೂಪ. ವೀರ್ಯನಾಶಕ್ಕೆ ಇವು ಬಹುಮಟ್ಟಿಗೆ ಕಾರಣವಾಗಿವೆಯೆಂದೇ ವೈದ್ಯರೂ, ಡಾಕ್ಟರರೂ ಸಾರಿ ಸಾರಿ ಹೇಳುತ್ತಿದ್ದಾರೆ. ಆದುದರಿಂದ ದೇಹಬಲ ಹೊಂದಬೇಕೆಂಬುವರು ಇವುಗಳನ್ನು ಉಪಯೋಗಿಸಬಾರದು.

ಮೈಬೆವರು ಬರುವಂತೆ ಪ್ರತಿನಿತ್ಯ ಆಸನ. ವ್ಯಾಯಾಮಗಳನ್ನು ಮಾಡಲೇಬೇಕು. ವ್ಯಾಯಾಮಶಾಲೆಗಳಿಗೆ ಹೋಗಿ ನಿಯಮಬದ್ಧವಾಗಿ ವ್ಯಾಯಾಮ ಮಾಡಿ ದೇಹವನ್ನು ಚೆನ್ನಾಗಿ ಬಲಿಸಬೇಕು. ಹೀಗೆ ಎಲ್ಲ ರೀತಿಗಳಿಂದ ತರುಣರು ಶಾರೀರಿಕ ಶಕ್ತಿಯನ್ನು ಹೊಂದುವುದು ಅವರ ಮೊದಲನೆಯ ಕರ್ತವ್ಯ. ಯೌವನ ಕಾಲದಲ್ಲಿ ಬಲಹೀನರಾಗಿರುವುದೊಂದು ಪಾಪ, ಇದೊಂದು ಪ್ರಕೃತಿಯ ಶಾಪ ; ಜೀವಿತಕ್ಕೇನೇ ಬಹುತಾಪ. ಇದೇನೋ ಮಾತಿನ ಜೋಡಣೆಯಲ್ಲ. ಪಶುಗಳನ್ನು ನೋಡಿದರೆ ಈ ಮಾತಿನ ಸತ್ಯತೆಯು ಸ್ಪಷ್ಟವಾಗುವುದು.

ಎತ್ತು, ಆಕಳು, ಎಮ್ಮೆ, ಕೋಣ, ಕುದುರೆ ಮೊದಲಾದ ಪಶುಗಳು ಪ್ರಾಯದಲ್ಲಿ ಹೇಗಿರುತ್ತವೆ? ಅವುಗಳ ಹುಮ್ಮಸವೆಷ್ಟು ? ಅವು ಹೇಗೆ ಗಟ್ಟಿಮುಟ್ಟಾಗಿರುತ್ತವೆ? ಅಸಂಖ್ಯ ತರುಣ ತರುಣಿಯರಂತೆ ಪ್ರಕೃತಿಯ ಶಾಪಕ್ಕೇನಾದರೂ ಅವು ಒಳಗಾಗಿರುತ್ತವೆಯೇ ? ಮನುಷ್ಯನ ನೆಳಲನ್ನೇ ನೋಡದ ಅಡವಿಯ ಪಶುಗಳಂತೂ ಪ್ರಕೃತಿಯ ಕೃಪೆಯಿಂದ ಯಾವ

ಪಾಪ-ಶಾಪಗಳಿಗೂ ಒಳಗಾಗದೆ ಮತ್ತು ಅಸಂಖ್ಯ ಮನುಷ್ಯರಂತೆ ನಾನಾ ರೋಗಗಳ ತಾಪಗಳಿಂದ ಬಳಲದೆ ದೇಹಸೌಖ್ಯವನ್ನು ಹೊಂದುತ್ತಿವೆಯಲ್ಲವೆ?

ಎಲ್ಲ ಪ್ರಾಣಿಗಳಿಗಿಂತ ಶ್ರೇಷ್ಠನೆಂದು ಹೇಳಿಕೊಳ್ಳುವ ಮನುಷ್ಯನು ಆ ಪಶುಗಳಂತೆಯಾದರೂ ತನ್ನ ದೇಹಶಕ್ತಿಯನ್ನು ಸಂಪಾದಿಸದೆ ಮತ್ತು ಸಂರಕ್ಷಿಸಿಕೊಳ್ಳದೆ ಇರುವುದು ನಾಚಿಕೆಯ ಸಂಗತಿಯಲ್ಲವೆ? ಪಾಪದ ಲಕ್ಷಣ ವಲ್ಲವೆ? ಅಂತೆಯೇ ನಮ್ಮ ತರುಣರು ಈ ಶಾಪಕ್ಕೊಳಗಾಗಬಾರದು ದೃಢ ಕಾಯರೂ ಶಕ್ತಿಯುತರೂ ಆಗಬೇಕು.

ಮನುಷ್ಯನಿಗೆ ದೇಹಶಕ್ತಿಯೊಂದೇ ಸಾಲದು. ಅದೊಂದೇ ಇದ್ದರೆ ಜೀವನದ ಹೋರಾಟದಲ್ಲಿ ಜಯಶಾಲಿಯಾಗುವುದಿಲ್ಲ. ತನ್ನ ಜೀವಿತದ ಗುರಿ ಯನ್ನು ಮುಟ್ಟಲಿಕ್ಕಾಗುವುದಿಲ್ಲ. ಬುದ್ಧಿಶಕ್ತಿಯು ಬೇಕೇಬೇಕು. ಮನುಷ್ಯತ್ವವನ್ನು ತಂದುಕೊಡಲು ಬುದ್ಧಿಶಕ್ತಿಯೇ ಬಹು ಮುಖ್ಯವಾದ ಸಾಧನವಾಗಿದೆ. ಬುದ್ಧಿಹೀನರು ಬುದ್ಧಿವಂತರ ಬಲೆಯಲ್ಲಿ ಬಿದ್ದು ಬಳಲ ಬೇಕಾಗುವುದು. ಆದಕಾರಣ ಬುದ್ಧಿಶಕ್ತಿಯನ್ನೂ ಪ್ರಯತ್ನಪೂರ್ವಕವಾಗಿ ಸಂಪಾದಿಸಿಕೊಳ್ಳಲೇಬೇಕು.

ಬುದ್ಧಿಶಕ್ತಿಯನ್ನು ಹೊಂದಲು ನಾನಾ ವಿದ್ಯೆಗಳು ಮುಖ್ಯಸಾಧನ ಗಳಾಗಿವೆ. ವಿದ್ಯೆಯು ಬುದ್ಧಿಯನ್ನು ಬೆಳೆಯಿಸುವುದು. ಆದಕಾರಣ ವಿದ್ಯಾ ಭ್ಯಾಸವು ಮನುಷ್ಯನಿಗೆ ಬಹು ಅಗತ್ಯವಾದುದು. ದೇಹಶಕ್ತಿಯನ್ನು ಹೊಂದಲು ಹೇಗೆ ಯೌವನ ಕಾಲವು ಬಹು ಅನುಕೂಲವಾದುದೋ ಹಾಗೆಯೇ ಬುದ್ಧಿಶಕ್ತಿಗೆ ಮೂಲವಾದ ವಿದ್ಯಾಭ್ಯಾಸಕ್ಕೂ ಯೌವನ ಕಾಲವೇ ಹೆಚ್ಚು ಅನುಕೂಲ. ಬಾಲ್ಯ, ಕೌಮಾರ್ಯ ಮತ್ತು ಯೌವನಗಳು ವಿದ್ಯಾಭ್ಯಾಸದ ಉಗಮ ವಿಕಾಸಗಳಿಗೆ ಮೀಸಲಾಗಿರುವ ಕಾಲ. ಐದರಿಂದ ಇಪ್ಪತ್ತೈದು ವರುಷಗಳವರೆಗೆ ವಿವಿಧ ವಿದ್ಯೆಗಳನ್ನು ಅವರವರ ಪ್ರವೃತ್ತಿಗನುಗುಣವಾಗಿ ಕಲಿಯಲೇಬೇಕು. ಈ ಇಪ್ಪತ್ತು ವರುಷಗಳು ವಿದ್ಯಾರ್ಜನೆಯ ಮುಖ್ಯ ಕಾಲ; ಇದೊಂದು ತಪಸ್ಸಿನ ಕಾಲ. ಸರಸ್ವತೀ ದೇವಿಯನ್ನು ಏಕನಿಷ್ಠೆ ಯಿಂದ ಆರಾಧಿಸುವ ಪುಣ್ಯಕಾಲ!

ಈ ಪವಿತ್ರಕಾಲವನ್ನು ಯಾರೂ ವ್ಯರ್ಥ ಕಳೆದುಕೊಳ್ಳಬಾರದು. ತಮ್ಮ ಮುಂದಿನ ಜೀವಿತಕ್ಕೆ ಬಹುಮುಖ್ಯವಾಗಿರುವ ವಿದ್ಯೆಯನ್ನು ಕಲಿಯುವುದ

ರಲ್ಲಿಯೇ ಆಸಕ್ತರಾಗಿರಬೇಕು. ಎಲ್ಲರೂ ಎಲ್ಲ ವಿದ್ಯೆಗಳನ್ನು ಕಲಿಯಬೇಕೆಂದು ಹಂಬಲಿಸಬಾರದು. ತಮ್ಮ ಅಭಿರುಚಿ ಮತ್ತು ಬುದ್ಧಿಯ ಪ್ರವೃತ್ತಿಗಳನ್ನು ನೋಡಿ ವಿದ್ಯಾಭ್ಯಾಸವನ್ನು ಮುಂದುವರಿಸಬೇಕು.

ಎಲ್ಲರಿಗೂ ಎಲ್ಲ ಆಹಾರಗಳೂ ಆರೋಗ್ಯಕರವಾಗಿಯೆ ಹೇಗೆ ಇರುವುದಿಲ್ಲವೋ ಮತ್ತು ಎಲ್ಲರಿಗೂ ಎಲ್ಲತರದ ಉಡುಪುಗಳೂ ಹೇಗೆ ಚಂದ ಕಾಣುವುದಿಲ್ಲವೋ ಹಾಗೆಯೇ ಎಲ್ಲತರದ ವಿದ್ಯೆಗಳೂ ಎಲ್ಲರಿಗೂ ಬರುವುದಿಲ್ಲ. ಒಬ್ಬರಿಗೆ ನ್ಯಾಯಶಾಸ್ತ್ರದ ಮೇಲೆ ಪ್ರೇಮವಿರಬಹುದು. ಇನ್ನೊಬ್ಬರಿಗೆ ವೈದ್ಯಶಾಸ್ತ್ರ ರುಚಿಸಬಹುದು. ಮತ್ತೊಬ್ಬರಿಗೆ ಸಂಗೀತಶಾಸ್ತ್ರದ ಗತಿಯಿರಬಹುದು. ಮಗುದೊಬ್ಬರಿಗೆ ಚಿತ್ರಕಲೆಯೊ ; ಕೈಗಾರಿಕೆಯೋ ಇಷ್ಟವಾಗಿರಬಹುದು. ಆದುದರಿಂದ ತಮ್ಮ ಪ್ರವೃತ್ತಿಗೆ ಸರಿಹೋಗುವ ವಿದ್ಯೆಯನ್ನೇ ಕಲಿಯಬೇಕಲ್ಲದೆ ಒಬ್ಬರನ್ನು ನೋಡಿ ಅವರಂತೆ ತಾನೂ ಅದೇ ವಿದ್ಯೆಯಲ್ಲಿ ಪಾರಂಗತನಾಗಬೇಕೆಂದು ತನಗೆ ಸರಿಹೋಗದ ವಿದ್ಯಾಭ್ಯಾಸಕ್ಕಾಗಿ ಸಾಹಸಪಡಬಾರದು.

ತನ್ನ ವಿದ್ಯಾಭ್ಯಾಸಕ್ಕೆ ಅನುಕೂಲವಾದ ಯಾವ ಸಂಗತಿಯಾದರೂ ಅದು ಎಷ್ಟೇ ಸಣ್ಣದಿದ್ದರೂ ಅದನ್ನು ಸಂಗ್ರಹಿಸಲು ಉಪೇಕ್ಷಿಸಬಾರದು. ಕೃಪಣನು ಹೇಗೆ ಕಾಸು ಕಾಸು ಕೂಡಿಸುವುದರಲ್ಲಿಯೇ ಆಸಕ್ತನಾಗಿರುತ್ತಾನೆಯೋ ಮತ್ತು ಜೇನುನೊಣವು ಸಣ್ಣ ಸಣ್ಣ ಹೂಗಳಲ್ಲಿಯ ಅತ್ಯಲ್ಪ ರಸವನ್ನು ಕೂಡ ಹೇಗೆ ಕೂಡಿಹಾಕುತ್ತಿರುತ್ತದೆಯೋ ಹಾಗೆಯೇ ವಿದ್ಯಾರ್ಥಿಯು ವಿದ್ಯೆಯನ್ನು ಆಸಕ್ತಿಯಿಂದಲೂ ಅಭಿರುಚಿಯಿಂದಲೂ ಸಂಗ್ರಹಿಸಬೇಕು.

ವಿದ್ಯಾಭ್ಯಾಸಿಯು ಆಹಾರ-ವಿಹಾರಗಳ ಸುಖವನ್ನೇ ಅಪೇಕ್ಷಿಸಬಾರದು. ಹಣದ ವಿನಿಯೋಗದಲ್ಲಿ ಬಹು ಜಾಗರೂಕನಾಗಿರಬೇಕು. ಪಾಲಕರು ವಿದ್ಯಾಭ್ಯಾಸಕ್ಕೋಸುಗ ಕೊಡುವ ಹಣವನ್ನು ಬಹುಮಿತವಾಗಿ ವ್ಯಯಮಾಡಬೇಕು. ಈಗಿನ ಬಹುಜನ ಪ್ರೌಢವಿದ್ಯಾರ್ಥಿಗಳಲ್ಲಿ ಈ ಗುಣವೇ ಇರುವುದಿಲ್ಲ. ಇದೊಂದು ದೊಡ್ಡ ದೋಷ. ವಿದ್ಯಾರ್ಜನೆಯ ಕಾಲವು ಅವರಿಗೆ ದುಂದುಗಾರಿಕೆಯ ಕಾಲವಾಗಿ ಪರಿಣಮಿಸಿದೆ. ಇದರಿಂದ ಅವರ ಜೀವನಕ್ಕೆ ಮುಂದೆ ಹೆಚ್ಚಾದ ತೊಂದರೆಗಳೇ ಉಂಟಾಗುತ್ತಿರುವ ಈ ದುರಭ್ಯಾಸಕ್ಕೆ ಯಾರೂ ಒಳಗಾಗಬಾರದು.

ವಿದ್ಯಾರ್ಥಿಯು ವಿದ್ಯಾರ್ಜನೆಯ ಚಟುವಟಿಕೆಗಳಲ್ಲಿ ಸೇರಬಹುದೇವಿನಾ

ಬೇರೆ ರಾಜಕೀಯ, ಸಾಮಾಜಿಕ ಚಟುವಟಿಕೆಗಳಲ್ಲಿ ಸೇರಬಾರದು. ಅವು ವಿದ್ಯಾರ್ಜನೆಯ ಏಕನಿಷ್ಠೆಗೆ ಬಾಧಕವಾಗಿ ಪರಿಣಮಿಸುತ್ತವೆ. ಒಂದು ಕಾಲದಲ್ಲಿ ಒಂದೇ ಕೆಲಸವನ್ನು ಮಾಡುವುದು ಒಳ್ಳೆಯದು.

ಬುದ್ಧಿಶಕ್ತಿಯನ್ನು ಬೆಳೆಯಿಸಿಕೊಳ್ಳಲು ಮೀಸಲಾಗಿರುವ ವಿದ್ಯಾರ್ಜನೆಯ ಈ ಕಾಲವನ್ನು ಅದೇ ಕಾರ್ಯದಲ್ಲಿ ವಿನಿಯೋಗಿಸಬೇಕು. ಹಾಗೆ ಮಾಡದೆ ತಾತ್ಕಾಲಿಕವಾದ ಆವೇಶ ಆಡಂಬರಗಳಿಗೆ ಮನಸೋತು ಸಾರ್ವಜನಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಯು ಸೇರಿದರೆ ವಿದ್ಯಾಭ್ಯಾಸವು ತೃಪ್ತಿಕರವಾಗಿ ಸಾಗದೆ ಜೀವನದ ತನ್ನ ಗುರಿಯನ್ನು ಸಾಧಿಸಲು ಮುಂದೆ ಅಸಮರ್ಥನಾಗುವನು. ಈ ಕಾಲದ ಪ್ರೌಢವಿದ್ಯಾರ್ಥಿಗಳು ಈ ವಿಷಯವನ್ನೂ ಲಕ್ಷಿಸುವುದು ಅತ್ಯಗತ್ಯವಾಗಿದೆ.

ಹೀಗೆ ಬುದ್ಧಿಶಕ್ತಿಯನ್ನು ಸಂಪಾದಿಸಲಿರುವ ಅನುಕೂಲ ಮತ್ತು ಪ್ರತಿಕೂಲ ಸ್ಥಿತಿಗಳನ್ನು ಚೆನ್ನಾಗಿ ಅರಿತುಕೊಂಡು ಅನುಭವಿಕರ ಸಲಹೆ-ಸೂಚನೆಗಳನ್ನು ಲಕ್ಷಿಸಿ ಕ್ಷೇಮಕರವಾದ ರೀತಿಯಲ್ಲಿ ನಡೆಯಬೇಕು.

ಮನುಷ್ಯನಿಗೆ ದೇಹಶಕ್ತಿ ಮತ್ತು ಬುದ್ಧಿಶಕ್ತಿಗಳು ಎಷ್ಟು ಅಗತ್ಯವಾಗಿವೆಯೋ ಅಷ್ಟೇ ಮಾನಸಿಕ ಶಕ್ತಿಯೂ ಅಗತ್ಯವಾಗಿದೆ. ಅಷ್ಟೇ ಅಲ್ಲ ಅದೊಂದಿಲ್ಲದಿದ್ದರೆ ಈ ಎರಡೂ ಶಕ್ತಿಗಳ ಪ್ರಯೋಜನವು ಎಷ್ಟು ಆಗಬೇಕೊ ಅಷ್ಟು ಆಗುವುದೇ ಇಲ್ಲ.

ದೇಹಶಕ್ತಿಯ ಉಪಯೋಗ ಮತ್ತು ಪ್ರಯೋಜನಗಳು ಜನಸಾಮಾನ್ಯಕ್ಕೆ ಜಾಗ್ರತೆ ಗೊತ್ತಾಗುವಂತೆ ಬುದ್ಧಿಶಕ್ತಿಯೆಂದರೇನು ? ಅದರ ಅಗತ್ಯವು ಎಷ್ಟಿದೆ ? ಎಂಬಂಶಗಳು ಗೊತ್ತಾಗುವುದಿಲ್ಲ. ಅಂತೆಯೇ ಬುದ್ಧಿಶಕ್ತಿಯ ಮಹತ್ವವೇ ಬಹುಜನರಿಗೆ ತಿಳಿಯದೇ ಇರುವಾಗ ಮಾನಸಿಕ ಶಕ್ತಿಯ ಮಾತಂತೂ ಬಹುದೂರ ಉಳಿಯಿತು. ಮಾನಸಿಕ ಶಕ್ತಿಯ ಮಹತ್ವವು ವಿದ್ಯೆಯನ್ನು ಕಲಿತವರಲ್ಲಿ ಕೂಡ ಬಹುಜನರಿಗೆ ಗೊತ್ತಿಲ್ಲವೆಂದೇ ಹೇಳಬಹುದು. ಎಂದಮೇಲೆ ಅದನ್ನು ಹೊಂದಲು ಪ್ರಯತ್ನಿಸುತ್ತಿರುವವರು ಈ ಕಾಲದಲ್ಲಿ ಬಹುವಿರಳವೆಂದು ಹೇಳಬೇಕಾದುದೇ ಇಲ್ಲವಷ್ಟೆ.

ದೇಹಕ್ಕಿಂತ ಬುದ್ಧಿ ಸೂಕ್ಷ್ಮವಾದುದು. ಬುದ್ಧಿಗಿಂತ ಮನಸ್ಸು ಸೂಕ್ಷ್ಮವಾದುದು. ಇದೇ ಪ್ರಕಾರ ದೇಹಶಕ್ತಿಗಿಂತ ಬುದ್ಧಿಶಕ್ತಿ ಹೆಚ್ಚಿನದು. ಬುದ್ಧಿ

ಶಕ್ತಿಗಿಂತ ಮನಸ್ಸಿನ ಶಕ್ತಿಯು ಶ್ರೇಷ್ಠವಾದುದು. ಆದುದರಿಂದ ಮನುಷ್ಯನ ಉನ್ನತಿಗೆ ದೇಹಶಕ್ತಿ ಮತ್ತು ಬುದ್ಧಿಶಕ್ತಿಗಳಿಗಿಂತ ಮಾನಸಿಕಶಕ್ತಿಯು ಹೆಚ್ಚು ಅಗತ್ಯವಾದುದಾಗಿದೆ. ಅಂತೆಯೇ ಮನುಷ್ಯನ ಎಲ್ಲ ಸುಖದುಃಖಗಳಿಗೂ ಮನಸ್ಸೇ ಕಾರಣವಾಗಿದೆ ಎಂದು ಜ್ಞಾನಿಗಳು ಹೇಳುತ್ತಿದ್ದಾರೆ. ಮನುಷ್ಯನ ಬಾಳುವೆಗೆ ಇಷ್ಟು ಮಹತ್ವವಾಗಿರುವ ಮಾನಸಿಕಶಕ್ತಿಯನ್ನು ಕುರಿತು ತರುಣರು ತಿಳಿದುಕೊಳ್ಳುವುದು ಅಗತ್ಯವಾಗಿಲ್ಲವೆ?

ಒಂದು ಕೆಲಸವು ಹಿತಕರವೆಂದೂ ಅದನ್ನು ತಾವು ಮಾಡಬೇಕೆಂದೂ ನಮ್ಮ ಬುದ್ಧಿಯು ನಮಗೆ ಹೇಳುತ್ತದೆಂದು ತಿಳಿಯೋಣ. ಆಗ ಅದನ್ನು ಮಾಡಲು ನಮ್ಮ ಮನಸ್ಸು ಸಿದ್ಧವಾದರೆ ಮಾತ್ರ ದೇಹವು ಮುಂದುವರಿದು ಮಾಡುವುದು. ದೇಹದಲ್ಲಿ ಎಷ್ಟೇ ಶಕ್ತಿಯಿದ್ದರೂ ಮನಸ್ಸೇ ಉತ್ಸಾಹಗೊಳ್ಳದಿದ್ದರೆ ಆ ಕಾರ್ಯ ಜರುಗುವುದೇ ಇಲ್ಲ. ಆಗ ದೇಹ ಮತ್ತು ಬುದ್ಧಿಶಕ್ತಿಗಳಿದ್ದರೂ ಅವುಗಳ ಪ್ರಯೋಜನವಾದರೂ ಆಗುವುದೆ?

ಹಿತಕರವೆಂದು ತೋರಿದ ಕೆಲಸವನ್ನು ಮಾಡಲಿಕ್ಕೂ ಅಹಿತಕರವೆಂದು ಗೊತ್ತಾದ ಕೆಲಸವನ್ನು ಬಿಡಲಿಕ್ಕೂ ಮನಸ್ಸು ಸಿದ್ಧವಾಗುವಂತೆ ಅದಕ್ಕೆ ಶಿಕ್ಷಣವನ್ನು ಕೊಡುವುದೇ ಮಾನಸಿಕಶಕ್ತಿಯನ್ನು ಬೆಳೆಸುವ ರೀತಿಯು. ಸತ್ಕಾರ್ಯ ಪ್ರವೃತ್ತಿ ಮತ್ತು ದುಷ್ಕಾರ್ಯ ನಿವೃತ್ತಿಯೇ ಮಾನಸಿಕಶಕ್ತಿಯ ಲಕ್ಷಣ; ಇದೇ ನೈತಿಕ ಬಲ. ಯಾರ ಮನಸ್ಸು ಹೀಗಿಲ್ಲವೋ ಅವರಲ್ಲಿ ಮಾನಸಿಕಶಕ್ತಿ ಅಥವಾ ನೈತಿಕ ಬಲವಿಲ್ಲವೆಂದೇ ತಿಳಿಯಬೇಕು.

ಸುಳ್ಳು, ಕಳವು, ಹಿಂಸೆ, ವ್ಯಭಿಚಾರ, ಮೋಸ ಇವುಗಳೆಲ್ಲ ಕೇಡನ್ನೇ ಉಂಟುಮಾಡುವವೆಂದು ಯಾರಿಗೆ ತಾನೇ ಗೊತ್ತಿಲ್ಲ? ಆದರೆ ಇವುಗಳನ್ನು ಬಿಟ್ಟ ಜನರು ಬಹುವಿರಳವಲ್ಲವೆ?

ಬುದ್ಧಿಯು ಇಂಥ ಕೆಟ್ಟ ಕೆಲಸಗಳನ್ನು ಮಾಡಕೂಡದೆಂದು ಹೇಳಿದರೂ ಅವುಗಳ ಕಡೆಗೆ ಹೋಗುವ ಮನಸ್ಸಿನ ಪ್ರವೃತ್ತಿಯನ್ನು (ಓಟವನ್ನು) ತಡೆಯದಿದ್ದಾಗ ಮನುಷ್ಯನು ಅವುಗಳನ್ನು ಮಾಡುತ್ತಾನೆ. ಒಬ್ಬನು ಒಂದು ಕೆಟ್ಟ ಕೆಲಸವನ್ನು ಮಾಡದಿರುವುದಕ್ಕೂ ಇನ್ನೊಬ್ಬನು ಮಾಡುವುದಕ್ಕೂ ಅವರವರ ಮಾನಸಿಕ ಬಲಾಬಲಗಳೇ ಕಾರಣವಾಗಿವೆ. ಈ ಮಾನಸಿಕಶಕ್ತಿ ಅಥವಾ ನೈತಿಕ ಸಾಮರ್ಥ್ಯವಿಲ್ಲದಿರುವುದರಿಂದಲೇ ಮನುಷ್ಯನ ಬಾಳು ಅನೇಕ ಸಂಗತಿ

ಗಳಲ್ಲಿ ಬಹುಕೀಳಾಗಿಯೂ ಯಾತನೆಗಳಿಂದ ಕೂಡಿದ್ದಾಗಿಯೂ ಪರಿಣಮಿಸಿದೆ. ಮತ್ತು ಪೋಲಿಸ್, ಜೈಲು, ಶೂಲಗಳನು ಹೆಚ್ಚಿವೆ.

ಸದ್ವಿಷಯಗಳ ಕಡೆಗೆ ಹೋಗುವ ನಮ್ಮ ಮನಸ್ಸು ನಮಗೆ ಎಷ್ಟು ಹಿತವನ್ನು ಮಾಡುವುದೋ ಅಷ್ಟು ಹಿತವನ್ನು ಪ್ರಪಂಚದಲ್ಲಿ ನಮಗೆ ಯಾವ ಹಿತಚಿಂತಕರೂ ಮಾಡಲಾರರು. ಮತ್ತು ದುರ್ವಿಷಯಗಳ ಕಡೆಗೆ ಹೋಗುವ ನಮ್ಮ ಮನಸ್ಸು ನಮಗೆ ಎಷ್ಟು ಅಹಿತವನ್ನು ಮಾಡುವುದೋ ಅಷ್ಟು ಕೇಡನ್ನು ನಮಗೆ ಯಾವ ವೈರಿಯೂ ಮಾಡಲಾರನು. ಅಂತೆಯೇ ನಮ್ಮ ಮನಸ್ಸೇ ನಮಗೆ ಮಿತ್ರನೂ ಅಹುದು ಮತ್ತು ಶತ್ರುವೂ ಅಹುದು. ಆರಂಭ ದಿಂದಲೂ ಅದಕ್ಕೆ ಒಳ್ಳೆಯ ಶಿಕ್ಷಣವನ್ನು ಕೊಟ್ಟರೆ ಬಲಶಾಲಿಯಾಗಿ ನಮ್ಮ ಉನ್ನತಿಗೆ ಕಾರಣವಾಗುತ್ತದೆ. ಇಲ್ಲದಿದ್ದರೆ ನಿರ್ಬಲವಾಗಿ ನಮ್ಮನ್ನು ನಾಶ ಮಾಡುತ್ತದೆ.

ಈಗಿನ ಕಾಲದಲ್ಲಿ ಬುದ್ಧಿಯ ಬೆಳವಣಿಗೆಗೆ ವಿವಿಧ ಶಿಕ್ಷಣಗಳು ಕೊಡಲ್ಪಡುತ್ತಲಿವೆಯೇ ವಿನಾ ಮಾನಸಿಕ ಶಕ್ತಿಯನ್ನು ಹೆಚ್ಚಿಸುವ ನೈತಿಕ ಶಿಕ್ಷಣವು ತಾಯಿ ತಂದೆಗಳಿಂದಾಗಲಿ ಶಿಕ್ಷಣ ಸಂಸ್ಥೆಗಳಿಂದಾಗಲಿ ಸರಿಯಾಗಿ ಕೊಡಲ್ಪಡುತ್ತಾ ಇಲ್ಲ. ಬುದ್ಧಿಬಲಕ್ಕೇನೇ ಈಗ ಮನ್ನಣೆಯಿದೆಯೇ ವಿನಾ ನೈತಿಕ ಬಲಕ್ಕೆ ಅಷ್ಟು ಮಾನ್ಯತೆಯಿಲ್ಲ. ಎಷ್ಟೇ ಅನೀತಿಯಿಂದ ನಡೆದರೂ ಬುದ್ಧಿಶಾಲಿಯಾಗಿದ್ದರೆ ಆತನನ್ನು ಈಗ ಗೌರವಿಸುವುದುಂಟು.

ಪ್ರಾಚೀನ ಕಾಲದ ಜನರು ನೈತಿಕ ಬಲಕ್ಕೇನೇ ಮಹತ್ವವನ್ನು ಕೊಡುತ್ತಿದ್ದರು. ಬುದ್ಧಿಶಕ್ತಿಯು ಮನೋನಿಗ್ರಹ ಅಥವಾ ಆತ್ಮಸಂಯಮನಕ್ಕೆ ಸಾಧನವಾಗಬೇಕೆಂಬುದೇ ಅವರ ಉದ್ದೇಶವಾಗಿದ್ದಿತು. ಈಗ ಮಾನಸಿಕಶಕ್ತಿ ಅಥವಾ ಮನೋನಿಗ್ರಹ ಇಲ್ಲವೆ ಆತ್ಮಸಂಯಮನವೆಂಬುದು ಧಾರ್ಮಿಕ ಮೂಢಕಲ್ಪನೆಯ ಲಕ್ಷಣವೆಂದು ತಿಳಿಯುವ ಸುಶಿಕ್ಷಿತರೇ ಹೆಚ್ಚು. ಇದು ಸರಿಯಾದ ತಿಳಿವಳಿಕೆಯಲ್ಲ. ಈಗಿನ ಶಿಕ್ಷಣದಲ್ಲಿರುವ ದೋಷದಿಂದಲೇ ಇಂಥ ವಿಚಾರ ಪ್ರಸಾರವಾಗುತ್ತಲಿದೆ. ಮನುಷ್ಯನು ತನ್ನ ನಡೆನುಡಿಗಳಲ್ಲಿ ನಿಗ್ರಹ ಮಾಡಿಲ್ಲದಿದ್ದರೆ ಅನೇಕ ವಿಪತ್ತುಗಳಿಗೀಡಾಗುತ್ತಾನೆ.

ಇಂಥ ನಿಗ್ರಹ ಅಥವಾ ಆತ್ಮಸಂಯಮನವು ನೈತಿಕ ಶಿಕ್ಷಣದಿಂದಲೇ ಉಂಟಾಗುತ್ತದೆ. ನೈತಿಕ ಶಿಕ್ಷಣವೇ ಎಲ್ಲ ಶಿಕ್ಷಣಗಳಗಿಂತ ಹೆಚ್ಚಿನದೆಂದು

ಎಣಿಸಲ್ಪಡಬೇಕು. ಆದರೆ ಈಗ ಅದು ಎಲ್ಲಕ್ಕಿಂತಲೂ ಕೀಳಾಗಿ ಕಾಣಲ್ಪಡು
ತ್ತದೆ. ಅಂತೆಯೇ ಪ್ರಪಂಚವು ಅನೇಕ ವಿಪತ್ತುಗಳಿಂದ ಬಳಲುತ್ತದೆ. ಯಾವ
ಕುಟುಂಬ ಅಥವಾ ಗ್ರಾಮ ಇಲ್ಲವೇ ದೇಶವು ನೀತಿ-ನಿಯಮಗಳನ್ನು
ಉಪೇಕ್ಷಿಸಿ ನಡೆಯುತ್ತಲಿದೆಯೋ ಅದು ಅನೇಕ ಕಷ್ಟ-ನಷ್ಟಗಳಿಂದ ಬಳಲ
ಬೇಕಾಗುವುದು.

ಪ್ರಾಮಾಣಿಕತನವೊಂದು ಜನಾಂಗದಲ್ಲಿ ಕಡಿಮೆಯಾದರೆ ಎಷ್ಟೋ ಕಷ್ಟ
ಪರಂಪರೆಗಳುಂಟಾಗುವುದಿಲ್ಲವೆ? ಕಪಟ, ಮೋಸ, ವ್ಯಭಿಚಾರಗಳನ್ನು ಆಚರಿಸಿ
ಬುದ್ಧಿಶಕ್ತಿಯಿಂದ ಅವು ಜೈಲಿಗೆ ಬರದಂತೆ ಮಾಡುವವರು ಈಗ ಬುದ್ಧಿಶಾಲಿ
ಗಳೆಂದೇ ಗಣಿಸಲ್ಪಡುತ್ತಿದ್ದಾರೆ! ಇಂಥ ಬುದ್ಧಿವಂತರು ಹೆಚ್ಚುತ್ತಿರುವುದ
ರಿಂದಲೇ ಜದಾಂಗವು ಅಶಾಂತಿಯಲ್ಲಿರಬೇಕಾಗಿದೆ. ಈಗಿನ ಈ ವಿಪತ್ತು
ನಿವಾರಣೆಯಾಗಬೇಕಾದರೆ ನೀತಿನಿಯಮಗಳನ್ನು ಪಾಲಿಸಿ, ಮನಸ್ಸಿನ ಶಕ್ತಿ
ಯನ್ನು ಹೆಚ್ಚಿಸಿಕೊಳ್ಳುವ ಪ್ರವೃತ್ತಿಯುಂಟಾಗಬೇಕು. ಚಿಕ್ಕಂದಿನಿಂದಲೇ
ಪಾಲಕರೂ ಶಿಕ್ಷಣಸಂಸ್ಥೆಯವರೂ ಮಕ್ಕಳಿಗೆ ಇಂಥ ಶಿಕ್ಷಣವನ್ನು
ಕೊಡಬೇಕು.

ಉಣ್ಣುವ, ಉಡುವ, ತೊಡುವ, ಇಡುವ, ನೋಡುವ ಮತ್ತು ಕೇಳುವ
ಭೋಗಿಸುವ ಯಾವ ಪದಾರ್ಥವನ್ನೇ ಆಗಲಿ ಮನಸ್ಸು ಅಪೇಕ್ಷಿಸಿದೊಡನೆ
ಅದನ್ನು ಹೊಂದಲು ಪ್ರಯತ್ನಿಸಬಾರದು. ಆ ಮನಸ್ಸಿನ ಓಟವನ್ನು ಆಗ
ತಡೆಯಬೇಕು. ವಿವೇಕಯುಕ್ತರಾಗಿ ಅದರಿಂದಾಗುವ ಹಿತಾಹಿತಗಳೇನೆಂಬು
ದನ್ನು ಯೋಚಿಸಬೇಕು. ಹಿತವೆಂದು ತೋರಿದರೂ ಮಿತವಾಗಿ ಉಪಯೋಗಿಸ
ಬೇಕು. ಅಹಿತವೆಂದು ತೋರಿದರೆ ಸಂಪೂರ್ಣ ಬಿಟ್ಟುಬಿಡಬೇಕು.

ಮನಸ್ಸಿನ ಶಕ್ತಿಯನ್ನು ಬೆಳೆಯಿಸಲು ಮೊದಲು ಹೀಗೆ ಪ್ರಯತ್ನಿಸ
ಬೇಕು. ಕುದುರೆಗೆ ಕಡಿವಾಣವಿರುವಂತೆ, ಹೋರಿಗೆ ಮುಗದಾಣವಿರುವಂತೆ,
ಆನೆಗೆ ಅಂಕುಶವಿರುವಂತೆ ಮನಸ್ಸಿನ ನಿಗ್ರಹಕ್ಕೆ ವಿವೇಕವೆಂಬುದು ಬೇಕೇ
ಬೇಕು. ಆದರಿಂದ ಮನಸ್ಸಿನ ಆತುರತೆಯನ್ನು ತಡೆದಷ್ಟು ಅದರಲ್ಲಿ ಶಕ್ತಿಯು
ಹೆಚ್ಚುತ್ತ ಹೋಗುತ್ತದೆ.

ಒಳ್ಳೆಯ ಕಾರ್ಯವನ್ನು ಮಾಡಿಯೇ ತೀರುವೆನೆಂದೂ ಕೆಟ್ಟಚಾಳಿ
ಅಥವಾ ಕೆಲಸಗಳನ್ನು ಬಿಟ್ಟೇ ಬಿಡುವೆನೆಂದೂ ಛಲವುಳ್ಳವನಾಗಬೇಕು.

ಮನಸ್ಸು ತಡೆಯಲ್ಪಡದೆ ತಪ್ಪುದಾರಿಯಲ್ಲಿ ಹೋದೊಡನೆ ನಿರಾಶರಾಗ ಬಾರದು. ತಪ್ಪಿಗಾಗಿ ಪಶ್ಚಾತ್ತಾಪಪಟ್ಟು ಮತ್ತೆ ಅದನ್ನು ತಡೆಯಲು ಪ್ರಯತ್ನಿಸಬೇಕು. ಹೀಗೆ ಅನೇಕ ಪಶ್ಚಾತ್ತಾಪಗಳ ಏಟಿನಿಂದಲೂ ಮನಸ್ಸಿನ ಶಕ್ತಿಯು ಬೆಳೆಯುತ್ತದೆ.

ದೇಹಶಕ್ತಿಯನ್ನು ಬೆಳೆಯಿಸಲು ಹೇಗೆ ಆಹಾರವನ್ನು ತೆಗೆದುಕೊಳ್ಳ ಬೇಕಾಗಿದೆಯೋ, ಬುದ್ಧಿಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಹೇಗೆ ವಿದ್ಯೆಯನ್ನು ಕಲಿಯಬೇಕಾಗಿದೆಯೋ, ಹಾಗೆಯೇ ಮನಸ್ಸಿನ ಶಕ್ತಿಯನ್ನು ಬೆಳೆಯಿಸಿ ಕೊಳ್ಳಲು ಸಜ್ಜನರ ಸಹವಾಸವು ಬೇಕು. ನೀತಿವಂತರ ಸಹವಾಸದಲ್ಲಿ ಪ್ರತಿನಿತ್ಯ ಸ್ವಲ್ಪ ಕಾಲವನ್ನಾದರೂ ಕಳೆಯಬೇಕು. ಅವರ ಅನುಭವದ ಮಾತುಗಳನ್ನು ಲಾಲಿಸಿ ತನ್ನ ನಡತೆಯನ್ನು ತಿದ್ದಿಕೊಳ್ಳಬೇಕು. ಮನಸ್ಸಿನ ಪ್ರವೃತ್ತಿಯು ಹೆಚ್ಚಾಗಿ ಸಹವಾಸವನ್ನೇ ಅವಲಂಬಿಸಿದೆ.

ಒಬ್ಬನು ನೀತಿವಂತನಾಗಲಿಕ್ಕೂ ಅನೀತಿವಂತನಾಗಲಿಕ್ಕೂ ಆತನಿಗಿರುವ ಸಹವಾಸವೇ ಮುಖ್ಯಕಾರಣ. ಆದುದರಿಂದ ಮನಸ್ಸಿನ ಶಕ್ತಿಯನ್ನು ಹೆಚ್ಚಿಸಿ ಕೊಳ್ಳುವವರು ಉತ್ತಮರ ಸಹವಾಸದಲ್ಲಿ ಹೆಚ್ಚುಕಾಲ ಕಳೆಯುವುದು ಆವಶ್ಯಕ.

ಈಗಿನ ಕಾಲದಲ್ಲಿ ಪತ್ರಿಕೆಗಳೂ ಪುಸ್ತಕಗಳೂ ಸಹವಾಸದ ಸಜೀವ ವ್ಯಕ್ತಿಗಳಾಗಿಯೇ ಇವೆ. ಅವುಗಳ ವಾಚನವು ಮನಸ್ಸಿನ ಮೇಲೆ ಬಲವಾದ ಪರಿಣಾಮವನ್ನುಂಟುಮಾಡುವುದರಿಂದ ಮನೋವಿಕಾರಗಳಿಗೆ ಕಾರಣವಾಗು ವಂತಹ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಓದಕೂಡದು. ಶೂರರ, ಸಾಹಸಿ ಗಳ, ಆತ್ಮವೀರರ ಜೀವನಚರಿತ್ರೆಗಳನ್ನೂ ನೀತಿಪರ ಪುಸ್ತಕಗಳನ್ನೂ ಪ್ರತಿ ನಿತ್ಯ ಸ್ವಲ್ಪವಾದರೂ ಓದಬೇಕು. ಮನಸ್ಸಿನ ಶಕ್ತಿಯನ್ನು ಬೆಳೆಯಿಸಲು ಒಳ್ಳೆಯ ಸಹವಾಸವೆಂಬ ಆಹಾರವು ಅದಕ್ಕೆ ಅಗತ್ಯವಾಗಿದೆ.

ಕೌಟುಂಬಿಕ ಕರ್ತವ್ಯ

ಮನುಷ್ಯನು ತಾನು ಹೊಂದಿದ ಶಾರೀರಿಕ ಬೌದ್ಧಿಕ ಮತ್ತು ಮಾನಸಿಕ ಶಕ್ತಿಗಳನ್ನು ಕೇವಲ ತನ್ನ ಹಿತಕ್ಕಾಗಿಯೇ ಉಪಯೋಗಿಸತಕ್ಕದ್ದಲ್ಲ. ಅವು ಗಳನ್ನು ಸಾಧ್ಯವಾದಷ್ಟು ಜನಗಳ ಹಿತಕ್ಕಾಗಿ ವಿನಿಯೋಗಿಸಬೇಕು. ಈ ಶಕ್ತಿ

ಗಳಿಂದ ಎಷ್ಟು ಹೆಚ್ಚು ಪ್ರಯೋಜನವು ಅನ್ಯರಿಗೆ ಲಭಿಸುತ್ತದೆಯೋ ಅಷ್ಟು ಪ್ರಮಾಣದಲ್ಲಿ ಇವುಗಳನ್ನು ಹೊಂದಿದವರ ಜೀವಿತವು ಸಾರ್ಥಕವಾದುದೆಂದು ತಿಳಿಯಬೇಕು.

ಪಶುಪಕ್ಷಿಗಳಂತೆ ಮನುಷ್ಯನು ವೈಯಕ್ತಿಕ ಜೀವಿಯಲ್ಲ. ತನ್ನ ಶಕ್ತಿಗಳು ಅನ್ಯರ ಹಿತಾರ್ಥವಾಗಿ ಉಪಯೋಗಿಸಲ್ಪಡುವಂತೆ ಪ್ರಯತ್ನಿಸುವುದು ಆತನ ಕರ್ತವ್ಯವೇ ಆಗಿದೆ. ಈ ಕರ್ತವ್ಯವನ್ನು ಕೋಟ್ಯಂತರ ಜನರು ಲಕ್ಷಾಂತರ ವರುಷಗಳಿಂದ ಮಾಡುತ್ತಾ ಬಂದಿರುವುದರಿಂದಲೇ ಮನುಷ್ಯ ಪ್ರಾಣಿಯು ಈಗ ತನ್ನ ಬಾಳುವೆಯಲ್ಲಿ ಬಗೆಬಗೆಯ ಸುಖ-ಸೌಲಭ್ಯಗಳನ್ನು ಹೊಂದಿದ್ದಾನೆ. ನಾವು ನಮ್ಮ ಪೂರ್ವಜರ ಋಣದಿಂದ ಮುಕ್ತರಾಗಲಿಕ್ಕಾದರೂ ನಮ್ಮ ತ್ರಿವಿಧ ಶಕ್ತಿಗಳನ್ನು ಮನುಷ್ಯ ಜಾತಿಯ ಹಿತಾರ್ಥವಾಗಿ ವಿನಿಯೋಗಿಸಬೇಕು.

ಮನುಷ್ಯನ ಕಾರ್ಯಕ್ಷೇತ್ರವು ಮೊದಲು ಕುಟುಂಬ. ತನ್ನ ತಾಯಿ-
ತಂದೆ, ಅಣ್ಣ-ತಮ್ಮ, ಅಕ್ಕ-ತಂಗಿ, ಹೆಂಡತಿ-ಮಕ್ಕಳ ಸಂಬಂಧವಾಗಿ
ಮಾಡತಕ್ಕ ಕರ್ತವ್ಯಗಳನ್ನು ತೃಪ್ತಿಕರವಾಗಿ ಮಾಡಬೇಕು. ತನ್ನ ಶಾರೀರಿಕ,
ಬೌದ್ಧಿಕ ಮತ್ತು ಮಾನಸಿಕ ಶಕ್ತಿಗಳ ಪ್ರಯೋಜನವು ತನ್ನ ಕುಟುಂಬಕ್ಕೆ
ದೊರೆಯುವಂತೆ ಪ್ರಯತ್ನಿಸುವುದು ಮೊದಲನೆಯ ಕೆಲಸ.

ಕೆಲವು ವ್ಯಕ್ತಿಗಳಿಂದ ಕೂಡಿ ಹೇಗೆ ಒಂದು ಕುಟುಂಬವಾಗುತ್ತದೆಯೋ
ಹಾಗೆಯೇ ಅನೇಕ ಕುಟುಂಬಗಳು ಕೂಡಿ ಒಂದು ಸಮಾಜವೂ ಅಂಥ ಬೇರೆ
ಬೇರೆ ಸಮಾಜಗಳು ಕೂಡಿ ಒಂದು ರಾಷ್ಟ್ರವೂ ನಿರ್ಮಾಣವಾಗುತ್ತದೆ. ಆದಕಾರಣ
ಕುಟುಂಬವು ಸಮಾಜದ ಅಥವಾ ರಾಷ್ಟ್ರದ ಒಂದು ಮುಖ್ಯ ಘಟಕವಾಗಿಯೇ
ಇದೆ. ಕುಟುಂಬವು ಒಳ್ಳೆಯ ಸ್ಥಿತಿಯಲ್ಲಿರಬೇಕಾದರೆ ಆ ಕುಟುಂಬದ ವ್ಯಕ್ತಿ
ಗಳು ಹೇಗೆ ಸುಸ್ಥಿತಿಯಲ್ಲಿರಬೇಕಾಗುತ್ತದೆಯೋ ಹಾಗೆಯೇ ಒಂದು ಸಮಾಜ
ಅಥವಾ ರಾಷ್ಟ್ರವು ಉನ್ನತ ಸ್ಥಿತಿಯಲ್ಲಿರಬೇಕಾದರೆ ಅದರಲ್ಲಿಯ ಕುಟುಂಬಗಳು
ಸುಧಾರಿಸಿದ ಸ್ಥಿತಿಯಲ್ಲಿರಬೇಕಾಗುವುದು. ಆದಕಾರಣ ಕೌಟುಂಬಿಕ
ಕರ್ತವ್ಯವು ರಾಷ್ಟ್ರೀಯ ಕರ್ತವ್ಯದ ಒಂದಂಗವಾಗಿಯೇ ಇದೆ. ಅಂತೆಯೇ
ಯಾವ ಗೃಹಸ್ಥನೂ ತನ್ನ ಕುಟುಂಬಸಂರಕ್ಷಣೆ ಮತ್ತು ಸಂವರ್ಧನೆಗಳ
ಕರ್ತವ್ಯಗಳನ್ನು ಉಪೇಕ್ಷಿಸಬಾರದು.

ಒಂದು ಕುಟುಂಬವು ಒಂದು ಚಿಕ್ಕ ರಾಜ್ಯವೆಂದೇ ಹೇಳಬಹುದು. ಈ ಕುಟುಂಬವನ್ನು ಸಾಗಿಸುವವನೇ ಅದಕ್ಕೆ ಅಧ್ಯಕ್ಷನು. ಆತನು ವಾಸವಾಗಿರುವ ಮನೆಯೇ ರಾಜಧಾನಿಯು. ಇತರ ಬಂಧು ಸಂಬಂಧಿಗಳು ಸಲಹೆಗಾರರು; ಕೆಲಸಗಾರರು. ಕೆಲಸಗಾರರು ರಾಜ್ಯದ ಅಧಿಕಾರಿಗಳು. ಆ ಕುಟುಂಬದ ಆಶ್ರಯದಿಂದ ಜೀವಿಸುವ ಬೇರೆ ಕುಟುಂಬಗಳು ಆಶ್ರಿತ ಸಂಸ್ಥಾನಗಳು. ನೆರೆಯ ಬೇರೆ ಕುಟುಂಬಗಳು ಸ್ವತಂತ್ರ ರಾಜ್ಯಗಳು. ಅವು ಮಿತ್ರತ್ವದಿಂದಾಗಲಿ ಅಥವಾ ಶತ್ರುತ್ವದಿಂದಾಗಲಿ ಇಲ್ಲವೆ ಉದಾಸೀನತ್ವದಿಂದಾಗಲಿ ಇರಬಹುದು.

ಹೀಗೆ ಒಂದು ಕುಟುಂಬವು ಚಿಕ್ಕ ರಾಜ್ಯವೆಂದೇ ತಿಳಿದು ಅದರ ಉನ್ನತಿಗಾಗಿ ಪ್ರಯತ್ನಿಸಬೇಕು. ಕುಟುಂಬ ಮತ್ತು ರಾಷ್ಟ್ರ ಇವು ಒಂದು ಸರಳರೇಖೆಯ ಎರಡು ಕೊನೆಯ ಬಿಂದುಗಳಂತೆಯೇ ಇವೆ. ಆದಕಾರಣ ರಾಷ್ಟ್ರಭಕ್ತನು ಕೌಟುಂಬಿಕ ಕರ್ತವ್ಯವನ್ನು ನಿರ್ಲಕ್ಷಿಸುವುದಿಲ್ಲ. ರಾಷ್ಟ್ರಪುರುಷರ ಜನ್ಮಕ್ಷೇತ್ರವು ಕುಟುಂಬವೇ ಆಗಿಲ್ಲವೆ?

ಆದಕಾರಣ ಕುಟುಂಬವು ಶಕ್ತಿಶಾಲಿಯೂ ಸುಶಿಕ್ಷಣ ಮತ್ತು ಸುಶೀಲಗಳುಳ್ಳದ್ದಾಗಿಯೂ ಇರುವಂತೆ ಪ್ರಯತ್ನಿಸುವುದು ರಾಷ್ಟ್ರೀಯ ಕಾರ್ಯವು. ಗಿಡಕ್ಕೆ ನಾನಾ ಕೊಂಬೆಗಳಿರುವಂತೆಯೇ ಕುಟುಂಬವಲ್ಲಿ ಅನೇಕ ವ್ಯಕ್ತಿಗಳಿರುತ್ತಾರೆ. ಕುಟುಂಬಕ್ಷೇಮಕ್ಕಾಗಿ ಇರಬೇಕಾಗಿರುವ ಆದರಾಭಿಮಾನಗಳೇ ಕುಟುಂಬವೃಕ್ಷದ ತಾಯಿಬೇರು. ಪರಸ್ಪರ ಪ್ರೇಮವೆಂಬ ಜಲದಿಂದಲೇ ಇದು ಬೆಳೆಯುತ್ತದೆ.

ಹೆಣ್ಣುಮಕ್ಕಳು ಕೀಳೆಂದು ತಿಳಿಯಬಾರದು. ಪುರುಷರೇ ಸ್ತ್ರೀಯರಿಗಿಂತ ಶ್ರೇಷ್ಠರೆಂಬ ತಪ್ಪುತಿಳುವಳಿಕೆಯನ್ನು ತೆಗೆದುಹಾಕಬೇಕು. ಕುಟುಂಬವೆಂಬ ರಥಕ್ಕೆ ಸ್ತ್ರೀ-ಪುರುಷರಿಬ್ಬರೂ ಎರಡು ಗಾಲಿಗಳು. ಒಂದು ಗಾಲಿ ಕೆಟ್ಟರೆ ಗಾಡಿ ಸರಿಯಾಗಿ ನಡೆಯುವುದೆ? ಇಲ್ಲವೇ ಇಲ್ಲ. ಆದಕಾರಣ ಕುಟುಂಬದ ಹೆಣ್ಣುಮಕ್ಕಳೂ ದೇಹಬಲ, ಬುದ್ಧಿಬಲ ಮತ್ತು ಮಾನಸಿಕ ಬಲಗಳುಳ್ಳವರಾಗುವಂತೆ ಪ್ರಯತ್ನಿಸಬೇಕು.

ಹೆಣ್ಣುಮಕ್ಕಳು ಎಷ್ಟು ಸುಶೀಲರೂ ಧೀರರೂ ಇರುತ್ತಾರೆಯೋ ಅಷ್ಟು ರಾಷ್ಟ್ರಕ್ಕೆ ಬಲ ಹೆಚ್ಚು. ಪುರುಷರಿಗೆ ಉತ್ಸಾಹ ಸಾಹಸಗಳು ಸ್ತ್ರೀಯ

ರಿಂದುಂಟಾದಾಗಲೇ ಅವು ಮಹತ್ತ್ವವನ್ನು ಪಡೆಯುತ್ತವೆ. ಆದುದರಿಂದ ಹೆಣ್ಣು ಮಕ್ಕಳ ಸಕಲ ಉನ್ನತಿಗಾಗಿಯೂ ಪ್ರಯತ್ನಿಸುವುದು ಅತ್ಯಾವಶ್ಯಕವು.

ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳನ್ನು ಕೀಳಾಗಿ ಕಂಡು, ಅವರು ಬರೇ ಭೋಗದ ವಸ್ತುವೆಂದೇ ಗ್ರಹಿಸಿರುವವರು ಬಹುಜನರು. ಈ ಘಾತಕವಾದ ವಿಚಾರವು ಅಳಿದುಹೋಗಬೇಕು. ಕುಟುಂಬದಲ್ಲಿಯೂ ಸಕಲರ ಸುಸ್ಥಿತಿಯ [illegible] [illegible] ಪ್ರಯತ್ನಿಸುವುದೇ ಕೌಟುಂಬಿಕ ಕರ್ತವ್ಯಗಳಲ್ಲಿ ಮೊದಲನೆಯದು.

ಉದ್ಯೋಗಗಳಲ್ಲಿ ಮೇಲುಕೀಳುಗಳನ್ನು ಎಣಿಸದೆ ಎಲ್ಲರೂ ಪ್ರತಿನಿತ್ಯ ಯಾವುದಾದರೊಂದು ಕುಟುಂಬಸಂರಕ್ಷಣೆ ಮತ್ತು ಸಂವರ್ಧನೆಗೆ ಅನುಕೂಲವಾದ ಉದ್ಯೋಗದಲ್ಲಿಯೇ ನಿರತರಾಗುವಂತೆ ಪ್ರಯತ್ನಿಸಬೇಕು. ಕುಟುಂಬದಲ್ಲಿ ಯಾರೂ ನಿರುದ್ಯೋಗಿಗಳಾಗಿರಕೂಡದು. ನಿರುದ್ಯೋಗಿಯಾಗಿ ಜೀವಿಸುವುದು ಭಯಂಕರವಾದ ಅಪರಾಧವೆಂದೇ ಎಲ್ಲರ ಮನಸಿಕೆಯಾಗುವಂಥ ತಿಳುವಳಿಕೆಯನ್ನು ಉಂಟುಮಾಡಬೇಕು.

ತಾನು ಅನ್ಯ ಕುಟುಂಬಗಳಿಗೆ ಯಾವ ಕೊಂದೆಯನ್ನು ಕೊಡಬಾರದು. ಅನ್ಯರು ತನಗೆ ಕೊಂದೆ ಕೊಡಲು ಪ್ರಾರಂಭಿಸಿದರೆ ಅದನ್ನು [illegible] ಸಕಾಲದಲ್ಲಿ ಸರಿಯಾಗಿ ವಿರೋಧಿಸಬೇಕು. ತನ್ನ ಕುಟುಂಬದ ಮಾನ ಮನ್ನಣೆ ಪ್ರಾಣ-ಧನಗಳ ರಕ್ಷಣೆಗಾಗಿ ಸರ್ವಸ್ವವನ್ನು ಅರ್ಪಿಸಲು ಸಿದ್ಧನಾಗಬೇಕು.

ರಾಷ್ಟ್ರಸೇವೆ

ಮನುಷ್ಯನು ಹೇಗೆ ಯಾವುದೊಂದು ಕುಟುಂಬಕ್ಕೆ ಸಂಬಂಧಪಟ್ಟವ[illegible] ಯಾವುದೊಂದು ಮತ, ಧರ್ಮ, [illegible] [illegible] [illegible] ಯಾವುದೊಂದು [illegible] [illegible] [illegible] ಸಮಾಜಕಾರ್ಯದಲ್ಲಿ [illegible] [illegible] [illegible] ಪರಿಸ್ಥಿತಿಯ ಮತ ಅಥವಾ ಪಂಥ ಇಲ್ಲವೆ ಧರ್ಮದ [illegible] [illegible] ಪ್ರಯತ್ನಿಸುವುದು ತನ್ನ ಕರ್ತವ್ಯವೆಂದೇ [illegible] [illegible] ಕೌಟುಂಬಿಕ ಕರ್ತವ್ಯವನ್ನು ಮಹತ್ತ್ವದ್ದೇ [illegible] [illegible] ನಿರ್ವಂಚನೆಯಿಂದ ಮಾಡಬೇಕು. ತನ್ನ [illegible] [illegible]

ಧರ್ಮದ ವಿಷಯದಲ್ಲಿ ಆದರಾಭಿಮಾನಗಳುಳ್ಳವನಾಗಿರಬೇಕು; ಆದರೆ ಪರಧರ್ಮಗಳ ವಿಷಯದಲ್ಲಿ ದ್ವೇಷವುಳ್ಳವನಾಗಿರಬಾರದು. ಒಂದು ಯಾತ್ರೆಗೆ ಬೇರೆ ಬೇರೆ ಮಾರ್ಗಗಳಿಂದ ಬೇರೆ ಬೇರೆ ವಾಹನಗಳ ಮೂಲಕ ಬರುತ್ತಿರುವ ಯಾತ್ರಿಕರಂತೆಯೇ ಬೇರೆ ಬೇರೆ ಧರ್ಮದವರು ಬೇರೆ ಬೇರೆ ಮಾರ್ಗಗಳಿಂದ ತಮ್ಮ ತಮಗೆ ಇಷ್ಟವಿದ್ದ ರೀತಿಗಳಿಂದ ಪರಮಾತ್ಮನ ಕಡೆಗೆ ಹೋಗುತ್ತಿದ್ದಾರೆಂದು ತಿಳಿದು ಪರಧರ್ಮಗಳ ವಿಷಯದಲ್ಲಿ ಸಹಾನುಭೂತಿಯುಳ್ಳವನಾಗಿರಬೇಕು.

ಆದರೆ ಒಂದು ಸಂಗತಿಯನ್ನು ಮಾತ್ರ ಚೆನ್ನಾಗಿ ಲಕ್ಷಿಸಬೇಕು. ಅದೇನೆಂದರೆ: ನಮ್ಮ ಧರ್ಮಾಚಾರಗಳು ಅನ್ಯರಿಗೆ ತೊಂದರೆ, ಕಷ್ಟ, ನಷ್ಟಗಳನ್ನು ಮಾತ್ರ ಉಂಟುಮಾಡುವಂತಿರಕೂಡದು. ನಮಗೆ ನಮ್ಮ ಧರ್ಮಾಚಾರಗಳನ್ನು ಆಚರಿಸಲು ಎಷ್ಟು ಸ್ವಾತಂತ್ರ್ಯವಿದೆಯೋ ಅಷ್ಟೇ ಅನ್ಯರಿಗೂ ಇದೆಯೆಂಬುದನ್ನು ನಾವು ಮರೆಯಕೂಡದು.

ತಾನು ಅನ್ಯಧರ್ಮಗಳ ಮೇಲೆ ಆಕ್ರಮಣ ಮಾಡಕೂಡದು. ಮತ್ತು ಅನ್ಯಧರ್ಮಗಳ ಆಕ್ರಮಣ ತನ್ನ ಧರ್ಮದ ಮೇಲೆ ಆಗುತ್ತಿದ್ದರೆ ಅದನ್ನು ಸಹಿಸಕೂಡದು. ಸರ್ವಸ್ವವನ್ನು ಅರ್ಪಿಸಿಯಾದರೂ ಅಂಥ ಆಕ್ರಮಣವನ್ನು ತಡೆಯಲೇಬೇಕು. ತಾನು ಹೊಂದಿದ ದೇಹಶಕ್ತಿ, ಬುದ್ಧಿಶಕ್ತಿ ಮತ್ತು ಮಾನಸಿಕ ಶಕ್ತಿಗಳನ್ನು ಅಂಥ ಕಾರ್ಯದಲ್ಲಿ ವಿನಿಯೋಗಿಸಿದ್ದಾದರೆ ತಾನು ಅನುಸರಿಸುತ್ತಿರುವ ಧರ್ಮದ ಋಣದಿಂದ ಮುಕ್ತನಾದಂತಾಗುವುದು. ಅಂಥ ಸಮಯದಲ್ಲಿ ಈ ತ್ರಿವಿಧಶಕ್ತಿಗಳಲ್ಲಿ ವಂಚಕನಾದರೆ ಧರ್ಮದ್ರೋಹಿಯಾದಂತಾಗುವುದು.

ಇದೇ ಪ್ರಕಾರ ತನ್ನ ರಾಷ್ಟ್ರದ ವಿಷಯದಲ್ಲಿಯೂ ತಿಳಿಯಬೇಕು. ತನ್ನ ಜನ್ಮಭೂಮಿಯ ಮೇಲಿನ ಆಕ್ರಮಣವನ್ನು ತಡೆಯಲು ಸರ್ವಸ್ವವನ್ನೂ ಸೂರೆ ಮಾಡಬೇಕು. ನಮ್ಮ ತಾಯಿನಾಡು ನಮಗೆ ದೇಹದಂತೆಯೂ ನಮ್ಮ ಧರ್ಮವು ಜೀವದಂತೆಯೂ ಇವೆ. ಇವೆರಡರಲ್ಲಿ ಯಾವುದನ್ನು ಉಪೇಕ್ಷಿಸಿದರೂ ರಾಷ್ಟ್ರಸೇವೆ ಮಾಡಿದಂತಾಗುವುದಿಲ್ಲ.

ರಾಷ್ಟ್ರದ ಎಲ್ಲ ಧರ್ಮ, ಜಾತಿ, ಮತ, ಪಂಥ, ವರ್ಗದವರಿಗೂ, ಸಮಾನವಾದ ಸಾಮಾಜಿಕ ಸ್ವಾತಂತ್ರ್ಯವಿರಬೇಕು. ಯಾರೂ ಜನ್ಮದಿಂದ

ಹೀಲು ಕೀಳರೆಂದು ತಿಳಿಯಲ್ಪಡಬಾರದು. ತನ್ನ ದೇಶಬಾಂಧವರ ಶಾರೀರಕ, ಬೌದ್ಧಿಕ ಮತ್ತು ಮಾನಸಿಕ ಉನ್ನತಿಗಾಗಿ ತನ್ನಿಂದ ಶಕ್ಯವಿರುವ ಎಲ್ಲ ಸೇವೆಗಳನ್ನೂ ಸಲ್ಲಿಸಬೇಕಾದುದು ಅಗತ್ಯವಾದ ಪರಮ ಪವಿತ್ರಕರ್ತವ್ಯವಾಗಿದೆ.

ಈ ಪ್ರಕಾರ ನಮ್ಮ ಕನ್ನಡನಾಡಿನ ತರುಣರು ವೈಯಕ್ತಿಕ ಕೌಟುಂಬಿಕ ಮತ್ತು ರಾಷ್ಟ್ರೀಯ ಕರ್ತವ್ಯಗಳನ್ನು ಮಾಡಿ ಪ್ರಭಾವಶಾಲಿಗಳಾಗಲಿ.

೫. ಮಹಾಭಾರತ ಮತ್ತು ಭಾರತೀಯ ಸಂಸ್ಕೃತಿಯಲ್ಲಿ ಅದರ ಸ್ಥಾನ

ಡಾ॥ ಎ. ಆರ್. ಕೃಷ್ಣಶಾಸ್ತ್ರೀ : ೧೨-೨-೧೮೯೦ ; ೧-೨-೧೯೬೮

ಭರತಖಂಡದ ಸಂಸ್ಕೃತಿಗೆ ಶ್ರುತಿ ಸ್ಮೃತಿ ಇತಿಹಾಸ ಪುರಾಣ ಇವೇ ಮುಖ್ಯವಾದ ಆಧಾರಗಳು. ಶ್ರುತಿಯೆಂದರೆ ವೇದ ; ಅದರ ಒಂದು ಭಾಗವಾದ ಉಪನಿಷತ್ತೇ ಮುಂದಿನ ವೇದಾಂತ ಮೊದಲಾದ ದರ್ಶನಗಳಿಗೆಲ್ಲಾ ಮೂಲ. ಸ್ಮೃತಿಯೆಂದರೆ ಧರ್ಮಶಾಸ್ತ್ರ ; ಇತಿಹಾಸವೆಂದರೆ ರಾಮಾಯಣ ಮಹಾಭಾರತಗಳು ; ಪುರಾಣಗಳು, ಮತ್ಸ್ಯಪುರಾಣ, ಕೂರ್ಮಪುರಾಣ ಬ್ರಹ್ಮಾಂಡ ಪುರಾಣ ಮೊದಲಾಗಿ ಹಲವು ಇವೆ; ಅವುಗಳಲ್ಲಿ ಬ್ರಹ್ಮ ವಿಷ್ಣು ಶಿವ ಮುಂತಾದ ದೇವತೆಗಳ ಮಾಹಾತ್ಮ್ಯ ಬರುತ್ತದೆ. ಇತಿಹಾಸದಲ್ಲಿ ರಾಮ ಕೃಷ್ಣರು ಭೀಮಾರ್ಜುನರು ಮುಂತಾದ ವೀರರ ಸಾಹಸಕಾರ್ಯಗಳೇ ಪ್ರಧಾನವಾಗಿರುತ್ತವೆ. ಜೊತೆಯಲ್ಲಿ ವೈದಿಕ ಪೌರಾಣಿಕ ಕಥೆಗಳೂ ಮಧ್ಯೆ ಮಧ್ಯೆ ಧರ್ಮಬೋಧನೆ ನೀತಿವಿಚಾರಗಳೂ ಬರುತ್ತವೆ.

ಭಾರತವು ಬಹುಪ್ರಾಚೀನವಾದ ಗ್ರಂಥ. ಅದು ಹುಟ್ಟಿ ಇಂದಿಗೆ ಎರಡು ಸಾವಿರ ವರ್ಷಗಳ ಮೇಲಾಗಿರಬೇಕು. ಅಲ್ಲಿಂದ ಈಚೆಗೆ, ಮೂಲನದಿಗೆ ಉಪನದಿಗಳು ಸೇರುವಂತೆ, ಅದಕ್ಕೆ ಹಲವು ಭಾಗಗಳು ಸೇರಿ ಬೆಳೆದು ಅದು ಮಹಾಭಾರತವಾಗಿದೆ ; ಮಹಾಭಾರತವೆಂದರೆ ದೊಡ್ಡ ಭಾರತ ; ಅದರಷ್ಟು ದೊಡ್ಡ ಗ್ರಂಥ ಪ್ರಪಂಚದ ಮತ್ತಾವ ದೇಶದಲ್ಲೂ, ಮತ್ತಾವ ಕಾಲದಲ್ಲೂ ಕಂಡುಬರುವುದಿಲ್ಲ. ಅದು ಆಕಾರದಲ್ಲಿ ಮಾತ್ರ ದೊಡ್ಡದಲ್ಲ ; ವಿಷಯದಲ್ಲಿಯೂ ದೊಡ್ಡದು ; ಅದು ವೇದದಷ್ಟೇ ಪೂಜ್ಯವಾದದ್ದು ; ಅದನ್ನು ಐದನೆಯ ವೇದವೆಂದೇ ಕರೆಯುತ್ತಾರೆ. ವೇದದಲ್ಲಿ ಹೇಳಿರುವ ಧರ್ಮವೇ, ಭಾರತದಲ್ಲಿಯೂ ಹೇಳಿರುವುದು ; ವೇದದಲ್ಲಿ ಬರುವ ಹಲವು ಕಥೆಗಳು ಭಾರತದಲ್ಲಿ ಬರುತ್ತವೆ.

ಭಾರತವೆಂದರೆ ಭರತವಂಶದ ರಾಜರಾದ ಕೌರವಪಾಂಡವರ ಕಥೆ. ಈ ಕಥೆಯನ್ನು ಅಷ್ಟೋ ಇಷ್ಟೋ ತಿಳಿಯದ ಭಾರತೀಯನಿಲ್ಲ; ಓದನ್ನು ಅರಿಯದ ಹೆಂಗಸರು ಮಕ್ಕಳಿಗೂ ಇದು ಗೊತ್ತು ; ಪುರಾಣಗಳನ್ನು ಕೇಳಿ, ಹಾಡು ಹಸೆಗಳನ್ನು ಕೇಳಿ, ಬಯಲಾಟಗಳನ್ನು ನೋಡಿ, ಇವುಗಳನ್ನು ತಿಳಿದುಕೊಂಡಿದ್ದಾರೆ. ಇಂದಿಗೂ ಭಾರತಕಥೆಯನ್ನು ಓದಿ ಬಲ್ಲವರಿಗಿಂತಲೂ ಕೇಳಿ ಬಲ್ಲವರೇ ಹೆಚ್ಚು ಜನ. ಅದು ಹೀಗೆ ಹರಡುವುದಕ್ಕೆ ಕಾರಣ ಮುಖ್ಯವಾಗಿ ನಮ್ಮ ಜನರ ಧರ್ಮಶ್ರದ್ಧೆ ಮತ್ತು ಭಾರತದ ಸ್ವಾರಸ್ಯವಾದ ಕಥೆ, ಅದು 'ಪರಮ ವೇದದ ಸಾರ': ಆದ್ದರಿಂದ ಇಹಪರ ಸಾಧಕವಾದದ್ದು.

ಇಷ್ಟು ದೊಡ್ಡ ಗ್ರಂಥವನ್ನು ಹಿಂದಿನವರು ಹೇಗೆ ಕಾಪಾಡಿಕೊಂಡು ಬಂದರೋ ! ಬಹುಕಾಲ ಅದನ್ನು ಪೌರಾಣಿಕರು ಬಾಯಿಗೆ ಗಟ್ಟಿ ಮಾಡಿಕೊಂಡು ಹೇಳುತ್ತಿದ್ದಿರಬೇಕು ; ವೇದವಂತೂ ಬಾಯಿಂದ ಬಾಯಿಗೆ ಬಂದದ್ದು ; ಹೀಗೆಯೇ ಎಷ್ಟೋ ಶಾಸ್ತ್ರಗಳೂ ಗಟ್ಟಿಮಾಡಿಕೊಂಡಿದ್ದು, ತಲೆಮಾರಿಂದ ತಲೆಮಾರಿಗೆ ಬಂದವು ; ನಮ್ಮ ಹಿರಿಯರು ಅವಕ್ಕಾಗಿ ಅಷ್ಟು ಶ್ರಮಪಡದಿದ್ದರೆ ಇಂದು ಅವು ನಮ್ಮ ಪಾಲಿಗೆ ಇರುತ್ತಿರಲಿಲ್ಲ ; ಬರವಣಿಗೆ ತಾನೇ ಸುಲಭವೇ ? ಭಾರತದ ಒಂದು ಲಕ್ಷ ಶ್ಲೋಕಗಳನ್ನು ಓಲೆಯ ಗರಿಯ ಮೇಲೆ ಕಂಠದಿಂದ ಕಿರುಕಬೇಕಾದರೆ ಸುಲಭವಲ್ಲ ; ಈಗ ಅಚ್ಚುಮಸಿಗಳು ಬಂದು ನಾವು ಆ ಕಷ್ಟವನ್ನು ಊಹಿಸಲೂ ಆರೆವು. ಆದ್ದರಿಂದ ನಾವು ಮಹಾಭಾರತವನ್ನು ಬರೆದ ಮಹಾತ್ಮರಿಗೆ ಎಷ್ಟು ಕೃತಜ್ಞರಾಗಿರಬೇಕೋ, ಅದನ್ನು ಕಾಪಾಡಿಕೊಂಡು ಬಂದ ಹಿರಿಯರಿಗೂ ಅಷ್ಟೇ ಕೃತಜ್ಞರಾಗಿರಬೇಕು. ಜೀವಸ್ಥಾನವನ್ನು ಹಾಳುಗೆಡುವುದು ಸುಲಭ ; ಅದನ್ನು ಉಳಿಸಿಕೊಂಡು, ಬೆಳಸಿಕೊಂಡು, ಪೂಜೆ ನಡೆಸಿ ಪುಣ್ಯ ಪಡೆಯುವುದು ಕಷ್ಟ.

ಭಾರತ ಕಥೆಯನ್ನು ಮೊಟ್ಟಮೊದಲು ವೈಶಂಪಾಯನನೆಂಬ ಋಷಿಯು ಜನಮೇಜಯನಿಗೆ ಅವನು ಮಾಡುತ್ತಿದ್ದ ಸರ್ಪಯಾಗದ ಕಾಲದಲ್ಲಿ ಹೇಳಿದನಂತೆ ; ಆ ಕಥೆಯನ್ನು ಆತನು ತನ್ನ ಗುರುವಾದ ವ್ಯಾಸರಿಂದ ಕೇಳಿದ್ದನು ; ಆದ್ದರಿಂದ ವ್ಯಾಸರೇ ಭಾರತದ ಮೂಲಕರ್ತರು ಎಂದು ಹೇಳುವುದು. ವ್ಯಾಸರು ಭರತಖಂಡದಲ್ಲಿ ಬಹು ಪೂಜ್ಯರಾದ ವ್ಯಕ್ತಿ ; ವೇದಗಳನ್ನೆಲ್ಲಾ ವಿಂಗಡಿಸಿ ಇಂದಿನ ರೂಪಕ್ಕೆ ತಂದವರೇ ಅವರು ಎಂದು ಹೇಳುತ್ತಾರೆ ; ಅದೇ

ಒಂದು ಮಹತ್ವದ ಕೆಲಸ; ಜೊತೆಗೆ ಭಾರತದಂಥ ಒಂದು ಹಿರಿಯ ಗ್ರಂಥವನ್ನೂ ರಚಿಸಿದರೆಂದರೆ, ಅವರ ಸಾಮರ್ಥ್ಯವನ್ನೂ ತಪಶ್ಶಕ್ತಿಯನ್ನೂ ಊಹಿಸುವುದು ಮಾತ್ರ ಸಾಧ್ಯ. ಆ ಕೆಲಸದಲ್ಲಿ ಒಂದು ಸಣ್ಣ ಪಾಲು ಕೆಲಸ ಮಾಡಿದರೂ ಇಂದು ಅಗಾಧವಾದ ಕೀರ್ತಿ ಬರುತ್ತದೆ; ಐಶ್ವರ್ಯ ಬರುತ್ತದೆ. ಆದರೆ ವ್ಯಾಸರಾಗಲಿ ವೈಶಂಪಾಯನನಾಗಲಿ ದುಡ್ಡಿಗೋ ಯಶಸ್ಸಿಗೋ ಆಶೆಪಟ್ಟು ಇವನ್ನು ಮಾಡಿದವರಲ್ಲ. ವೈಶಂಪಾಯನನು ಹೇಳಿದ ಕಥೆಯನ್ನು ಕೇಳಿದ್ದ ಸೂತಪುರಾಣಿಕನು ಅದನ್ನು ನೈಮಿಷಾರಣ್ಯದಲ್ಲಿ ಶೌನಕ ಮುಂತಾದ ಋಷಿಗಳಿಗೆ ಹೇಳಿದನಂತೆ. ಅದು ಇಂದು ನಮಗೆ ಬಂದಿದೆ. ಇದೆಲ್ಲಾ ಭಾರತದ ಪೀಠಿಕಾಭಾಗದಿಂದ ತಿಳಿಯಬರುತ್ತದೆ.

ಮೇಲೆ ಹೇಳಿದ ಜನಮೇಜಯನು ಪಾಂಡವರ ಮರಿಮಗ; ಅರ್ಜುನನ ಮಗ ಅಭಿಮನ್ಯು, ಅಭಿಮನ್ಯುವಿನ ಮಗ ಪರಿಕ್ಷಿದ್ರಾಜ, ಪರಿಕ್ಷಿತ್ತಿನ ಮಗ ಜನಮೇಜಯ. ಪರಿಕ್ಷಿತ್ತು ಒಂದು ದಿನ ಕಾಡಿನಲ್ಲಿ ಬೇಟೆಗೆ ಹೋಗಿದ್ದು, ಅಲ್ಲಿ ತಪಸ್ಸು ಮಾಡುತ್ತಿದ್ದ ಒಬ್ಬ ಋಷಿಯನ್ನು ನೋಡಿ ಕುಚೇಷ್ಟೆಗಾಗಿ, ಅವನ ಕೊರಳಿಗೆ ಒಂದು ಸತ್ತ ಹಾವನ್ನು ಹಾರ ಹಾಕಿದನಂತೆ; ಅದನ್ನು ಕಂಡ ಆ ಋಷಿಯ ಮಗನು ಪರಿಕ್ಷಿದ್ರಾಜನು ಹಾವು ಕಡಿದು ಸಾಯಲೆಂದು ಶಾಪ ಕೊಟ್ಟನಂತೆ. ಅದರಂತೆ, ಎಷ್ಟೋ ಎಚ್ಚರದಿಂದ ಇದ್ದರೂ, ಆ ದೊರೆಯು ಹಾವು ಕಡಿದು ಸತ್ತು ಹೋದನಂತೆ; ಆ ಸೇಡಿನಿಂದ ಅವನ ಮಗನಾದ ಜನಮೇಜಯನು ಹಾವುಗಳನ್ನೆಲ್ಲಾ ಧ್ವಂಸಮಾಡುತ್ತೇನೆಂದು ಒಂದು ಹಾವಿನ ಯಜ್ಞವನ್ನು ಮಾಡಿದನಂತೆ. ಬಹು ಹಾವುಗಳು ಅದರಲ್ಲಿ ಸತ್ತು ಹೋದುವು; ಇನ್ನೂ ಎಷ್ಟು ಸಾಯುತ್ತಿದ್ದುವೋ! ಅದರ ಮಧ್ಯದಲ್ಲಿ ಆಸ್ತೀಕನೆಂಬ ಬ್ರಾಹ್ಮಣನು ಬಂದು ಆ ಯಜ್ಞವನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಿಕೊಳ್ಳಲು ಯಜ್ಞ ನಿಂತಿತಂತೆ. ಆ ಯಜ್ಞಕ್ಕಾಗಿ ಹಲವರು ಋಷಿಗಳು ಸೇರಿದ್ದರು; ಅವರಲ್ಲಿ ಒಬ್ಬೊಬ್ಬರು ಒಂದೊಂದು ಕಥೆ ಹೇಳುತ್ತಿದ್ದರು; ಭಾರತಕಥೆಯೂ ಹೀಗೆ ಆಗ ಹೇಳಿದ್ದು. ತನ್ನ ಪೂರ್ವಿಕರ ಕಥೆಯಾದ್ದರಿಂದ ಜನಮೇಜಯನಿಗೂ ಅದರಲ್ಲಿ ತುಂಬ ಆಸಕ್ತಿ ಇದ್ದಿರಬೇಕು.

ಸಂಸ್ಕೃತ ಭಾರತವು ಬಹುಮಟ್ಟಿಗೆ ಶ್ಲೋಕದಲ್ಲಿದೆ: ಶ್ಲೋಕವೆಂಬುದು ಒಂದು ಸಣ್ಣ ಪದ್ಯ:

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಂ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥

ಎಂಬುದು ಒಂದು 'ಶ್ಲೋಕ' : ಇದು ಮಹಾಭಾರತದ ಮೊಟ್ಟಮೊದಲಲ್ಲಿ ಬರುವ ಮಂಗಳಶ್ಲೋಕ ; ಕನ್ನಡದಲ್ಲಿ ಎಷ್ಟೋ ಸಂಸ್ಕೃತ ಪದ್ಯಜಾತಿಯು ಕಾವ್ಯಗಳಲ್ಲಿ ಬಳಸಿ ಬಂತು ; ಶ್ಲೋಕ ಮಾತ್ರ ಹೊಂದಿಬರಲಿಲ್ಲ ; ಸಂಸ್ಕೃತಕ್ಕೆ ಅದು ನೀರು ಕುಡಿದ ಹಾಗೆ ; ಕನ್ನಡಕ್ಕೆ ಷಟ್ಪದಿ ಸಾಂಗತ್ಯಗಳು ಹಾಗೆ ; ನಾರಣಪ್ಪನು ತನ್ನ ಭಾರತವನ್ನು ಬರೆದದ್ದು ಭಾಮಿನೀ ಷಟ್ಪದಿಯಲ್ಲಿ ; ಇನ್ನೊಬ್ಬ ಜೈನಕವಿ ಭರತೇಶ ವೈಭವವೆಂಬ ಬಹುದೊಡ್ಡ ಕಾವ್ಯವನ್ನು ಆದ್ಯಂತವಾಗಿ 'ಸಾಂಗತ್ಯ'ದಲ್ಲಿ ಬರೆದನು. ಅದಿರಲಿ ; ಸಂಸ್ಕೃತ ಭಾರತವು ಬಹುಮಟ್ಟಿಗೆ ಶ್ಲೋಕದಲ್ಲಿದೆ. ಸಂವಾದ ರೂಪದಲ್ಲಿದೆ. ಇತರ ವಿಧವಾದ ಪದ್ಯಜಾತಿಗಳೂ ಕೆಲವು ಇವೆ ; ಅಲ್ಪಸ್ವಲ್ಪ ಗದ್ಯವೂ ಇದೆ ; ಒಟ್ಟಿನ ಮೇಲೆ ಅದು ಪದ್ಯಗ್ರಂಥ. ಈಗಿನ ಕಾಲದಲ್ಲಿ ನಾವು ಗದ್ಯ ಬರೆಯುವುದೇ ಹೆಚ್ಚು ; ಅದರಲ್ಲಿಯೂ ಕಥೆಯನ್ನು ಹೇಳುವುದು ವಚನದಲ್ಲಿ, ಬರೆಯುವುದು ಗದ್ಯದಲ್ಲಿ; ಯಾರೋ ಕೆಲವರು, ಪದ್ಯದಲ್ಲಿ ಬರೆದರೆ ಹೇಗಿರುತ್ತದೆ ನೋಡೋಣ ಎಂದು ಪದ್ಯದಲ್ಲಿಯೂ ಕಥೆ ಬರೆಯುತ್ತಿದ್ದಾರೆ ; ಹಿಂದೆ ಪ್ರಾಯಿಕವಾಗಿ ಎಲ್ಲಾ ಗ್ರಂಥಗಳೂ---ವೇದ, ಶಾಸ್ತ್ರ, ಕೊನೆಗೆ ನಿಘಂಟು—ಪದ್ಯದಲ್ಲಿಯೇ ಇರುತ್ತಿದ್ದುವು ; ಇದರಿಂದ, ಅದನ್ನು ಗಟ್ಟಿಮಾಡಿ ಜ್ಞಾಪಕದಲ್ಲಿಟ್ಟು ಕೊಳ್ಳುವುದು ಸುಲಭವಾಗಿತ್ತು.

ಭಾರತದ ಕಥೆ ಬಹುದೊಡ್ಡದು ; ಆದ್ದರಿಂದ ಅದನ್ನು ಹದಿನೆಂಟು 'ಪರ್ವ'ಗಳಾಗಿ ವಿಭಾಗಮಾಡಿದೆ ; ರಾಮಾಯಣದಲ್ಲಿ ಈ ವಿಭಾಗಗಳನ್ನು 'ಕಾಂಡ'ವೆಂದು ಕರೆದಿದೆ : ಜೈಮಿನಿಭಾರತ ಮುಂತಾದ ಈಚಿನ ಗ್ರಂಥಗಳಲ್ಲಿ 'ಸಂಧಿ' ಎನ್ನುವುದು ಒಂದು 'ಅಧ್ಯಾಯ'. ಅಂಥ ಹಲವು ಅಧ್ಯಾಯಗಳು ಸೇರಿ ಆಗುವ ಒಂದು ಭಾಗಕ್ಕೆ ಪರ್ವವೆಂದು ಹೆಸರು. ಪರ್ವವೆಂದರೆ ಗೆಣ್ಣು ; ಉದ್ದವಾದ ಕಬ್ಬಿನ ಜಲ್ಲೆಯಲ್ಲಿ ಗೆಣ್ಣುಗಳು ಹೇಗೋ ಭಾರತದಲ್ಲಿ ಪರ್ವಗಳು ಹಾಗೆ. ಮುಂದೆ ಈ ಹದಿನೆಂಟು ಪರ್ವಗಳ ಹೆಸರನ್ನೂ ಅದರಲ್ಲಿ ನಡೆಯುವ ಕಥೆಯನ್ನೂ ಸೂಚಿಸಿದೆ :—

೧. **ಆದಿಪರ್ವ**—ಭಾರತ ಕಥೆಯ ಪೀಠಿಕೆ; ಕೌರವ ಪಾಂಡವರು ಹುಟ್ಟಿ ಬೆಳೆಯುತ್ತಾರೆ; ದುರ್ಯೋಧನನು ಹೊಟ್ಟೆಯ ಕಿಚ್ಚಿನಿಂದ ಪಾಂಡವರನ್ನು ಅರಗಿನ ಮನೆಯಲ್ಲಿರಿಸಿ ಅದಕ್ಕೆ ಬೆಂಕಿ ಇಡಿಸಿ ಅವರನ್ನು ಸುಡಿಸಬೇಕೆಂದಿರುತ್ತಾನೆ; ಅವರು ತಪ್ಪಿಸಿಕೊಂಡು ಹೋಗಿ ಅಲ್ಲಿ ಇಲ್ಲಿ ಅಲೆದು ಕೊನೆಗೆ ದ್ರೌಪದಿಯನ್ನು ಮದುವೆಯಾಗುತ್ತಾರೆ; ಆಗ ಧೃತರಾಷ್ಟ್ರನು ಅವರನ್ನು ಕರೆಸಿಕೊಳ್ಳುತ್ತಾನೆ.

೨ **ಸಭಾಪರ್ವ**—ಧರ್ಮರಾಜನು ರಾಜಸೂಯಯಾಗ ಮಾಡುತ್ತಾನೆ; ಆ ಯಾಗದ ವೈಭವವನ್ನು ನೋಡಿ ದುರ್ಯೋಧನನಿಗೆ ಹೊಟ್ಟೆಯ ಕಿಚ್ಚು ಹುಟ್ಟುತ್ತದೆ; ಜೂಜಿನಲ್ಲಿ ಪಾಂಡವರನ್ನು ಸೋಲಿಸಿ ಅವರನ್ನು ಕಾಡಿಗೆ ಕಳುಹಿಸುತ್ತಾನೆ.

೩. **ವನಪರ್ವ**—ಪಾಂಡವರು ಹನ್ನೆರಡು ವರ್ಷ ಕಾಡಿನಲ್ಲಿ ಇರುತ್ತಾರೆ; ಅರ್ಜುನನು ಈಶ್ವರನಿಂದ ಪಾಶುಪತಾಸ್ತ್ರವನ್ನೂ ಇಂದ್ರನಿಂದ ವರಗಳನ್ನೂ ಪಡೆದು ಬರುತ್ತಾನೆ. ಈ ಪರ್ವದಲ್ಲಿ ಹಲವು ಉಪಕಥೆಗಳು ಬರುತ್ತವೆ. ಅವೆಲ್ಲಾ ಮುಖ್ಯವಾಗಿ ಧರ್ಮರಾಜನ ಸಮಾಧಾನಕ್ಕಾಗಿ ಹೇಳಿದವು. ಸಾವಿತ್ರಿಯ ಕಥೆ, ನಳದಮಯಂತಿಯರ ಕಥೆ ಬರುವುದು ಇಲ್ಲಿಯೇ.

೪. **ವಿರಾಟಪರ್ವ**—ಪಾಂಡವರು ವೇಷ ಮರಸಿಕೊಂಡು ಒಂದು ವರ್ಷ ಇರಬೇಕಾಗಿತ್ತು; ಅದರಂತೆ ಅವರು ವಿರಾಟರಾಜನ ಹತ್ತಿರ ಇರುತ್ತಾರೆ: ಆಗ ದುರ್ಯೋಧನನು ವಿರಾಟನ ಗೋವುಗಳನ್ನು ಕದಿಯುವುದಕ್ಕೆ ಬರಲು ಅರ್ಜುನನು ಅವನನ್ನು ಸೋಲಿಸಿ ಓಡಿಸುತ್ತಾನೆ. ಅಂದಿಗೆ ಸರಿಯಾಗಿ ಪಾಂಡವರ ಅಜ್ಞಾತವಾಸ ಮುಗಿದಿರುತ್ತದೆ.

೫. **ಉದ್ಯೋಗಪರ್ವ**—ಉದ್ಯೋಗವೆಂದರೆ ಯತ್ನ; ಇದರಲ್ಲಿ ಎರಡು ಪಕ್ಷದವರೂ ಯುದ್ಧಕ್ಕೆ ಸಿದ್ಧಮಾಡಿಕೊಳ್ಳುತ್ತಾರೆ. ಕೃಷ್ಣನು ಸಂಧಿ ಮಾಡಿಸಿ ಯುದ್ಧ ತಪ್ಪಿಸೋಣವೆಂದು ನೋಡುತ್ತಾನೆ; ಆದರೆ ದುರ್ಯೋಧನನು ಪಾಂಡವರಿಗೆ ಒಂದು ಸೂಜಿಯ ಮೊನೆಯಷ್ಟು ನೆಲವನ್ನೂ ಕೊಡುವುದಕ್ಕೆ ಇಷ್ಟಪಡದೆ ಇದ್ದದ್ದರಿಂದ ಯುದ್ಧವಾಗಲೇಬೇಕಾಯಿತು.

೬. **ಭೀಷ್ಮಪರ್ವ**—ಇದರಲ್ಲಿ ಭೀಷ್ಮನು ಹತ್ತುದಿನ ಯುದ್ಧಮಾಡಿ ಬೀಳುತ್ತಾನೆ; ಯುದ್ಧಾರಂಭದಲ್ಲಿ ಅರ್ಜುನನು ನೆಂಟರಿಷ್ಟರ ಮೇಲ್ಕೈಯುದ್ಧ

ಮಾಡಲಾರೆನೆಂದು ಹಿಂತೆಗೆಯಲು ಕೃಷ್ಣನು ಅವನಿಗೆ ಬುದ್ಧಿಹೇಳಿ ಯುದ್ಧ ಮಾಡುವಂತೆ ಅವನನ್ನು ಪ್ರೇರಿಸುತ್ತಾನೆ. ಇದೇ ಲೋಕಪ್ರಸಿದ್ಧವಾದ 'ಭಗವದ್ಗೀತೆ.'

೭. **ದ್ರೋಣಪರ್ವ**—ದ್ರೋಣನು ಸೇನಾಪತಿಯಾಗಿ ಐದು ದಿನ ಯುದ್ಧ ನಡಸಿ ತನ್ನ ಮಗ ಅಶ್ವತ್ಥಾಮನು ಸತ್ತನೆಂದುಕೊಂಡು ಯುದ್ಧ ನಿಲ್ಲಿಸಿ ದೇಹಬಿಡುತ್ತಾನೆ. ಅಭಿಮನ್ಯುವನ್ನು ಸೈಂಧವನು ಕೊಲ್ಲಲು ಪ್ರತಿಯಾಗಿ ಅವನನ್ನು ಅರ್ಜುನನು ಕೊಲ್ಲುತ್ತಾನೆ.

೮. **ಕರ್ಣಪರ್ವ**—ಕರ್ಣನು ಸೇನಾಪತಿಯಾಗಿ ಎರಡು ದಿನ ಯುದ್ಧ ಮಾಡಿ ಸಾಯುತ್ತಾನೆ.

೯. **ಶಲ್ಯಪರ್ವ**—ಶಲ್ಯನು ಅರ್ಧದಿವಸ ಯುದ್ಧ ಮಾಡಿ ಸಾಯಲು, ದುರ್ಯೋಧನನು ಓಡಿಹೋಗಿ ಮಡುವಿನಲ್ಲಿ ಅಡಗಿಕೊಳ್ಳುತ್ತಾನೆ. ಪಾಂಡವರ ಮೂದಲಿಕೆಯಿಂದ ಅವನು ಹೊರಕ್ಕೆ ಬಂದು ಭೀಮನೊಡನೆ ಗದಾಯುದ್ಧ ಮಾಡಿ ತೊಡೆ ಮುರಿದು ಬೀಳುತ್ತಾನೆ.

೧೦. **ಸೌಪ್ತಿಕಪರ್ವ**—ಸೌಪ್ತಿಕ ಎಂದರೆ ನಿದ್ರೆಮಾಡುತ್ತಿರುವವರದು. ಯುದ್ಧ ನಿಂತಿತೆಂದು ಪಾಂಡವರ ಕಡೆಯವರೆಲ್ಲರೂ ನಿಶ್ಚಿಂತರಾಗಿ ರಾತ್ರಿ ನಿದ್ರೆಮಾಡುತ್ತಿರಲು, ಹೆಸರು ಹೇಳುವುದಕ್ಕೂ ಒಂದು ಪಿಳ್ಳೆ ಇಲ್ಲದಂತೆ ಅಶ್ವತ್ಥಾಮನು ಅವರೆಲ್ಲರನ್ನೂ ಕೊಂದುಹಾಕುತ್ತಾನೆ. ಪಾಂಡವರು ಆಗ ಅಲ್ಲಿ ಇಲ್ಲದ್ದರಿಂದ ಬದುಕಿಕೊಂಡರು.

ಹೀಗೆ ಭಾರತಯುದ್ಧ ಹದಿನೆಂಟು ದಿನ ನಡೆಯಿತು.

೧೧. **ಸ್ತ್ರೀಪರ್ವ**—ಇದರಲ್ಲಿ ಗಂಡಂದಿರನ್ನು ಕಳೆದುಕೊಂಡ ಹೆಂಗಸರೂ; ಮಕ್ಕಳನ್ನು ಕಳೆದುಕೊಂಡ ಗಾಂಧಾರಿ ಧೃತರಾಷ್ಟ್ರರೂ ಗೋಳಾಡುತ್ತಾರೆ.

೧೨. **ಶಾಂತಿಪರ್ವ**—ಧರ್ಮರಾಜನಿಗೆ ಪಟ್ಟಾಭಿಷೇಕವಾಗುತ್ತದೆ. ಅವನು ಉತ್ತರಾಯಣ ಬರಲೆಂದು ಇನ್ನೂ ಜೀವಹಿಡಿದುಕೊಂಡಿದ್ದ ಭೀಷ್ಮನಿಂದ ಧರ್ಮವನ್ನು ಕೇಳುತ್ತಾನೆ.

೧೩. **ಅನುಶಾಸನಪರ್ವ**—ಭೀಷ್ಮನು ತನ್ನ ಧರ್ಮೋಪದೇಶವನ್ನು ಮುಂದುವರಿಸಿ, ಸಾಯುತ್ತಾನೆ.

೧೪. **ಅಶ್ವಮೇಧಪರ್ವ** — ಧರ್ಮರಾಜನು ಅಶ್ವಮೇಧಯಜ್ಞ ಮಾಡುತ್ತಾನೆ. ಈ ಭಾಗದ ಕಥೆಯೇ ಜೈಮಿನಿ ಭಾರತದಲ್ಲಿ ಇರುವುದು.

೧೫. **ಆಶ್ರಮವಾಸಪರ್ವ**—ಇದರಲ್ಲಿ ಧೃತರಾಷ್ಟ್ರ ಗಾಂಧಾರಿ ಕುಂತಿ ವಿದುರ ಸಂಜಯ ಇವರು ತಪಸ್ಸಿಗೆಂದು ಕಾಡಿಗೆ ಹೋಗಿ ಅಲ್ಲಿ ಕಾಡು ಕಿಚ್ಚಿಗೆ ಸಿಕ್ಕಿ ಸಾಯುತ್ತಾರೆ.

೧೬. **ಮೌಸಲಪರ್ವ**—ಮುಸಲವೆಂದರೆ ಒನಕೆ; ಒನಕೆಯೇ ಕಾರಣವಾಗಿ ಯಾದವರು ಹೊಡೆದಾಡಿ ಸಾಯುತ್ತಾರೆ; ಕೃಷ್ಣ ಬಲರಾಮರು ದೇಹಬಿಡುತ್ತಾರೆ.

೧೭. **ಮಹಾಪ್ರಸ್ಥಾನಪರ್ವ**—ಮಹಾಪ್ರಸ್ಥಾನವೆಂದರೆ ದೊಡ್ಡ ಪ್ರಯಾಣ; ಮಹಾಯಾತ್ರೆ; ಪಾಂಡವರು ತಮ್ಮ ರಾಜ್ಯವನ್ನು ಪರಿಕ್ಷಿತ್ತಿಗೆ ಕೊಟ್ಟು ಸ್ವರ್ಗಕ್ಕೆ ಪ್ರಯಾಣ ಹೊರಡುತ್ತಾರೆ. ದಾರಿಯಲ್ಲಿ ಒಬ್ಬೊಬ್ಬರಾಗಿ ಬಿದ್ದು ಧರ್ಮರಾಜನೊಬ್ಬನು ತನ್ನ ದೇಹದಲ್ಲಿಯೇ ಸ್ವರ್ಗಕ್ಕೆ ಹೋಗುತ್ತಾನೆ.

೧೮. **ಸ್ವರ್ಗಾರೋಹಣಪರ್ವ**—ಅಲ್ಲಿ ಧರ್ಮರಾಜನಿಗೆ ಮೊದಲು ನರಕದರ್ಶನವಾಗಿ ಆಮೇಲೆ ಸ್ವರ್ಗ ಲಭಿಸುತ್ತದೆ. ಕರ್ಣ ದುರ್ಯೋಧನರೂ ಕೂಡ ಕಾದಿ ಮಡಿದು, ಕ್ಷತ್ರಿಯ ಧರ್ಮವನ್ನು ನಡಸಿದ್ದರಿಂದ ಅವರಿಗೂ ವೀರಸ್ವರ್ಗ ಬರುತ್ತದೆ.

ಇದಾದ ಮೇಲೆ 'ಹರಿವಂಶ'ವೆಂಬ ಒಂದು ಭಾಗದಲ್ಲಿ ಕೃಷ್ಣನ ಚರಿತ್ರೆ ಬರುತ್ತದೆ; ಅದು ನಿಜವಾಗಿ ಭಾರತಕ್ಕೆ ಸೇರಿದ್ದಲ್ಲ.

ಮಹಾಭಾರತವು ಜನಮೇಜಯರಾಯನ ಕಾಲದ ಕಥೆಯೆಂದು ಹಳಸಲಾಗುವುದಿಲ್ಲ. ಅದು ಇಂದಿಗೂ, ಎಂದಿಗೂ, ಹೊಸದೇ. ಏಕೆಂದರೆ ದಾಯಾದರ ವ್ಯಾಜ್ಯ ಯಾವಾಗ ಇಲ್ಲ? ಕ್ಷತ್ರಿಯರ ಕಥೆಯಾದರೂ ಅವರಂತೆ ಎಲ್ಲ ಜಾತಿಯ ಜನರೂ, ಎಲ್ಲ ದೇಶದ ಜನರೂ ಕಲಿಯತಕ್ಕ ನೀತಿ ಬಹಳವಾಗಿ ಇದೆ. ಅದು ಕಥೆಯೊಡನೆ, ಮನಸ್ಸಿಗೆ ನಾಟುವಂತೆ, ಕಣ್ಣಿಗೆ ಕಟ್ಟುವಂತೆ, ಬೆರೆದುಬಂದಿದೆ. ಕಥೆ ಯಾರಿಗೆ ಬೇಡ? ಮಕ್ಕಳಿಂದ ಮುದುಕರವರೆಗೆ ಎಲ್ಲಾ ಕಾಲದ ಎಲ್ಲಾ ದೇಶದ ಜನರಿಗೂ ಕಥೆ ಪ್ರಿಯವಾದದ್ದು. ಯಾವ ಕಾವ್ಯ ಜಾತಿಯಾಗಲಿ, ಅದರಲ್ಲಿ ಹೂರಣವಾಗಿ ಕಥೆ ಇದ್ದೇ ಇರುತ್ತದೆ. ಭಾರತದಲ್ಲಿ ಈ ಕಥೆಗಳ ಸಮಾರಾಧನೆ! ಅವರಲ್ಲಿ ಎಷ್ಟು ಬಗೆಯ, ಎಂಥಂಥ ರುಚಿಯ

ಎಷ್ಟು ಕಥೆಗಳು ಬರುತ್ತವೆ !–ದೇವತೆಗಳ ಕಥೆ, ರಾಕ್ಷಸರ ಕಥೆ, ವೀರರ ಕಥೆ,
ಪತಿವ್ರತೆಯರ ಕಥೆ, ಮೃಗ ಪಕ್ಷಿ ಹಾವು ಮುಂಗಸಿ ಮುಂತಾದ ಪ್ರಾಣಿಗಳ
ಕಥೆ, ಪುರಾಣಕಥೆ, ಪುಣ್ಯಕಥೆ, ನೀತಿಕಥೆ, ಋಷಿಗಳ ಕಥೆ, ತಪಸ್ವಿಗಳ ಕಥೆ,
ತ್ಯಾಗಿಗಳ ಕಥೆ, ಯೋಗಿಗಳ ಕಥೆ, ಉಪಶಾಂತರ ಕಥೆ, ಉಗ್ರರೂಪಿಗಳ ಕಥೆ,
ಇತ್ಯಾದಿ. ಇವು ಮುಂದೆ ಬರುವ ಸಂಸ್ಕೃತ ಸಾಹಿತ್ಯಕ್ಕೂ ದೇಶಭಾಷಾ
ಸಾಹಿತ್ಯಕ್ಕೂ ಆಧಾರವಾಗುತ್ತವೆ. ಹಲವು ದೇಶಾಂತರಗಳಿಗೂ ಹೋಗಿ
ಅಲ್ಲಿಯ ಭಾಷಾಸಾಹಿತ್ಯಗಳಿಗೆ ಸೇರಿಹೋಗಿವೆ. ಲೋಕಪ್ರಸಿದ್ಧವಾದ
ಶಾಕುಂತಲ ನಾಟಕವು ಭಾರತದಲ್ಲಿ ಬರುವ ಒಂದು ಕಥೆಯ ಆಧಾರದ ಮೇಲೆ
ಹುಟ್ಟಿದ್ದು. ಇಂಥ ಉಪಕಥೆಗಳನ್ನು ಉಪಾಖ್ಯಾನವೆಂದು ಕರೆಯುತ್ತಾರೆ.
ಮತ್ತೊಂದು ವಿಶೇಷವೇನೆಂದರೆ, ರಾಮಾಯಣದ ಕಥೆಯೂ ಇದರಲ್ಲಿ ಇಂಥ
ಒಂದು ಉಪಾಖ್ಯಾನವಾಗಿ ಬರುತ್ತದೆ, ಕೃಷ್ಣಲೀಲೆಗಳು ಸೂಚಿತವಾಗಿರುವು
ದಲ್ಲದೆ, ಕೃಷ್ಣನು ಅರ್ಜುನನ ಸಾರಥಿಯಾಗಿ, ಪಾಂಡವರ ಮಂತ್ರಿಯಾಗಿ,
ಅವರನ್ನು ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಕಂಡುಕೊಂಡು, ಭಾರತವನ್ನು
ನಡಸುತ್ತಾನೆ. ಆದ್ದರಿಂದ ಭಾರತದಲ್ಲಿ ರಾಮಾಯಣ ಭಾಗವತಗಳೆರಡೂ
ಅಡಕವಾಗಿವೆ. ಅರ್ಜುನನಿಗೆ ನಾರಾಯಣನ ಅವತಾರವಾದ ಕೃಷ್ಣನು ಹೇಗೆ
ಅಪ್ತನೋ ಶಿವನೂ ಹಾಗೇ ಆಪ್ತ : ಅವನ ಶೌರ್ಯವನ್ನು ಮೆಚ್ಚಿ ಅವನಿಗೆ
ಪಾಶುಪತಾಸ್ತ್ರವನ್ನು ಕೊಟ್ಟವನು. ಆದ್ದರಿಂದ ಭಾರತವು ಶೈವರಿಗೂ
ವೈಷ್ಣವರಿಗೂ ಒಂದೇ ಸಮನಾಗಿ ಪೂಜ್ಯವಾಗಿದೆ. ಭರತಖಂಡದಲ್ಲಿ
ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಎಲ್ಲರೂ ಅದನ್ನು ಮೆಚ್ಚಿ
ಪವರೇ, ಗೌರವಿಸುವವರೇ. ಭಾರತೀಯರಾದ ನಾವೆಲ್ಲಾ ಒಂದೇ ಎಂಬ
ಭಾವನೆ ಉಂಟಾಗಲು, ಭಾರತ ರಾಮಾಯಣಗಳಿಂದ ತುಂಬ ಸಹಾಯವಾಗಿದೆ.
ಅವು ಕಾಶಿ ರಾಮೇಶ್ವರಗಳ ಹಾಗೆ, ಹಿಂದೂಜನರಿಗೆ ಪುಣ್ಯತೀರ್ಥಗಳು.
ಭಾರತವು ಕ್ಷತ್ರಿಯರ ಕಥೆ, ಯುದ್ಧದ ಕಥೆ. ಆದ್ದರಿಂದ ಅದರಲ್ಲಿ
ಶೂರರ ವೀರಕಾರ್ಯಗಳು ಚಿತ್ರಿತವಾಗಿವೆ. ಪಾಂಡವರಷ್ಟೇ ಶೂರರು ಕೌರ
ವರು ; ಅವರೊಡನೆ ಕಾದಲು ಪಾಂಡವರು ಬಹುಕಾಲ ಸಿದ್ಧತೆ ಮಾಡಿಕೊಂಡು
ಟೊಂಕಕಟ್ಟಿಕೊಳ್ಳಬೇಕಾಯಿತು. ಪಾಂಡವರ ಕಡೆಗಿಂತ ಕೌರವರ ಕಡೆಯೇ

ಹೆಚ್ಚು ಸೇನೆಯಿತ್ತು. ಪಾಂಡವರ ಕಡೆ ಏಳು ಅಕ್ಷೋಹಿಣಿ, ಕೌರವರ ಕಡೆ ಹನ್ನೊಂದು ಅಕ್ಷೋಹಿಣಿ; ಇವಷ್ಟೂ ನಿರ್ನಾಮವಾಯಿತು. "ಏಳೂ ಹನ್ನೊಂದೂ ಆಗಿ ಹೋಯಿತು!" ಎಂದು ಹೇಳುವುದರ ಅರ್ಥ ಇದೆಯೇ. ಅಕ್ಷೋಹಿಣಿಯೆಂದರೆ ೨೧,೮೭೦ ರಥ, ಅಷ್ಟೇ ಆನೆ, ಅದರ ಮೂರರಷ್ಟು ಕುದುರೆ, ಐದರಷ್ಟು ಕಾಲಾಳು. ಈ ಸೇನೆಯನ್ನು ತಂದಿದ್ದ ಸಾವಿರಾರು ಸಾಮಂತರಾಜರೂ ಈ ಯುದ್ಧದಲ್ಲಿ ಹೆಸರಿಲ್ಲದಂತಾಗುತ್ತಾರೆ; ಯಾದವರೂ ಕುಡಿದು ಮತ್ತರಾಗಿ ತಮ್ಮಲ್ಲಿ ತಾವೇ ಹೊಡೆದಾಡಿ ಸಾಯುತ್ತಾರೆ; ಆದ್ದರಿಂದ ಕೊನೆಗೆ ಕಂಡುಬರುವುದು ವೀರರ ಉತ್ಸಾಹವಲ್ಲ. ಈ ಸರ್ವನಾಶದ ಚಿಂತೆಯಿಂದ ಬರುವ ನಿರುತ್ಸಾಹ. ಮಧ್ಯೆ ಮಧ್ಯೆ ಶೃಂಗಾರ, ಹಾಸ್ಯ ಮುಂತಾದ ಇತರ ರಸಗಳೂ ಬರುತ್ತವೆ. ಆದರೆ ಭಾರತವನ್ನು ಓದಿ ಮುಚ್ಚಿಟ್ಟರೆ ಮನಸ್ಸಿಗೆ ಒಂದು ವಿಧವಾದ ವೈರಾಗ್ಯ ಬರುತ್ತದೆ. ಇದನ್ನು ಈಗ್ಗೆ ಸುಮಾರು ಒಂದು ಸಾವಿರ ವರ್ಷದ ಕೆಳಗೆ ಕಾಶ್ಮೀರದಲ್ಲಿದ್ದ ಕ್ಷೇಮೇಂದ್ರನೆಂಬ ಕವಿಯು ಒಂದು ಶ್ಲೋಕದಲ್ಲಿ ಹೇಳಿದ್ದಾನೆ :

ರತ್ನೋದಾರಚತುಸ್ಸಮುದ್ರರಶನಾಂ ಭುಕ್ತ್ವಾ ಭುವಂ ಕೌರವೋ
ಭಗ್ನೋರುಃ ಪತಿತಃ ಸ ನಿಷ್ಪರಿಜನೋ ಜೀವನ್ ವೃಕೈರ್ಭಕ್ಷಿತಃ ।
ಗೋಪೈರ್ನಿರ್ಜಿತಯೀ ಜಿತಂ ಸ ವಿಜಯಃ ಕಕ್ಷ್ಯೈಃ ಕ್ಷಿತಾ ವೃಷ್ಣಯಃ
ತಸ್ಮಾತ್ ಸರ್ವಮಿದಂ ವಿಚಾರ್ಯ ಸುಚಿರಂ ಶಾಂತ್ಯೈ ಮನೋ ದೀಯತಾಂ॥

ಅರ್ಥ:– ಕೌರವನು ನಾಲ್ಕು ಸಮುದ್ರಗಳೇ ಕೊನೆಯಾದ ಭೂಮಂಡಲವನ್ನು ಆಳಿ, ಕೊನೆಗೆ ತೊಡೆ ಮುರಿಸಿಕೊಂಡು ಬಿದ್ದನು; ಹತ್ತಿರ ಒಬ್ಬರೂ ಇಲ್ಲದಂತಾಗಿ, ಬದುಕಿದಾಗಲೇ ಅವನನ್ನು ತೋಳಗಳು ಕಿತ್ತುಕೊಂಡು ತಿಂದುವು. ಪ್ರಪಂಚವನ್ನೆಲ್ಲಾ ಗೆದ್ದು 'ವಿಜಯ'ನೆನ್ನಿಸಿಕೊಂಡ ಅರ್ಜುನನು ಕೊನೆಯಲ್ಲಿ ದನಕಾಯುವವರಿಗೆ ಸೋತನು. ಯಾದವರು ಕಕ್ಷಿಪ್ರತಿಕಕ್ಷಿಗಳಾಗಿ ನಿಂತು ಹೊಡೆದಾಡಿ ಹಾಳಾದರು. ಆದ್ದರಿಂದ ಇದೆಲ್ಲವನ್ನೂ ವಿಚಾರಮಾಡಿ ಶಾಂತಿಯ ಕಡೆಗೆ ಮನಸ್ಸು ಕೊಡಿ !

'ಅಂತು ಇಂತು ಕುಂತಿಯ ಮಕ್ಕಳಿಗೆ ರಾಜ್ಯವಿಲ್ಲ' ಎಂಬ ಕನ್ನಡದಲ್ಲಿ ಒಂದು ಗಾದೆಯಿದೆ. ಇದು ಸ್ವಲ್ಪ ಮಟ್ಟಿಗೆ ನಿಜ. ಮೊದಮೊದಲು ಪಾಂಡವರಿಗೆ ರಾಜ್ಯವಿರಲಿಲ್ಲ; ಆಮೇಲೆ ಬಂತು; ಬಂದರೂ ಅದನ್ನು ಅವರು

ಹೆಚ್ಚು ದಿನ ಅನುಭವಿಸಲಿಲ್ಲ ; ಅದರ ಕಷ್ಟಸುಖಗಳೆಲ್ಲಾ ಸಾಕಾಗಿತ್ತು ; ಆದ್ದರಿಂದ ರಾಜ್ಯವನ್ನೂ ಕೋಶವನ್ನೂ ಈ ಲೋಕವನ್ನೂ ಬಿಟ್ಟು ಸ್ವರ್ಗಕ್ಕೆ ಹೋದರು. ದುರ್ಯೋಧನನಿಗೆ ರಾಜ್ಯವಿದ್ದರೂ ಅವನು ಮುಳ್ಳಮೇಲೆ ಇದ್ದಂತೆ ಇದ್ದನು. ಪಾಂಡವರಿಗೆ ದ್ರೋಹಮಾಡಿ, ಮೋಸಮಾಡಿ ಅವರನ್ನು ಕಾಡಿಗೆ ಓಡಿಸಿದನು ; ಮತ್ತೆ ಕುಂಟುಯುಕ್ತಿ ತೆಗೆದು ಅವರನ್ನು ಕಾಡಿಗೆ ಅಟ್ಟಿ ತಾನು ಶಾಶ್ವತವಾಗಿ ರಾಜ್ಯವಾಳಿಕೊಂಡು ಇರಬೇಕೆಂಬುದು ಅವನ ಇಷ್ಟವಾಗಿತ್ತು. ಆದರೆ ಅನ್ಯಾಯ ಅಧರ್ಮ ಎಷ್ಟು ದಿನ ನಿಲ್ಲುತ್ತದೆ ? ದುಶ್ಶಾಸನ, ಶಕುನಿ, ಕರ್ಣ ಮುಂತಾದ ದುರ್ಮಂತ್ರಿಗಳು ಅವನ ಹತ್ತಿರ ಸೇರಿಕೊಂಡು ಅವನ ದುರ್ಬುದ್ಧಿಯನ್ನು ಹೆಚ್ಚಿಸಿದರು ; ಧೃತರಾಷ್ಟ್ರನು ವಿವೇಕಿಯಾದರೂ ಮಗನ ಮೇಲಣ ಅಭಿಮಾನದಿಂದ ಅವನ ಕಡೆಯೇ ಸೇರಿಕೊಂಡನು ; ವಿದುರನು ಆಡುತ್ತಿದ್ದ ವಿವೇಕದ ಮಾತುಗಳು ಯಾರಿಗೂ ರುಚಿಸಲಿಲ್ಲ. ಹೀಗಾಗಿ ದುರ್ಯೋಧನನು ತನ್ನ ದುರ್ಗುಣಗಳಿಂದ, ಒಂದು ದಿನವೂ ನೆಮ್ಮದಿ ಯೆಂಬುದನ್ನೇ ಕಾಣದೆ, ಅಕಾಲ ಮೃತ್ಯುವನ್ನು ಪಡೆದನು ; ಘೋರ ಮರಣವನ್ನು ಹೊಂದಿದನು. ಸಾಯುವವನು ಒಬ್ಬ ಸತ್ತನೇ ? ಕೌರವವಂಶವೇ ನಿರ್ನಾಮವಾಯಿತು ; ಹೆಂಗಸರ, ಮಕ್ಕಳ, ದಿಕ್ಕಿಲ್ಲದವರ ಗೋಳು ದೇಶವಾದ್ಯಂತವೂ ತುಂಬಿಹೋಯಿತು. ರಾಜನನ್ನು ನಂಬಿದ ಪ್ರಜೆಗಳಿಗೆ ಇದೇ ಗತಿಯೇ ? ಅವರ ಯೋಗಕ್ಷೇಮವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ತನ್ನ ಆಸೆ–ದುರಾಸೆಗಳನ್ನು ರಾಜನು ತ್ಯಜಿಸಬೇಕು. ರಾಜನು ಅನ್ಯಾಯಕ್ಕೆ, ಅಧರ್ಮಕ್ಕೆ, ಹೋಗಬಾರದು ; ರಾಜನಂತೆಯೇ ಪ್ರಜೆಯೂ ಆಗುತ್ತದೆ ; ರಾಜನು ಒಳ್ಳೆಯವನಾದರೆ ದೇಶವೂ ಒಳ್ಳೆಯದಾಗುತ್ತದೆ ; ಅವನು ರಾಜರ್ಷಿಯೆನ್ನಿಸಿಕೊಳ್ಳುತ್ತಾನೆ : ಅವನ ತಪಸ್ಸಿನ ಫಲದಿಂದ ದೇಶದಲ್ಲಿ ಸುಭಿಕ್ಷವಾಗುತ್ತದೆ, ಕ್ಷೇಮವಿರುತ್ತದೆ, ಸುಖವಿರುತ್ತದೆ, ಶಾಂತಿಯಿರುತ್ತದೆ. ಇದನ್ನೇ ಭಾರತವು 'ರಾಜಾ ಕಾಲಸ್ಯ ಕಾರಣಂ' ಎಂದು ಹೇಳುವುದು, ಜನರೂ ಧರ್ಮ ಪಲ್ಲಿ ನಡೆಯಬೇಕು ; ಧರ್ಮವೆಂದರೆ ಸರಿಯಾದದ್ದು, ನ್ಯಾಯವಾದದ್ದು.

"ಯತೋ ಧರ್ಮಸ್ತತೋ ಜಯಃ"[1]

1 ಶುಕ್ರ ಪ್ರಪಂಚ–ಫೆಬ್ರವರಿ, ೧೯೫೯.

ಧರ್ಮದಿಂದಲೇ ಲೋಕ ನಿಂತಿರುವುದು, ನಡೆಯುತ್ತಿರುವುದು. ಇದಂತೂ ಭಾರತೀಯರಾದ ನಮ್ಮ ದೃಢವಾದ ನಂಬಿಕೆ—

ನಾನು ಈಚೆಗೆ ಬರೆದು ಪ್ರಕಟಿಸಿದ "**ವಚನ ಭಾರತ**" ಗ್ರಂಥದ ಒಂದು ಪ್ರತಿಯನ್ನು ನನ್ನ ವಿದ್ಯಾಗುರುಗಳಾದ ಪ್ರೊ॥ ಎಂ. ಹಿರಿಯಣ್ಣನವರಿಗೆ ಅರ್ಪಿಸಿದಾಗ ಅವರು ತುಂಬ ಸಂತೋಷಪಟ್ಟು "ಮಹಾಭಾರತದಲ್ಲಿ ಭಾರತೀಯ ಸಂಸ್ಕೃತಿಯನ್ನೆಲ್ಲಾ ಒಂದು ಉಂಡೆಯಾಗಿ ನೋಡಬಹುದು. ಆದ್ದರಿಂದ ಈ ಗ್ರಂಥವನ್ನು ಬರೆದು ಬಹು ಒಳ್ಳೆಯ ಕೆಲಸ ಮಾಡಿದಿರಿ !" ಎಂದರು. ಅದು ಸರ್ವಥಾ ಸತ್ಯವಾದ ಮಾತು. ಪ್ರಾಚೀನ ಭರತಖಂಡದ ಜನಜೀವನವನ್ನು ಮಥನ ಮಾಡಿದಾಗ ತೇಲಿದ ಬೆಣ್ಣೆಯ ಮುದ್ದೆ ಮಹಾಭಾರತ—ಶುದ್ಧವಾದ, ಅಪ್ಪಟವಾದ, ನವನೀತ. ಏಕೆಂದರೆ ಮಹಾಭಾರತ ಹುಟ್ಟಿದಾಗ ಕ್ರೈಸ್ತ, ಬೌದ್ಧ, ಇಸ್ಲಾಂ ಸಂಸ್ಕೃತಿಗಳು ನಮ್ಮ ದೇಶಕ್ಕೆ ಇನ್ನೂ ಬಂದಿರಲಿಲ್ಲ. ಅವುಗಳಿಗೆ ಸ್ಥಾಪಕ (ಅಥವಾ ಪ್ರಕಾಶಕ) ರಾದ ಕ್ರಿಸ್ತ, ಬುದ್ಧ, ಪೈಗಂಬರ್ ಇವರೇ ಇನ್ನೂ ಹುಟ್ಟಿರಲಿಲ್ಲ. ಬೌದ್ಧ ಧರ್ಮವೂ ಭಾರತೀಯ ಧರ್ಮವೇ ; ಬುದ್ಧ ಹುಟ್ಟಿದ್ದು ಭರತಖಂಡದಲ್ಲಿಯೇ, ಆದರ ಸಂಸ್ಕೃತಿಯ ಒಂದು ಫಲವಾಗಿಯೇ ಮತ್ತು ಆದರ ಹಿನ್ನೆಲೆಯಲ್ಲಿಯೇ ; ಮಹಾಭಾರತವು ಸೃಷ್ಟಿ ಕಾಲಾನಂತರ ಬೌದ್ಧಧರ್ಮದ ನೆರೆಯಲ್ಲಿಯೇ ಬೆಳೆಯಿತು : ಇದರ ಸಾರವನ್ನು ಅದು ಹೀರಿದಂತೆ, ಅದರ ಸಾರವನ್ನು ಇದು ಹೀರಿತು, ಬಲಿಯಿತು. ಆದರೂ ಪುರಾತನಾರ್ಯರ ಸಂಸ್ಕೃತಿ, ಪ್ರಾಚೀನ ಭಾರತೀಯ ಸಂಸ್ಕೃತಿ, ಮಹಾಭಾರತದಲ್ಲಿ ವ್ಯಕ್ತವಾಗುವಂತೆ ಮತ್ತಾವ ಗ್ರಂಥದಿಂದಲೂ ಆಗುವುದಿಲ್ಲ. ಆದ್ದರಿಂದ ಮಾನವ ಸಂಸ್ಕೃತಿಯ ಸ್ವರೂಪ ವನ್ನು, ಚರಿತ್ರೆಯನ್ನು, ಅರಿಯಬೇಕೆನ್ನುವವರಿಗೆ ಮಹಾಭಾರತವು ಅಮೂಲ್ಯ ಸಾತ್ಮಕವಾಗಿದೆ.[1]

ಭಾರತದಲ್ಲಿ ಚಿತ್ರಿತವಾಗಿರುವುದು ಬಹುಮಟ್ಟಿಗೆ ಉತ್ತರ ಹಿಂದೂ ಸ್ಥಾನದ ಜನರು. ಅದರ ಕಥೆ ನಡೆದದ್ದು ಗಂಗಾಯಮುನಾ ನದಿಗಳ ಪ್ರದೇಶ

1 "Study of the Mahabharatha is indispensable for those who would learn to understand the spirit and culture of ancient India." — L. D. Barnett.

ವಲ್ಲಿ ; ಈಗ ಡಿಹಲಿಯಾಗಿರುವ ಪ್ರದೇಶದಲ್ಲಿ ಕುರುಕ್ಷೇತ್ರವಿತ್ತು ; ಕೌರವ ಪಾಂಡವರ ಯುದ್ಧ ನಡೆದದ್ದು ಅಲ್ಲಿಯೇ ; ಆಗ ದಕ್ಷಿಣದೇಶವು 'ದಂಡಕಾರಣ್ಯ' ಎಂದರೆ ಉದ್ದಕ್ಕೆ ಹಬ್ಬಿಹೋಗಿದ್ದ ಕಾಡು ; ಅದರ ವಿಚಾರ ಹೆಚ್ಚು ತಿಳಿದಿರಲಿಲ್ಲ. ಕಪಿಗಳೂ ರಾಕ್ಷಸರೂ ಅಲ್ಲಲ್ಲಿ ಒಬ್ಬಿಬ್ಬರು ಋಷಿಗಳೂ ಇರುತ್ತಿದ್ದರು. ಭಾರತವನ್ನು ಹೇಳಿದ ವ್ಯಾಸರು ಯಮುನಾ ನದಿಯ ಒಂದು ದ್ವೀಪದಲ್ಲಿ ಹುಟ್ಟಿದವರು ; ಅದನ್ನು ಅವರ ಶಿಷ್ಯನಾದ ವೈಶಂಪಾಯನನು ಜನಮೇಜಯನಿಗೆ ತಕ್ಷಶಿಲೆಯಲ್ಲಿ ಹೇಳಿದನು. ಆದರೂ ಮಹಾಭಾರತವು ವೇದದಂತೆಯೇ ಉತ್ತರದೇಶಕ್ಕೆ ಮಾತ್ರವಲ್ಲ. ಎಲ್ಲ ಭರತಖಂಡಕ್ಕೂ ಬಂದ ದೊಡ್ಡ ಆಸ್ತಿಯಾಗಿದೆ. ಅದರ ಪ್ರಾಚೀನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಉದ್ಗ್ರಂಥವಾಗಿದೆ.

'ಸಂಸ್ಕೃತಿ'ಯೆಂದರೆ ಸಂಸ್ಕಾರ, ಉತ್ತಮ ಪರಿಣಾಮ. ಇದು ಇಂಗ್ಲಿಷಿನ 'ಕಲ್ಚರ್' ಎಂಬ ಮಾತಿಗೆ ಸಮಾನವಾಗಿ ಈಚೆಗೆ ಕನ್ನಡದಲ್ಲಿ ಇಟ್ಟುಕೊಂಡಿರುವ ಪದ. ಕಲ್ಚರ್ ಎಂದರೆ ಕೃಷಿ, ವ್ಯವಸಾಯ. ಕೃಷಿ ಮಾಡುವುದು ಭೂಸ್ಥಿತಿಯನ್ನು ಉತ್ತಮಗೊಳಿಸಿ, ಅದರಲ್ಲಿ ಬಿತ್ತನೆ ಮಾಡಿ ಫಲ ತೆಗೆಯುವುದಕ್ಕೆ ; ಹಾಗೆಯೇ ನಮ್ಮ ಮನಸ್ಸು, ಬುದ್ಧಿ, ಆತ್ಮ, ಈ ಕ್ಷೇತ್ರಗಳನ್ನು ಉತ್ತು ಬಿತ್ತಿ ಫಲ ಪುರುಷಾರ್ಥಗಳನ್ನು ಪಡೆಯುವುದು ಸಂಸ್ಕೃತಿ. ಕೇವಲ ದೇಹ ಸಂಸ್ಕಾರವು ಸಂಸ್ಕಾರವಲ್ಲ ! ಅದನ್ನು ಮಾತ್ರ ಹೇಳಿಕೊಡುವುದು ಸಂಸ್ಕೃತಿಯಲ್ಲ. ಏಕೆಂದರೆ ಮನುಷ್ಯನು ದೇಹವಷ್ಟೇ ಅಲ್ಲ ; ಆದರಲ್ಲಿಯೂ ಸ್ಥೂಲದೇಹಕ್ಕಿಂತ ಸೂಕ್ಷ್ಮದೇಹ ಹೆಚ್ಚಿನದು. ಒಳಗೆ ಆರೋಗ್ಯವಿದ್ದು ಶುದ್ಧವಾದ ರಕ್ತ ಚಿಮ್ಮುತ್ತಿದ್ದರೆ ಮುಖದಲ್ಲಿ ಕಳೆ ಇರುತ್ತದೆ ; ಅದು ನಿಜವಾದ ಸಂಸ್ಕಾರ. ಒಳಗೆ ರೋಗವಿದ್ದು, ಕೆನ್ನೆಗೂ ತುಟಿಗೂ ರಂಗು ಬಳಿದುಕೊಂಡರೆ ಅದೂ ಸಂಸ್ಕಾರವೆನ್ನಿಸಿಕೊಳ್ಳಬಹುದು ; ಆದರೆ ಅದು ಅಸ್ಥಿರ, ಅನೃತ, ಆಭಾಸ ; ನಿಜವಾದದ್ದಲ್ಲ. ಆದ್ದರಿಂದ ಒಂದು ದೇಶದ ಸಂಸ್ಕೃತಿಯನ್ನು ಆಲೋಚಿಸುವಾಗ ಅದರ ಜನ ಯಾವ ರೀತಿ ಬುದ್ಧಿಸಂಸ್ಕಾರವನ್ನೂ ವಿಕಾಸವನ್ನೂ ಪಡೆದರು. ಅದಕ್ಕೆ ಸಾಧಕವಾಗಿ, ಫಲವಾಗಿ, ಶಾಸ್ತ್ರ, ಸಾಹಿತ್ಯ, ಕಲೆ, ಧರ್ಮ, ವಿಜ್ಞಾನ ಮುಂತಾದವು ಏನೇನು ಹುಟ್ಟಿದುವು ಎಂದು ವಿಚಾರ ಮಾಡಬೇಕು.

ಭಾರತೀಯ ಸಾಂಸ್ಕೃತಿಕ ಸಾಹಿತ್ಯವನ್ನು ವೇದ, ಶಾಸ್ತ್ರ, ಕಾವ್ಯ ಎಂದು ವಿಭಾಗಿಸುವುದು ರೂಢಿ. ವೇದವು ಅತ್ಯಂತ ಪ್ರಾಚೀನ ; ಮುಂದಿನ ಶಾಸ್ತ್ರ ಕಾವ್ಯ ಸಾಹಿತ್ಯಗಳಿಗೆಲ್ಲಾ ಅಲ್ಲಿಯೇ ಅಂಕುರವಿದೆ. ಶಾಸ್ತ್ರಗಳಲ್ಲಿ ವೇದಕ್ಕೆ ಅಂಗಗಳಾಗಿ, ಉಪಾಂಗಗಳಾಗಿ ಬೆಳೆದವು ಕೆಲವು ; ಅದಕ್ಕೇ ಅಷ್ಟು ನೇರವಾಗಿ ಸಂಬಂಧಪಡದೆ ಲೌಕಿಕವಾಗಿ ಬೆಳೆದವು ಕೆಲವು. ಕಾವ್ಯ ಸಾಹಿತ್ಯವೂ ಅಷ್ಟೇ. ಆದರೂ ಒಟ್ಟಿನ ಮೇಲೆ, ಹಿಂದೆ, ಮುಖ್ಯವಾಗಿ ನಮ್ಮ ದೇಶದಲ್ಲಿ "ಶುದ್ಧ" ಸಾಹಿತ್ಯ, ಕೇವಲ "ಲೌಕಿಕ" ಶಾಸ್ತ್ರ ಎಂಬುದಿರಲಿಲ್ಲ. ಭಾರತವು ಕಾಲಾನುಕ್ರಮದಲ್ಲಿ, ವೇದಗಳಿಗೂ ಶಾಸ್ತ್ರಕಾವ್ಯಾದಿಗಳಿಗೂ ಮಧ್ಯೆ ಬರುತ್ತದೆ (ಸುಮಾರು ಕ್ರಿ.ಪೂ. ೪೦೦). ಅದನ್ನು ಐದನೆಯ ವೇದ, ಇತಿಹಾಸ, ಇತಿಹಾಸ–ಪುರಾಣ ಎಂದು ಕರೆದಿದೆ. ಸಾಧಾರಣವಾಗಿ ಇತಿಹಾಸವು ಕ್ಷತ್ರಿಯರ ವೀರಚರಿತ್ರೆ ; ಹಿಂದೆ ಅದರ ಅರ್ಥ ಇನ್ನೂ ವಿಶಾಲವಾಗಿದ್ದು, ಅದು ಪುರಾಣ, ಚರಿತ್ರೆ, ಕಥೆ, ಉದಾಹರಣೆ, ಧರ್ಮಶಾಸ್ತ್ರ, ಅರ್ಥಶಾಸ್ತ್ರ ಇವೆಲ್ಲವನ್ನೂ ಒಳಗೊಂಡಿತ್ತು. ಇಂದಿಗೂ ಭಾರತ ಇರುವುದು ಹಾಗೆಯೇ. ಆದರೆ ಈಚೆಗೆ ದರ್ಶನಗಳೂ ಶಾಸ್ತ್ರಗಳೂ ಸ್ವತಂತ್ರವಾಗಿ ಬೆಳೆದು ವಿಸ್ತಾರವಾಗಿವೆ. ಆದರೂ ಅವುಗಳ ಮೂಲತತ್ತ್ವಗಳು ಭಾರತದಲ್ಲಿಯೇ ದೊರೆಯುತ್ತವೆ. (ಹೀಗೆ ಇಂದಿನ ರಾಜ್ಯಶಾಸ್ತ್ರವು ಶಾಂತಿಪರ್ವದಲ್ಲಿ ಉಕ್ತವಾದ ರಾಜಧರ್ಮಕ್ಕಿಂತ ಬಹಳ ಏನೂ ಮುಂದುವರಿದಿಲ್ಲ ಎಂದು ಆ ಶಾಸ್ತ್ರದಲ್ಲಿ ಪ್ರವೀಣರಾದವರೊಬ್ಬರು ಹೇಳಿದ್ದಾರೆ.) ಇವುಗಳ ಜೊತೆಗೆ, ದೇವರು ಬೇಕೆನ್ನುವವರಿಗೆ ಇಂದ್ರ ವರುಣ ಮೊದಲಾದ ವೇದ ಕಾಲದ ದೇವತೆಗಳಿಂದ ಹಿಡಿದು ರಾಮ, ಕೃಷ್ಣ, ಶಿವ ಮೊದಲಾದ ದೇವತೆಗಳೆಲ್ಲಾ ಬರುತ್ತಾರೆ ; ದರ್ಶನ ಬೇಕೆನ್ನುವವರಿಗೆ ಅದ್ವೈತ ವೇದಾಂತಕ್ಕೆ ಹತ್ತಿರ ಹತ್ತಿರ ಬರುವ, ಆದರೆ ಸರ್ವಲೋಕ ಸಾಮಾನ್ಯವಾಗಬಲ್ಲ, ಸಾಂಖ್ಯವಿದೆ, ವೇದಾಂತವನ್ನೇ ಒಳಗೊಂಡ ಸನತ್ಸುಜಾತೀಯವಿದೆ. ಆಗಿನ ಕಾಲದ ನಾನಾ ಪಂಥಗಳನ್ನು, ಮುಖ್ಯವಾಗಿ ಕರ್ಮ ಭಕ್ತಿ ಜ್ಞಾನ ಮಾರ್ಗಗಳನ್ನು ಒಳಗೊಂಡ ಲೋಕಪ್ರಸಿದ್ಧವಾದ ಭಗವದ್ಗೀತೆಯಿದೆ, ಭಾಗವತದ ಸಾರವಾದ ಶ್ರೀಕೃಷ್ಣ ಚರಿತ್ರೆಯಿದೆ.

"ಇಲ್ಲಿರುವುದೇ ಇತರ ಕಡೆಗಳಲ್ಲಿಯೂ ಇರುವುದು ; ಇಲ್ಲಿಲ್ಲದಿರುವುದು ಇನ್ನೆಲ್ಲಿಯೂ ಇಲ್ಲ" ಎಂದು ಭಾರತದ ಅನುಕ್ರಮಣಿಕೆಯಲ್ಲಿಯೂ ಪರಿಸಮಾಪ್ತಿ

ಶ್ಲೋಕಗಳಲ್ಲಿಯೂ ಹೇಳಿದೆ. ಇದು ಒಂದು ವಿಧದಲ್ಲಿ ನಿಜ. ಏಕೆಂದರೆ, ಭಾರತ ಹುಟ್ಟಿದಾಗ ಅದು ತನಗಿಂತ ಹಿಂದೆ ಇದ್ದ ವೇದ, ಸ್ಮೃತಿ, ಇತಿಹಾಸ, ಪುರಾಣಗಳ ಸಾರವನ್ನೆಲ್ಲಾ ಒಳಗೊಂಡಿತು ; ವರ್ಣಾಶ್ರಮ ಧರ್ಮಗಳನ್ನೂ ಅದರಲ್ಲಿ ರಾಜಧರ್ಮವಾದ ರಾಜನೀತಿಯನ್ನೂ ಪ್ರತಿಪಾದಿಸಿತು. ಆಗ ಧರ್ಮಶಾಸ್ತ್ರ, ಅರ್ಥಶಾಸ್ತ್ರ, ಕಾಮಶಾಸ್ತ್ರ, ಶಿಲ್ಪಶಾಸ್ತ್ರ ಮುಂತಾದ ಲೌಕಿಕಶಾಸ್ತ್ರಗಳಾಗಲಿ, ತರ್ಕ, ಮೀಮಾಂಸ, ವೇದಾಂತ ಮುಂತಾದ ದರ್ಶನಗಳಾಗಲಿ, ಕಾಳಿದಾಸ, ಭವಭೂತಿ ಮುಂತಾದವರ ಕಾವ್ಯನಾಟಕಗಳಾಗಲಿ ಇನ್ನೂ ಹುಟ್ಟಿರಲಿಲ್ಲ. ಈಚೆಗೆ ಹುಟ್ಟಿದ ಪುರಾಣಗಳು ಪುರಾಣಲಕ್ಷಣಗಳಿಗಿಂತ ಮುಂದೆ ಹೋಗಿ ನಾನಾ ವಿಚಾರಗಳನ್ನು ತುಂಬಿಕೊಳ್ಳುತ್ತ ಬಂದುವು. ಎಲ್ಲ ಜನಕ್ಕೂ ಇಹಪರಸಾಧಕವಾದ ಎಲ್ಲಾ ವಿಷಯಗಳೂ ತಿಳಿಯಬೇಕೆಂಬುದು ಅವುಗಳ ಉದ್ದೇಶ. ಅದಕ್ಕೆ ಹೀಗೆ ಜ್ಞಾನಭಂಡಾರವಾಗಲು ಹೆದ್ದಾರಿಯನ್ನು ತೋರಿಸಿದ್ದು ಮಹಾಭಾರತ.

ಮಹಾಭಾರತದಲ್ಲಿ ಪ್ರತಿಪಾದಿತವಾಗಿರುವ ವಿಷಯವನ್ನು ವ್ಯಾಸರು ಬ್ರಹ್ಮನಿಗೆ ಹೀಗೆ ಬಿನ್ನವಿಸಿದರಂತೆ :

"ಇದರಲ್ಲಿ ಅನೇಕ ವೇದ ರಹಸ್ಯಗಳೂ ಅದರ ಮೇಲೆ ನಾನು ರಚಿಸಿರುವ ಉಪನಿಷತ್ತುಗಳಿಂದಲೂ [illegible] ವೇದಗಳ ಸಿದ್ಧಾಂತಗಳೂ, ಷಡಂಗಗಳಿಂದಲೂ [illegible] ಕಾಲತ್ರಯ ವಿಚಾರಗಳು, ಜಾತಿ, ಜರಾ, [illegible] ವಿವೇಚನೆಗಳೂ, [illegible] ಬೇರೆ ಬೇರೆ ವರ್ಣಾಶ್ರಮ ಧರ್ಮ [illegible] ಸ್ವರೂಪ ನಿರ್ಣಯವೂ, ಉಪ[illegible] ಪುರಾಣಗಳ [illegible] ವಿಧಾನಗಳೂ, [illegible] ಮತ್ತು [illegible] ಲಕ್ಷಣಗಳೂ, ತಪಸ್ಸಿನ ಮತ್ತು ಬ್ರಹ್ಮಚರ್ಯ [illegible] ತಾರೆಗಳ ವಿವಿಧ ಗ[illegible] ಚಂದ್ರಸೂರ್ಯರ ಗತಿಗಳೂ, ಗ್ರಹನಕ್ಷತ್ರ [illegible] ವೇದತ್ರಯದಲ್ಲಿ [illegible]ವಾದ ಪ್ರಮಾಣಗಳೂ, ಋಗ್ಯಜುಸ್ಸಾಮಂಗಳೆಂಬ [illegible] ಜ್ಞಾನಸ್ವರೂಪವು. [illegible] ಅಧ್ಯಾತ್ಮಜ್ಞಾನವೂ, ನ್ಯಾಯ ವೈದ್ಯಶಾಸ್ತ್ರಗಳೂ [illegible] ದೇವಮನುಷ್ಯ ಜಾತಿಗಳೂ, [illegible] ನದೀ ನದಿ ಸಮುದ್ರ [illegible] ಗಳೂ, ಪುಣ್ಯ[illegible] ತೀರ್ಥಕ್ಷೇತ್ರಗಳೂ [illegible] ಗಳೂ, ನಗರಗಳೂ [illegible] ಗಳೂ. [illegible] ಈ ಗ್ರಂಥದಲ್ಲಿ ಪ್ರತಿಪಾದಿಸಲ್ಪಟ್ಟಿವೆ [illegible] ಬ್ರಹ್ಮದೇವ [illegible]

[illegible] ಅಳಸಿಂಗರಾಚಾರ್ಯರ ಭಾಷಾಂತರ, [illegible] ದೇವಶಿಖಾಮಣಿ [illegible] (ಪ್ರಥಮ ಭಾಗ). ಪು. [illegible]

ಇವುಗಳಲ್ಲಿ ಯಾವ ಯಾವ ವಿಷಯಗಳು ಇಂದಿನ ಭಾರತ ಗ್ರಂಥದಲ್ಲಿ ಕಂಡುಬರುತ್ತವೆ. ಮೂಲದಲ್ಲಿ ಮೊಟ್ಟಮೊದಲು ಇದ್ದಿರಬಹುದಾದವು ಯಾವುವು ಎಂಬ ಚರ್ಚೆಗಾಗಲಿ, ಸಿದ್ಧಾಂತಕ್ಕಾಗಲಿ ಇಲ್ಲಿ ಅವಕಾಶವಿಲ್ಲ ; ಪ್ರಾಚೀನರು ಭಾರತದಿಂದ ಏನೇನನ್ನು ನಿರೀಕ್ಷಿಸಿದ್ದರು ಎಂಬುದನ್ನು ಈ ವಿವರಣೆ ನಿರ್ದೇಶಿಸುತ್ತದೆ ಎಂದು ಇಟ್ಟುಕೊಂಡರೆ ಸಾಕು.

ಭಾರತೀಯ ಸಂಸ್ಕೃತಿಯ ಒಂದು ಮುಖ್ಯ ಲಕ್ಷಣ, ಹೊಸದೆಂದು ಯಾವುದು ಬಂದರೂ ಅದನ್ನು ಒಳಕೊಂಡು, ಜೀರ್ಣಿಸಿಕೊಂಡು ಬೆಳೆಯುವುದು ; ಅದನ್ನು ವಿರೋಧಿಸಿ ಹಾಳುಮಾಡುವುದೂ ಹಾಳಾಗುವುದೂ ಅಲ್ಲ. ತತ್ವ ಒಂದೇ, ಎರಡೇ, ಸೊನ್ನೆಯೇ ಎಂಬ ಜಗಳ ಈಚಿನದು. ಮಹಾಭಾರತದಲ್ಲಿ ಪ್ರತಿಪಾದಿಸಿರುವ ತತ್ವ ಒಂದೂ ಆಗಬಹುದು, ಎರಡೂ ಆಗಬಹುದು ; ಶಿವ, ವಿಷ್ಣು ಇಬ್ಬರೂ ಅದರ ದೃಷ್ಟಿಯಲ್ಲಿ ದೊಡ್ಡವರು ; ವಿಶ್ವಚೈತನ್ಯದ ಅಭಿವ್ಯಕ್ತಿಗಳು. ಆದ್ದರಿಂದ ಅದು ಎಲ್ಲರಿಗೂ ಪೂಜ್ಯವಾದ ಗ್ರಂಥವಾಗಿದೆ ; ಎಲ್ಲರನ್ನೂ ಒಂದಾಗಿ ಕೂಡಿಸಲು ಸಹಾಯ ಮಾಡುವ ಸಾಧನವಾಗಿದೆ. ಮಹಾಭಾರತದಲ್ಲಿ ಉಕ್ತವಾದ ಯೋಗಶಾಸ್ತ್ರವು ವೈದಿಕ ಧರ್ಮಕ್ಕೆ ವಿರುದ್ಧವೆನ್ನಿಸಿಕೊಂಡಿದ್ದ, ಬೌದ್ಧ ಜೈನ ಮತಗಳಿಗೂ ಅವಕ್ಕೂ ಸಾಮಾನ್ಯ ಧರ್ಮ. ಅವರ ಮೊದಲ ಮೆಟ್ಟಲಾದ 'ಅಹಿಂಸೆ' ಎಲ್ಲರಿಗೂ ಪರಮಧರ್ಮ. ಭರತಖಂಡದಲ್ಲಿ ಬೌದ್ಧಧರ್ಮ ನಷ್ಟವಾಗಲಿಲ್ಲ ; ಹಂಚಿ ಅರಗಿ, ಅದೃಶ್ಯವಾಯಿತು. ಬುದ್ಧನು ದಶಾವತಾರಗಳಲ್ಲಿ ಒಬ್ಬನಾದನು. ಬೌದ್ಧರ ಎಷ್ಟೋ ಕಥೆಗಳು ಮಹಾಭಾರತದಲ್ಲಿಯೂ ಬೃಹತ್ಕಥೆಯಲ್ಲಿಯೂ ಬರುತ್ತವೆ. ಜೈನಪುರಾಣಗಳಲ್ಲಿ ರಾಮಾಯಣ, ಭಾರತ, ಭಾಗವತ, ಕಥೆಗಳು ಬೆರತೇ ಬರುತ್ತವೆ. ಇದಕ್ಕೆ ಮುಖ್ಯ ಕಾರಣ ಗುಣಪಕ್ಷಪಾತ, ತಾಳ್ಮೆ, ಧರ್ಮಬುದ್ಧಿ, ತತ್ತ್ವವಿವೇಚನೆ. ಸ್ವಾಮಿ ವಿವೇಕಾನಂದರು ಪಾಶ್ಚಾತ್ಯರನ್ನು ಕುರಿತು "ಕ್ರಿಸ್ತನು ನಿಮಗೆ ಅರ್ಥವಾಗುವುದಕ್ಕಿಂತ ಚೆನ್ನಾಗಿ ನಮಗೆ ಅರ್ಥವಾಗುತ್ತಾನೆ !" ಎಂದರು. ಇದು ಪ್ರಪಂಚದೊಡನೆ ಹೊಂದಿಕೊಂಡು ಹೋಗಬೇಕು ಎಂಬ ವಿಶಾಲ ಮನೋಧರ್ಮ ಉಳ್ಳವರ ನುಡಿ. ಇದನ್ನು ಇಂದು ಭರತಖಂಡವು ತನ್ನ ಒಳ ಆಡಳಿತದಲ್ಲಿಯೂ ಸರಿಯ ನೀತಿಯಲ್ಲಿಯೂ ಅಂತರಾಷ್ಟ್ರೀಯ ವ್ಯವಹಾರದಲ್ಲಿಯೂ ಅನುಸರಿಸಲು ಪ್ರಯತ್ನಿಸುತ್ತಿದೆ.

ಮಹಾಭಾರತವನ್ನು ಸಾಂಸಾರಿಕ ಕಥೆಯೆಂದೇ ನೋಡಿದರೂ ಅದು ತಂದೆತಾಯಿಗಳು, ಗಂಡಹೆಂಡಿರು, ಅಣ್ಣತಮ್ಮಂದಿರು. ಬಂಧುಬಳಗಗಳು, ಗುರುಹಿರಿಯರು, ಇವರ ಪರಸ್ಪರ ಹೊಂದಿಕೆಯನ್ನೇ ಬೋಧಿಸುತ್ತದೆ. ಸ್ನೇಹದಿಂದಲೇ ಸುಖ ; ದ್ವೇಷ, ಮಾತ್ಸರ್ಯ, ನೀಚತನ ಇವುಗಳಿಂದ ಸುಖವಿಲ್ಲ ಎಂದು ಬೋಧಿಸುತ್ತದೆ. ಗಂಡಹೆಂಡಿರಲ್ಲಿ ಯಾರಾದರೂ ಒಬ್ಬರು ಮುಖ್ಯವಾಗಿ ಹೆಂಗಸು, ತಾಳ್ಮೆಯಿಂದ ವರ್ತಿಸಿದರೆ ಆ ಸಂಸಾರ ಅಮೃತಮಯವಾಗುತ್ತದೆ. ಗಾಂಧಾರಿ, ಸಾವಿತ್ರಿ, ದಮಯಂತಿ ಮುಂತಾದವರು ಅಮರರಾಗಿರುವುದು ಇವರಿಂದ. ಪಾಂಡವರ ಸೋದರಸ್ನೇಹ ಎಲ್ಲ ಕಾಲಕ್ಕೂ ಎಲ್ಲರಿಗೂ ಮೇಲ್ಪಂಕ್ತಿ. ಮಹಾಭಾರತದಲ್ಲಿ ಕೊನೆಗೆ ಯುದ್ಧವೇನೋ ಆಯಿತು. ಆದರೆ ಅದನ್ನು ತಪ್ಪಿಸಿ ಸಂಧಿಮಾಡಿಸಲು ವಿವೇಕಿಗಳಾದವರೆಲ್ಲರೂ ಪ್ರಯತ್ನ ಮಾಡಿ ನೋಡಿದರು. ಮನಸ್ಸು ಚೆನ್ನಾಗಿದ್ದಾಗ ಎಲ್ಲರೂ ಸುಖವಾಗಿದ್ದರು ; ದೇಶ ಸುಭಿಕ್ಷವಾಗಿತ್ತು ; ಪ್ರಜೆ ನೆಮ್ಮದಿಯಾಗಿತ್ತು. ಅವಿವೇಕ ಪ್ರಬಲವಾದಾಗ, ಅಧರ್ಮ ಮೇಲ್ಗೈಯಾದಾಗ, ಸರ್ವನಾಶವಾಯಿತು. ಆದರೂ ಜೀವಕ್ಕೆ ಒಂದು ಸಂಸ್ಕಾರವೇ ; ಕಬ್ಬಿಣವನ್ನು ಕೆಂಪಗೆ ಕಾಯಿಸಿ ಕುಟ್ಟಿದ ಹೊರತು ಅದು ದಾರಿಗೆ ಬರುವುದಿಲ್ಲ. ಹೀಗೆ ದುರ್ಯೋಧನನಿಗೂ ಕೊನೆಗಾಲದಲ್ಲಿ ವಿವೇಕ ಹುಟ್ಟಿತು ಎಂದು ಹೇಳುತ್ತಾರೆ. ಪರಲೋಕದಲ್ಲಂತೂ ಅವನಿಗೆ ಪಾಂಡವರಂತೆಯೇ ವೀರಸ್ವರ್ಗ ಲಭಿಸಿತು. ದುರಂತವಾಗಲಿ, ಏನೇ

ಕಷ್ಟ ಬರಲಿ ಸುಖ ಬರಲಿ, ದುಃಖವಾಗಲಿ, ಆಗಲಿ ಸುಖವೊಂದನ್ನೇ ಆದರೂ ಧರ್ಮವನ್ನೇ ಹಿಡಿಯಬೇಕೇ, ಏನಾದರೂ ಆ ಸಾಲ ತೀರಿಸುವ ಯೋಚನೆ ಪಡೆಯಬೇಕೇ, ಸಾಲವನ್ನಾದರೂ ಮಾಡಿ—ಲೌಕಿಕ ಸಮಸ್ಯೆ. ಏಕೆಂದರೆ ಇಲ್ಲದೆ—ತುಪ್ಪ ಕುಡಿಯಬೇಕೇ ಎಂಬುದು ಪರಲೋಕವನ್ನು ನಂಬುವವ ಎಲ್ಲರೂ ಹಾತೊರೆಯುವುದು ಸುಖಕ್ಕೆ. ತೋರಿಸುವುದು ರಿಲ್ಲರೂ—ಎಲ್ಲ ಕಾಲ ಎಲ್ಲ ದೇಶಗಳಲ್ಲಿಯೂ—ಸದ್ಗತಿ ಕಷ್ಟದ ಮಾರ್ಗ. ಧರ್ಮದಿಂದ ಎಂದು ಹೇಳುತ್ತಾರೆ. ಆದರೆ ಧರ್ಮಮಾರ್ಗ ಬಿಟ್ಟು "ಅ ಇಕ್ಕಟ್ಟಿನ ಮಾರ್ಗ. ಮಹಾಭಾರತವು ಈ ಅರ್ತಿಗಳನ್ನು ಧರ್ಮಮಾರ್ಗದಿಂದ ಕಾಮಗಳನ್ನು ಅಗತ್ಯವಾಗಿ ಪಡೆಯಿರಿ, ಆದರೆ ಅದು ಇಹಪರಗಳೆರಡೂ ಲಭಿಸುತ್ತವೆ ಸಂಪಾದನೆ ಮಾಡಿದ್ದಾಗಲಿ ; ಆದರಿಂದ

ಎಂದು ಹೇಳುತ್ತದೆ. ಇತ್ಯಾಪಾರವನ್ನೆಲ್ಲಾ ಬಡಬಗ್ಗರ ಮುಂದೆ ಎಸೆದು ಶಿಲುಬೆಯನ್ನು ಹೊತ್ತು ನಡೆದು ಅದರ ಮೇಲೆ ಮೊಳೆ ಹೊಡೆಸಿಕೊಂಡು ಸಾಯುವುದಕ್ಕೆ ಸಿದ್ಧರಾಗಿರಿ ಎಂದೊ, ಕೈಹಿಡಿದ ಹೆಂಡತಿಯನ್ನೂ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನೂ ತೊರೆದುಹೋಗಿ ಎಂದೋ ಅದು ಹೇಳುವುದಿಲ್ಲ. ನಮ್ಮ ಪಾಲಿಗೆ ಬಂದಷ್ಟು, ನಾವು ಪಡೆದಷ್ಟು, ಕಷ್ಟವನ್ನೋ ಸುಖವನ್ನೋ ಅನುಭವಿಸೋಣ ; ಆದರೆ ಸುಖವನ್ನೇ ಗುರಿಯಾಗಿ ಮಾಡಿಕೊಂಡು ಅನ್ಯಾಯದಿಂದ ಅದನ್ನು ಪಡೆಯುವುದು ಬೇಡ ; ಪ್ರತಿಯೊಬ್ಬರೂ ಈ ಮಾರ್ಗವನ್ನು ಹಿಡಿದರೆ ದೇಶವು ಪರೋಪಕಾರದ ಕೊಂಪೆಯಾಗುತ್ತದೆ ; ಅವರಲ್ಲಿ ಶಾಂತಿಯೂ ಇರುವುದಿಲ್ಲ, ಸುಖವೂ ಇರುವುದಿಲ್ಲ ; ಅಪನಂಬಿಕೆ, ಭಯ ಇವೇ ತುಂಬಿರುತ್ತವೆ ; ಶಾಂತಿ ಇಲ್ಲದ ಸುಖ ಎಂಥ ಸುಖ ? "ಅಶಾಂತಸ್ಯ ಕುತಸ್ಸುಖಂ ?" (ಗೀತಾ ೨–೬೬) ಎಂದು ಹೇಳುತ್ತದೆ. ಶಾಂತಿಪರ್ವವೇ ಮಹಾಭಾರತದ ಹದಿನೆಂಟು ಪರ್ವಗಳಲ್ಲೆಲ್ಲಾ ಅತ್ಯಂತ ದೊಡ್ಡದು. (೧೪೫೩೫ ಶ್ಲೋಕಗಳು).

ಅಧಿಕಾರದಿಂದ ಹೇಳಲಿ, ಅನುನಯದಿಂದ ತಿಳಿಸಲಿ ಸ್ನೇಹದಿಂದ ಪ್ರೇರಿಸಲಿ; ನಮ್ಮ ಹಿತವರು ಹೇಳುವುದು ನಮ್ಮ ಹಿತಕ್ಕಾಗಿ ; ಮತ್ತು ಸಾಹಿತ್ಯ ಹೇಳುವುದು ಮನುಷ್ಯರು ಮನುಷ್ಯರಿಗಾಗಿ ಮನುಷ್ಯಜೀವನದಲ್ಲಿ ಕಂಡದ್ದನ್ನೂ, ಕೇಳಿದ್ದನ್ನೂ, ಅನುಭವಿಸಿದ್ದನ್ನೂ ತಿಳಿಸುತ್ತದೆ. ಆದ್ದರಿಂದ ಯಾವ ಸಾಹಿತ್ಯವಾಗಲಿ, ಜ್ಞಾನ ನೀಡಿದಾಗಲಿ, ಮನುಷ್ಯನ ಸಂಸಾರಕ್ಕೆ ಸಹಾಯವಾಗತಕ್ಕದ್ದೇ ; ಸಾಧನವಾಗತಕ್ಕದ್ದೇ ; ಅದು ಉಪಯೋಗಿಸಿಕೊಳ್ಳುವವರ ಯೋಗ್ಯತೆಯ ಮೇಲೆ ಹೋಗುತ್ತದೆ. ಆದ್ದರಿಂದ ಹಿಂದಿನವರು ಆಯಾ ಮಟ್ಟದ ಜನಕ್ಕೆ—"ಅಧಿಕಾರಿ"ಗಳಿಗೆ—ಬೇರೆ ಬೇರೆ ವರ್ಗದ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಗ್ರಂಥಗಳನ್ನು ಪಠ್ಯವಾಗಿ ವಿಧಿಸುವಂತೆ—ವಿಭಾಗ ಮಾಡಿಟ್ಟರು : ವೇದ ಕೆಲವರಿಗೆ, ಶಾಸ್ತ್ರ ಕೆಲವರಿಗೆ, ಕಾವ್ಯ ಕೆಲವರಿಗೆ, ಅವರಲ್ಲಿ ಪದ್ಯ ಕೆಲವರಿಗೆ, ಗದ್ಯ ಕೆಲವರಿಗೆ, ನಾಟಕ ಕೆಲವರಿಗೆ. ಮಹಾಭಾರತವಲ್ಲಿ [illegible] : ಅದು ಕಾವ್ಯವೂ ಹೌದು—ಮಹಾಕಾವ್ಯ. [illegible] ಕಾವ್ಯಗಳನ್ನು ಬರೆದ ಮಹಾಭಾರವಿ ಕಾಳಿದಾಸಾದಿಗಳೂ ಮಹಾಕಾವ್ಯ

ಲಕ್ಷಣವನ್ನು ಹೇಳಿದ ದಂಡಿ ಭಾಮಹಾದಿಗಳೂ ಹಿಂದಿನವರು. ಅವರ ಕಾಲದಲ್ಲಿ ನಾಟಕ, ಬಹುಶಃ, ಇನ್ನೂ ಹುಟ್ಟಿರಲಿಲ್ಲ. ಆದರೆ ಒಂದು ವಿಧದಲ್ಲಿ ಅದು ನಾಟಕವೇ. ಏಕೆಂದರೆ ಮಹಾಭಾರತವು ರಸಾರ್ಣವ, ಕಥೆಗಳ ಗಣಿ, ಲೋಕೋತ್ತರ ವ್ಯಕ್ತಿಗಳ ಪ್ರಪಂಚ. ಅದು ಇರುವುದು ಮೊದಲಿನಿಂದ ಕೊನೆಯವರೆಗೆ ಸಂಭಾಷಣೆಯ ರೂಪದಲ್ಲಿ—ನಾಟಕದ ಜೀವಾಳ ಅದರ ಸಂಭಾಷಣೆ. ಪದ್ಯದಲ್ಲಿದ್ದರೂ ಅದು ಗದ್ಯಪ್ರಾಯ ; ಗದ್ಯ ಬರುವುದು ಬಹು ಸ್ವಲ್ಪ ; ಸರಳ : ಭಾಗವತದ ಗದ್ಯದಂತೆ ಕಷ್ಟವಲ್ಲ. ಇತಿಹಾಸವೆನ್ನಿಸಿಕೊಂಡರೂ ಇದರಲ್ಲಿ ಮಧುರವಾದ ಕಾವ್ಯರಸವೂ ಹಾಲಿನಂಥ ನೀತಿಯೂ ತುಂಬಿವೆ. ಇದು ದ್ರೌಪದಿಯು ಹೊತ್ತು ತಂದ ವೀರಕಲಶ—ಆ ಒಬ್ಬ ದ್ರೌಪದಿ, ಒಬ್ಬ ಕೃಷ್ಣ, ಒಬ್ಬ ವಿದುರ ಸಾಕು, ವ್ಯಾಸರನ್ನು, ಭಾರತ ಸಾಹಿತ್ಯವನ್ನು, ಭಾರತೀಯ ಸಾಹಿತ್ಯವನ್ನು ಪ್ರಪಂಚದಲ್ಲಿ ಅಜರಾಮರವಾಗಿ ಮಾಡುವುದಕ್ಕೆ.

ಇಂಥ ಭಾರತದ ಕರ್ತೃವು ತೋಳೆತ್ತಿ 'ಅಯ್ಯೋ ನನ್ನ ಮಾತನ್ನು ಯಾರೂ ಕೇಳುತ್ತಿಲ್ಲವಲ್ಲ!' ಎಂದು ಸಂಸಾರದ ಹಿರಿಯನಂತೆ ನೊಂದುಕೊಂಡು 'ಧರ್ಮಾದರ್ಥಶ್ಚ ಕಾಮಶ್ಚ, ಸ ಕಿಮರ್ಥಂ ನ ಸೇವ್ಯತೇ ?' ಎಂದು ಕೂಗಿ ಸಾರುತ್ತಾನೆ. ಇದು ಭಾರತೀಯ ಸಂಸ್ಕೃತಿಯ ತಿರುಳು—ಭಾರತ ಸಾವಿತ್ರಿ.[1]

---

೧ ಜೀವನ, ೧೫-೮-೧೯೫೦

೬. ನಿಜಗಲ್ಲಿನ ರಾಣಿ

ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್: ೬-೬-೧೮೯೧: ೬-೬-೧೯೮೬

ಇನ್ನೂರು ವರುಷಗಳ ಹಿಂದೆ ನಮ್ಮ ಸೀಮೆಯಲ್ಲಿ ಅಲ್ಲಲ್ಲಿ ಏರ್ಪಟ್ಟಿದ್ದ ಅನೇಕ ಪಾಳೆಯಪಟ್ಟುಗಳಲ್ಲಿ ನಿಜಗಲ್ಲಿನಲ್ಲಿ ಒಂದು ಪಾಳೆಯಪಟ್ಟು ಇತ್ತು. ಆ ಕಾಲದಲ್ಲಿ ಮರಾಠೆಯವರು ಆಗಾಗ ಮೈಸೂರಿನ ಮೇಲೆ ದಂಡೆತ್ತಿ ಬರುತ್ತಿದ್ದರು. ಮಹಾರಾಷ್ಟ್ರ ದೇಶದಿಂದ ಬೆಂಗಳೂರ ಕಡೆಗೆ ಬರಬೇಕಾದರೆ ನಿಜಗಲ್ಲು ದಾರಿಯಲ್ಲಿ ಸಿಕ್ಕುವುದು. ಮರಾಠೆಯವರು ದಂಡೆತ್ತಿ ಬಂದಾಗ ನಿಜಗಲ್ಲಿನ ಪಾಳೆಯಗಾರರು, ಇಲ್ಲವೆ ಅವರಿಗೆ ಕಪ್ಪವನ್ನು ಕೊಟ್ಟು ಅವರ ಜೊತೆ ತಮ್ಮ ದಂಡು ಸ್ವಲ್ಪವನ್ನು ಸಹಾಯಕ್ಕೆ ಕಳುಹಿಸಬೇಕು, ಇಲ್ಲವೇ ತಾವು ಮೈಸೂರ ಅರಸರ ಸಾಮಂತರು ಎಂದು ಮರಾಠೆಯವರೊಂದಿಗೆ ಹೋರಾಡಬೇಕು. ದೇಶ ಆಗ ಇದ್ದ ಸ್ಥಿತಿಯಲ್ಲಿ ಪಾಳೆಯಗಾರನು ತನ್ನ ಇಷ್ಟದಂತೆ ಈ ಎರಡರಲ್ಲಿ ಯಾವುವನ್ನಾದರೂ ಮಾಡಬಹುದಾಗಿತ್ತು.

ನಿಜಗಲ್ಲಿನ ಆಗಣ ಪಾಳೆಯಗಾರರಲ್ಲಿ ರಾಮರಸನಾಯಕನು ಪ್ರಸಿದ್ಧನು. ಆತನ ತಂದೆ ತಿಮ್ಮರಸನಾಯಕನ ನಂತರ ಅವನು ಗದ್ದಿಗೆಯನ್ನೇರಿದನು. ಗದ್ದಿಗೆಯನ್ನೇರುವಾಗ್ಗೆ ಅವನಿಗೆ ಸುಮಾರು ಇಪ್ಪತ್ತೈದು ವರ್ಷ. ಅವನು [illegible] ಪಾಳೆಯಗಾರರಲ್ಲಿ ಒಳ್ಳೆಯವನೆಂದು ಹೆಸರು ಪಡೆದನು. ಪಾಳೆಯಕ್ಕೆ ಸೇರಿದ ಸುಮಾರು ಐವತ್ತು ಗ್ರಾಮಗಳನ್ನು ಬಿಟ್ಟು ಆಚೆಗೆ ಹೋಗಿ ಹಣ ವಸೂಲು ಮಾಡುತ್ತಿರಲಿಲ್ಲ; ತನ್ನ ಗ್ರಾಮಗಳಲ್ಲಿಯೂ ವಾಡಿಕೆಯಾಗಿ ಎಷ್ಟೋ ಅಷ್ಟನ್ನು ಮಾತ್ರ ವಸೂಲು ಮಾಡುತ್ತಿದ್ದನು; ಇದಕ್ಕೆ ಪ್ರತಿಯಾಗಿ ಆ ಗ್ರಾಮಗಳಿಗೆ ಸಾಮಾನ್ಯವಾದ ದೊಂಬಿದಾಳಿಗಳಿಂದ ರಕ್ಷಣೆಯನ್ನು ಕೊಟ್ಟಿದ್ದನು. ದೊಡ್ಡ ಸೈನ್ಯ ಬಂದಾಗ ಮಾತ್ರ ಅವನು ಊರುಗಳ ರಕ್ಷಣೆಗೆ ಹೋಗುತ್ತಿರಲಿಲ್ಲ. ಆ ಗ್ರಾಮಗಳೂ ಕೂಡ ಇವನಿಂದ ಅಂಥ ಸಮಯಗಳಲ್ಲಿ ಸಹಾಯವನ್ನು ನಿರೀಕ್ಷಿಸುತ್ತಿರಲಿಲ್ಲ. ನಾಯಕನು ನ್ಯಾಯ

ದಂತೆ ವಸೂಲಾದ ಕಂದಾಯದಿಂದ ಮೈಸೂರಿನ ಅರಸರ ನಿರೂಪ ಬಂದಾಗ ವಾಡಿಕೆಯಂತೆ ಕಪ್ಪವನ್ನು ಕಳುಹಿಸುತ್ತ ಮೈಸೂರ ಅರಸರ ಸಾಮಂತನಾಗಿ ನಡೆದುಕೊಳ್ಳುತ್ತಿದ್ದನು.

ರಾಮರಸನಾಯಕನಿಗೆ ಇಬ್ಬರು ಹೆಂಡಿರು. ಮೊದಲನೆಯವಳು ಲಕುಮವ್ವೆ, ಎರಡನೆಯವಳು ಗಿರಿಜವ್ವೆ. ರಾಮರಸನು ಗದ್ದಿಗೆಯನ್ನು ಏರುವುದಕ್ಕೆ ಕೊಂಚ ಮೊದಲು ಲಕುಮವ್ವೆಯನ್ನು ಮದುವೆಯಾಗಿದ್ದನು. ಹತ್ತು ವರ್ಷ ಕಳೆದರೂ ಇವರಿಗೆ ಮಕ್ಕಳಾಗಲಿಲ್ಲ. ಆಗಿನ ದಿನದಲ್ಲಿ ಅದರಲ್ಲೂ ಪಾಳೆಯಗಾರರ ವಂಶಗಳಲ್ಲಿ ತಂದೆಯ ಜೊತೆಗೆ ಎದವಿದ ಮಗನಿಲ್ಲದಿದ್ದರೆ ಮುಂದಕ್ಕೆ ವಂಶ ನಡೆಯುವುದೆಂಬ ಆಸೆ ಕಡಿಮೆ. ರಾಮರಸನಿಗೆ ಒಡಹುಟ್ಟಿದವರೂ ಇಲ್ಲ. ಮಕ್ಕಳಾಗದುದರಿಂದ ನಾಯಕನು ಈ ಪಾಳೆಯಪಟ್ಟು ತನ್ನೊಂದಿಗೇ ಮುಗಿಯುವುದೇನೋ ಎಂದು ಒಂದೊಂದು ವೇಳೆ ಚಿಂತಿಸುವನು. ಮಕ್ಕಳಾಗಲೆಂದು ಹಾರೈಸಿ ಸಾಮಾನ್ಯವಾಗಿ ಮಾಡಬಹುದಾಗಿದ್ದದಕ್ಕಿಂತ ಸ್ವಲ್ಪ ಹೆಚ್ಚಾಗಿ ಬಾವಿಗಳನ್ನು ತೋಡಿಸಿ ತೋಪುಗಳನ್ನು ಹಾಕಿಸಿ ಮಂಟಪಗಳನ್ನು ಕಟ್ಟಿಸಿ ದೇವರ ಸೇವೆಯನ್ನು ನಡೆಯಿಸಿದನು. ಊರಿನಲ್ಲಿ ಪೂರ್ವದಿಂದ ಇದ್ದ ಶ್ರೀರಾಮ ದೇವರ ದೇವಾಲಯವನ್ನು ಭದ್ರಪಡಿಸಿ ಅಲ್ಲಿ ಚೆನ್ನಾಗಿ ಪೂಜೆ ನಡೆಯುವುದಕ್ಕೆ ಏರ್ಪಾಡು ಮಾಡಿದನು. ಆದರೆ ಭಗವಂತನು ಮಕ್ಕಳನ್ನು ಅನುಗ್ರಹಿಸಲಿಲ್ಲ. ಹೀಗಿರುತ್ತಿರುವಲ್ಲಿ ಊರಿನ ಮುಖಂಡರು ಒಂದು ಸಲ ನಾಯಕನಿಗೆ ನೆಂಟರಲ್ಲಿ ಯಾರನ್ನಾದರೂ ದತ್ತು ತೆಗೆದುಕೊಳ್ಳಬೇಕೆಂದು ಜನದ ಪರವಾಗಿ ಒಂದು ಬಿನ್ನಹ ಮಾಡಿದರು. ರಾಮರಸನು ಇದಕ್ಕೆ ಒಪ್ಪಲಿಲ್ಲ. ಇದು ತಿಳಿದು ಲಕುಮವ್ವೆ ತನ್ನ ನೆಂಟರಲ್ಲಿ ಸೇರಿದ ಗಿರಿಜವ್ವೆಯನ್ನು ಅರಮನೆಗೆ ಕರೆತಂದು ಎರಡು ಮೂರು ವರುಷ ಇರಿಸಿಕೊಂಡಿದ್ದು ನಾಯಕನ ಕಣ್ಣಿಗೆ ಬೀಳುವಂತೆ ಮಾಡಿ ಅವಳನ್ನು ಮದುವೆಯಾಗಬೇಕೆಂದು ಅವನನ್ನು ಬೇಡಿದಳು. ರಾಮರಸನು ಮೊದಲು, ಮರ್ಯಾದೆಗಾಗಿಯೋ ನಿಜವಾಗಿಯೋ, ಬೇಡವೆಂದು ಹೇಳಿದನು. ಲಕುಮವ್ವೆ "ನಾನು ಹತ್ತು ವರ್ಷ ನಿಮ್ಮ ಸೇವೆಯನ್ನು ಮಾಡಿದ್ದೇನೆ. ನೀವು ನನ್ನನ್ನು ಗಿಳಿಯಂತೆ ಪೋಷಿಸಿದಿರಿ. ಆದರೆ ನನ್ನಿಂದ ನಿಮ್ಮ ವಂಶ ಬೆಳೆಯಲಿಲ್ಲ. ನನಗೆ ಪ್ರಾಪ್ತಿಯಿಲ್ಲ. ನನಗೆ ಫಲ ಇಲ್ಲದಿದ್ದರೆ. ಕುಲ ಏತಕ್ಕೆ ಅಳಿಯಬೇಕು ? ಇವಳನ್ನು ಮದುವೆ

ಯಾಗಿ. ಅವಳಿಗೊಂದು ಮಗುವಾದರೆ ಮನೆ ಉಳಿಯುತ್ತದೆ” ಎಂದಳು. “ಅವಳು ನಿನ್ನನ್ನು ಅಸಡ್ಡೆ ಮಾಡಿದರೆ ಏನು ಮಾಡುವೆ ?” ಎಂದು ನಾಯಕನು ಕೇಳಿದನು. ಲಕುಮವ್ವೆ “ನಾನು ಸಾಕಿದ ಹುಡುಗಿ. ನನಗೆ ಅಸಡ್ಡೆ ಏನು ಮಾಡುತ್ತಾಳೆ ? ನಾನು ಹಾಕಿದ್ದನ್ನು ಊಟ ಮಾಡುತ್ತಾಳೆ. ನಾನು ಹೇಳಿದಂತೆ ನಡೆದುಕೊಳ್ಳುತ್ತಾಳೆ. ಇದಕ್ಕೆ ನೀವು ಯೋಚನೆ ಮಾಡಬೇಡಿ” ಎಂದಳು. ರಾಮರಸನು ಒಪ್ಪಿ ಗಿರಿಜವ್ವೆಯನ್ನು ಮದುವೆ ಯಾದನು.

ಗಿರಿಜವ್ವೆ ಬಲು ಚಲುವೆ. ಮದುವೆಯಾದಂದಿನಿಂದ ಅವಳು ನಾಯಕನ ಮತ್ತು ಲಕುಮವ್ವೆಯ ಶುಶ್ರೂಷೆಯನ್ನು ತನ್ನ ಮುಖ್ಯ ಕೆಲಸವೆಂದು ವಹಿಸಿದಳು. ನಾಯಕನು ಶಂಕೆಪಟ್ಟಂತೆ ಅವಳು ಲಕುಮವ್ವೆಯನ್ನು ಅಶ್ರದ್ಧೆಯಿಂದ ಕಾಣಲಿಲ್ಲ. ಸಂಬಂಧದವರೇನೋ ಹಿರಿಯರಸಿಯನ್ನು ಒತ್ತಟ್ಟಗಿಡುವುದಕ್ಕೆ ಯತ್ನ ಮಾಡಿದರು ; ಗಿರಿಜವ್ವೆಗೂ ಬೋಧಿಸಿದರು. ಗಿರಿಜವ್ವೆಯಾದರೆ “ಮನೆ ಅವಳದು. ತಾನಿದ್ದುಕೊಂಡೇ ನನ್ನನ್ನು ಕರೆತಂದಳು. ಅವಳು ಕೊಟ್ಟ ಅರ್ಧ ನನ್ನದು. ನಾನು ಆ ಸಾಲವನ್ನೇ ಹರಿಸಬೇಕಾಗಿದೆ. ಅವಳ ಅರ್ಧವನ್ನು ಕಿತ್ತುಕೊಂಡು ಪಾಪ ಕಟ್ಟಿಕೊಳ್ಳಲೇ ? ದೇವರ ಕೃಪೆಯಿಂದ ಈಗ ರಾಣಿಯಾದೆ. ಅನ್ಯಾಯ ಮಾಡಿದರೆ ಮುಂದಿನ ಜನ್ಮಕ್ಕೆ ತೊತ್ತಾದೇನು” ಎಂದಳು. ಗಿರಿಜವ್ವೆ ಹೀಗೆ ನಡೆದುಕೊಳ್ಳುತ್ತಿದ್ದುದರಿಂದ ಸಂಸಾರ ದಲ್ಲಿ ಸುಖ ದಿನೇ ದಿನೇ ವೃದ್ಧಿಯಾಯಿತು. ಲಕುಮವ್ವೆ ಹೊರಗೆ ಧೈರ್ಯ ದಿಂದ ಮಾತನಾಡಿದರೂ ಮನಸ್ಸಿನಲ್ಲಿ ಇವಳೇನು ಮಾಡುವಳೋ ಎಂದು ಮೊದಲಲ್ಲಿ ಶಂಕೆಪಡುತ್ತಿದ್ದಳು. ಒಂದು ವರ್ಷದ ದಿನ ಗಿರಿಜವ್ವೆಯ ನಡತೆ ಯನ್ನು ನೋಡಿ, ತಾನು ಮಾಡಿದ ಕೆಲಸ ಇಷ್ಟು ಒಳ್ಳೆಯದಾಯಿತೆ, ಎಂದು ಬಹಳ ಸಂತೋಷಪಟ್ಟಳು. ಗಿರಿಜವ್ವೆಯನ್ನು ತನ್ನ ಮಗಳಂತೆ ಕಾಣುತ್ತ ಅವಳಿಗೆ ಒಡವೆ ವಸ್ತ್ರಗಳನ್ನೆಲ್ಲ ತಾನೇ ನೋಡಿ ಮಾಡಿಸಿ ರಾಮರಸನಿಗೆ ಸಂಸಾರಸುಖದಲ್ಲಿ ಏನೂ ಕಡಿಮೆ ಇಲ್ಲದಂತೆ ನೋಡಿಕೊಂಡಳು. ತಾನು ವ್ರತ, ಸೇವೆ, ಪೂಜೆ ಇವುಗಳಲ್ಲಿ ಮನಸ್ಸನಿಟ್ಟಳು.

ನಾಯಕನಿಗೂ ಅವನ ರಾಣಿಯರಿಗೂ ಪರಸ್ಪರ ಅಂತಸ್ತಾಪಗಳು ಇಲ್ಲದೆ ಇದ್ದರೂ, ಅರಮನೆಯಲ್ಲಿ ಎಲ್ಲವೂ ಮೊದಲಿನಂತೆ ಇತ್ತೆಂದು ಹೇಳ

ವಂತಿರಲಿಲ್ಲ. ಮದುವೆಯಾಗುವವರೆಗೆ ಗಿರಿಜವ್ವ ಒಬ್ಬಳೇ ಇದ್ದರೂ ಅದಾದ ಮೇಲೆ ಅವಳ ತಮ್ಮನೊಬ್ಬನೂ ತಾಯಿ ಒಬ್ಬಳೂ ಬಂದು ಅರಮನೆಯಲ್ಲೇ ನಿಂತರು. ಈ ತಾಯೇ ಗಿರಿಜವ್ವಗೆ ಲಕುಮವ್ವಯನ್ನು ಅಶ್ರದ್ಧೆಯಿಂದ ಕಾಣೆಂದು ಬೋಧಿಸಿದ್ದು, ಗಿರಿಜವ್ವ ತನ್ನ ಮಾತನ್ನು ಕೇಳದಿರಲು ಇವಳು ಅರಮನೆಯಲ್ಲಿ ಇತರರೊಂದಿಗೆ ಲಕುಮವ್ವಯ ವಿಚಾರವಾಗಿ ಸಣ್ಣ ಮಾತು ಗಳನ್ನು ಆಡುವುದಕ್ಕೆ ಮೊದಲು ಮಾಡಿದಳು. ಲಕುಮವ್ವ ತನ್ನ ಗುಣದಿಂದ ಎಲ್ಲರಿಗೂ ಬೇಕಾದವಳಾಗಿ ತಾಯಂತೆ ಇದ್ದವಳು. ಇದೊಂದನ್ನೂ ಕಿವಿಗೆ ಹಾಕಿಕೊಳ್ಳದೆ ಅವರೇ ಸರಿಹೋಗುತ್ತಾರೆ ಎಂದು ಸುಮ್ಮನಿದ್ದಳು. ಗಿರಿಜವ್ವಯ ತಮ್ಮ ಹಳ್ಳಿಯಲ್ಲಿ ಪೋಲಿಯಾಗಿದ್ದವನು ಅರಮನೆಗೆ ಬಂದು ಅಲ್ಲಿಯ ಊಟ ಉಪಚಾರಗಳಿಂದ ಪುಂಡನಾಗಿ ಬೆಳೆದನು. ದೊರೆಯ ಮೈದುನನಾದುದರಿಂದ ಇವನಿಗೆ ಪುಂಡುತನಕ್ಕೆ ಸಾಕಷ್ಟು ಹೆಚ್ಚು. ಊರಿನ ತುಂಟರೊಂದಿಗೆ ಸೇರಿ ಓಡಿಯಾಡುವನೆಂದೂ ಸಂಸಾರಿ ಹೆಣ್ಣು ಮಕ್ಕಳ ವಿಷಯದಲ್ಲಿ ಒಂದೆರಡು ಸಲ ಧೂರ್ತತೆಯಿಂದ ನಡೆದುಕೊಂಡನೆಂದೂ ಅರ ಮನೆಯಲ್ಲಿ ತಿಳಿದು ಒಂದೆರಡು ಸಲ ಸ್ವಲ್ಪ ಮಾತುಗಳಾದವು. ನಾಯಕ ನಾಗಲಿ ಲಕುಮವ್ವಯಾಗಲಿ ಇಂಥ ಪುಂಡಾಟಗಳಿಗೆ ಅವಕಾಶ ಕೊಡುವವರಲ್ಲ. ಕಸ್ತೂರಿನಾಯಕನಿಗೆ ಆ ಎರಡು ಸಲವೂ ಜೈಗಳಾದವು. ತಾಯಿ, ತಮ್ಮನ, ನಡತೆ ಸರಿಯಾಗಿರದಿದ್ದರೂ ಗಿರಿಜವ್ವ ತಾನು ಅರಮನೆಯ ಊಟಮಾಡುತ್ತಾ ಅವರನ್ನು ಹಳ್ಳಿಯ ಕೂಳಿಗೆ ಏಕೆ ಕಳುಹಿಸಬೇಕೆಂದು ಎಲ್ಲವನ್ನೂ ಸಹಿಸಿ ಕೊಂಡು ಸುಮ್ಮನಿರುತ್ತಿದ್ದಳು.

ಮದುವೆಯಾದ ಎರಡನೆಯ ವರ್ಷ ಗಿರಿಜವ್ವ ಒಬ್ಬ ಮಗನನ್ನು ಹೆತ್ತಳು. ನಾಯಕನಿಗೂ ಲಕುಮವ್ವಗೂ ಬಹಳ ಆನಂದವಾಯಿತು. ಊರಿನ ಜನವೆಲ್ಲ ಬಹಳ ಸಂತೋಷಪಟ್ಟರು. [illegible] ದೇವಸ್ಥಾನಗಳಲ್ಲೆಲ್ಲ ವಿಶೇಷ ಪೂಜೆಗಳು ನಡೆದವು. ನಾಯಕನ ವಂಶ ಬೆಳೆಯುವಂತೆ ಆಯಿತೆಂದು ಎಲ್ಲರೂ ಸ್ವಸ್ಥ ಚಿತ್ತರಾದರು.

ಬೀಗರುಗಳಲ್ಲಿ ಮರಾಠೆಯವರು ಸದಾಶಿವನಾಯಕನ ಕೈಕೆಳಗೆ ದಂಡೆತ್ತಿ ಬಂದರು. ರಾಮಚಂದ್ರನಾಯಕನು ಗದ್ದಿಗೆಯನ್ನೇರಿದ ಮೇಲೆ ಅವರು ಇವನ ಮೇಲೆ ಎರಡು ಸಲ ಬಂದಿದ್ದರು. ಕೆಲವುಸಲ ನಾಯಕನು ಅವರಿಗೆ

ತಾನು ಮೈಸೂರಿನವರಿಗೆ ಸಾಮಂತನೆಂದೂ ಮರಾಠೆಯವರು ಮೈಸೂರವರನ್ನು ಗೆದ್ದರೆ ಅವರಿಗೆ ಸಾಮಂತನಾಗುವೆನೆಂದೂ ಆಗ್ಗೆ ಮೈಸೂರಿಗೆ ಕೊಡಬೇಕಾಗಿದ್ದ ಕಪ್ಪವನ್ನು ಮರಾಠೆಯವರಿಗೆ ಸಲ್ಲಿಸುವೆನೆಂದೂ ಹೇಳಿಕಳುಹಿಸಿದನು. ಅವರು ಒಪ್ಪದೆ ಕೋಟೆಯ ಹೊರಗೆ ಕಾದಿದ್ದು ಹಳ್ಳಿಯ ಜನಗಳನ್ನು ಹಿಂಸಿಸುವುದಕ್ಕೆ ನೋಡಿದರು. ಆ ಜನರು ಎಂದಿನಂತೆ ಮನೆಮಠ ಬಿಟ್ಟು ಕಾಡಿಗೆ ಹೊರಟರು. ಹಳ್ಳಿಯವರನ್ನು ಕಾಡಿಗೆ ಅಟ್ಟಿ ಮರಾಠೆಯವರಿಗೆ ಫಲವೇನೂ ಇಲ್ಲ. ರಾಮರಸನಾದರೆ ಕೋಟೆಯಲ್ಲಿ ಭದ್ರವಾಗಿ ನಿಂತು ನೀವು ಏನಾದರೂ ಮಾಡಿ ಎಂದುಬಿಟ್ಟನು. ರಾಮರಸನು ಇಷ್ಟು ಧೈರ್ಯ ಮಾಡುವುದಕ್ಕೆ ನಿಜಗಲ್ ಕೋಟೆ ದುರ್ಗಮವಾಗಿದ್ದುದೇ ಕಾರಣ. ಆ ಸಲ ಮರಾಠೆಯವರು ಬಹಳ ದಿನ ಕಾಯುವುದಕ್ಕಿರಲಿಲ್ಲ. ಐದು ದಿವಸ ನೋಡಿ ನಿಜಗಲ್ಲನ್ನು ಬಿಟ್ಟು ಸುಲಭವಾಗಿ ಸಗ್ಗಬಹುದಾದ ಬೇರೆಯ ಪಾಳೆಯಕ್ಕೆ ಹೊರಟರು. ರಾಮರಸನು ಸುಲಭದಲ್ಲಿಯೇ ಕಷ್ಟವನ್ನು ತಪ್ಪಿಸಿಕೊಂಡ ಹಾಗಾಯಿತು. ಎರಡನೆಯ ಸಲ ಬಂದಾಗ ರಾಮರಸನು ಸುತ್ತಲ ಪಾಳೆಯಗಾರರಿಗೆ ಹೇಳಿಕಳುಹಿಸಿ ಅವರ ಕಡೆಯ ಸೈನ್ಯ ಬಂದು ಮರಾಠೆಯವರ ಪಾಳೆಯದಿಂದ ಒಂದು ಮೈಲಿಯಷ್ಟು ದೂರದಲ್ಲಿ ನಿಲ್ಲುವ ಹಾಗೆ ಏರ್ಪಾಡು ಮಾಡಿ, ಆ ಸೈನ್ಯವು ಮೈಸೂರರಸರ ಕಡೆಯಿಂದ ಈ ಪ್ರಾಂತ್ಯದಲ್ಲಿ ಇರಿಸಲ್ಪಟ್ಟಿರುವ ಸೈನ್ಯವೆಂದೂ ಇನ್ನೂ ದೊಡ್ಡ ಸೈನ್ಯ ಬರುವುದರಲ್ಲಿದೆಯೆಂದೂ ವದಂತಿ ಹುಟ್ಟಿಸಿದನು. ಮರಾಠೆಯವರು ಹೇಗಾದರೂ ಕೋಟೆಯೊಳಕ್ಕೆ ಪ್ರವೇಶಿಸಿದರೆ ಮುಂದಕ್ಕೆ ಇದು ತಮ್ಮ ಪ್ರಯಾಣಗಳಲ್ಲೆಲ್ಲಾ ತಮಗೆ ಅನುಕೂಲವಾದ ಒಂದು ಬಿಡಾರವಾಗುವುದೆಂದು ಯೋಚಿಸಿ ಪಿತೂರಿಯಿಂದ ಬಾಗಿಲನ್ನು ತೆಗೆಯಿಸಿಕೊಳ್ಳಲು ಯತ್ನ ಮಾಡಿದರು. ಜನರು ರಾಮರಸನ ವಿಷಯದಲ್ಲಿ ಎರಡೆಣಿಸುವವರಲ್ಲ. ಆದರಿಂದ ಮರಾಠೆಯವರು ಹತ್ತು ದಿನ ಕೋಟೆಯ ಹೊರಗೆ ಕಾದರೂ ಪ್ರಯೋಜನವಾಗಲಿಲ್ಲ. ಅಷ್ಟರಲ್ಲಿ ಇನ್ನೊಂದು ದಾರಿಯಲ್ಲಿ ಮುಂದುವರಿದು ಹೋಗಿದ್ದ ಮರಾಠೆಯವರ ಪ್ರಮುಖ ಸೇನಾಪತಿ ಈ ದಳ ಬಂದು ತನ್ನ ಜೊತೆಗೆ ಸೇರಬೇಕೆಂದು ಹೇಳಿ ಕಳುಹಿಸಿದನು. ಆ ಸಲವೂ ನಿಜಗಲ್ಲಿನ ಮೇಲೆ ಕೈಸಾಗದೆ ಮರಾಠೆಯವರು ಹಿಂದಕ್ಕೆ ಹೋಗಬೇಕಾಯಿತು.

ಮೂರನೆಯ ಸಲ ಬರುವಲ್ಲಿ, ಹಿಂದಿನ ಎರಡು ಸಲ ರಾಮರಸನಾಯಕನು ಕಪ್ಪವನ್ನು ಕೊಡದೇ ಇದ್ದರೂ ಹೆದರಿ ಕೋಟೆಯೊಳಗೆ ನಿಂತಿದ್ದನೆಂಬ ಕಾರಣದಿಂದ ಅವರು ಕಡಿಮೆ ಜನ ಬಂದರು. ಹಿಂದಿನ ಸಲದ ಪರಿಶ್ರಮದಿಂದ ರಾಮರಸನಾಯಕನೂ ಸ್ವಲ್ಪ ಪ್ರಯೋಜನವನ್ನು ಪಡೆದಿದ್ದನು. ನೆರೆಯ ಒಬ್ಬಿಬ್ಬರು ಪಾಳೆಯಗಾರರ ಸಹಾಯದಿಂದ ಸ್ವಲ್ಪ ಸೈನ್ಯವನ್ನು ಸೇರಿಸಿ, ಅದಕ್ಕೆ ತಾನು ಮುಂದಾಳಾಗಿ ನಿಂತು ಮರಾಠೆಯವರ ಮೇಲೆ ಕೈಮಾಡು ವುದಕ್ಕೆ ಏರ್ಪಾಡು ಮಾಡಿಕೊಂಡಿದ್ದನು. ಕಡಿಮೆ ಸೈನ್ಯ ಬಂದುದರಿಂದ ಈ ಏರ್ಪಾಟಿಗೆ ಅನುಕೂಲವೇ ಆಯಿತು. ಮೂರು ದಿನ ಒಳ್ಳೆಯ ಮಾತಿನಲ್ಲಿ ತಾನು ಏನೂ ಕೊಡಲಾಗುವುದಿಲ್ಲವೆಂದು ಹೇಳಿಕಳುಹಿಸಿದರೂ ಅವರು ಒಪ್ಪದೆ ಇರಲು, ನಾಲ್ಕನೆಯ ದಿನ ಬೆಳಗಾಗ ಮರಾಠೆಯ ಸೇನೆಯವರು ಎದ್ದು ಕಣ್ಣು ಹೊಸಕಿಕೊಳ್ಳುವ ಮುಂಚೆಯೇ ಅವರ ಪಾಳಯದ ಮೇಲೆ ನುಗ್ಗಿ ಅವರನ್ನು ಚೆಲ್ಲಾಪಿಲ್ಲಿ ಓಡಿಸಿದನು. ಮರಾಠೆಯವರು ಕೆಟ್ಟೆವೆಂದು ಆ ಸಲಕ್ಕೆ ಬರಿಯ ಕೈಯಲ್ಲಿ ಹೊರಟುಹೋದರು.

ಇದಾದ ಕೆಲವು ದಿವಸದ ಮೇಲೆ ಅರಸನ ಮಗನ ಹುಟ್ಟಿದ ಹಬ್ಬ ಬಂದಿತು. ಮರಾಠೆಯವರ ಮೇಲೆ ಯುದ್ಧ ಮಾಡಿ ಗೆದ್ದಿದ್ದ ಸಂತೋಷ ಒಂದು ಕಡೆ. ಅರಸುಗುವರನ ಹುಟ್ಟಿದ ಹಬ್ಬ ಒಂದು ಕಡೆ. ಜನರ ಉತ್ಸಾಹಕ್ಕೆ ಮೇರೆಯಿಲ್ಲವಾಯಿತು. ಊರಿನಲ್ಲಿ ದೇವರ ಉತ್ಸವಗಳು ಬಹಳ ವಿಜೃಂಭಣೆ ಯಿಂದ ನಡೆದು, ನಾಲ್ಕಾರು ದಿನ ಊರಿನ ಜನರು ಬ್ರಾಹ್ಮಣರಿಗೂ ಬಡ ಬಗ್ಗರಿಗೂ ಸಮಾರಾಧನೆಗಳನ್ನು ನಡೆಯಿಸಿದರು. ಊರಿನಲ್ಲೆಲ್ಲಾ ಭಜನೆ. ಮುಖ್ಯವಾದ ಉತ್ಸವಗಳೆಲ್ಲ ಅರಮನೆಯ ಕಡೆಯಿಂದ ನಡೆದುವು. ರಾಮರಸ ನಾಯಕನು ದೇವರ ಮುಂದೆ ನಮ್ರನಾಗಿ ನಿಂತು ಕಿಂಕರನಂತೆ ನಡೆದು ಕೊಂಡನು. ಹಿರಿಯರೂ ಪುಣ್ಯವಂತರೂ ಭಕ್ತರಂತೆ ನಡೆದರೆ ಜನರು ಅವರಿಗೆ ಅತಿಶಯವಾದ ಪ್ರೀತಿ ಗೌರವಗಳನ್ನು ತೋರಿಸುವರು. ರಾಮರಸನು ಈ ಕಾರಣದಿಂದ ಪ್ರಜೆಗಳ ವಿಶ್ವಾಸವನ್ನು ಎಂದಿಗಿಂತ ಹೆಚ್ಚಾಗಿ ಸಂಪಾದಿಸಿ ಕೊಂಡನು.

ಊರಿನಲ್ಲಿ ಉತ್ಸವಗಳು ಹೆಚ್ಚಿದುವೆಂದರೆ ಬರಿಯ ಒಳ್ಳೆಯದು ಮಾತ್ರ ಹೆಚ್ಚಾಗುವುದಿಲ್ಲ. ಆಗ ಒಳ್ಳೆಯವರು ಸಂತೋಷಪಡುವಂತೆ ದುಷ್ಟರೂ

ಸಂತೋಷಪಡುತ್ತಾರೆ. ನಿಜಗಲ್ಲಿನ ಈ ಉತ್ಸವಗಳಲ್ಲಿ ಊರಿನ ಸಣ್ಣ ಪುಟ್ಟ ಪೋಲಿ ಪುಂಡರು ಒಟ್ಟುಗೂಡಿ ತಾವೂ ತಮಾಷೆಯಾಗಿ ಕಾಲವನ್ನು ಕಳೆದರು. ಇವರಿಗೆಲ್ಲ ಕಸ್ತೂರಿನಾಯಕನು ಮುಂದಾಳು. ರಾತ್ರಿ ಇವರು ಬಹಳ ಹೊತ್ತಾಗುವ ತನಕ ಒಂದು ಕಡೆ ಗುಂಪುಕೂಡಿ ಮದ್ಯವನ್ನು ಕುಡಿದು ಎರಡು ಮೂರು ದಿನ ಹುಚ್ಚಾಪಟ್ಟೆ ಆಡಿದರು. ಇದು ರಾಮರಸನಾಯಕನ ಕಿವಿಗೆ ಬಿದ್ದು ಅವನು ಗಿರಿಜವ್ವೆಯನ್ನು ಕರೆದು ಅವಳ ತಮ್ಮನಿಗೆ ಬುದ್ಧಿ ಹೇಳ ಬೇಕೆಂದು ಹೇಳಿದನು. ಗಿರಿಜವ್ವೆ ತಮ್ಮನಿಗೆ ಈ ಮಾತನ್ನು ತಿಳಿಸಿದಳು. "ನಾನು ತಮಾಷೆಯಾಗಿರುವುದಕ್ಕೆ ನಿಮ್ಮದೇನು ಅಡ್ಡಿ ?" ಎಂದು ಕಸ್ತೂರಿ ನಾಯಕನು ಒದರಿದನು. ಅಂದಿನ ರಾತ್ರಿ ಎಂದಿಗಿಂತ ಹೆಚ್ಚು ಮದ್ಯ ಖರ್ಚಾ ಯಿತು. ಕಸ್ತೂರಿಗೆ ಅದಕ್ಕೆ ತಕ್ಕ ಹಾಗೆ ಬುದ್ಧಿ ಸ್ವಾಧೀನ ತಪ್ಪಿತು. ದೇವರ ಉತ್ಸವದ ಗಲಭೆಯಲ್ಲಿ ಅವನೂ ಅವನ ಜೊತೆಯವರೂ ಯಾರೋ ಒಬ್ಬ ಕುಲಸ್ತ್ರೀಯ ಮೇಲೆ ಕೈಹಾಕಿದರು. ಜನರು ಇದನ್ನು ತಡೆಯಲಾರದೆ ಪ್ರತ್ಯಕ್ಷ ವಾಗಿ ರಾಜನ ಬಳಿಗೆ ಬಂದು, ತಮ್ಮ ಮೈದುನನಿಂದ ನಮ್ಮ ಸಂಸಾರಗಳ ಮಾನ ಉಳಿಯುವಂತಿಲ್ಲ, ಎಂದು ಹೇಳಿಕೊಂಡರು. ಮಾರನೆಯ ದಿನ ರಾಮರಸ ನಾಯಕನು ಕಸ್ತೂರಿಯನ್ನು ಸಭೆಗೆ ಕರೆಯಿಸಿ, ಏನು ನಡೆಯಿ ತೆಂಬುದನ್ನು ಪಂಚಾಯಿತರ ಸಮಕ್ಷಮ ವಿಚಾರಣೆ ಮಾಡಿ, ಮೈದುನನು ತಪ್ಪು ಮಾಡಿದ್ದು ನಿಷ್ಕರ್ಷೆಯಾಗಿ ತಿಳಿಯಲು ಅವನನ್ನು ಎಲ್ಲರೆದುರಿಗೆ ಛೀಗುಟ್ಟಿ, ಹೀಗೆ ಮತ್ತೆ ಮಾಡಬಾರದು, ಮಾಡಿದರೆ ಕ್ರೂರವಾದ ಶಿಕ್ಷೆ ಯನ್ನು ವಿಧಿಸುವೆವು, ಎಂದು ಎಚ್ಚರಿಸಿದನು : ಅರಮನೆಯಲ್ಲಿ ಗಿರಿಜವ್ವೆ ಯನ್ನು ಕುರಿತು, ನಿನ್ನ ತಮ್ಮನಿಂದ ನನಗೆ ಮಾನ ಉಳಿಯುವಂತಿಲ್ಲ, ಎಂದು ಹೇಳಿದನು. ಗಿರಿಜವ್ವೆ ಅದಕ್ಕೆ ಮೊದಲೇ ಅವಳ ತಮ್ಮನನ್ನು ಹಳ್ಳಿಗೆ ಕಳುಹಿಸಿಬಿಡಬೇಕೆಂದು ಯೋಚಿಸಿದ್ದಳು. ಅಂದು ನಾಯಕನ ಮಾತನ್ನು ಕೇಳಿ ತಮ್ಮನನ್ನು ಊರಿಗೆ ಕಳುಹಿಸಿಬಿಡುವೆನೆಂದು ಹೇಳಿದಳು. ಲಕುಮವ್ವೆ "ಕಸ್ತೂರಿ ಮಾಡಿದ್ದೇನೋ ತಪ್ಪೆ. ಆದರೆ ಅವನು ಇನ್ನೂ ಹುಡುಗ. ಈ ಸಲಕ್ಕೆ ಬುದ್ಧಿ ಹೇಳಿದ್ದಾಯಿತು. ಇನ್ನು ಮೇಲೆ ಅವನು ಪುಂಡತನ ಮಾಡದಂತೆ ನೋಡಿಕೊಂಡರೆ ಸರಿ" ಎಂದಳು. ಗಿರಿಜವ್ವೆ ಸುಮ್ಮನಾಗಬೇಕಾಯಿತು.

ಸಭೆಯಲ್ಲಿ ಎಲ್ಲರೆದುರಿಗೆ ಮಾತು ಕೇಳಿ ಕಸ್ತೂರಿಗೆ ಬಹಳ ಕೋಪ ಬಂದಿತು. ಅವನು ತನ್ನ ತಪ್ಪು ಎಂಥದೆಂದು ಯೋಚಿಸದೆ ಅರಸನ ಮೇಲೆ ಆಕ್ರೋಶಗೊಂಡನು. "ತಪ್ಪುಮಾಡಿದರೆ ಒಂದು ಕಡೆಗೆ ಕರೆದು ಬುದ್ಧಿ ಹೇಳಬಾರದಿತ್ತೆ ? ಎಲ್ಲರೆದುರಿಗೆ ಅವಮಾನಮಾಡಿದರಲ್ಲ", ಎಂದು ಅವನು ತಾಯ ಬಳಿ ಹೇಳಿಕೊಂಡನು. ಅವಳು "ಅರಸನು ಮಗನನ್ನು ಹೆರುವುದಕ್ಕೆ ನಿಮ್ಮಕ್ಕನನ್ನು ಮದುವೆಯಾದನೇ ಹೊರತು ಅವಳನ್ನು ರಾಣಿಯಂತೆ ಕಾಣುತ್ತಿಲ್ಲ. ಲಕುಮವ್ವೆಯೇ ರಾಣಿ. ನಿಮ್ಮಕ್ಕನಿಗೆ ಏನೂ ಸ್ವತಂತ್ರವಿಲ್ಲ. ಇದ್ದಿದ್ದರೆ ಅರಸನು ನಿನ್ನನ್ನು ಇಷ್ಟು ಬಯ್ಯುವುದಕ್ಕಿತ್ತೆ ? ಅದರ ರೀತಿಯೇ ಬೇರೆಯಿರುತ್ತಿತ್ತು. ಹಿರಿಯವಳು ತಾನೇ ತಾನಾಗಿ ಇರುವುದರಿಂದಲೇ ಅರಸನು ನಿನ್ನನ್ನು ಇಷ್ಟು ತುಚ್ಛವಾಗಿ ಕಾಣುತ್ತಿದ್ದಾನೆ. ಹೀಗೆಲ್ಲಾ ಮಾಡಬೇಕೆಂದು ಅವಳೇ ಅವನಿಗೆ ಹೇಳಿಕೊಟ್ಟಿರಬೇಕು" ಎಂದು ಹೇಳಿದಳು. ಕಸ್ತೂರಿಗೆ ಲಕುಮವ್ವೆಯ ವಿಷಯದಲ್ಲಿ ಬಹಳ ಆಗ್ರಹವುಂಟಾಯಿತು. ಸಾಲದುದಕ್ಕೆ ಊರಿನ ದುಷ್ಟರ ಸಮುದಾಯದಲ್ಲಿ ಅವನಿಗೆ ಇದ್ದ ದೊಡ್ಡಸ್ತಿಕೆ ಸಭೆಯಲ್ಲಿಯ ದಂಡನೆಯಾದ ಕಾರಣದಿಂದ ಕಡಿಮೆಯಾಯಿತು. ಯಾರೂ ಹತ್ತಿರ ಸೇರದಾದರು. ಬದುಕು ಬೇಸರಕ್ಕಿಟ್ಟುಕೊಂಡಿತು. ಅರಸನ ಮೇಲೆಯೂ ಲಕುಮವ್ವೆಯ ಮೇಲೆಯೂ ಈ ಕೋಪವನ್ನು ಹೇಗೆ ತೀರಿಸಿಕೊಳ್ಳಬೇಕೆಂದು ಅವನು ದಿನವೂ ತನ್ನಲ್ಲಿ ತಾನೇ ಯೋಚನೆ ಮಾಡುತ್ತಿದ್ದನು. ತಾನು ಮಾಡುತ್ತಿರುವ ಯೋಚನೆಯಿಂದ ತನ್ನ ಅಕ್ಕನಿಗೂ ಕೇಡಾದೀತೆಂದು ಅವನಿಗೆ ತೋರಲಿಲ್ಲ. ಅವನಂಥ ಜನರ ಬುದ್ಧಿ ಅಷ್ಟು ದೂರ ಓಡುವುದಿಲ್ಲ.

ಮೂರನೆಯ ಸಲ ಬಂದಾಗ ಅಜಾಗ್ರತೆಯಿಂದ ಸೋತು ಓಡಿದ ಮಹಾರಾಷ್ಟ್ರ ಸೈನ್ಯ ಒಂದಕ್ಕೆ ಮೂರರಷ್ಟಾಗಿ ಒಂದು ತಿಂಗಳಲ್ಲಿ ಮತ್ತೆ ಬಂದಿತು. ರಾಮರಸನಾಯಕನು ಇದಕ್ಕೆ ಸಿದ್ಧನಾಗಿರಲಿಲ್ಲ. ಕೋಟೆಯಲ್ಲೇನೋ ಬೇಕಾದಷ್ಟು ದವಸಧಾನ್ಯವಿತ್ತು. ನಾಯಕನು ನೆರೆಯ ಪಾಳೆಯಗಾರರ ಸಹಾಯವನ್ನು ಮತ್ತೆ ಕೇಳುವುದಕ್ಕೆ ಚಾರರನ್ನು ಕಳುಹಿಸಿ ಈ ದೊಡ್ಡ ಸೇನೆಯನ್ನು ತಡೆಯುವುದು ಹೇಗೆ ಎಂದು ಯೋಚಿಸುತ್ತ ಇದ್ದನು. ಒಬ್ಬ ಚಾರನನ್ನು ಮೈಸೂರ ಕಡೆಗೂ ಅಟ್ಟಿದನು. ಊರಿನಲ್ಲಿದ್ದ ಜನರನ್ನು ಸ್ವಲ್ಪ ಹುರಿಗೊಳಿಸಿ ಸಾಧ್ಯವಾದರೆ ಪಾಳೆಯದ ಸೇನೆಯನ್ನೂ ಗುಂಪುಕಟ್ಟಿಸಿ ಶತ್ರುವಿನ ಮೇಲೆ

ಬೀಳುವುದೆಂದು ಯೋಚನೆ ಮಾಡಿದನು. ಇಂಥ ಗುಂಪಿಗೆ ಕೇವಲ ಸಭ್ಯರು ಮಾತ್ರವಲ್ಲದೆ ಪುಂಡರೂ ತುಂಟರೂ ಕೂಡ ಸೇರಬೇಕು. ಈ ವೇಳೆಗೆ ಕಸ್ತೂರಿ, ತಾನು ಹೀಗೆ ಮಾಡುತ್ತೇನೆ ಹಾಗೆ ಮಾಡುತ್ತೇನೆ, ಎಂದು ಜಂಭ ಕೊಚ್ಚಿ ಅವರ ಮೇಲೆ ತನಗಿದ್ದ ಅಧಿಕಾರವನ್ನು ಪುನಃ ಸಂಪಾದಿಸಿದ್ದನು. ರಾಮರಸನು ಪುನಃ ಸೇನೆಯನ್ನು ಕರೆಯಬೇಕೆಂದಾಗ ಕಸ್ತೂರಿಯ ಬೋಧನೆಯಿಂದ ಅದು ಸಾವಕಾಶವಾಯಿತು.

ಕಸ್ತೂರಿಗೆ ಮೊದಲಲ್ಲಿ ತನ್ನ ಶಕ್ತಿ ಎಷ್ಟು ಎಂಬುದನ್ನು ನಾಯಕನಿಗೆ ತೋರಿಸಬೇಕೆಂಬ ಉದ್ದೇಶ ಹೊರತು ಬೇರೆ ಇರಲಿಲ್ಲ. ಆದರೆ ಯಾವಾಗ ತನ್ನ ಮಾತಿನಂತೆ ಕೆಲವು ಜನ ನಡೆದು ಅವನು ರಾಮರಸನಿಗಿಂತ ತಾನು ಗಟ್ಟಿಗನೆಂದು ಎಣಿಸಿದನೋ ಆಗ ಅವನ ಮನಸ್ಸಿನಲ್ಲಿ ಒಂದು ದುರಾಲೋಚನೆ ಹುಟ್ಟಿತು. ರಾಮರಸನು ಎಷ್ಟರ ಮನುಷ್ಯ? ಇವನು ಏಕೆ ಪಾಳೆಯಗಾರನಾಗಿರಬೇಕು? ತಾನೇ ಏಕೆ ಆಗಬಾರದು? ಮರಾಠೆಯವರ ಸೇನಾಪತಿಯ ಬಳಿಗೆ ಹೋಗಿ ತಾನು ಕೋಟೆಯನ್ನು ಬಿಟ್ಟುಕೊಡುವುದಾಗಿ ಮಾತು ಕೊಟ್ಟು ಅವರು ರಾಮರಸನನ್ನು ಹಿಡಿಯುವಂತೆಯೂ ತನ್ನನ್ನು ಪಾಳೆಯಗಾರನೆಂದು ಒಪ್ಪುವಂತೆಯೂ ಏಕೆ ಮಾಡಬಾರದು? ಹೀಗೆಂದು ಅವನು ಮೂರು ದಿನ ಯೋಚಿಸಿ ಹಾಗೆಯೇ ಮಾಡುವುದಾಗಿ ನಿರ್ಧರಿಸಿದನು. ಮಾರನೆಯ ದಿನ ರಾಮರಸನ ಬಳಿಗೆ ಹೋಗಿ ತಾನು ಜನರನ್ನು ಒಟ್ಟುಗೂಡಿಸುವುದಾಗಿಯೂ ನಾಯಕನು ಯೋಚನೆ ಮಾಡಬೇಕಾಗಿಲ್ಲವೆಂದೂ ಧೈರ್ಯ ಹೇಳಿದನು.

ರಾಮರಸನಿಗೆ ಬಹಳ ಸಂತೋಷವಾಯಿತು. ಅವನು ಇದಕ್ಕೆ ಮೆಚ್ಚಿ ಕಸ್ತೂರಿಗೆ, "ನಿನ್ನ ಹುಡುಗತನ ಬಿಟ್ಟರೆ ನೀನು ಈ ಊರಿನಲ್ಲಿ ಪಾಳೆಯಗಾರನಂತಿರಬಹುದು. ನಿನಗೇನು ಕಡಮೆ?" ಎಂದು ಹೇಳಿದನು. ಆ ದಿನ ರಾತ್ರಿ ರಾಮರಸನು ಎಂದಿನಂತೆ ಕೋಟೆಯನ್ನು ನೋಡಿಕೊಂಡು ಬರುವುದಕ್ಕೆ ಹೊರಟಾಗ ಕಸ್ತೂರಿಯನ್ನು ಜೊತೆಗೆ ಕರೆದುಕೊಂಡು ಹೋದನು. ಇದರಿಂದ ಕಸ್ತೂರಿ ಕಾವಲು ಸಂಚುಗಳನ್ನೆಲ್ಲಾ ಕೊಂಚಮಟ್ಟಿಗೆ ತಿಳಿದುಕೊಂಡನು. ಆ ದಿನ ರಾತ್ರಿಯೇ ಹೋಗಿ ಮರಾಠೆಯವರೊಂದಿಗೆ ಮಾತನಾಡಿ ಮೂರನೆಯ ದಿನ ರಾತ್ರಿ ತಾನು ಬಾಗಿಲನ್ನು ತೆರೆಯುವುದಾಗಿಯೂ ಮರಾಠೆಯವರು ಒಳಗೆ ನುಗ್ಗಬೇಕೆಂದೂ [illegible] ರಾಮರಸನನ್ನು ಅವರು [illegible]ಡಿಯಬೇಕೆಂದೂ ಕೊ

ಕೊಡದೆಂದೂ ತನ್ನನ್ನು ಪಾಳೆಯಗಾರನಾಗಿ ಮಾಡಬೇಕೆಂದೂ ಏರ್ಪಾಡು ಮಾಡಿಕೊಂಡನು.

ಮಾರನೆಯ ದಿನ ರಾತ್ರಿ ರಾಮರಸನು ಎಂದಿನಂತೆ ಕಾವಲನ್ನು ನೋಡಿ, ಮೈಸೂರ ಕಡೆ ಹೋದ ಬೇಹು ಏನಾಯಿತೋ ಎಂದು ಯೋಚಿಸುತ್ತಾ, ನೆರೆಯ ಪಾಳೆಯಗಳಿಂದ ಬಂದಿದ್ದ ಅರ್ಧಮನಸ್ಸಿನ ಉತ್ತರಗಳನ್ನು ನೋಡಿ, ಈ ಸಲ ಹೇಗೆ ಕಡೆಹಾಯುವುದು, ಮರಾಠೆಯರನ್ನು ಯಜಮಾನರೆಂದು ಒಪ್ಪಿಕೊಳ್ಳಬೇಕೇನೋ ಎಂದುಕೊಂಡು ಚಿಂತೆಯಿಂದ ಮಲಗಿದನು. ಊರಿನ ಜನವೆಲ್ಲ ಹೊತ್ತಾಗಿ ಮಲಗಿತ್ತು. ಶತ್ರು ಎಷ್ಟು ದಿನ ಹೀಗೆ ಊರ ಮುಂದೆ ಪಾಳೆಯ ಹಾಕಿ ನಿಲ್ಲುವನೋ, ಹೊರಗೆ ಹೋಗುವುದಕ್ಕಿಲ್ಲದೆ ಒಳಗೆ ಬರುವುದಕ್ಕಿಲ್ಲದೆ ದಿನ ವರುಷವಾಯಿತು, ಎಂದು ಅವರು ಯೋಚನೆ ಮಾಡುತ್ತಿದ್ದರು. ಕಸ್ತೂರಿ ಕೋಟೆಯ ಬಾಗಿಲಲ್ಲಿ ಆ ರಾತ್ರಿ ತನ್ನ ಕಡೆಯವರ ಪಹರೆಯನ್ನು ಏರ್ಪಾಡು ಮಾಡಿದನು. ಊರೆಲ್ಲ ನಿಶ್ಶಬ್ಧವಾದ ಮೇಲೆ ಕೋಟೆಯ ಬಾಗಿಲನ್ನು ತೆಗೆದು ಶತ್ರುಗಳನ್ನು ಊರೊಳಕ್ಕೆ ಬಿಟ್ಟನು. ಶತ್ರುಸೈನ್ಯ ಶಬ್ದ ಮಾಡದೆ ಊರೊಳಕ್ಕೆ ಬಂದು ಮುಖ್ಯವಾದ ಸ್ಥಳಗಳನ್ನು ಆಕ್ರಮಿಸಿಕೊಂಡಿತು. ಕೊನೆಗೆ ಕೊಂಚಜನ ಅರಮನೆಯ ಮುಂದೆ ಜಯಘೋಷವನ್ನು ಹಾಕಿ ಒಳಕ್ಕೆ ನುಗ್ಗಿದರು.

ಏನಾಯಿತೆಂದು ತಿಳಿಯದೆ ರಾಮರಸನು ಕತ್ತಿಯನ್ನು ಹಿಡಿದು ಹೊರಕ್ಕೆ ಬಂದನು. ಪಹರೆಯ ಜನ ಈಟಿ ಭಲ್ಲೆಗಳನ್ನು ಹಿಡಿದು ನಿಂತಿದ್ದರು. ಶತ್ರುಗಳು ಎಲ್ಲಾ ಕಡೆಗೂ ನುಗ್ಗುತ್ತಿದ್ದರು. ಗುಂಪಿನಲ್ಲಿ ಕಸ್ತೂರಿಯನ್ನು ಕಂಡು ರಾಮರಸನು, "ಏನಾಯಿತು ಕಸ್ತೂರಿ ಜನವನ್ನು ಕೂಗು, ನಡೆ !" ಎಂದನು. ಕಸ್ತೂರಿ ಅವನನ್ನು ತೋರಿಸಿ ಮರಾಠೆಯವರಿಗೆ, ಹಿಡೀರಿ, ಇವನನ್ನು ಹಿಡೀರಿ ಎಂದನು. ಮೇಲೆ ಬಿದ್ದು ಬಂದ ಮರಾಠೆಯವರನ್ನು ಕಂಡು ರಾಮರಸನು ತನ್ನ ಕತ್ತಿಯಿಂದ ಅರ್ಧಗಳಿಗೆ ಹೊತ್ತು ಹೋರಾಡಿದನು. ಆದರೆ ಅವನು ಒಬ್ಬ, ಮೇಲೆ ಬಿದ್ದವರು ಹತ್ತಾರು ಜನ. ಅವರಲ್ಲೊಬ್ಬನು ಇವನನ್ನು ಕತ್ತಿಯಿಂದ ಇರಿದನು. ಅದು ಎದೆಯ ಬಳಿ ಚುಚ್ಚಿ ರಾಮರಸನು ಶಿವ ಶಿವ ಎಂದು ನೆಲಕ್ಕುರುಳಿದನು. ಶತ್ರುಗಳು ಮುಂದಕ್ಕೆ ನುಗ್ಗಿದರು. ಅರಸನನ್ನು ಊಳಿಗದವರು ಒಂದು ಕಡೆಗೆ ಒಯ್ದುಕೊಂಡು ಹೋದರು.

ಕೋಟೆ ಮರಾಠೆಯವರ ಪಾಲಾಯಿತು. ಅರಮನೆಯಲ್ಲಿ ಎಲ್ಲರೂ ಎದ್ದು, ದಿಕ್ಕುತೋಚದೆ ಅಲ್ಲಲ್ಲೇ ಇದ್ದವರು ಕೆಲವರು, ದಿಕ್ಕಾಪಾಲಾಗಿ ಓಡಾಡಿದವರು ಕೆಲವರು, ಹೀಗೆ ಕಾಲ ಕಳೆದುಹೋಯಿತು. ಕಸ್ತೂರಿನಾಯಕ ಊರನ್ನು ಮರಾಠೆಯವರ ಕೈಗೆ ಕೊಟ್ಟುಬಿಟ್ಟನೆಂದು ಊರಿನಲ್ಲೆಲ್ಲ ಮಾತು ಹಬ್ಬಿತು. ಗಿರಿಜವ್ವೆ ತನ್ನ ತಮ್ಮನಿಂದ ಎಂತಹ ಅನಾಹುತ ಉಂಟಾಯಿತು, ತಾನು ಈ ಮನೆಗೆ ಮಾರಿಯಂತೆ ಬಂದೆನೆ, ಎಂದು ಎಣಿಸಿ ದುಃಖಿಸಿದಳು. ಲಕುಮವ್ವೆ ಈಗ ಇನ್ನೇನು ಮಾಡುವುದು, ಏನು ಮಾಡಿದರೆ ಈಗ ತತ್ರುಗಳು ಹೊರಟುಹೋದಾರು, ಕಪ್ಪವನ್ನು ಕೊಡುವೆವೆನ್ನೋಣವೇ, ಎಂದು ಪ್ರಧಾನಿಗಳನ್ನು ಕೇಳಿದಳು. ಅವರು, ಬೊಕ್ಕಸವೇ ಅವರ ಕೈಗೆ ಸೇರಿರುವಾಗ ಕಪ್ಪವನ್ನು ಕೊಡುವುದೇನು, ಎಂದರು. ಅಷ್ಟುಹೊತ್ತಿಗೆ ಬೆಳಗಾಯಿತು. ಊರಿನಲ್ಲೆಲ್ಲಾ ಕಳವಳ. ಅರಮನೆಯಲ್ಲಿ ರಾಮರಸನು ಪ್ರಾಣವನ್ನು ಬಿಟ್ಟನು.

ಮರಾಠೆಯವರ ದಳಪತಿ ಕಿಲ್ಲೇಕಚೇರಿಯಲ್ಲಿ ಇಳಿದುಕೊಂಡು ಕೋಟೆಯಲ್ಲೆಲ್ಲಾ ತನ್ನ ಕಡೆಯವರನ್ನು ಕಾವಲಿರಿಸಿ, ಊರಿನಲ್ಲಿ ಎಲ್ಲರಿಗೂ ತಿಳಿಯುವಂತೆ "ನಿಜಗಲ್ಲನ್ನು ಮರಾಠೆಯವರು ಹಿಡಿದಿದ್ದೇವೆ. ಜನಗಳು ಯಾರು ಭಯಪಡುವ ಕೆಲಸವಿಲ್ಲ. ರಾಮರಸನಿಗೆ ಬದಲಾಗಿ ಇನ್ನೊಬ್ಬ ಪಾಳೆಯಗಾರನನ್ನು ಇರಿಸುತ್ತೇವೆ. ನಿಮ್ಮ ನಿಮ್ಮ ಆಸ್ತಿಪಾಸ್ತಿ ನಿಮಗೇ ಇರುತ್ತದೆ. ನಾಲ್ಕು ದಿನ ಜನ ಊರು ಬಿಟ್ಟು ಬೇರೆ ಕಡೆಗೆ ಹೋಗಕೂಡದು" ಎಂದು ಡಂಗೋರ ಹೊಡೆಸಿದನು. ರಾಮರಸನ ಪ್ರಾಣ ಹೋಗುವುದೆಂದು ಅವನಿಗೆ ಮೊದಲೇ ತಿಳಿದಿತ್ತು. ಆದಾದ ಕೂಡಲೇ ತನಗೆ ತಿಳಿಸಬೇಕೆಂದು ಅವನು ಹೇಳಿದ್ದನು. ವರ್ತಮಾನ ಬಂದಾಗ ಅವನು ಕಸ್ತೂರಿನಾಯಕನೊಂದಿಗೆ ಅರಮನೆಗೆ ಬಂದು ರಾಮರಸನ ಸಂಸ್ಕಾರಗಳಿಗೆಲ್ಲ ಏರ್ಪಾಡು ಮಾಡಿಸುತ್ತೇವೆ ಎಂದು ಧೈರ್ಯ ಹೇಳಿದನು. ಲಕುಮವ್ವೆ "ಊರು ಗೆದ್ದ ಮೇಲೆ ನೀವೇ ಕರ್ತರು. ಎಲ್ಲಾ ಸರಿಯಾಗಿ ನಡೆಸುವುದಕ್ಕೆ ನೀವೇ ಬಾಧ್ಯರು" ಎಂದು ಹೇಳಿ, ಮರಾಠೆಯವರು ದಯಮಾಡಿ ನಾಯಕನ ಮಗನನ್ನು ಗದ್ದಿಗೆಯ ಮೇಲೇರಿಸಿ ಅವನನ್ನು ತಮ್ಮ ಸಾಮಂತನಾಗಿ ಕಾಣಬೇಕೆಂದು ಬೇಡಿಕೊಂಡಳು.

ದಳಪತಿ ಕಸ್ತೂರಿನಾಯಕನೊಡನೆ ಅರಮನೆಗೆ ಬಂದು ಅರಸರ ಕಳೇಬರದ ಬಳಿ ಈ ಮಾತುಗಳು ನಡೆದಾಗ ಗಿರಿಜವ್ವೆ ಅಲ್ಲೇ ಇದ್ದಳು. ಅವಳಿಗೆ ಅರಸು ತೀರಿ

ಹೋದನೆಂಬುದು ಒಂದು ಗೊತ್ತೇ ಹೊರತು ಇನ್ನೇನೂ ಬೇಕಾಗಿರಲಿಲ್ಲ. ತನ್ನ ಮಗ ಪಾಳೆಯಗಾರನಾಗುವುದೋ, ಇನ್ನು ಯಾರಾದರೂ ಆಗುವುದೋ, ಮುಂದಕ್ಕೆ ಏನು ಗತಿಯೋ, ಎಂದು ಅವಳು ಯೋಚಿಸಲಿಲ್ಲ. ಇಂಥ ಮಾತಿಗೆಲ್ಲ ಆಗ ಸಮಯವಲ್ಲವೆಂದು ಅವಳಿಗೆ ತೋರಿತು. ಇಲ್ಲಿ ಅರಸನು ಸತ್ತುಬಿದ್ದಿರು ವಾಗ, ತೀರ ಪ್ರಾಣ ಹೋಗುವುದಕ್ಕೆ ಮುಂಚೆಯೇ, ಮಗುವಿನ ಪಟ್ಟದ ಮಾತೇನು ? ಕಸ್ತೂರಿನಾಯಕನು ಮರಾಠೆಯವರೊಂದಿಗೆ ಒಂದಾಗಿ ಉಂಡ ಮನೆಗೆ ಎರಡು ಬಗೆದನೇ ಎಂದು ಅವಳು ಕುದಿಯುತ್ತಿದ್ದಳು : ಅವನು ಬಂದು ಹತ್ತಿರ ನಿಂತಾಗ ಅವನ ಕಡೆ ನೋಡಲಿಲ್ಲ. ಕಸ್ತೂರಿಯೂ ತಲೆ ತಗ್ಗಿಸಿ ಕೊಂಡು ನಿಂತಿದ್ದನು. ದಳಪತಿ ಇದನ್ನೆಲ್ಲ ನೋಡಿದನು. ಅವನಿಗೆ ಲಕುಮವ್ವೆಯ ಸ್ಥೈರ್ಯ, ಗಿರಿಜವ್ವೆಯ ಪತಿಪರಾಯಣತೆ, ಇವೆರಡರಲ್ಲಿ ಒಂದಕ್ಕಿಂತ ಒಂದು ಶ್ಲಾಘ್ಯವೆಂದು ತೋರಿತು. ಗಿರಿಜವ್ವೆ ಬಹಳ ಚೆಲುವೆ. ಅವಳನ್ನು ತಾನು ಒಲಿಸಿಕೊಳ್ಳಬೇಕೆಂದು ಅವನಿಗೆ ಮನಸ್ಸಿನಲ್ಲಿ ಆಸೆಯಾಯಿತು.

ಅರಸನ ಉತ್ತರ ಕ್ರಿಯೆಗಳಿಗೆ ಎಲ್ಲಾ ಏರ್ಪಾಡೂ ಆಯಿತು. ಲಕುಮವ್ವೆ ತಾನು ಸಹಗಮನ ಮಾಡುವುದಾಗಿ ತಿಳಿಸಿದಳು. ಗಿರಿಜವ್ವೆ "ನೀವು ಮನೆಗೆ ದೊಡ್ಡವರು. ಮಗುವನ್ನು ಸಾಕಿ ಗದ್ದಿಗೆಯ ಮೇಲೆ ಇರಿಸಬೇಕು. ಅದು ನಿಮ್ಮಿಂದ ಆಗುವುದಲ್ಲದೆ ನನ್ನಿಂದ ಆಗುತ್ತದೆಯೇ ? ನೀವು ಇರಿ. ನಾನು ಸಹಗಮನ ಮಾಡುತ್ತೇನೆ" ಎಂದಳು. ತಾನು ದೊಡ್ಡವಳು, ಸಹಗಮನದ ಅಧಿಕಾರ ತನ್ನದು ಎಂದು ಲಕುಮವ್ವೆಗೂ, ಮನೆಗೆ ದೊಡ್ಡವಳು ಇರಬೇಕು, ತಾನು ಹೋಗುವೆನು ಎಂದು ಗಿರಿಜವ್ವೆಗೂ ವಾದ ನಡೆಯಿತು. ಕೊನೆಗೆ ಗಿರಿಜವ್ವೆ "ನಿಮ್ಮ ಇಷ್ಟ. ನೀವು ಉಳಿದಿದ್ದರೆ ನಾನು ಇದ್ದರೂ ಇದ್ದೆ ; ನೀವು ಹೋಗುವುದಾದರೆ ನಾನು ಹೋಗುವುದೂ ಖಂಡಿತ" ಎಂದಳು. ಸಿದ್ಧವಾಗುವ ವೇಳೆಗೆ ಊರಿನ ಮುಖಂಡರು ಬಂದು, ಯಾರೂ ಸಹಗಮನ ಮಾಡಕೂಡದು, ಹುಡುಗನನ್ನು ದೊಡ್ಡವನಾಗಿ ಮಾಡುವುದಕ್ಕೆ ಇಬ್ಬರೂ ಇರಬೇಕೆಂದು ಬೇಡಿಕೊಂಡರು. ಮರಾಠೆಯವರ ದಳಪತಿಯೂ ಹೀಗೆಯೇ ಹೇಳಿದನು. ಸಹಗಮನದ ಮಾತು ನಿಂತುಹೋಯಿತು. ಆ ದಿನ ಉತ್ತರ ಕ್ರಿಯೆಗಳು ನಡೆದುಹೋದುವು.

ಮೂರು ದಿನ ಕಳೆಯಿತು. ಈ ಮಧ್ಯೆ ಕಸ್ತೂರಿಗೂ ದಳಪತಿಗೂ ಮುಂದಿನ ಏರ್ಪಾಡಿನ ವಿಷಯದಲ್ಲಿ ಮನಸ್ತಾಪ ಬಂದಿತು. ದಳಪತಿ ನಾಯಕನ ಮಗನನ್ನು ಗುದ್ದುಗೆಯ ಮೇಲೇರಿಸಿ ಲಕುಮವ್ವೆಯನ್ನೂ ಕಸ್ತೂರಿಯನ್ನೂ ಅವನ ರಕ್ಷಣೆಗೆ ನಿಲ್ಲಿಸುವುದಾಗಿಯೂ ಗಿರಿಜವ್ವೆಯನ್ನು ತಾನು ಕರೆದುಕೊಂಡು ಹೋಗುವುದಾಗಿಯೂ ಹೇಳಿದನು. ಕಸ್ತೂರಿ ತಾನೇ ಗದ್ದುಗೆಯನ್ನೇರ ಬೇಕೆಂದೂ ತನ್ನ ಸೋದರಳಿಯ ತನ್ನ ನಂತರ ಗದ್ದುಗೆಯನ್ನೇರಬೇಕೆಂದೂ, ಗಿರಿಜವ್ವೆ ಧಾರಾಳವಾಗಿ ಒಪ್ಪಿದರೆ ಮಾತ್ರ ಅವಳನ್ನು ದಳಪತಿ ಕರೆದುಕೊಂಡು ಹೋಗಬಹುದೆಂದೂ ಹೇಳಿದನು. ಗದ್ದಿಗೆಯನ್ನು ಯಾರು ಏರಬೇಕು ಎನ್ನುವ ವಿಷಯದಲ್ಲಿ ಇವರು ಒಬ್ಬರ ಮಾತಿಗೊಬ್ಬರು ಒಪ್ಪಲಿಲ್ಲ. ಕಸ್ತೂರಿ ದಳಪತಿಗೆ ಅವನು ಕೊಟ್ಟ ಮಾತನ್ನು ಜ್ಞಾಪಕಮಾಡಿದನು. ದಳಪತಿ ಅದಕ್ಕೆ "ನಾಯಕನಿಗೆ ಒಬ್ಬ ಮಗನಿರುವ ಮಾತನ್ನು ನೀನು ನನಗೆ ಹೇಳಲಿಲ್ಲ" ಎಂದನು. ದಳಪತಿಯ ನಡತೆಗೆ ಇದು ಕಾರಣವೋ, ಇಲ್ಲ, ತಾನು ಗಿರಿಜವ್ವೆಯ ಮಗನ ಪರವನ್ನು ವಹಿಸಿದರೆ ಗಿರಿಜವ್ವೆಯನ್ನು ಸ್ವಾಧೀನಪಡಿಸಿ ಕೊಳ್ಳುವುದು ಸುಲಭ ಎಂಬುದು ಕಾರಣವೋ, ಹೇಳುವುದು ಹೇಗೆ ? ಅಂತೂ ಇವರಿಗೆ ವಿವಾದವುಂಟಾಯಿತು. ಕೊನೆಗೆ ದಳಪತಿ ಈ ಮಾತನ್ನು ಚರ್ಚೆ ಮಾಡುವುದಕ್ಕೆಂದು ರಾಣಿಯರಿಬ್ಬರಿಗೂ ಕರೆಯಕಳುಹಿಸಿದನು. ಒಬ್ಬೊಬ್ಬರು ಒಂದೊಂದು ಸಲ ಬರಬೇಕೆಂದೂ, ತಾನು ಏನೂ ತೊಂದರೆ ಪಡಿಸುವುದಿಲ್ಲ ವೆಂದೂ, ತನ್ನ ಜೊತೆಯಲ್ಲಿ ಕಸ್ತೂರಿನಾಯಕನಿರುವನೆಂದೂ ತಿಳಿಸಿದನು. ಹಿರಿಯರಾಣಿ ಬಂದಾಗ, ಯಾರನ್ನು ನಾಯಕನನ್ನಾಗಿ ಮಾಡುವುದೆಂದು ಆಕೆಯೊಂದಿಗೆ ಚರ್ಚಿಸಿ, ಆಮೇಲೆ ಕಿರಿಯ ರಾಣಿಯನ್ನು ಕರೆಯಕಳುಹಿಸಿ ದನು. ಗಿರಿಜವ್ವೆಯನ್ನೂ ಅದೇ ಮಾತು ಕೇಳಿದನು. ಆಕೆ, ನಮ್ಮ ಹಿರಿಯ ರಾಣಿಯನ್ನು ಕೇಳಿದ ಮೇಲೆ ನನ್ನನ್ನು ಕೇಳಬೇಕಾದ್ದಿಲ್ಲ, ಅವರು ಹೇಳಿದಂತೆ ಮಾಡಿ, ಎಂದಳು. ದಳಪತಿ ಆ ಮಾತು ಈ ಮಾತು ಆಡಿ ಕೊನೆಗೆ ಗಿರಿಜವ್ವೆ ತನ್ನ ವಶವಾಗಬೇಕೆಂದು ಹೇಳಿದನು. ಗಿರಿಜವ್ವೆ ಅದುವರೆಗೆ ತಲೆ ತಗ್ಗಿಸಿ ಕೊಂಡು ಮಾತನಾಡುತ್ತಿದ್ದವಳು ಆಗ ಅವನನ್ನೂ ಕಸ್ತೂರಿಯನ್ನೂ ಚೆನ್ನಾಗಿ ನೋಡಿ, ಇವನು ಅದಕ್ಕೆ ಒಪ್ಪಿದ್ದಾನೆಯೆ, ಎಂದು ಕೇಳಿದಳು. ದಳಪತಿ "ಒಪ್ಪಿದ್ದಾನೆ" ಎಂದನು. ಆವಳು ದಳಪತಿಯನ್ನು ಮದುವೆಯಾಗುವುದಕ್ಕೆ

ತಾನು ಒಪ್ಪಿದರೆ, ದಳಪತಿ ತಾನು ನಾಯಕನಾಗುವುದಕ್ಕೆ ಸಹಾಯ ಮಾಡುವ
ನೆಂದು ಕಸ್ತೂರಿಗೆ ಯೋಚನೆ. ಅಲ್ಲದೆ ಅವಳು ದಳಪತಿಯೊಂದಿಗೆ ಹೊರಟು
ಹೋಗಬೇಕಾದರೆ ಮಗು ಇಲ್ಲಿರುವುದಕ್ಕಾಗುವುದಿಲ್ಲ. ಆಗ ಹೆಸರಿಗೆ ಮಾತ್ರ
ಮಗು ನಾಯಕನಾದರೂ ತಾನೂ ನಾಯಕನಾಗುವುದಕ್ಕೆ ಅನುಕೂಲ. ತನ್ನ
ತಮ್ಮನು ಇದಕ್ಕೆ ಒಪ್ಪಿದನೆಂದು ಕೇಳಿ ಗಿರಿಜವ್ವೆ ಒಂದು ನಿಮಿಷ ಯೋಚಿಸಿ,
"ನೀವು ನನ್ನ ಮೇಲೆ ಮಾಡಿರುವ ಅನುಗ್ರಹಕ್ಕೆ ನಾನು ತಕ್ಕವಳಲ್ಲ. ಆದರೆ
ಈಗ ನಾನಿರುವ ಸ್ಥಿತಿಯಲ್ಲಿ ಅದನ್ನು ಬೇಡವೆಂದು ಹೇಳಲಾರೆ" ಎಂದಳು.
ದಳಪತಿಗೂ ಕಸ್ತೂರಿಗೂ ಇವಳು ಇಷ್ಟು ಸುಲಭವಾಗಿ ಒಪ್ಪಿದವಳಲ್ಲಾ ಎಂದು
ಆಶ್ಚರ್ಯ. ಅದರ ಜೊತೆಗೆ ಬಹಳ ಸಂತೋಷ. "ನಾನು ಇಷ್ಟರಲ್ಲೇ
ಹಿಂದಕ್ಕೆ ಹೋಗಬೇಕಾಗುತ್ತದೆ. ಸಾಧ್ಯವಾದರೆ ಎರಡು ಮೂರು ದಿವಸಗಳಲ್ಲಿ
ಎಲ್ಲ ಆಗಬೇಕು." "ಅಪ್ಪಣೆ." ಹೀಗೆಂದು ಗಿರಿಜವ್ವೆ ಅರಮನೆಗೆ ಬಂದಳು.
ಮಾರನೆಯ ದಿನ ತಾನು ದಳಪತಿಯನ್ನು ವರಿಸುವುದೆಂದೂ, ತನ್ನ ತಮ್ಮ
ಕಸ್ತೂರಿನಾಯಕ ಸದ್ಯಕ್ಕೆ ನಾಯಕನಾಗುವುದು ತನ್ನ ಇಷ್ಟವೆಂದೂ, ತನ್ನ
ಮದುವೆಯ ದಿನವೇ ಕಸ್ತೂರಿಗೆ ಗದ್ದಿಗೆಯೇರುವ ಉತ್ಸವ ನಡೆಯಬೇಕೆಂದೂ
ಹೇಳಿಕಳುಹಿಸಿ ಇದೇ ಮಾತನ್ನು ಹಿರಿಯ ರಾಣಿಗೆ ತಿಳಿಸಿದಳು. ಲಕುಮವ್ವೆಗೆ
ಇದೇನೆಂದು ತಿಳಿಯದಾಯಿತು. ಅವಳು ಗಿರಿಜವ್ವೆಯನ್ನು ನೋಡಲು
ಬಂದಳು. ಗಿರಿಜವ್ವೆ ಅವಳನ್ನು ನೋಡುವುದಿಲ್ಲವೆಂದಳು. ಈ ಮಾತು
ಊರಿನಲ್ಲೆಲ್ಲಾ ಹರಡಿ ಕೋಲಾಹಲವುಂಟಾಯಿತು. ಆದರೆ ಯಾರೇನು
ಮಾಡಬಹುದು ? ದಳಪತಿಯ ಇಷ್ಟಕ್ಕೆ ಪ್ರತಿಹೇಳುವವರಿಲ್ಲ. ಉತ್ತರಕ್ರಿಯೆ
ಗಳೆಲ್ಲ ಮುಗಿದ ಐದು ದಿನದ ಮೇಲೆ ಸಂಬಂಧಕ್ಕೆ ದಿನ ಗೊತ್ತಾಯಿತು.
ಅದರ ಹಿಂದಿನ ದಿನ ಗಿರಿಜವ್ವೆ ಮಾರನೆಯ ದಿನ ತಾನೂ ತನ್ನ ತಮ್ಮನೂ
ಊರಿನವರಿಗೆಲ್ಲ ತಿಳಿಯುವಂತೆ ಕೋಟೆಯ ಗೋಡೆಯ ಮೇಲೆ ಊರ ಸುತ್ತ
ಮೆರವಣಿಗೆ ಮಾಡಬೇಕೆಂದೂ ಆದಾದ ಮೇಲೆ ತಾನು ಸಂಬಂಧವಾಗುವುದು,
ಅವನು ಗದ್ದಿಗೆಯನ್ನೇರುವುದು ಎಂದು ಹೇಳಿಕಳುಹಿಸಿದಳು. ಅವಳು
ಬೇಕೆಂಬುದನ್ನು ಯಾರೂ ಬೇಡವೆನ್ನುವಂತಿರಲಿಲ್ಲ. ಅವಳ ಇಷ್ಟದಂತೆ ಎಲ್ಲವೂ
ಸಿದ್ಧವಾಯಿತು.

ಮಾರನೆಯ ದಿನ ಗಿರಿಜವ್ವೆ ಬೆಳಗಾಗ ಎದ್ದು ಸ್ನಾನ ಮಾಡಿ ದೇವರ ಪೂಜೆಯನ್ನು ಮುಗಿಸಿಕೊಂಡು ಮಗುವನ್ನೆತ್ತಿಕೊಂಡು ಲಕುಮವ್ವೆಯ ಬಳಿಗೆ ಬಂದು “ಇದು ನನ್ನ ಹಣೆಯಲ್ಲಿ ಬರೆದಿತ್ತು; ಇಂದಿನಿಂದ ಈ ಮಗು ನನ್ನದಲ್ಲ, ನಿಮ್ಮದು ; ಇದನ್ನು ಕಾಪಾಡುವ ಕೆಲಸ ನಿಮ್ಮದು” ಎಂದು ಹೇಳಿ, “ನನಗೆ ಒಳ್ಳೆಯದಾಗುವಂತೆ ಹರಸಿ” ಎಂದು ಕಣ್ಣೀರು ಸುರಿಸಿದಳು. ಲಕುಮವ್ವೆ “ನಿನ್ನ ಬುದ್ಧಿಯೆಲ್ಲಾ ಎಲ್ಲಿ ಹೋಯಿತು ? ಅವನು ಕೇಳಿದರೆ ಬೇಡವೆನ್ನುವುದಕ್ಕೆ ನಿನಗೆ ತಿಳಿಯಲಿಲ್ಲವೇ ? ಈಗಲೂ ಇಷ್ಟವಿಲ್ಲದಿದ್ದರೆ ಬೇಡವೆನ್ನು” ಎಂದಳು. ಗಿರಿಜವ್ವೆ “ಹೇಳಿ ಆಯಿತು. ಇನ್ನು ಆ ಮಾತು ಬೇಡಿ. ಇನ್ನು ನನ್ನ ದಾರಿ ಬೇರೆ” ಎಂದು ಹೇಳಿ ಅರಮನೆಯಿಂದ ಹೊರಟಳು. ಬಾಗಿಲಲ್ಲಿ ಊರ ಪ್ರದಕ್ಷಿಣೆಗೆ ಬೇಕಾದ ಏರ್ಪಾಡೆಲ್ಲಾ ಆಗಿತ್ತು. ಗಿರಿಜವ್ವೆ ಸುಮಂಗಲಿಯಂತೆ ಅಲಂಕಾರವನ್ನು ಮಾಡಿಕೊಂಡಿದ್ದಳು. ಜನರಿಗೆಲ್ಲ ಇದನ್ನು ನೋಡಿ ಅಸಹ್ಯ. ಗಿರಿಜವ್ವೆ ಕಸ್ತೂರಿಗೆ “ನೀನು ಈ ಕಡೆಯಿಂದ ಬಾ. ನಾನು ಆ ಕಡೆಯಿಂದ ಬರುತ್ತೇನೆ. ಕೊತ್ತಲದ ಬಳಿ ಇಬ್ಬರೂ ಸೇರೋಣ” ಎಂದಳು. ಆದರಂತೆ ಉತ್ಸವ ಹೊರಟಿತು.

ನಿಜಗಲ್ಲಿನ ಕೋಟೆ ಬಹಳ ಅಂದವಾದ ಕೋಟೆ. ಭೀಕರವಾದ ಬಂಡೆಯ ಮೇಲೆ ಶತ್ರುವನ್ನು ಧಿಕ್ಕರಿಸುವ ಗೋಡೆಗಳು. ಒಂದೇ ಕಡೆ ಬಾಗಿಲು, ಬಾಗಿಲಿಗೆ ಎದುರಾಗಿ ಕೋಟೆಯ ಗೋಡೆಯ ಆ ಕಡೆ ಅರ್ಧದಲ್ಲಿ ಒಂದು ಕೊತ್ತಳ. ಅದರಿಂದ ಊರಿನೊಳಕ್ಕೆ ಇಳಿಯುವುದಕ್ಕೆ ಒಂದು ಸೊಗಸಾದ ಮೆಟ್ಟಲ ಪಂಕ್ತಿ. ನಾಯಕನು ವಿಹಾರಕ್ಕಾಗಿ ಕೆಲವು ವೇಳೆ ಇಲ್ಲಿಗೆ ಬಂದು ನಿಲ್ಲುವುದುಂಟು. ಇಲ್ಲಿಂದ ನೋಡಿದರೆ ಹತ್ತಾರು ಮೈಲಿಯ ದೂರಕ್ಕೂ ಇರುವ ಹಳ್ಳಿ, ಕೊಳ, ತೋಪು, ಎಲ್ಲಾ ಚಿತ್ರಗಳಲ್ಲಿ ಬರೆದಂತೆ ಕಾಣುವುವು. ಹೊರಗಡೆ ಬಂಡೆ ಕೋಟೆಯ ಗೋಡೆಯ ಕೆಳಗೆ ಮುಂದಕ್ಕೆ ಚಾಚಿ ಪೀಠದಂತಾಗಿತ್ತು. ಪೀಠದ ಮೇಲೆ ಕೋಟೆಯ ಗೋಡೆ ಏಳಾಳೆತ್ತರ. ಆ ಬಂಡೆಯ ಆಚೆಗೆ ಆಳ. ಪೀಠವು ವಿಶಾಲವಾಗಿ ಚಪ್ಪಟೆಯಾಗಿ ರಾಜರು ಕುಳಿರುವ ಗದ್ದಿಗೆಯಂತೆ ಕಾಣುತ್ತಿದ್ದುದರಿಂದ ಅದಕ್ಕೆ ಜನ ಗದ್ದಿಗೆಯ ಬಂಡೆ ಎಂದು ಹೆಸರಿಟ್ಟಿದ್ದರು. ಹಾಗೆಯೇ ಆ ಕೊತ್ತಲವನ್ನು ಗದ್ದಿಗೇ ಕೊತ್ತಳ

ಕಸ್ತೂರಿ ಒಂದು ಕಡೆಯಿಂದಲೂ ತಾನು ಒಂದು ಕಡೆಯಿಂದಲೂ ಕೊತ್ತಳದ ಮೆಟ್ಟಲಿಗೆ ಬರುವುದೆಂದು ಏರ್ಪಾಡುಮಾಡಿ ಗಿರಿಜಮ್ಮ ಒಬ್ಬ ಚೇಟಿಯನ್ನು ಕುರಿತು, "ಇಂದು ನನ್ನ ತಮ್ಮನಿಗೆ ಆರತಿ ಮಾಡಬೇಕು, ಒಂದು ತಟ್ಟೆಯಲ್ಲಿ ಆರತಿ ತಂದಿರಿ" ಎಂದು ಹೇಳಿ, ಕೋಟೆಯ ಗೋಡೆಯ ಮೇಲೆ ಹೊರಟಳು. ಊರಿನಲ್ಲಿ ಜನವೆಲ್ಲ "ಇಂಥ ವಿಚಿತ್ರ ಉಂಟೆ? ಇವಳ ಸೊಗಸೇನು, ಈ ಆರತಿಯೇನು?" ಎಂದು ವಿಸ್ಮಿತರಾಗಿ, ಕೋಟೆಯ ಮೇಲೆ ಎರಡು ಕಡೆಯಿಂದಲೂ ಬರುತ್ತಿರುವ ಮೆರವಣಿಗೆಯ ಗುಂಪನ್ನು ನೋಡುತ್ತಿದ್ದರು. ಒಂದು ಗಳಿಗೆಯ ಹೊತ್ತಿಗೆ ಎರಡು ಗುಂಪೂ ಗದ್ದಿಗೆಯ ಕೊತ್ತಳದ ಹತ್ತಿರ ಬಂದವು. ಗಿರಿಜಮ್ಮ ಅರ್ಧನಿಮಿಷ ಮುಂದಾಗಿ ಬಂದಿದ್ದು, ಕಸ್ತೂರಿ ಬಂದಾಗ್ಗೆ ಚೇಟಿಯ ಕೈಯಿಂದ ಆರತಿಯ ತಟ್ಟೆಯನ್ನು ತೆಗೆದುಕೊಂಡು ಮಾತನಾಡದೆ ಹತ್ತಿರಕ್ಕೆ ಬಂದಳು. ಇಬ್ಬರೂ ಕೊತ್ತಳದ ಮಧ್ಯೆ ನಿಂತಿದ್ದರು. ಇತ್ತ ಒಂದಿಪ್ಪತ್ತು ಜನ, ಅತ್ತ ಒಂದಿಪ್ಪತ್ತು ಜನ ಸದ್ದು ಮಾಡದೆ ನಿಂತಿದ್ದಾರೆ. ಗಿರಿಜಮ್ಮ ಎಂದಿನಂತೆ ಗಂಭೀರಭಾವದಲ್ಲಿ ತಮ್ಮನಿಗೆ ಆರತಿಯನ್ನೆತ್ತಿ ತಟ್ಟೆಯನ್ನು ಚೇಟಿಯ ಕೈಗೆ ಕೊಟ್ಟು ಸ್ವಲ್ಪ ನಗುತ್ತಾ ತಮ್ಮನನ್ನು ಕುರಿತು ಮೃದುವಾದ ನುಡಿಯಿಂದ, "ಕಸ್ತೂರಿ, ನಿನ್ನಿಂದ ನನಗೆ ಈ ಪದವಿ ಬಂತು. ನಿನ್ನನ್ನು ನಾನು ಮರೆಯಬಾರದು. ನಿನಗೂ ಗದ್ದಿಗೆಯ ಮೇಲೆ ಆಸೆ" ಎಂದು ಹೇಳಿ, ಉತ್ತರ ಕ್ಷಣದಲ್ಲಿ ಕರ್ಕಶವಾದ ಧ್ವನಿಯಿಂದ "ನನ್ನ ನಿನ್ನಿಂದ ರಾಮರಸನ ಮನೆ ಕೆಟ್ಟಿತು. ನಮ್ಮನ್ನು ಹೆತ್ತವರಿಗೆ ಅಪಕೀರ್ತಿ ಬಂತು. ಕಸ್ತೂರಿ, ನಾವು ಬದುಕಬಾರದು" ಎಂದು ಕೂಗಿ, ಅವನನ್ನು ಭದ್ರವಾಗಿ ಅಪ್ಪಿಕೊಂಡು ಕೊತ್ತಳದಿಂದ ಗೋಡೆಯ ಹೊರಕ್ಕೆ ಧುಮುಕಿಬಿಟ್ಟಳು.

ಜನರು "ಹಾ" ಎನ್ನುವ ಮೊದಲು ಅಕ್ಕ ತಮ್ಮಂದಿರು ಗದ್ದಿಗೆಯ ಬಂಡೆಯನ್ನು ಸೇರಿದ್ದರು. ಆ ಎತ್ತರದಿಂದ ಬಂಡೆಯ ಮೇಲೆ ಬಿದ್ದವರಿಗೆ ಉಳಿವಿಲ್ಲ. ಎರಡು ಕ್ಷಣದಲ್ಲಿ ಅವರಿಬ್ಬರ ದೇಹಗಳೂ ಜೀವವನ್ನುಳಿದು ಬಂಡೆಯಿಂದ ನೆಲಕ್ಕೆ ಉರುಳಿದ್ದುವು.

ರಾಮರಸನ ಮಗನನ್ನು ನಿಜಗಲ್ಲಿನ ನಾಯಕನಾಗಿ ಮಾಡಿದರು. ಲಕುಮಪ್ಪ ಅವನು ಪರಾಶಿಯವರ ವಶವರ್ತಿಯಾಗಿರುವುದಾಗಿ ಭರವಸೆ

ಕೊಟ್ಟು ರಾಜ್ಯದ ಆಡಳಿತವನ್ನು ಊರ ಮುಖಂಡರ ಸಹಾಯದಿಂದ ನಡೆಯಿಸಿದಳು. ಊರಿಗೆ ಉಪದ್ರವದಂತೆ ಬಂದಿದ್ದ ಕಸ್ತೂರಿಯನ್ನು ಕೊನೆಗಾಣಿಸಿದ ಕಿರಿಯ ರಾಣಿಯನ್ನು ಜನರು ಪ್ರೀತಿಯಿಂದ ನೆನೆದು ಬಹು ವರ್ಷ ಊರ ದೇವಿಯೆಂದು ಪೂಜಿಸಿ ಅವಳ ಹೆಸರಿನಲ್ಲಿ ವರ್ಷ ವರ್ಷವೂ ಹಬ್ಬವನ್ನು ಮಾಡಿದರು. ಈಗ ಆ ಹಬ್ಬ ನಡೆಯುತ್ತಿಲ್ಲ. ಊರು ಪಾಳೆಯಗಾರರನ್ನು ಮರೆತಿದೆ. ಆದರೆ ನಿಜಗಲ್ಲಿಗೆ ಹೋದವರಿಗೆ ಊರ ಅಲ್ಲಿಯ ರಾಣಿಯು ಈ ಕತೆಯನ್ನು ಹೇಳುವರು ; ಆ ವೀರ ರಮಣಿಯ ಆತ್ಮಯಜ್ಞದಿಂದ ಪವಿತ್ರವಾದ ಆ ಬಂಡೆಯನ್ನು ತೋರಿಸುವರು.

೭. ಕನ್ನಡ ಮುನ್ನಡೆವ ಬಗೆ

ದಿ|| ಶಿ. ಶಿ. ಬಸವನಾಳ : ೧೮೯೩ : ೧೯೫೧

ಕನ್ನಡದ ಪ್ರಾಚೀನತೆ ಮತ್ತು ಗಣ್ಯತೆ

ಭರತಖಂಡದ ಬಹುಪ್ರಾಚೀನ ಭಾಷೆಗಳಲ್ಲಿ ಕನ್ನಡವೂ ಒಂದು. ಬಹು ಪುರಾತನ ಕಾಲದಿಂದಲೂ ನಡೆದುಬಂದ ಮಾನ್ಯ ಪರಂಪರೆಯೊಂದುಂಟು ಅದಕ್ಕೆ. ಕನ್ನಡ ಸಾಹಿತ್ಯ ಪೆರ್ದೊರೆಯಾಗಿ ಹರಿದುದೇ ೧೩–೧೪ ಶತಮಾನಗಳ ಕಾಲದಿಂದ. ಉಭಯಭಾಷಾವಿಶಾರದರೂ ಚತುರ್ಭಾಷಾ ಚಕ್ರವರ್ತಿಗಳೂ ಆದ ಪಂಡಿತರಿಂದ ಮೊದಲು ಮಾಡಿಕೊಂಡು ದಾಸರವರೆಗೆ, ರಾಜ್ಯಾಧಿಕಾರಿಗಳಾದಿಯಾಗಿ ಕಾಯಕದಯ್ಯಗಳವರೆಗೆ ಎಲ್ಲ ಮತದವರೂ–ಗಂಡಸರೂ ಹೆಂಗಸರೂ – ತಮ್ಮ ತಮ್ಮ ಶಕ್ತ್ಯನುಸಾರವಾಗಿ ಕಾಣಿಕೆಗಳನ್ನು ಕನ್ನಡ ವಾಗ್ದೇವಿಯ ಭಂಡಾರಕ್ಕೆ ಸಲ್ಲಿಸಿದ್ದಾರೆ. ಈ ಬಗೆಯಾಗಿ ಹಿಂದಣವರು ಕೊಟ್ಟ ಕೋಡಿನ ಫಲವಾದ ಭಾಷೆಯ ಅಗ್ಗಳತೆಗಾಗಿಯೂ ಸಾಹಿತ್ಯದ ವಿಪುಲತೆಗಾಗಿಯೂ ನಾವು ಅಭಿಮಾನ ತಳೆಯುವುದು ಅರಿದಲ್ಲ. ಈ ಅಭಿಮಾನದೊಡನೆ ಭಾಷೆ ಮತ್ತು ಸಾಹಿತ್ಯಗಳ ಆಳವಾದ ಪರಿಚಯ, ಕೂಲಂಕಷವಾದ ತಿಳಿವಳಿಕೆ, ಸಹೃದಯಾತ್ಮಕ ವಿಮರ್ಶೆ–ಇವುಗಳೂ ನಮಗೆ ಹೆಚ್ಚಾಗಿ ಬೇಕಾಗಿವೆ. ಇಂತಹ ಫಲಕಾರಿಯಾದ ಅಭ್ಯಾಸಕ್ಕೆ ಅನುಕೂಲವಾದ ಸಲಕರಣೆಗಳನ್ನು ಒದಗಿಸಿಕೊಡುವುದು ಪರಿಷತ್ತಿನ ಕರ್ತವ್ಯವಾಗಿದೆ. ಅದಕ್ಕೆ ತಕ್ಕ ವಾತಾವರಣವನ್ನು ಕಲ್ಪಿಸಿಕೊಡುವುದು ಸಮ್ಮೇಳನದ ಉದ್ದೇಶವಾಗಿರಬೇಕು. ಈ ದೆಸೆಯಲ್ಲಿ ನಾವು ಮಾಡಬೇಕಾದ ಮಾಡಬಹುದಾದ ಕಾರ್ಯವನ್ನು ಮುಂದೆ ಸಂಕ್ಷೇಪವಾಗಿಯೇ ವಿವರಿಸಲು ಯತ್ನಿಸುತ್ತೇನೆ.

* ೨೮ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಭಾಷಣ.

ಪ್ರಾಚೀನ ಗ್ರಂಥಗಳ ಉದ್ಧಾರ

೧. ನಮ್ಮ ಪ್ರಾಚೀನ ಸಾರಸ್ವತ ಭಾಂಡಾರವನ್ನು ರಕ್ಷಿಸಿ ಪೋಷಿಸುವುದು ನಮ್ಮ ಆದ್ಯಕರ್ತವ್ಯ. ನಮ್ಮ ಹಳೆಯ ಸಾಹಿತ್ಯದೊಳಗಿನ ಎಷ್ಟೋ ಉದ್‌ಗ್ರಂಥಗಳು ಕೇವಲ ನಾಮಶೇಷವಾಗಿವೆ. ಅವುಗಳ ಹಸ್ತಲಿಖಿತ ಪ್ರತಿಗಳು ಇನ್ನೂ ದೊರೆತಿಲ್ಲ. ಹಲವು ಜೈನ ವೀರಶೈವ ಮುಂತಾದ ಮಠಗಳಲ್ಲಿ ವಾಲೆಗರಿಯ ಕೋರೆಕಾಗದದ ಕೈಬರೆಹದ ಪ್ರತಿಗಳು ಪವಿತ್ರವಾದ ಗದ್ದುಗೆಗಳ ಮೇಲೆ ಪೂಜೆಗೊಳ್ಳುತ್ತಿದ್ದರೂ ಒಳಗೊಳಗೆ ಗೀಳಾಗುತ್ತ ಹುಳುಗಳ ತುತ್ತಾಗುತ್ತ ನಡೆದಿವೆ. ಅವುಗಳಲ್ಲಿ ಇನ್ನೂ ಹೆಸರು ಸಹ ಕೇಳದ ಹಳೆಯ ಗ್ರಂಥಗಳು ಬೇಕಾದಷ್ಟು ಇರುವುದೆಂದು ಈಗ ದೊರೆತ ಅಲ್ಪಪರಿಚಯದಿಂದಲೇ ಗೊತ್ತಾಗುವಂತಿದೆ. ಅಂತಹ ಗ್ರಂಥಗಳನ್ನು ಹೊರಗೆ ತೆಗೆದು ಶುದ್ಧಪ್ರತಿ ಮಾಡಿಸುವುದೂ ಸಾಧ್ಯವಾದಂತೆ ಒಮ್ಮೆಯಾದರೂ ಮುದ್ರಣ ಕಂಡು ಬಯಲಿಗೆ ಬೀಳುವಂತೆ ಯೋಜನೆ ಮಾಡುವುದೂ ಅವಶ್ಯಕ. ಕೆಲವರು ಹಳೆಯದನ್ನೇ ಹೇಳುವ ಹೇಳುವುದರಲ್ಲಿಯೂ ವೈವಿಧ್ಯವಿಲ್ಲದೆ ಹೇಳಿದುದನ್ನೇ ಹೇಳುವ, ಗತಕಾಲೀನ ಸಾಹಿತ್ಯವನ್ನು ಪ್ರಕಟಿಸುವುದು ವೃಥಾಯಾಸ, ನಿರರ್ಥಕ ವ್ಯಯವೆಂದು ಹೇಳಬಹುದು. ಆದರೆ ಬರಿಯ ಸಾಹಿತ್ಯದೃಷ್ಟಿಯಿಂದಲ್ಲದೆ, ಚರಿತ್ರೆ ಸಂಸ್ಕೃತಿ ಮುಂತಾದ ಇತರ ದೃಷ್ಟಿಯಿಂದಲೂ ಇವುಗಳ ಉಪಯೋಗ ಬಹಳವಾಗುವಂತಿದೆ. ಅಂತೆಯೇ ಕನ್ನಡ ಜನತೆಯ ಕಣ್ಣೆದುರಿಗೆ ಒಮ್ಮೆಯಾದರೂ ಅವು ಬೀಳುವುದು ಅವಶ್ಯವೆನಿಸುತ್ತಿದೆ. ಯಾವ ದೃಷ್ಟಿಯಿಂದಲೂ ಪ್ರಯೋಜನವಿಲ್ಲದವು ತಾವಾಗಿಯೇ ಅಲ್ಪಕಾಲದಲ್ಲಿ ಕಣ್ಮರೆಯಾಗುವಲ್ಲಿ ಸಂದೇಹವಿಲ್ಲ.

ಉದ್‌ಗ್ರಂಥಗಳ ಪ್ರಕಟಣೆ

೨. ಇದಲ್ಲದೆ ಪ್ರಾಚೀನ ಸಾಹಿತ್ಯದಲ್ಲಿ ಈಗಾಗಲೇ ಹೆಸರು ಪಡೆದ ಕವಿಗಳ ಉದ್‌ಗ್ರಂಥಗಳನ್ನು – ಅಭ್ಯಾಸಕ್ಕೆ ಅನುಕೂಲವಾಗುವ ರೀತಿಯಲ್ಲಿ ಶುದ್ಧವಾದ ಮೂಲ, ಮಹತ್ವದ ಪಾಠಾಂತರ, ಶಬ್ದಕೋಶ, ಉಪಯುಕ್ತ ಟಿಪ್ಪಣಿ ಹಾಗೂ ಸಂಕ್ಷಿಪ್ತ ಪ್ರಸ್ತಾವನೆ ಇವುಗಳೊಂದಿಗೆ–ಮಾದರಿಯ ಪದ್ಧತಿಯನ್ನವಲಂಬಿಸಿ ("Oxford Poets" and "Standard Authors"ಗಳ

ರೀತಿಯಲ್ಲಿ) ಅಂದವಾಗಿ ಮುದ್ರಿಸಿ ಸುಲಭ ಬೆಲೆಗೆ ಪ್ರಚಾರಮಾಡುವುದೂ, ಮುದ್ರಣದ ಪ್ರತಿಗಳು ದೊರೆಯದಂತಾದೊಡನೆ ಕಾಲವಿಳಂಬವಿಲ್ಲದೆ ಪುನರ್ ಮುದ್ರಣವಾಗುವಂತೆ ಯೋಜನೆ ಮಾಡುವುದೂ ಅತ್ಯಾವಶ್ಯಕವೆಂದು ಹೇಳ ಬಹುದು. ತಮಿಳುನಾಡಿನಲ್ಲಿ ದಿವಂಗತ ಮಹಾಮಹೋಪಾಧ್ಯಾಯ ಸ್ವಾಮಿನಾಥಯ್ಯರವರ ಕಾರ್ಯ ಈ ದಿಸೆಯಲ್ಲಿ ಸ್ತೋತ್ರಾರ್ಹವಾಗಿದೆ.

೩. ಕನ್ನಡ ನುಡಿಯ (ಹಾಗು ಸಾಹಿತ್ಯದ) ಹುಟ್ಟು-ಬೆಳವಣಿಗೆ ಗಳನ್ನು ಕುರಿತು ಶಾಸ್ತ್ರೀಯವಾದ ಕೂಲಂಕಷವಾದ ಅಭ್ಯಾಸ ಈಗ ಬೇಕಾ ಗಿದೆ. ದಿವಂಗತ ಪ್ರಾಕ್ತನ ವಿಮರ್ಶ ವಿಚಕ್ಷಣರಾದ ಶ್ರೀ ರಾ. ಬ. ಆರ್. ನರಸಿಂಹಾಚಾರ್ಯರು ಈ ಕ್ಷೇತ್ರದಲ್ಲಿ ಮಾರ್ಗದರ್ಶಿಗಳಾಗಿದ್ದಾರೆ. ಆದರೆ ಈಗ ಈ ಬಗೆಯ ಕಾರ್ಯಕ್ಕೆ ಹೆಚ್ಚು ಅನುಕೂಲತೆಗಳು ದೊರೆಯುವುದು ಸಾಧ್ಯವಿರುವುದರಿಂದ ಆಧುನಿಕ ಕನ್ನಡಭಾಷಾ ಪಂಡಿತರು ಹೆಚ್ಚು ಉತ್ಸುಕತೆ ಯಿಂದ ಕಾರ್ಯವನ್ನು ಮುಂದುವರಿಸಬೇಕಾಗಿದೆ. ಅಂಥವರು ಕೈಕೊಳ್ಳ ಬೇಕಾದ ಕಾರ್ಯಕ್ರಮದಲ್ಲಿ ಅತಿ ಮಹತ್ತ್ವದುದೆನಿಸುವ ಕೆಲವನ್ನು ಇಲ್ಲಿ ನಿರ್ದೇಶಿಸಬಹುದು.

(ಅ) ನಿಘಂಟು : ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಆಳವಾದ ಅಭ್ಯಾಸದ ಸಾಧನಗಳಲ್ಲಿ ನಮಗೆ ಈಗ ಅತ್ಯಗತ್ಯದ ಕೊರತೆಯೆಂದರೆ ಉತ್ತಮ ವಾದ ಕನ್ನಡ ನಿಘಂಟು ಎಂಬಲ್ಲಿ ಯಾವ ಸಂದೇಹವೂ ಇಲ್ಲ. ಕಿಟ್ಟೆಲ್ ಅವರ ಬಹು ಅಮೌಲ್ಯವಾದ ಡಿಕ್ಷನರಿಯು ಈಗ ಹಳತಾಗಿರುವುದಲ್ಲದೆ ಬರಿಯ ಕನ್ನಡ ಬಲ್ಲವರಿಗೆ ಅಷ್ಟು ಪ್ರಯೋಜನಕಾರಿಯಾಗಿಲ್ಲ. ಮೇಲಾಗಿ ಅದರ ಪ್ರತಿಗಳೂ ಈಗ ದುರ್ಲಭವಾಗುತ್ತಿವೆ. ಈಗಿನ ಪರಿಸ್ಥಿತಿಗೆ ತಕ್ಕ ನಿಘಂಟುವೊಂದನ್ನು ಸಿದ್ಧಪಡಿಸುವ ವಿಷಯದಲ್ಲಿ ನಮ್ಮ ಸಾಹಿತ್ಯ ಪರಿಷತ್ತು ಕೆಲವು ಬಾರಿ ಪ್ರಯತ್ನಪಟ್ಟಿದ್ದರೂ ಅದು ಫಲಕಾರಿಯಾಗಿಲ್ಲ. ಪಟ್ಟಿದಿ ಕಾವ್ಯ ಗಳ ಅಭ್ಯಾಸಕ್ಕಾಗಿಯೇ ಒಂದು ನಿಘಂಟುವನ್ನು ಪ್ರಕಟಿಸಬೇಕೆಂಬ ಪರಿಷತ್ತಿನ (೧೯೧೮) ಗೊತ್ತುವಳಿ ಕಾರ್ಯರೂಪಕ್ಕೆ ಇಳಿಯಲಿಲ್ಲ. "ಪದವೈಚಿತ್ರ್ಯ, ಪ್ರಯೋಗ ವೈಚಿತ್ರ್ಯ, ಅನ್ಯಭಾಷಾ ಶಬ್ದಗಳ" ಕೋಶವೊಂದನ್ನು ಸಿದ್ಧ ಪಡಿಸಬೇಕೆಂಬ (೧೯೩೧) ನಿರ್ಧಾರ ಮುಂದುವರಿಯಲಿಲ್ಲ. ಇತ್ತೀಚೆಗೆ ಕನ್ನಡ ನಿಘಂಟುವನ್ನು ಸಿದ್ಧಪಡಿಸುವ ಮೂರನೆಯ ಪ್ರಯತ್ನ ಆರಂಭ

ವಾಗಿದೆ. ಆದರೆ ಅದಕ್ಕೆ ಹಮ್ಮಿದ ಯೋಜನೆ ಅಷ್ಟು ತೃಪ್ತಿಕರವಾಗಿಲ್ಲವೆಂಬ ಸೊಲ್ಲು ಈಗಾಗಲೆ ಅಲ್ಲಲ್ಲಿ ಕೇಳಿಸುತ್ತಿದೆ. ಅದು ಏನೇ ಇರಲಿ, ಆಂಗ್ಲಭಾಷೆಗಾಗಿಯೇ ಪ್ರಕಟವಾಗುವ "ಆಕ್ಸ್‌ಫೋರ್ಡ್ ಇಂಗ್ಲಿಷ್ ಡಿಕ್ಷನರಿ" (Oxford Eaglish Dictionary)ಯ ರೀತಿಯಲ್ಲಿ — ನಿಘಂಟುಗಳಲ್ಲಿ ಅವಶ್ಯವಾಗಿ ಇರಬೇಕಾದ ಶಬ್ದೋತ್ಪತ್ತಿ, ಮೂಲರೂಪ, ವಿವಿಧರೂಪ, ನಾನಾರ್ಥ ಈ ಸಂಗತಿಗಳಲ್ಲದೆ ಪ್ರತಿಯೊಂದು ಶಬ್ದದ ಬಳಕೆಯ ಹಾಗು ಅರ್ಥವ್ಯತ್ಯಾಸದ, ಸಾಹಿತ್ಯದಲ್ಲಿ ಅದು ಮೊದಲು ಬಳಕೆಗೆ ಬಂದ ಕಾಲ ಹಾಗು ಗ್ರಂಥ, ಅದರ ಅರ್ಥದಲ್ಲಿ ಯಾವ ಯಾವ ಕಾಲದಲ್ಲಿ ಯಾವ ಗ್ರಂಥಕರ್ತನ ಬಳಕೆಯ ಪರಿಣಾಮವಾಗಿ ಮಾರ್ಪಾಟು ಆಗಿದೆ—ಈ ಮುಂತಾದವುಗಳ ಇತಿಹಾಸವನ್ನು ಸೂಚಿಸುವ ನಿಘಂಟುವೆ ನಮಗೆ ಈಗ ಅತ್ಯಾವಶ್ಯಕ. ಈ ಮಹತ್ಕಾರ್ಯಕ್ಕೆ ಬಹುಜನ ವಿದ್ವಾಂಸರ, ಬಹು ಭಾಷಾಪಂಡಿತರ ಸಹಕಾರವು ಅತ್ಯಂತಾವಶ್ಯಕ. ಕನ್ನಡ ಸಾಹಿತ್ಯದಲ್ಲಿ ಜೈನ, ವೀರಶೈವ, ವೈದಿಕ ಮೊದಲಾದ ಭಿನ್ನಮತ ಸಂಸ್ಕೃತಿಗಳು ಪ್ರತ್ಯೇಕವಾಗಿಯೂ ಕಲಬೆರಕೆಯಾಗಿಯೂ ಕೂಡಿಕೊಂಡಿರುವುವು. ಆದರಿಂದಾಗಿ ಹಲವು ಶಬ್ದಗಳಿಗೆ ಸಾಂಕೇತಿಕ ಅರ್ಥಗಳು ಆಯಾ ಗ್ರಂಥಗಳಲ್ಲಿ ಪ್ರಚುರಗೊಂಡಿರುವುವು. (ವೀರಶೈವ ವಚನಗ್ರಂಥಗಳಲ್ಲಿಯೂ ಮತಗ್ರಂಥಗಳಲ್ಲಿಯೂ ಪದೇ ಪದೇ ಕಂಡುಬರುವ 'ಮಾಟ' ಎಂಬ ಶಬ್ದಕ್ಕೆ 'ದಾನ'ವೆಂಬ ವಿಶಿಷ್ಟಾರ್ಥವಿರುವುದು ವೀರಶೈವರಲ್ಲದವರಿಗೆ ಬೇಗನೆ ಗೊತ್ತಾಗದೆ ಹೋಗುವುದು ಸಹಜವಿದೆ). ಅಂತಹ ಅರ್ಥಗಳನ್ನು ವಿಶದಪಡಿಸಲು ಆಯಾ ಮತ ಹಾಗೂ ಸಂಸ್ಕೃತಿಗಳ ಪ್ರಬಲ ಪರಿಚಯವಿದ್ದವರ ನೆರವು ಬಹು ಉಪಕಾರಿಯಾಗುವಲ್ಲಿ ಸಂದೇಹವಿಲ್ಲ. ಇತ್ತೀಚೆಗೆ ಕ್ರೈಸ್ತ ಹಾಗೂ ಮಹಮ್ಮದೀಯ ಸಂಸ್ಕೃತಿಗಳೂ ಕನ್ನಡ ಸಾಹಿತ್ಯದಲ್ಲಿ ಸೇರ್ಪಡೆಯಾಗುತ್ತಿವೆ. ಆದ್ದರಿಂದ ಆಯಾ ಸಂಸ್ಕೃತಿ–ಮತಗಳಲ್ಲಿ ಹುಟ್ಟಿ ಬೆಳೆದ ಪಂಡಿತರ ಹಾಗೆಯೆ ಅಂತಹ ಸಂಸ್ಕೃತಿಗಳನ್ನು ಅಭ್ಯಾಸ ಮಾಡಿ ಅನುಭವ ಪಡೆದವರ ಸಹಕಾರವೂ ಬಹು ಅವಶ್ಯಕವಾದುದು. ಆದುದರಿಂದ ಎಲ್ಲಿಂದದಿಂದಲೂ ತೃಪ್ತಿಕರವಾದ ಅಧಿಕಾರಯುಕ್ತವಾದ ನಿಘಂಟೊಂದು ಸಿದ್ಧವಾಗಬೇಕಾದರೆ ಪ್ರಾತಿನಿಧಿಕವಾದ ಸಂಪಾದಕಮಂಡಳಿಯ ಏರ್ಪಾಡಾಗುವುದೇ ಮುಖ್ಯವಾದ ಉಪಾಯವೆನ್ನಬಹುದು. ಇಂತಹ ನಿಘಂಟು

ಸಿದ್ಧವಾಗುವುದಕ್ಕೆ ದೀರ್ಘಕಾಲಾವಧಿಬೇಕು ; ಅಲ್ಲದೆ ಧನ ಸಹಾಯವೂ ಧಾರಾಳವಾಗಿರಬೇಕು. ಬರಿಯ ಮಿತವ್ಯಯದ ತತ್ತ್ವ ನಮ್ಮನ್ನು ಈ ಮಾರ್ಗದಲ್ಲಿ ದೂರ ಒಯ್ಯಲಾರದು. ಆದುದರಿಂದ ಮುಂಬಯಿ, ಮದ್ರಾಸು, ಹೈದರಾಬಾದು, ಮೈಸೂರು ಮೊದಲಾದ ಸರಕಾರಗಳ ವಿಶ್ವವಿದ್ಯಾನಿಲಯಗಳ ಆರ್ಥಿಕ ಹಾಗೂ ಇನ್ನಿತರ ಸಹಾಯವನ್ನು ಕೋರಬೇಕು ; ದೊರಕಿಸಬೇಕು.

ಇಲ್ಲಿ ಸಂಸ್ಕೃತದ ಅಥವಾ ಅನ್ಯಭಾಷೆಗಳ ಶಬ್ದಗಳು ಇಂತಹ ನಿಘಂಟಿನಲ್ಲಿ ಸೇರತಕ್ಕುವೆ ಎಂಬ ಪ್ರಶ್ನೆ ಉಪಸ್ಥಿತವಾಗುತ್ತದೆ. ಸಾಮಾನ್ಯ ಓದುಗರಿಗೆ ಹಲವಾರು ಬೇರೆ ಭಾಷೆಗಳ ಶಬ್ದಕೋಶಗಳನ್ನು ಸಂಗ್ರಹಿಸುವುದು ಅಸಾಧ್ಯ ವೆಂಬ ದೃಷ್ಟಿಯಿಂದ, ಕನ್ನಡವನ್ನು ಮಾತ್ರ ಓದಲು ಬರೆಯಲು ಬಲ್ಲವರಿಗೂ ಅನುಕೂಲವಾಗಬೇಕೆಂಬ ವಿಚಾರದಿಂದ, ಸಂಸ್ಕೃತದಿಂದಾಗಲಿ ಇನ್ನಿತರ ಭಾಷೆ ಗಳಿಂದಾಗಲಿ ಕನ್ನಡದಲ್ಲಿ ಬಳಕೆಗೆ ಬಂದ ಶಬ್ದಗಳು ಯಾವಾಗಲೂ ಮೂಲ ಭಾಷೆಯೊಳಗಿನ ಅರ್ಥವನ್ನು ಸೂಚಿಸದೆ ಬೇರೆ ವಿಶಿಷ್ಟವಾದ ಅರ್ಥಗಳನ್ನು ಸೂಚಿಸುವುದೂ ಉಂಟೆಂಬ ವಿವೇಕದಿಂದ, ಇಂತಹ ಶಬ್ದಗಳನ್ನು ಈ ಬಗೆಯ ನಿಘಂಟುವಿನಲ್ಲಿ ಸೇರ್ಪಡಿಸಮಾಡುವುದು ಸರಿಯಾದುದೆಂದೇ ಹೇಳಬಹುದು. ಕನ್ನಡದ ಮಾತಿನಲ್ಲಿಯಾಗಲಿ ಬರವಣಿಗೆಯಲ್ಲಾಗಲಿ ಬಳಕೆಗೆ ಬಂದಿರುವ ಶಬ್ದ ಗಳನ್ನೆ ಪ್ರಯೋಗವನ್ನರಿತು ಸೇರಿಸುವುದು ಹಿತಕರ. ಮೂಲಭಾಷೆಯಲ್ಲಿಯೆ ಉಪಯೋಗವಾಗುತ್ತಿರುವಂತಹ ಶಬ್ದಗಳನ್ನು ಬಿಡುವುದು ತಪ್ಪಾಗಲಿಕ್ಕಿಲ್ಲ. ಇವಕ್ಕೆಲ್ಲ ತಾರತಮ್ಯಜ್ಞಾನ ಆವಶ್ಯಕ. ಸಂಸ್ಕೃತ (ಅಥವಾ ಅನ್ಯಭಾಷಾ) ನಿಘಂಟುಗಳೊಳಗಿನ ಶಬ್ದಗಳನ್ನೆಲ್ಲ ಓರನ್ನವಾಗಿ ತುಂಬುವ ಪ್ರಯತ್ನವನ್ನು ಮಾಡದೆ ಕನ್ನಡದಲ್ಲಿಯ ಪ್ರಯೋಗ ರೂಢಿ ಇವುಗಳನ್ನು ಅವಲಂಬಿಸುವುದೇ ಶ್ರೇಯಸ್ಕರ.

(೨) **ಭಾಷಾಚರಿತ್ರೆ :** ಕನ್ನಡದ ಶಾಸ್ತ್ರೀಯವಾದ ಅಭ್ಯಾಸಕ್ಕೆ ಇರುವ ಇನ್ನೊಂದು ಕೊರತೆಯೆಂದರೆ ಕನ್ನಡ ಭಾಷೆಯ ಹುಟ್ಟು ಹಾಗೂ ಬೆಳವಣಿಗೆಯ ಸಾದ್ಯಂತ ಚರಿತ್ರೆ. ಹುಟ್ಟಿನಿಂದ ಕನ್ನಡವು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದುದಾದರೂ ಅದು ಪರಿಪುಷ್ಟವಾಗಿರುವುದು ಸಂಸ್ಕೃತ ಹಾಗೂ ಪ್ರಾಕೃತ ಭಾಷೆಗಳ ಸಂಪರ್ಕದಿಂದ. ಉತ್ತರ (ಅಥವಾ ಸಂಸ್ಕೃತ) ಭಾಷಾ ವರ್ಗಗಳಿಗೂ ದಕ್ಷಿಣದ (ಅಥವಾ ದ್ರಾವಿಡ) ಭಾಷಾವರ್ಗಗಳಿಗೂ ಒಂದು ತೆರ

ನಾಗಿ ಮಧ್ಯಸ್ಥವಾಗಿದೆ ಕನ್ನಡ. ಆದುದರಿಂದ ಈ ಎರಡೂ ಭಾಷಾವರ್ಗಗಳ ಒಳ್ಳೆಯ ಅಂಶಗಳನ್ನು ಸ್ವೀಕರಿಸಿ ಒಂದು ಬಗೆಯ ಅಪೂರ್ವ ಚೈತನ್ಯವನ್ನೂ ಕಳೆಯನ್ನೂ ಪಡೆಯುವುದು ಸಾಧ್ಯವಿದೆ. ಈಗಿನ ಕನ್ನಡಕ್ಕೆ. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಇದುವರೆಗೆ ಕನ್ನಡವು ಸಹಸ್ರಾರು ವರುಷಗಳಿಂದ ಇವೆರಡೂ ಭಾಷಾ ವರ್ಗಗಳೊಡನೆ ಯಾವ ವಿಧದ ಸಂಬಂಧವನ್ನು ಬೆಳೆಸಿಕೊಂಡು ಬಂದಿದೆ ಎಂಬುದನ್ನು ಸಾದ್ಯಂತವಾಗಿ ವಿವೇಚಿಸುವುದು ಅಗತ್ಯವೆನಿಸುತ್ತದೆ. ಸಂಸ್ಕೃತ ಶಬ್ದಗಳು ನೇರವಾಗಿ ರೂಪ ವ್ಯತ್ಯಾಸ ಬಹಳವಿಲ್ಲದೆಯೂ ಅಪಭ್ರಂಶಾದಿ ಪ್ರಾಕೃತ ಭಾಷೆಗಳ ಮಾರ್ಗವಾಗಿ ವಿಕೃತರೂಪ ಹೊಂದಿಯೂ ಕನ್ನಡಕ್ಕೆ ಬಂದು ಸೇರಿವೆ. ಇದಲ್ಲದೆ ದ್ರಾವಿಡ ಭಾಷೆಗಳಿಗೆಲ್ಲ ಸಾಮಾನ್ಯವಾದ ಶಬ್ದಕೋಶವನ್ನು ಕನ್ನಡವು ತನ್ನ ಮೂಲಧನವನ್ನಾಗಿಟ್ಟುಕೊಂಡಿದ್ದರೂ ಕಾಲಾನುಕ್ರಮದಿಂದ ಅದರಲ್ಲಿ ಹಲವು ಮಾರ್ಪಾಟುಗಳನ್ನು ಮಾಡಿಕೊಂಡಿದೆ. ಉಚ್ಚಾರಣ ಕ್ರಮದಲ್ಲಿ ಹೆಚ್ಚು ಕಡಿಮೆಗಳಾಗಿವೆ. ಹಲವು ಸಂದರ್ಭಗಳಲ್ಲಿ ರೂಪವ್ಯತ್ಯಾಸದೊಡನೆ ಅರ್ಥವ್ಯತ್ಯಾಸಗಳೂ ಆಗಿವೆ. ಬೇರೆ ದ್ರಾವಿಡ ಭಾಷೆಗಳಲ್ಲಿ ಇನ್ನೂ ಬಳಕೆಯಲ್ಲಿದ್ದ ಹಲವು ಶಬ್ದಗಳು ಈಗ ಬಳಕೆ ತಪ್ಪಿವೆ ; ಇಲ್ಲವೆ ಆವುದೊಂದು ಸಂಕೇತಾರ್ಥದಲ್ಲಿ ಮಾತ್ರ ಪ್ರಯೋಗವಾಗುತ್ತಿವೆ. ಇದೇ ರೀತಿ ವ್ಯಾಕರಣದ ವಿಷಯದಲ್ಲಿಯೂ ವಿಷಯಗಳಲ್ಲಿಯೂ ಸಂಸ್ಕೃತ ದ್ರಾವಿಡ ಎರಡೂ ಭಾಷಾವರ್ಗಗಳ ಪರಿಣಾಮವು ಕನ್ನಡದ ಮೇಲೆ ಆದುದು ಕಂಡುಬರುತ್ತಿದೆ. ಈ ಎಲ್ಲ ಸಂಬಂಧಗಳನ್ನೂ ಮಾರ್ಪಾಡುಗಳನ್ನೂ ಪರಿಣಾಮಗಳನ್ನೂ ಪರಿಪೂರ್ಣವಾಗಿ ಶಾಸ್ತ್ರೀಯವಾಗಿ ಅಭ್ಯಾಸ ಮಾಡಲಿಕ್ಕೂ ಇವುಗಳಿಂದಾದ ಇಷ್ಟಾನಿಷ್ಟ ಪರಿಣಾಮಗಳನ್ನು ಕಂಡುಹಿಡಿಯಲಿಕ್ಕೂ ಭಾಷಾಶಾಸ್ತ್ರದ ದೃಷ್ಟಿಯಿಂದ ಬರೆದ ಕನ್ನಡ ನುಡಿಯ ಸಾದ್ಯಂತ ಚರಿತ್ರೆಯು ಎಷ್ಟು ಅವಶ್ಯಕವೆಂಬುದನ್ನು ಹೆಚ್ಚಾಗಿ ವಿಸ್ತರಿಸಬೇಕಾಗಿಲ್ಲ. ಅಲ್ಲದೆ ಇನ್ನು ಮುಂದೆ ಕನ್ನಡ ನುಡಿಯನ್ನು ಈಗಿನ ಕಾಲಕ್ಕೆ ಯೋಗ್ಯವಾಗುವಂತೆ ಸರ್ವತೋಮುಖವಾಗಿ ಬಲಪಡಿಸಲಿಕ್ಕೆ ಮಾಡಬೇಕಾದ ಪ್ರಯತ್ನಗಳು ಯಾವ ದಿಸೆಯಲ್ಲಿ ಸಾಗುವುದು ಹಿತಕರ, ಯಾವ ರೀತಿಯಲ್ಲಿ ಜರುಗಿದರೆ ಕನ್ನಡದ ಜೀವಾಳಕ್ಕೆ ವಿಘಾತವಾಗಲಾರದು ಎಂಬುದನ್ನು ಕಂಡುಕೊಳ್ಳಲು ಈ ಬಗೆಯ ಅಭ್ಯಾಸವು ಅನುಕೂಲವಾಗುವುದರಲ್ಲಿ ಸಂದೇಹವಿಲ್ಲ.

(ಇ) **ಸಾಹಿತ್ಯ ಚರಿತ್ರೆ:** ಪೂರಕನೆಯದಾಗಿ ಈಗ ನಮಗೆ ಬೇಕಾಗಿರುವುದು ಕನ್ನಡ ಸಾಹಿತ್ಯದ ಸಾದ್ಯಂತವಾದ ಚರಿತ್ರೆ. ಇದರಲ್ಲಿ ಇದುವರೆಗೆ ಆಗಿಹೋದ ಕವಿಗಳ ಹಾಗು ಇನ್ನಿತರ ಗ್ರಂಥಕರ್ತರ ಜೀವನ ಚರಿತ್ರೆಯ ಮುಖ್ಯಾಂಶಗಳು, ಅವರ ಕೃತಿಗಳ ಪರಿಚಯ, ಸಾರಾಂಶ, ಹಿಂದಣ ವರಲ್ಲಿ ಆರಾರ ಪರಿಣಾಮ ಅವರ ಮೇಲೆ ಎಷ್ಟರಮಟ್ಟಿಗೆ ಆಗಿದೆ, ಯಾವ ಯಾವ ದಿಸೆಯಲ್ಲಿ, ಹಾಗೆಯೇ ಅವರ ಕೃತಿಗಳ ಪರಿಣಾಮ ಮುಂದಿನ ಗ್ರಂಥಕರ್ತರಲ್ಲಿ ಯಾರಾರ ಮೇಲೆ ಎಷ್ಟೆಷ್ಟು ಆಗಿದೆ—ಈ ಮುಂತಾದ ಸಂಗತಿಗಳು ಅಡಕವಾಗಿರಬೇಕು. ಮೇಲಾಗಿ ಆಯಾಕಾಲದ ಪರಿಸ್ಥಿತಿ ಮುಂತಾದವುಗಳ ಚರ್ಚೆಯೂ ಅದರಲ್ಲಿರಬೇಕಾದುದು ವಿಹಿತವೇ. ಒಟ್ಟಿನಲ್ಲಿ ಈ ಸಾಹಿತ್ಯ ಚರಿತ್ರೆಯು ಕೇಂಬ್ರಿಡ್ಜ ಹಿಸ್ಟರಿ ಆಫ್ ಇಂಗ್ಲಿಷ್ ಲಿಟರೇಚರ್ (Cambridge History of English Literature) ಎಂಬ ಗ್ರಂಥಾವಳಿಯ ರೀತಿಯಲ್ಲಿ ಪ್ರಕಟವಾಗತಕ್ಕದೆಂಬುದನ್ನು ಮಾತ್ರ ಇಲ್ಲಿ ಸೂಚಿಸುತ್ತೇನೆ.

ಇದಲ್ಲದೆ, ಇಂಗ್ಲಿಷ್ ಮೆನ್ ಆಫ್ ಲೆಟರ್ಸ (English Men of Letters) ಮಾಲೆಯ ಮಾದರಿಯನ್ನನುಸರಿಸಿ. ಕನ್ನಡ ಸಾಹಿತ್ಯದಲ್ಲಿ ಮುಖ್ಯರಾದ ಸುಪ್ರಸಿದ್ಧ ಕವಿಗಳನ್ನೂ ಗ್ರಂಥಕರ್ತರನ್ನೂ ಕುರಿತು ಸ್ವತಂತ್ರವಾದ ಚರಿತ್ರೆ ಹಾಗು ವಿಮರ್ಶೆಗಳನ್ನು ಒಳಗೊಂಡ ಗ್ರಂಥಗಳನ್ನು ಕಿರಿದಾಕಾರದ ೧೫೦–೨೦೦ ಪುಟಗಳ ಹವಣಾದ ಗಾತ್ರದಲ್ಲಿ ಪ್ರಕಟಿಸುವುದು ಆವಶ್ಯವಿದೆ. ಇಂತಹ ಗ್ರಂಥಗಳನ್ನು ಬಂಗಾಲದ ಸಾಹಿತ್ಯದಲ್ಲಿ ಪ್ರಸಿದ್ಧರಾದ ಹಲವು ಸಾಹಿತಿಗಳನ್ನು ಕುರಿತು ವಂಗೀಯ ಸಾಹಿತ್ಯ ಪರಿಷತ್ತಿನವರು ಈಗಾಗಲೇ ೫೦ ರವರೆಗೆ ಪ್ರಕಟಮಾಡಿದ್ದಾರೆ. ತಮಿಳಿನಲ್ಲಿಯೂ ಈ ಬಗೆಯ ಗ್ರಂಥಮಾಲೆ ಆರಂಭವಾಗಿ ಅಪ್ಪಯ್ಯಾರ್. ಆಂಡಾಳ್ ಈ ಮೊದಲಾದವರನ್ನು ಕುರಿತು ಕೆಲವು ಪ್ರಕಟಣೆಗಳು ಹೊರಟಿವೆ. ಈ ಬಗೆಯ ಗ್ರಂಥಮಾಲೆಗೆ ಏಕರೂಪತೆಯನ್ನುಂಟುಮಾಡಲು, ಯೋಗ್ಯರಾದ ಒಬ್ಬ ಮುಖ್ಯ ಸಂಪಾದಕರನ್ನು ನಿಯೋಜಿಸಿ ಅವರ ದಿಗ್ದರ್ಶಕತ್ವದಲ್ಲಿ ಆಯಾ ಕವಿಗಳನ್ನೂ ಗ್ರಂಥಕರ್ತರನ್ನೂ ಆಳವಾಗಿ ಅಭ್ಯಾಸಮಾಡಿದವರಿಂದ, ಹೆಸರಾದ ತಜ್ಞರಿಂದ ಈ ಬಗೆಯ ಗ್ರಂಥಗಳನ್ನು ಬರೆಸಿ ಪ್ರಕಟಿಸಬೇಕು.

ಸಂಶೋಧನೆ

ನಮ್ಮ ನಾಡಿನಲ್ಲಿ ಸಂಶೋಧನ ಕಾರ್ಯವು ಸಾಹಿತ್ಯ, ಸಂಸ್ಕೃತಿ, ಧರ್ಮ, ಇತಿಹಾಸ ಮುಂತಾದ ಕ್ಷೇತ್ರಗಳಲ್ಲಿ ನಾನಾ ಬಗೆಯಾಗಿ ನಡೆಯುತ್ತಿರುವುದು ಸರಿಯೆ. ಆದರೆ ಈ ಕಾರ್ಯ ಇನ್ನೂ ವಿಸ್ತಾರವಾಗಿ ಕ್ರಮಬದ್ಧವಾಗಿ ಫಲಕಾರಿಯಾಗುವಂತೆ ಸಾಗುವುದು ಅವಶ್ಯವೆನಿಸುತ್ತಿದೆ. ಸಂಶೋಧನವು ಭಾಷಾ ವಿಷಯಕವಾಗಲಿ, ಸಾಹಿತ್ಯ ವಿಷಯಕವಾಗಲಿ, ಪ್ರಾಕ್ತನ ವಿಮರ್ಶೆಯೆ ಆಗಲಿ ಅದು ಕಲೆಯೂ ಅಹುದು, ಶಾಸ್ತ್ರವೂ ಅಹುದು. ಈ ಕಾರ್ಯದಲ್ಲಿ ತೊಡಗುವವರಿಗೆ ಅಸಾಧಾರಣ ಪಾಂಡಿತ್ಯ, ಸತತ ಶ್ರಮ, ಯುಕ್ತಾಯುಕ್ತ ವಿವೇಚನಶಕ್ತಿ ಈ ಎಲ್ಲ ಗುಣಗಳಿರಬೇಕಲ್ಲದೆ, ಸಂಶೋಧನ ಕಲೆಯಲ್ಲಿಯೇ ಯೋಗ್ಯಶಿಕ್ಷಣ ಇಲ್ಲವೆ ಒಳ್ಳೆಯ ಅನುಭವವೂ ಬೇಕು. ಮೇಲಾಗಿ ಸಂಶೋಧನವು ಒಂದು ಬಗೆಯ ತಪಶ್ಚರ್ಯವೂ ಅಹುದು. ಸಂಶೋಧಕನು ಸತ್ಯಾನ್ವೇಷಣವನ್ನೆ ತನ್ನ ಏಕಮೇವ ಗುರಿಯನ್ನಾಗಿಟ್ಟುಕೊಳ್ಳಬೇಕಲ್ಲದೆ, ತಾನು ಮೊದಲೆ ಮನಸ್ಸಿನಲ್ಲಿ ಮಾಡಿಕೊಂಡ ಪ್ರಮೇಯಗಳಿಗೆ ಅನುಕೂಲವಾಗುವಂತೆ ಸಂಶೋಧನದ ಪರಿಣಾಮಗಳನ್ನು ವಿಪರ್ಯಾಸಗೊಳಿಸುವ ಹವ್ಯಾಸಕ್ಕೆ ಬೀಳದಂತೆ ಎಚ್ಚರಿಕೆಯನ್ನು ವಹಿಸಬೇಕು. ತಿಳಿಯಾದ ಮಡುವನ್ನು ಕಲಕಿ ಬಹುಕಾಲದಿಂದ ಕೆಳಗೆ ಕುಳಿತ ಕೊಳಚೆಯನ್ನೆಲ್ಲ ಮೇಲಕ್ಕೆ ಎಬ್ಬಿಸುವಂತಹ ವಾದವಿವಾದದ ಗೊಂದಲವನ್ನು ಹುಟ್ಟಿಸುವುದು ಇಷ್ಟು ಮಾತ್ರಕ್ಕೆ ಸಂಶೋಧನೆ ಎನಿಸಲಾರದು ಎಂಬುದನ್ನು ಸಂಶೋಧನ ಕಾರ್ಯದಲ್ಲಿ ತೊಡಗಿದವರೆಲ್ಲರೂ ನೆನಪಿನಲ್ಲಿಟ್ಟುಕೊಂಡಿರುವುದು ಶ್ರೇಯಸ್ಕರ. ಸಂಶೋಧನದ ನೆಪದಲ್ಲಿ ಅವಿಪಕ್ವವಾದ ಜನರು ಹುರುಳಿಲ್ಲದ ವಾದವಿವಾದಗಳನ್ನೆಬ್ಬಿಸಿ, ಇಲ್ಲದ ಸಮಸ್ಯೆಗಳನ್ನು ಹುಟ್ಟಿಸಿ, ಮತಮತಗಳಲ್ಲಿ ವಿರಸವನ್ನು ಹುಟ್ಟಿಸುವಂತಹ–ಇವು ಬುದ್ಧಿಪೂರ್ವಕವೆಂದು ಯಾವಾಗಲೂ ಹೇಳಲಾಗುವುದಿಲ್ಲವಾದರೂ–ಅಪಪ್ರಚಾರಗಳು ಅಲ್ಲಲ್ಲಿ ಕಂಡುಬರುತ್ತವೆ. ಇಂತಹ ಪ್ರವೃತ್ತಿ ಪ್ರಯತ್ನಗಳಿಗೆ ಆದಷ್ಟು ತೀವ್ರ ತಡೆಹಾಕುವುದು ಅವಶ್ಯಕ. ಆದುದರಿಂದ ತಮ್ಮ ಹೊಣೆಗಾರಿಕೆಯನ್ನರಿತ ವಿದ್ವಾಂಸರಿಂದಲೇ ಪ್ರತಿಷ್ಠಿತ ಸಂಸ್ಥೆಗಳ ಮುಖಾಂತರವಾಗಿ ಸಂಶೋಧನ ಕಾರ್ಯವು ಜರಗುವುದು ಒಳ್ಳೆಯದು.

ತಂತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವ ಹಕ್ಕು ಪ್ರತಿಯೊಬ್ಬರಿಗೆ ಇರುವುದನ್ನು ವ್ಯಕ್ತಿ ಸ್ವಾತಂತ್ರ್ಯದ ಈಗಿನ ಕಾಲದಲ್ಲಿ ಒಪ್ಪಿಕೊಳ್ಳದೆ ವಿಧಿಯಿಲ್ಲವೆಂಬುದೇನೋ ನಿಜ. ಆದರೆ ಅಂತಹ ಅಭಿಪ್ರಾಯಗಳು ವ್ಯಕ್ತಿಯ ಹೊಣೆಗಾರಿಕೆಯ ಮೇಲೆಯೇ ಪ್ರಕಟವಾದರೆ ಹೆಚ್ಚಿನ ಹಾನಿ ಆಗಲಿಕ್ಕಿಲ್ಲ. ಅದೇ ಅವುಗಳಿಗೆ ಪ್ರತಿಷ್ಠಿತ ಸಂಸ್ಥೆಗಳ ಅಥವಾ ಅವುಗಳ ನೆರೆಯಲ್ಲಿ ನಡೆಯುವ ಪತ್ರಿಕೆಗಳ ಬೆಂಬಲ ದೊರೆತರೆ ಇಲ್ಲದ ಗೊಂದಲಗಳೇಳುವ ಸಂಭವವೇ ಹೆಚ್ಚು. ಇಂತಹ ಪ್ರಸಕ್ತಿಗಳಲ್ಲಿ ಬರಿಯ ವಾದವಿವಾದದ ಧೂಳಿ ಎಲ್ಲ ಕಡೆಗೂ ಹಬ್ಬಿ ವಾತಾವರಣವನ್ನು ಕಲುಷಿತಮಾಡಬಹುದಲ್ಲದೆ, ನಿಜವಾದ ಸಂಶೋಧನ ಕಾರ್ಯ ಮುಂದುವರಿಯದೆ ಹೋಗುವ ಸಂಭವವೆ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ.

ಆದುದರಿಂದ ಅಧಿಕೃತ ಸಂಶೋಧನೆ ಅಖಿಲ ಕರ್ನಾಟಕ ಸಂಸ್ಥೆಯಾದ ಪರಿಷತ್ತಿನ ಪರವಾಗಿ ನಡೆಯುವುದು ಬಹು ಇಷ್ಟವಾದುದು. ಆದಕಾರಣ ಪರಿಷತ್ತು ಈ ವಿಷಯದಲ್ಲಿ ಸಂಶೋಧನದ ಬೇರೆ ಬೇರೆ ಶಾಖೆಗಳಲ್ಲಿ ನಿಷ್ಣಾತರಾದ ವಿದ್ವಾಂಸರನ್ನೊಳಗೊಂಡು, ಒಳ್ಳೆಯ ಪ್ರಾತಿನಿಧಿಕವಾದ ಸಂಪಾದಕ ಮಂಡಲವನ್ನು ನಿಯಮಿಸಿ, ಅವರಿಂದ ಒಪ್ಪಿಗೆಯನ್ನು ಪಡೆದಂತಹ ಸಂಶೋಧನ ಲೇಖನಗಳಿಗೆ ಮಾತ್ರ ಪರಿಷತ್ತಿನ ಪರವಾಗಿ ಪ್ರಕಟನೆ ದೊರೆಯಬೇಕು. ಇದಕ್ಕಾಗಿ ಪರಿಷತ್ತು ಒಂದು ಪತ್ರಿಕೆಯನ್ನು ಪ್ರತ್ಯೇಕವಾಗಿಯೆ ನಡೆಸಬಹುದು. ಪ್ರತಿಯೊಂದು ಲೇಖನಕ್ಕೂ ತಳಹದಿಯಾದ ಆಧಾರಗಳ ಸಮಗ್ರ ಪಟ್ಟಿಯನ್ನು ಆಯಾ ಲೇಖನದೊಡನೆ ಸಂಪಾದಕ ಮಂಡಳಿಯು ತರಿಸಿಕೊಳ್ಳಬೇಕು. ಪ್ರಯೋಜನಕಾರಿಯಾದ ಸಂಶೋಧನ ಹೆಚ್ಚಾಗಿ ನಡೆಯುವಂತೆ ಪ್ರೋತ್ಸಾಹವನ್ನು ಕೊಡಬೇಕು.

೮. ವಿಜ್ಞಾನವೆಂದರೇನು ?

ಜಿ. ಹನುಮಂತರಾವ ೨೪-೪-೧೮೯೮ ; ೨೨-೧೨-೧೯೭೪

ಜೀವನವು ಅನ್ವೇಷಣ ಪರಂಪರೆ ; ಹುಡುಕುವುದು ಅದರ ನಿತ್ಯ ವಿಧಿ. ನೆಲದಲ್ಲಿ ಹರಿಯುವ ಹುಳು, ಆಕಾಶದಲ್ಲಿ ಹಾರುವ ಹಕ್ಕಿ, ಓಡಾಡುವ ಮೃಗ, ಆಟವಾಡುವ ಮಗು, ಹೆಂಗಸರು, ಗಂಡಸರು, ಹುಡುಗರು, ಮುದುಕರು– ಎಲ್ಲರೂ ತಮ್ಮ ಗುಣ ಕರ್ಮಗಳಿಗನುಸಾರವಾಗಿ, ಅವಸ್ಥಾಭೇದಗಳಿಗೆ ತಕ್ಕಂತೆ ಏನನ್ನಾದರೂ ಹುಡುಕುತ್ತಲೇ ಇರುವರು. ಜೀವನವು ವಿಶಾಲವಾದ ಹಾಗೆಲ್ಲಾ ಜೀವಿಗಳ ಅನ್ವೇಷಣಗಳೂ ದೃಷ್ಟಿಧ್ಯೇಯಗಳೂ ಬೆಳೆಯುವುವು. ಕೆಲವು ಪ್ರಾಣಿಗಳಿಗೆ ಹುಟ್ಟಿದಂದಿನಿಂದ ಸಾಯುವವರೆಗೂ ಆಹಾರವನ್ನು ಹುಡುಕುವುದೇ ಕೆಲಸ. ಮತ್ತೆ ಕೆಲವು ಪ್ರಾಣಿಗಳು ಆಹಾರವನ್ನು ಹುಡುಕುವುದರ ಜತೆಗೆ ಸಂತಾನವನ್ನು ಪೋಷಿಸುವ ಕೆಲಸವನ್ನೂ ಕೈಕೊಳ್ಳುವುವು. ಇನ್ನೂ ಮೇಲಕ್ಕೆ ಹೋದರೆ, ಎಂದರೆ ಮಾನವ ಜೀವನದಲ್ಲಿ, ಅನ್ವೇಷಣವು ಅರ್ಥಕಾಮದಲ್ಲಿ ಅವಸಾನ ಹೊಂದದೆ ಮೆಲ್ಲಮೆಲ್ಲನೆ ಸತ್ಯಧರ್ಮ ಮೋಕ್ಷಗಳ ಕಡೆಗೂ ತಿರುಗಿದೆ. ಮೊದಲಲ್ಲಿ ಈ ಧ್ಯೇಯಗಳೆಲ್ಲಾ ಒಂದರಿಂದೊಂದು ಬೇರೆಯಾಗದೆ ಎಲ್ಲವೂ ಒಟ್ಟಾಗಿಯೇ ಇದ್ದುವು. ಕಾಲಕ್ರಮದಲ್ಲಿ ಒಬ್ಬೊಬ್ಬರಿಗೆ ಒಂದೊಂದು ಪುರುಷಾರ್ಥದಲ್ಲಿ ಹೆಚ್ಚು ಅಭಿರುಚಿ ಹುಟ್ಟಿ, ಕೆಲವರು ಅರ್ಥವನ್ನೂ ಇನ್ನು ಕೆಲವರು ಜ್ಞಾನವನ್ನೂ ಇನ್ನು ಕೆಲವರು ಧರ್ಮವನ್ನೂ ತಮ್ಮ ಜೀವನದ ಹವ್ಯಾಸವಾಗಿ ಇಟ್ಟುಕೊಳ್ಳಲು ಮೊದಲು ಮಾಡಿದರು. ಹೀಗೆ ಜ್ಞಾನದ ಅನ್ವೇಷಣವೇ ಸ್ವತಂತ್ರವಾಗಿ ಅನೇಕ ಕಾಲ ಬೆಳೆದ ಮೇಲೆ ಅದರಲ್ಲಿ ಚರಿತ್ರೆ, ತತ್ವಶಾಸ್ತ್ರ, ವಿಜ್ಞಾನ ಮೊದಲಾದ ವಿಭಾಗಗಳು ಹುಟ್ಟಿದುವು. ಇವುಗಳಲ್ಲಿ ಒಂದಾದ ವಿಜ್ಞಾನದ ಸ್ವರೂಪವನ್ನು ವಿವರಿಸುವುದು ಈ ಲೇಖನದ ಉದ್ದೇಶ.

ವಿಜ್ಞಾನವೆಂದರೇನು ? ವಿಜ್ಞಾನವೇನೆಂಬುದನ್ನು ಅದು ಹುಡುಕುವ ವಿಷಯದಿಂದ ಗೊತ್ತುಮಾಡುವುದಕ್ಕಾಗುವುದಿಲ್ಲ. ಏಕೆಂದರೆ ವಿಜ್ಞಾನಕ್ಕೆ ಇಂಥದೇ ಎಂದು ಗೊತ್ತಾದ ವಿಷಯವಿಲ್ಲ. ಪ್ರಪಂಚದ ಯಾವ ವಸ್ತುವೇ

ಆಗಲಿ ಕ್ರಿಯೆಯೇ ಆಗಲಿ ಇದು ಅದು ಎನ್ನದೆ ಎಲ್ಲವೂ ವಿಜ್ಞಾನದ ವಿಷಯವಾಗಬಹುದು, ಜಡವಾದ ಅಣುವಿನಿಂದ ಹಿಡಿದು ಚೇತನರೂಪವಾದ ಆತ್ಮದವರೆಗೆ, ತೃಣಕಾಷ್ಠಗಳಿಂದ ಹಿಡಿದು ಋಗ್ವೇದದ ದೇವರುಗಳ ಬೆಳವಣಿಗೆಯವರೆಗೆ, ಎಲ್ಲವೂ ವಿಜ್ಞಾನದ ವಿಚಾರಕ್ಕೆ ಒಳಪಡುತ್ತವೆ. ಒಂದೇ ವಿಷಯವು ಇತಿಹಾಸ ಕ್ಷೇತ್ರದಲ್ಲೂ ಬರಬಹುದು, ಸಾಹಿತ್ಯ ಕ್ಷೇತ್ರದಲ್ಲೂ ಬರಬಹುದು, ವಿಜ್ಞಾನ ಕ್ಷೇತ್ರದಲ್ಲೂ ಬರಬಹುದು. ಆದುದರಿಂದ ವಿಜ್ಞಾನ, ಚರಿತ್ರೆ, ಸಾಹಿತ್ಯ ಇವುಗಳಲ್ಲಿರುವ ವ್ಯತ್ಯಾಸವು ಅವು ವಿಚಾರಮಾಡುವ ವಸ್ತುವಿನಲ್ಲಿಲ್ಲ; ಅವು ನೋಡುವ ದೃಷ್ಟಿಯಲ್ಲಿದೆ, ಅವು ಉಪಯೋಗಿಸುವ ಕ್ರಮದಲ್ಲಿದೆ. ಇವು ಒಂದೊಂದೂ ಒಂದೇ ವಿಷಯವನ್ನು ಬೇರೆ ಬೇರೆ ಪಾರ್ಶ್ವಗಳಿಂದ ನೋಡುತ್ತವೆ. ಯದುಗಿರಿ ಎಂಬ ಒಂದು ವಿಷಯವನ್ನು ತೆಗೆದುಕೊಳ್ಳೋಣ. ಇದನ್ನು ವಸ್ತುವಾಗಿ ಇಟ್ಟುಕೊಂಡು 'ಯದುಗಿರಿ', 'ಯದುಗಿರಿಯ ಮೌನ ವಿಕಾಸ', 'ಯದುಗಿರಿಯ ಇರುಳು' ಹೀಗೆ ನಾಲ್ಕಾರು ಪದ್ಯಗಳನ್ನು ರಚಿಸಬಹುದು. ಅದೇ ವಸ್ತುವನ್ನೇ ಅವಲಂಬಿಸಿ 'ಯದುಗಿರಿಯಲ್ಲಿ ರಾಮಾನುಜಾಚಾರ್ಯರ ಕೆಲಸ' ಎಂದು ಚರಿತ್ರೆಯ ಒಂದು ಅಧ್ಯಾಯವನ್ನು ಬರೆಯಬಹುದು. ಪುನಃ ವೇದಾಂತ ದೃಷ್ಟಿಯಿಂದ, ಎಲ್ಲವೂ ಚಿತ್ಸ್ವರೂಪವಾದರೂ ಯದುಗಿರಿ ಇನ್ನೂ ಕಲ್ಲಾಗಿಯೇ ಇರುವುದಲ್ಲ ಎಂದು ಜಿಜ್ಞಾಸೆಮಾಡಬಹುದು. ಮತ್ತೆ ಅದೇ ಯದುಗಿರಿಯೇ ಹಲವು ವಿಜ್ಞಾನಾನ್ವೇಷಣಗಳ ವಸ್ತುವೂ ಆಗಬಹುದು. ಭೂಗರ್ಭಶಾಸ್ತ್ರಜ್ಞನು ಅದರ ಕಲ್ಲನ್ನು ಪರೀಕ್ಷೆಮಾಡಿ ಇದು ಯಾವ ಕಾಲದಲ್ಲಿ ಉದ್ಭವಿಸಿತು, ಇದರಲ್ಲಿ ಯಾವ ಯಾವ ಖನಿಜಗಳು ಸಿಕ್ಕಬಹುದು ಎಂಬುದನ್ನು ಕಂಡುಹಿಡಿಯಲು ಕೈಹಾಕಬಹುದು. ಸಸ್ಯಶಾಸ್ತ್ರಜ್ಞರೂ ಪ್ರಾಣಿಶಾಸ್ತ್ರಜ್ಞರೂ ಯದುಗಿರಿಗೆ ವಿಶೇಷವಾದ ಗಿಡಮರಬಳ್ಳಿಗಳ, ಕ್ರಿಮಿಕೀಟ ಮೃಗಪಕ್ಷಿಗಳ ಬಾಳು ಬೆಳವಣಿಗೆಗಳನ್ನು ವಿವರಿಸಲು ತೊಡಗಬಹುದು. ಇದನ್ನು ನೋಡಿದಾಗ ಮನುಷ್ಯರಲ್ಲಿ ಪೂಜ್ಯಭಾವವು ಹುಟ್ಟಿದುದು ಹೇಗೆ ಎಂದು ಮನಶ್ಶಾಸ್ತ್ರಜ್ಞರು ವಿಚಾರ ಮಾಡಬಹುದು. ಹೀಗೆ ವಿಷಯವು ಒಂದೇ ಆದರೂ ಅದನ್ನು ಬೇರೆ ಬೇರೆ ದೃಷ್ಟಿಯಿಂದ ನೋಡುವುದು ಸಾಧ್ಯ. ಆಯಾ ದೃಷ್ಟಿಗೆ ತಕ್ಕಂತೆ ಅದರ ಅನ್ವೇಷಣವೂ ವ್ಯತ್ಯಾಸಹೊಂದುತ್ತದೆ. ಆದುದರಿಂದ ವಿಜ್ಞಾನವೇನು ಎಂಬುದನ್ನು ತಿಳಿಯಬೇಕಾದರೆ

ಅವರ ದೃಷ್ಟಿ ಏನು, ಅದು ಉಪಯೋಗಿಸುವ ಅನ್ವೇಷಣ ಕ್ರಮಗಳು ಯಾವುವು ಎಂಬುದನ್ನು ನಿರ್ಧರಿಸಬೇಕು.

೨

ಮೊದಲು ವೈಜ್ಞಾನಿಕ ದೃಷ್ಟಿಯನ್ನು ತೆಗೆದುಕೊಳ್ಳೋಣ. ಸತ್ಯಪ್ರೇಮವೇ — ಯಥಾರ್ಥಜ್ಞಾನಾನುರಾಗವೇ — ಇದರ ಮುಖ್ಯ ಲಕ್ಷಣ; ಯಥಾರ್ಥಜ್ಞಾನವೆಂದರೆ ಇದ್ದ ವಿಷಯವನ್ನು ಇದ್ದ ಹಾಗೆ ತಿಳಿದುಕೊಳ್ಳುವುದು, ಇದ್ದ ಹಾಗೆ ಹೇಳುವುದು. ಇದೇನು ಮಹಾ ವಿಷಯವೆನ್ನಬಹುದು. ಆದರೆ ನಮ್ಮ ಮನಸ್ಸನ್ನು ಒಳಹೊಕ್ಕು ಪರೀಕ್ಷೆ ಮಾಡಿಕೊಂಡರೆ, ಯಥಾರ್ಥಜ್ಞಾನವು ಎಷ್ಟು ಕಷ್ಟಸಾಧ್ಯವೆಂದು ಗೊತ್ತಾಗುವುದು. ಯಥಾರ್ಥಜ್ಞಾನವು ಮನುಷ್ಯನಿಗೆ ಹುಟ್ಟಿಬಂದ ಪ್ರವೃತ್ತಿಯಲ್ಲ; ಅದು ವಿಶೇಷವಾದ ಕೃಷಿಯಿಂದ ಪಡೆಯತಕ್ಕದ್ದು. ಅದು ಸಿದ್ಧಿಸಬೇಕಾದರೆ ವೈಜ್ಞಾನಿಕನು ಅನೇಕ ವರ್ಷಗಳ ಕಾಲ ಸಾಧನೆ ಮಾಡಬೇಕು. ಏಕೆಂದರೆ ನಾವು ಹುಟ್ಟಿದಂದಿನಿಂದ ಹಲವು ಅಭಿಮಾನ ಪರಂಪರೆಗಳಿಗೆ ಅಧೀನರಾಗುತ್ತಲೇ ಇದ್ದೇವೆ. ನಾನು, ನನ್ನದು, ನನ್ನ ಮನೆ, ನನ್ನ ಜಾತಿ, ನನ್ನ ಮತ, ನನ್ನ ದೇಶ ಈ ರೀತಿಯಾಗಿ ಎಲ್ಲವನ್ನೂ ನಮ್ಮ ಸಂಕುಚಿತ ಕ್ಷೇತ್ರದಿಂದ ನಮ್ಮ ಮೂಗಿಗೆ ನೇರವಾಗಿ ನೋಡುವುದು ನಮ್ಮ ಬದುಕಿಗೆ ಹತ್ತಿಬಂದ ಚಾಳಿ. ಈ ಅಭಿಮಾನವು — ಈ ಮಮತೆಯು — ಒಂದು ದೃಷ್ಟಿಯಿಂದ ಆವಶ್ಯಕ. ನಮ್ಮ ಸಾಂಸಾರಿಕ ಜೀವನವೂ ಸಾಮಾಜಿಕ ವ್ಯವಹಾರಗಳೂ ನಿಂತಿರುವುದು ಮಮತೆಯ ಅಸ್ತಿವಾರದ ಮೇಲೆ. ಇದು ನಮ್ಮದು ಎಂಬ ಭಾವನೆ ಬಲವಾಗಿ ಇದ್ದರೆ ತಾನೆ ನಮ್ಮವರಲ್ಲಿ, ನಮ್ಮ ದೇಶದಲ್ಲಿ, ನಮ್ಮ ಸಂಸ್ಥೆಗಳಲ್ಲಿ, ನಮ್ಮ ಸಂಸ್ಕೃತಿಯಲ್ಲಿ, ಅಭಿಮಾನ ಹುಟ್ಟುವುದು; 'ರಕ್ಷಿತಾ ಸ್ವಸ್ಯ ಧರ್ಮಸ್ಯ ಸ್ವಜನಸ್ಯ ಚ ರಕ್ಷಿತಾ' ಎಂಬ ಪುರಾಣೋಕ್ತಿಯಂತೆ ಅವುಗಳಿಗಾಗಿ ನಾವು ಹೋರಾಡುವುದು. ಅಭಿಮಾನವಿಲ್ಲದಿದ್ದರೆ ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಎಳ್ಳು ನೀರು ಬಿಟ್ಟ ಹಾಗೆಯೇ. ಹೀಗೆ ಸ್ವಾಭಿಮಾನವು ಈ ದೃಷ್ಟಿಗಳಿಂದ ನಮ್ಮ ಬಾಳಿಗೆ ಬೇಕಾದುದಾದರೂ ವೈಜ್ಞಾನಿಕ ದೃಷ್ಟಿಯಿಂದ, ಯಥಾರ್ಥಜ್ಞಾನದ ದೃಷ್ಟಿಯಿಂದ ಅದು ನಿಷಿದ್ಧವಾಗುತ್ತದೆ. ಅದರ ವ್ಯಾಪನೆಯನ್ನು ಕ್ರಮಕ್ರಮವಾಗಿ

ತಡೆದು, ಕೊನೆಯಲ್ಲಿ ಅದನ್ನು ಸಂಪೂರ್ಣವಾಗಿ ತೊಡೆದು ಹಾಕುವುದೇ ವಿಜ್ಞಾನದ ಫಲ.

ಮಮಕಾರವು ನಮ್ಮ ದೃಷ್ಟಿಯನ್ನು ಎರಡು ಬಗೆಯಾಗಿ ವಕ್ರಗೊಳಿಸುವುದು ; ನಮಗೆ ಬೇಡವಾದ ಅಂಶಗಳನ್ನು ನಮ್ಮ ನೋಟದಿಂದ ಮರೆ ಮಾಡುವುದು, ನಮಗೆ ಬೇಕಾದ ಅಂಶಗಳನ್ನು ನಮ್ಮ ಕಣ್ಣ ಮುಂದೆ ನಿಡುವುದು. ಈ ದೃಷ್ಟಿ ದೋಷಗಳಲ್ಲಿ ಮೊದಲನೆಯದನ್ನು ಅನವೇಕ್ಷಣವೆಂದೂ (Non-observation) ಎರಡನೆಯದನ್ನು ಅತ್ಯವೇಕ್ಷಣವೆಂದೂ (Mal-observation) ಕರೆಯಬಹುದು. ಕೇವಲ ಈ ಪದಗಳಿಂದಲೇ ಇವುಗಳ ಅರ್ಥವು ಸುಲಭವಾಗದಿರುವ ಕಾರಣ ಒಂದೊಂದಕ್ಕೂ ಒಂದೆರಡು ಉದಾಹರಣೆಗಳನ್ನು ಕೊಟ್ಟು ಅರ್ಥಕಟ್ಟಬೇಕಾಗಿದೆ.

ನಮಗೆ ಹಿತವಾದುದನ್ನು ಇರಿಸಿಕೊಳ್ಳುವುದೂ ಅಹಿತವಾದುದನ್ನು ಅಳಿಸಿಬಿಡುವುದೂ ನಮ್ಮ ಮನಸ್ಸಿನ ಲಕ್ಷಣ. ಸ್ವವಿಷಯವನ್ನು ಹೇಳಿಕೊಳ್ಳುವಾಗ ಇದು ನಮ್ಮ ಜೀವನದಲ್ಲಿ ಚೆನ್ನಾಗಿ ತೋರಬೀಳುತ್ತದೆ. ಆತ್ಮಕಥೆಯನ್ನು ನಿರೂಪಿಸುವಾಗ ಎಲ್ಲರೂ ಮಹಾತ್ಮ ಗಾಂಧಿಯವರಂತೆ ಇದ್ದುದನ್ನು ಇದ್ದ ಹಾಗೆ ಹೇಳುವುದಿಲ್ಲ ; ಮುಚ್ಚುಮರೆ ಇಲ್ಲದೆ ತಮ್ಮ ಅಂತರ್ಯವನ್ನು ಬಯಲು ಮಾಡುವುದಿಲ್ಲ. ತಮಗೆ ಅಪಮಾನಕರವಾದ ವಿಷಯಗಳನ್ನು ಮರೆಮಾಚಿ ತಮ್ಮ ಪ್ರತಿಷ್ಠೆಯನ್ನು ಪುಷ್ಟೀಕರಿಸುವ ಅಂಶಗಳನ್ನು ಮುಂದು ಮಾಡುವರು. ಇದಕ್ಕೆ ಉದಾಹರಣೆಯಾಗಿ ಒಬ್ಬ ಗ್ರೀಕ್ ಅರ್ಚಕನ ಕಥೆ ಜ್ಞಾಪಕಕ್ಕೆ ಬರುತ್ತದೆ. ಗ್ರೀಸಿನಲ್ಲಿ ಸಮುದ್ರದ ತಡಿಯಲ್ಲಿ ಒಂದು ದೇವಸ್ಥಾನವಿತ್ತು. ಪ್ರಯಾಣ ಹೊರಡುವುದಕ್ಕೆ ಮುಂಚೆ ನಾವಿಕರು ತಮ್ಮ ಪ್ರಯಾಣವು ಸುರಕ್ಷಿತವಾಗಿ ನಡೆಯಲೆಂದು ದೇವರಿಗೆ ಹರಕೆ ಮಾಡಿಕೊಂಡು ಹೋಗುವ ಪದ್ಧತಿ ಇತ್ತು. ಅಲ್ಲಿಯ ಅರ್ಚಕನು ದೇವರ ದರ್ಶನಕ್ಕೆ ಬಂದವರಿಗೆಲ್ಲಾ ಭಕ್ತರು ಕೊಟ್ಟ ಪದಾರ್ಥಗಳನ್ನು ತೋರಿಸಿ "ಇದು ಇಂಥ ನಾವಿಕನೊಪ್ಪಿಸಿದ ಹರಕೆ ; ಅವನು ಬಹುದೂರದ ದೇಶಕ್ಕೆ ಪ್ರಯಾಣಮಾಡಿ ಸುಖವಾಗಿ ಹಿಂದಿರುಗಿದನು" ಎಂದು ಒಬ್ಬೊಬ್ಬ ಭಕ್ತನೂ ಒಪ್ಪಿಸಿದ ಹರಕೆಯನ್ನು ತೋರಿಸುತ್ತಿದ್ದನು. ಒಂದು ದಿವಸ ಆ ದೇವಸ್ಥಾನಕ್ಕೆ ಒಬ್ಬ ಕುಚೋದ್ಯಗಾರನಾದ ತಾತ್ವಿಕನು ಬಂದನು. ಅರ್ಚಕನು ಎಂದಿನಂತೆ

ಅವನಿಗೂ ಭಕ್ತರು ಒಪ್ಪಿಸಿದ ಹರಕೆಗಳನ್ನು ಒಂದೊಂದಾಗಿ ತೋರಿಸುತ್ತಾ "ಇದು ಇಂಥಾ ನಾವಿಕ ಕೊಟ್ಟದ್ದು. ಅವನು ಪ್ರಯಾಣ ಮಾಡಿದಾಗ ಏಳು ಬಿರುಗಾಳಿಗಳೆದ್ದು ಅವನ ಹಡಗನ್ನು ಬಡಿದರೂ ನಮ್ಮ ದೇವರ ಅನುಗ್ರಹದಿಂದ ಅವುಗಳಿಂದೆಲ್ಲಾ ಪಾರಾಗಿ ಹಿಂದಿರುಗಿ ಬಂದನು" ಎಂದು ದೇವರ ಮಹತ್ವವನ್ನು ಹೊಗಳುತ್ತಾ ಹೊರಟನು. ಆಗ ತಾತ್ವಿಕನು "ಅದೆಲ್ಲಾ ಸರಿ ಅರ್ಚಕರೆ, ಹರಕೆ ಮಾಡಿಕೊಂಡು ಹೋಗಿ ನೌಕಾಪ್ರಯಾಣದಿಂದ ಹಿಂದಿರುಗಲೇ ಇಲ್ಲವಲ್ಲ ಅವರ ವಿಚಾರವನ್ನೂ ಸ್ವಲ್ಪ ಹೇಳೋಣವಾಗಲಿ" ಎಂದನು. ಅರ್ಚಕರು ಬೆಪ್ಪಾದರು ; ಅವರ ಮುಖ ಚಿಕ್ಕದಾಯಿತು. ಆತ್ಮಕಥನಮಾಡಿಕೊಳ್ಳುವಾಗಲೇ ಅಲ್ಲ, ನಮಗಾಗದವರ ಕಥೆ ಹೇಳುವಾಗಲೂ ಈ ದೋಷಕ್ಕೆ ಗುರಿಯಾಗುತ್ತೇವೆ. ಇದಕ್ಕೆ ಮಿಸ್ ಮೇಯೋ ಬರೆದ 'ಮದರ್ ಇಂಡಿಯಾ' ಎಂಬ ಪುಸ್ತಕವು ಒಂದು ನಿದರ್ಶನ. ಈಗಲೂ ಒಂದು ಮತದವರು ಇನ್ನೊಂದು ಮತದ ಆಚಾರ್ಯರ ವಿಷಯವಾಗಿ ಬರೆಯುವ ಚರಿತ್ರೆಗಳಲ್ಲಿ ಇಂಥಾ ನಿದರ್ಶನಗಳು ಎಷ್ಟೋ ಇವೆ.

ನಮಗೆ ಬೇಡವಾದುದನ್ನು ಬಿಡುವಂತೆಯೇ ಬೇಕಾದುದನ್ನು ಸೇರಿಸಿಕೊಳ್ಳುವುದೂ ನಮ್ಮ ಮನಸ್ಸಿಗೆ ಹತ್ತಿ ಬಂದ ಇನ್ನೊಂದು ದೋಷ. ಯಾವುದಾದರೊಂದು ವಿಷಯವನ್ನು ವರ್ಣಿಸುವಾಗ ವಾಚಕರಿಗೆ ಹೃದಯಂಗಮವಾಗುವಂತೆ ಅವರನ್ನು ವಿಸ್ಮಯಗೊಳಿಸುವಂತೆ ಚಿತ್ರರಚನೆ ಮಾಡಬೇಕೆಂಬ ಇಚ್ಛೆ ಸಾಮಾನ್ಯವಾಗ ಎಲ್ಲರಿಗೂ ಇರುತ್ತದೆ. ಈ ಇಚ್ಛೆ ಕವಿಗಳಿಗೆ ಸಹಜವಾದುದು ; ಕಾವ್ಯಸೃಷ್ಟಿಗೆ ಆವಶ್ಯಕವಾದುದು. ಆದರೆ ಇದು ಕವಿಗಳಲ್ಲದವರು ಎಂದರೆ ಚರಿತ್ರಕಾರರು, ವೈಜ್ಞಾನಿಕರು, ತಾತ್ವಿಕರು ಮೊದಲಾದವರ ಮನಸ್ಸಿನಲ್ಲಿ ತಲೆ ಹಾಕಿದಾಗ ಅದು ಎಷ್ಟೋ ಸಲ ಯಥಾರ್ಥಜ್ಞಾನಕ್ಕೆ ವಿರೋಧವಾಗಿ ಪರಿಣಮಿಸುವುದು. ಈ ಇಚ್ಛೆಯನ್ನು ಅವರು ಎಷ್ಟು ಜಾಗರೂಕತೆಯಿಂದ ತಡೆದರೂ ಅವರಿಗೆ ಗೊತ್ತಾಗದ ಹಾಗೆ ಅದು ಅವರ ನಡೆನುಡಿಗಳಲ್ಲಿ ಕಾಣಿಸಿಕೊಳ್ಳುವುದು. ಕೊಲಂಬಸ್, ಮಾರ್ಕೋಪೋಲೋ ಮುಂತಾದ ಪ್ರಖ್ಯಾತ ಪ್ರಯಾಣಿಕರು ತಾವು ಪ್ರವಾಸ ಮಾಡಿದ ದೇಶಗಳ ವಿಚಾರವನ್ನು ಯಥಾರ್ಥವಾಗಿಯೇ ವರ್ಣಿಸಬೇಕೆಂದು ಉದ್ದೇಶಿಸಿದರು. ಬಹುಮಟ್ಟಿಗೆ ಅದನ್ನು ಸಾಧಿಸಿಯೂ ಇದ್ದಾರೆ. ಆದರೂ ಅವರ ಉದ್ದೇಶಕ್ಕೆ

ವಿರೋಧವಾಗಿ ಹಲವು ಸುಳ್ಳು ಸಂಗತಿಗಳು ಅವರ ವರ್ಣನೆಗಳಲ್ಲಿ ಸೇರಿಕೊಂಡು ಬಿಟ್ಟಿವೆ. ಈ ಅತ್ಯವೇಕ್ಷಣವು ಚರಿತ್ರಕಾರರನ್ನೇ ಅಲ್ಲ, ವೈಜ್ಞಾನಿಕರನ್ನೂ ಆಗಾಗ ಮುಸುಕುವುದುಂಟು, ವೈಜ್ಞಾನಿಕರಿಗೆ ತಾವು ಯಥಾರ್ಥವಾದಿಗಳೆಂಬ ಹೆಮ್ಮೆ ಇದೆ. ಇದನ್ನು ಮುರಿಯುವ ಉದ್ದೇಶದಿಂದ ಒಬ್ಬ ನುರಿತ ವೈಜ್ಞಾನಿಕನು ಪ್ರಯೋಗವೊಂದನ್ನು ಏರ್ಪಡಿಸಿದನು. ತಾನು ಒಂದು ಉಪನ್ಯಾಸ ಕೊಡುವುದಾಗಿ ಪ್ರಕಟಿಸಿ ಅನೇಕ ವಿಜ್ಞಾನಿಗಳ ಸಭೆ ಸೇರಿಸಿದನು. ಇವನು ಮೊದಲೇ ಮಾಡಿದ್ದ ಏರ್ಪಾಡಿನಂತೆ, ನೀಗ್ರೋ ಮನುಷ್ಯನೊಬ್ಬನೂ ಬಿಳಿಯ ಮನುಷ್ಯನೊಬ್ಬನೂ ತಮ್ಮ ನಿತ್ಯದ ಉಡುಪನ್ನು ಬದಲಾಯಿಸಿ ಬೇರೆ ಬಟ್ಟೆಯನ್ನು ತೊಟ್ಟು ಸಭೆಯು ಪ್ರಾರಂಭವಾಗುವ ಹೊತ್ತಿಗೆ ಸರಿಯಾಗಿ ಉಪನ್ಯಾಸ ಮಂದಿರದೊಳಕ್ಕೆ ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ಬಂದರು. ಅಲ್ಲಿ ಒಂದು ನಿಮಿಷದ ಕಾಲ ಗುದ್ದಾಡಿ ಹೊರಕ್ಕೆ ಓಡಿಹೋದರು. ಇದಾದ ಮೇಲೆ ಉಪನ್ಯಾಸಕನು ಸಭಿಕರನ್ನು ಕುರಿತು "ಈಗ ಇವರಿಬ್ಬರೂ ನಮ್ಮೆದುರಿಗೆ ಗುದ್ದಾಡಿದ್ದಾರೆ. ಇವರ ವಿಚಾರವಾಗಿ ನಾವು ಸಾಕ್ಷಿ ಹೇಳಬೇಕಾಗಬಹುದು. ಆದುದರಿಂದ ಇಂದಿನ ಉಪನ್ಯಾಸವನ್ನು ಪ್ರಾರಂಭಿಸುವುದಕ್ಕೆ ಮುಂಚೆ ನಾವೆಲ್ಲರೂ ನೋಡಿದ್ದನ್ನು ನೋಡಿದಹಾಗೆ ಬರೆದಿಟ್ಟು ಬಿಡೋಣ" ಎಂದು ಹೇಳಿದನು. ಅದರಂತೆ ಎಲ್ಲರೂ ತಾವು ಏನು ನೋಡಿದೆವೆಂದು ತಿಳಿದಿದ್ದರೋ ಅದನ್ನು ಬರೆದುಕೊಟ್ಟರು. ಇವರ ವರ್ಣನೆಗಳನ್ನೆಲ್ಲಾ ಓದಿ ನೋಡಲಾಗಿ, ಒಬ್ಬರೊಬ್ಬರ ವರ್ಣನೆಗೂ ಬಹಳ ವ್ಯತ್ಯಾಸ ಕಂಡುಬಂದಿತು; ಉದಾಹರಣೆಗೆ– ನೀಗ್ರೋ ಮನುಷ್ಯನೂ ಬಿಳಿಯ ಮನುಷ್ಯನೂ ಧರಿಸಿದ್ದ ಬಟ್ಟೆಗಳೇ ಬೇರೆ, ಇವರು ವರ್ಣಿಸಿದ್ದ ಬಟ್ಟೆಗಳೇ ಬೇರೆ. ಇವರಿಂದ ಅತ್ಯವೇಕ್ಷಣದ ಪ್ರವೃತ್ತಿಯನ್ನು ನಿರೋಧಿಸಲು ಎಷ್ಟು ಸಾಧನ ಮಾಡಬೇಕೆಂದು ವ್ಯಕ್ತವಾಗುತ್ತದೆ.

ಹೀಗೆ ಅನವೇಕ್ಷಣ ಅತ್ಯವೇಕ್ಷಣಗಳನ್ನು ತಡೆದು ಯಥಾರ್ಥಜ್ಞಾನವನ್ನು ಸಾಧಿಸಿದ ಮಾತ್ರಕ್ಕೆ ಸತ್ಯಪ್ರೇಮವು ಪೂರ್ಣವಾಗುವುದಿಲ್ಲ. ಅದು ಪೂರ್ಣವಾಗಬೇಕಾದರೆ ಕಂಡದ್ದನ್ನು ಕಂಡಹಾಗೆ ಹೇಳುವ ಧೈರ್ಯವೂ ಬೇಕು. 'ಕಂಡದ್ದನ್ನು ಕಂಡಹಾಗೆ ಹೇಳಿದರೆ ಕೆಂಡದಂಥಾ ಕೋಪ' ಎಂದು ಕೇಳಿಲ್ಲವೆ. ಸಾಮಾನ್ಯ ಜನರು ಅನೇಕ ಅಂಧಶ್ರದ್ಧೆಗಳ ಹೊಡೆತಕ್ಕೆ ಸಿಕ್ಕಿರುವರು. ಅವರ ಮುಂದೆ ನಿಜವನ್ನು ನುಡಿದರೆ ಅದು ಅವರ ಅಂಧಶ್ರದ್ಧೆಗಳಿಗೆ

ವಿರೋಧವಾಗಿ ಪರಿಣಮಿಸುತ್ತದೆ. ವೇದಗಳು ಪೌರುಷೇಯವಲ್ಲ, ಅವು ಬ್ರಹ್ಮನ ಮುಖದಿಂದ ಹೊರಬಿದ್ದವು ಎಂದು ನಮ್ಮಲ್ಲಿ ನಂಬಿಕೆ ಇದೆ. ಭಾಷಾಶಾಸ್ತ್ರಜ್ಞರೂ ಚರಿತ್ರಕಾರರೂ ವೇದಗಳ ಕಾಲನಿರ್ಣಯಕ್ಕೆ ತೊಡಗಿ, ಋಗ್ವೇದದ ಕಾಲ ಇದು ಇರಬಹುದು, ಯಜುರ್ವೇದದ ಕಾಲ ಇದು ಇರಬಹುದು ಎಂದು ಹೇಳುವರು. ಆದರೆ ಇವರ ಮಾತು ಸಾಮಾನ್ಯ ಜನರಿಗೆ ಕರ್ಣಕಠೋರವಾಗುವುದು ಹಾಗೆ ಮಾತನಾಡುವವರಿಗೆ ಬಹಿಷ್ಕಾರ ಹಾಕುವ ಕಾಲವೂ ಇತ್ತು. ಈಗಲೂ ಬಹಿಷ್ಕಾರ ಹಾಕುವುದಕ್ಕಾಗದಿದ್ದರೂ ಸನಾತನಿಗಳೆನ್ನಿಸಿಕೊಂಡವರು ಈ ವಿಚಾರವಾಗಿ ಬಹಳ ಅಸಮಾಧಾನವನ್ನು ಸೂಚಿಸುವರು. ಹಾಗೆ ನೋಡಿದರೆ ನಮ್ಮ ದೇಶದವರೆಷ್ಟೋ ವಾಸಿ. ಯಥಾರ್ಥವಾಗಿ ನುಡಿದವರನ್ನು ಶೂಲಕ್ಕೆ ಏರಿಸುವುದಿಲ್ಲ, ಬದುಕಿದ್ದವರನ್ನೇ ಸುಡುವುದಿಲ್ಲ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಯಥಾರ್ಥವಾದುದನ್ನು ನುಡಿದುದಕ್ಕಾಗಿ ಅನೇಕ ವಿಜ್ಞಾನಿಗಳು ಮರಣದಂಡನೆಗೆ ಗುರಿಯಾಗಬೇಕಾಯಿತು. ಗೆಲಿಲಿಯೋ ಎಂಬ ಪ್ರಖ್ಯಾತ ಖಗೋಳ ಶಾಸ್ತ್ರಜ್ಞನು ಕ್ರೈಸ್ತ ವೇದಕ್ಕೆ ವಿರೋಧವಾಗಿ, ಭೂಮಿಯು ಸೂರ್ಯನ ಸುತ್ತ ಸುತ್ತುತ್ತದೆ ಎಂದು ಹೇಳಿದನು. ಅದಕ್ಕಾಗಿ ಕ್ರೈಸ್ತಸ್ವಾಮಿಗಳು ಅವನನ್ನು ಚಿತ್ರಹಿಂಸೆಗೆ ಗುರಿಮಾಡಿದರು. ಈ ಅಸಹನೆ ಇನ್ನೂ ಪಾಶ್ಚಾತ್ಯರನ್ನು ಪೂರ್ಣವಾಗಿ ಬಿಟ್ಟಿಲ್ಲ. ಮೊನ್ನೆ ತಾನೆ ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಒಂದಾದ ಟೆನೆಸ್ಸಿಯಲ್ಲಿ ಒಬ್ಬ ಉಪಾಧ್ಯಾಯನು ಪರಿಣಾಮವಾದವನ್ನು ಬೋಧಿಸಿದಾಗ ಅಲ್ಲಿಯ ಜನಗಳಿಗೆ ತಾವು ಕಪಿಗಳ ಜ್ಞಾತಿಗಳೆಂದು ಕೇಳುವುದು ಅಸಹ್ಯವಾಗಿ ಆ ವಾದದ ಬೋಧನೆಯನ್ನೇ ಕಾನೂನಿನ ಮೂಲಕ ನಿರೋಧಿಸಿದರು. ಈ ಬಗೆಯ ಹಿಂಸೆ ಪ್ರತಿಭಟನೆಗಳಿಗೆಲ್ಲ ಹೆದರದೆ ವೈಜ್ಞಾನಿಕರು ತಾವು ಕಂಡ ಸತ್ಯವನ್ನು ಸಾರಿದುದರಿಂದಲೇ ವಿಜ್ಞಾನವು ಇಷ್ಟು ಮುಂದುವರಿದಿದೆ. ಅರಮನೆಯವರಿಗೂ ಗುರುಮನೆಯವರಿಗೂ ಹೆದರಿಕೊಂಡು ಬಾಯಿಬಿಡದೆ ಇದ್ದಿದ್ದರೆ ವಿಜ್ಞಾನದ ಹೆಸರೇ ಉಳಿಯುತ್ತಿರಲಿಲ್ಲ. ಯಾವ ಕಾಲದಲ್ಲಿ ಯಾವ ಅಂಧಶ್ರದ್ಧೆಗಳಿಗೆ ಯಾವ ವೈಜ್ಞಾನಿಕ ವಿಷಯವು ವಿರೋಧಿಯಾಗುವುದೋ ಹೇಳುವುದಕ್ಕಾಗುವುದಿಲ್ಲ; ಹಾಗೆ ವಿರೋಧ ಬರುವುದು ಮಾತ್ರ ನಿಶ್ಚಯ; ಆದರಿಂದ ವಿಜ್ಞಾನಿಗೆ

ಕಷ್ಟನಿಷ್ಠುರಗಳೊದಗುವುದೂ ನಿಶ್ಚಯ. ಇದಕ್ಕೆಲ್ಲಾ ಹೆದರದೆ ಯಥಾರ್ಥವಾದುದನ್ನು ನುಡಿಯುವುದು ವೈಜ್ಞಾನಿಕನ ಕರ್ತವ್ಯ.

ಸತ್ಯದಲ್ಲಿ ಪ್ರೀತಿಯೂ ಇರಬಹುದು, ನಿಜವನ್ನು ಹೇಳುವ ಧೈರ್ಯವೂ ಇರಬಹುದು ; ಅಷ್ಟು ಮಾತ್ರಕ್ಕೆ ಒಬ್ಬನು ವಿಜ್ಞಾನಿಯಾಗುವುದಿಲ್ಲ.ಏಕೆಂದರೆ ಪ್ರೀತಿ ಧೈರ್ಯೋತ್ಸಾಹಗಳು ಸತ್ಯಕ್ಕೆ ಸಹಕಾರಿಗಳಾಗದೆ ಅದಕ್ಕೆ ಅಡಚಣೆಗಳಾಗುವ ಸಂಭವವೂ ಉಂಟು. ತಾಯಿಗೆ ಮಗುವಿನ ಮೇಲೆ ಪ್ರೀತಿ ಇರುವುದು ಅದರ ಅಭ್ಯುದಯಕ್ಕೆ ಅಗತ್ಯ. ಆದರೆ ತಾಯಿಗೆ ಪ್ರೀತಿಯೊಂದಿದ್ದ ಮಾತ್ರಕ್ಕೆ ಅವಳು ಮಗುವನ್ನು ವಿಚಕ್ಷಣೆಯಿಂದ ಪೋಷಿಸಬಲ್ಲಳೆಂದು ಹೇಳಲಾಗುವುದಿಲ್ಲ. ಕೆಲವು ವೇಳೆ ತಾಯಿಯ ಪ್ರೀತಿ ಮಗುವಿನ ಪ್ರಾಣವನ್ನು ತಿನ್ನುವ ಸಂಭವವೂ ಉಂಟು. ಸತ್ಯಪ್ರೇಮವು ನಿಜವಾಗಿ ಫಲದಾಯಕವಾಗಬೇಕಾಗಿದ್ದರೆ ವಿಜ್ಞಾನಿಗೆ ವಿಶೇಷವಾದ ಮನೋಜಾಗೃತಿ ಇರಬೇಕು ; ಅವನ ಕೆಲಸವು ನೆರವಾಗಬೇಕಾದರೆ ಮನಸ್ಸು ಯಾವಾಗಲೂ ಎಚ್ಚರಗೊಂಡಿರಬೇಕು. ಸಾಮಾನ್ಯವಾಗಿ ನಮ್ಮ ಮನಸ್ಸು ತೂಕಡಿಸುವುದೇ ಹೆಚ್ಚು : ರೂಢಿಯಲ್ಲಿರುವ ಒಂದು ಪದ್ಧತಿಯನ್ನು ಅನುಷ್ಠಾನ ಮಾಡುವುದು, ದೊಡ್ಡವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸುವುದು, ಸವೆದ ಜಾಡನ್ನು ಹಿಡಿದು ಹೋಗುವುದು. ಹಿಂದಿನಿಂದ ಬಂದ ಸಂಪ್ರದಾಯಕ್ಕೆ ಶರಣುಬೀಳುವುದು—ಇದು ಸಾಮಾನ್ಯವಾಗಿ ನಮ್ಮ ಜೀವನಕ್ಕೆ ಹತ್ತಿಬಂದುದು. ಇದರಿಂದ ನಮ್ಮ ಅನ್ವೇಷಣಶಕ್ತಿ ಮಂಕಾಗಿ ಅನುಕರಣಭಾರವು ಬೇರೂರುವುದು. ಏನೊಂದು ವಿಚಾರ ಬರಲಿ, ಅದನ್ನು ಸ್ವತಃ ಆಲೋಚಿಸಿ ಅಳೆದು ಸುರಿದು ಕಡೆಯಲ್ಲಿ ಒಂದು ಸಿದ್ಧಾಂತಕ್ಕೆ ಬರಬೇಕು. ಹೀಗೆ ಮಾಡದೆ ಯಾವುದಾದರೂ ಒಂದು ಸೂಚನೆ ನಮ್ಮ ಮನಸ್ಸಿಗೆ ಬಂದರೆ ಅದನ್ನು ಸುಲಭವಾಗಿ ಅಂಗೀಕರಿಸಿಬಿಡುತ್ತೇವೆ. ಹೀಗೆ ಮನಸ್ಸು ತೂಕಡಿಸುವುದನ್ನು ತಡೆದು, ಯಾವ ಸೂಚನೆಯೇ ಬರಲಿ ಯಾವ ಸಿದ್ಧಾಂತವೇ ಹೊಳೆಯಲಿ ಅದನ್ನು ವಿಚಾರದ ಒರೆಗಲ್ಲಿಗಿಟ್ಟು ನೋಡುವುದು ಎಚ್ಚೆತ್ತ ವಿಜ್ಞಾನಿಯ ಲಕ್ಷಣ. ಸಂಶಯವನ್ನು ಮುಂದುಮಾಡಿ ಸಿದ್ಧಾಂತವನ್ನು ಪರೀಕ್ಷೆಗಿಟ್ಟುಕೊಳ್ಳುವುದು ಜಗದ ವೈಜ್ಞಾನಿಕ ಮನೋವೃತ್ತಿಯ ಕುರುಹು. ಆದರೆ ಸಂಶಯವನ್ನು ಮುಂದು ಮಾಡುವುದು ಸುಲಭದ ಕೆಲಸವಲ್ಲ. ನಂಬಿಕೆಯ ಬಲದಿಂದ ನಂಬಿಕೆಯನ್ನು

ಒಂದು ಕಡೆ ಹಿಡಿದು ನಿಲ್ಲಿಸಿದರೆ ಅದು ಇನ್ನೊಂದು ಕಡೆಯಿಂದ ಹೊರಹೊಮ್ಮುತ್ತದೆ. ವಿಶ್ವವೆಲ್ಲಾ ಚಿತ್ಸ್ವರೂಪವಾದುದು, ಬ್ರಹ್ಮಮಯವಾದುದು ಎನ್ನುವುದು ಒಂದು ಪಕ್ಷ; ವಿಶ್ವವೆಲ್ಲಾ ಭೌತವಾದುದು ಎನ್ನುವುದು ಇನ್ನೊಂದು ಪಕ್ಷ. ಇವೆರಡರಲ್ಲಿ ಒಂದರ ಕಡೆಗೆ ಹರಿಯುದಂತೆ ನಂಬಿಕೆಯನ್ನು ತಡೆದು ನಿಲ್ಲಿಸಿದರೆ, ಅದು ಇನ್ನೊಂದರ ಕಡೆಗೆ ಸರಿಯುವುದು. ದೇವರಿದ್ದಾನೆ ಎಂಬುದಕ್ಕೆ ರುಜುವಾತು ಸಾಲದೆನ್ನುವವನ್ನೇ ವಿಶ್ವವೆಲ್ಲಾ ಭೌತವಾದುದು ಎಂಬ ನಂಬಿಕೆಗೆ ರುಜುವಾತಾಗಿ ಇಟ್ಟುಕೊಳ್ಳುವವರಿದ್ದಾರೆ. ನಾವು ನಿತ್ಯವೂ ನೋಡುತ್ತಿರುವ ವಿಷಯಗಳನ್ನು ಕುರಿತು ಏನಾದರೂ ಒಂದು ಊಹೆಮಾಡುವುದು ನಮ್ಮ ಬುದ್ಧಿಯ ಸ್ವಾಭಾವಿಕ ವ್ಯಾಪಾರ. ಅನೇಕ ವೇಳೆ ನಮ್ಮ ಊಹೆಗಳು ಸಿದ್ಧಾಂತದ ವೇಷಹಾಕಿಕೊಂಡು ನಮ್ಮ ಮನಸ್ಸನ್ನು ಮೋಸಗೊಳಿಸುವುವು. ನಿನ್ನೆ ಹುಟ್ಟಿ ನಾಳೆ ನಿರ್ನಾಮವಾಗುವಂಥ ಊಹಾಪೋಹಗಳನ್ನು ದೇವರೇ ಸಾಕ್ಷಾತ್ತಾಗಿ ನಮಗೆ ಕೊಟ್ಟ ಸಿದ್ಧಾಂತಗಳೆಂದು ಏನೂ ಅರಿಯದ ಜನರ ಮುಂದೆ ಇಡುವುದು ವಿಜ್ಞಾನಿಗಳು ಮಾಡತಕ್ಕ ಕೆಲಸವಲ್ಲ. ಹಕ್ಸ್ಲಿ ಹೇಳುವಂತೆ "ರುಜುವಾತಿನ ಎಲ್ಲೆಯನ್ನು ಮೀರಿದ ಸಿದ್ಧಾಂತವು ಬರಿಯ ಪ್ರಮಾದವಲ್ಲ, ಅದು ಒಂದು ದೊಡ್ಡ ಪಾತಕ." ಈ ಹಕ್ಸ್ಲಿಯು ಲಾಮಾರ್ಕನ ಪರಿಣಾಮವಾದವನ್ನು ಓದಿದಾಗ, ಅದನ್ನು ನಂಬಲು ತನ್ನ ಮನಸ್ಸು ತವಕಪಡುತ್ತಿದ್ದರೂ ಅವರ ವಿಚಾರವಾಗಿ ಸಾಕಾದಷ್ಟು ರುಜುವಾತು ಸಿಕ್ಕದಿದ್ದುದರಿಂದ ಅನೇಕ ವರ್ಷಗಳ ಕಾಲ ತನ್ನ ನಂಬಿಕೆಯನ್ನು ತಡೆದು ನಿಲ್ಲಿಸಿದನು. ಕೊನೆಗೆ ಡಾರ್ವಿನ್ ಅನೇಕ ನಿದರ್ಶನಗಳನ್ನು ಕೊಟ್ಟು ಪರಿಣಾಮವಾದವನ್ನು ಸಂದೇಹಕ್ಕೆಡೆಯಿಲ್ಲದಂತೆ ಸ್ಥಾಪಿಸಿದಾಗ ಅದನ್ನು ಒಪ್ಪಿಕೊಂಡನು. ಹೀಗೆಯೇ ವಿಜ್ಞಾನಿಗಳೆಂದು ಹೆಸರುವಾಸಿಯಾದವರೆಲ್ಲರೂ, ತಮ್ಮ ಮನಸ್ಸಿಗೆ ಹೊಳೆದ ಊಹೆಗಳನ್ನು ಮತ್ತೆ ಮತ್ತೆ ವಿಚಾರದ ಕುಲುಮೆಗೆ ಹಾಕಿ, ಕಾಸಿ ಬಡಿದು, ಒಡಕಾದುವನ್ನು ಎತ್ತಿ ಬಿಸುಟು, ಗಟ್ಟಿಯಾದುವುಗಳನ್ನೂ ಕೂಡ ತಾತ್ಕಾಲಿಕ ಸಿದ್ಧಾಂತಗಳೆಂದು ಕರೆದು ಜನರ ಮುಂದೆ ಇಡುವರು. ನಿಜವಾದ ವಿಜ್ಞಾನಿಯ ಲಕ್ಷಣಗಳನ್ನು ವಿವರಿಸುತ್ತಾ ಫ್ಯಾರಡೆ ಹೀಗೆ ಹೇಳಿರುವನು—"ಯಾರು ಏನು ಸೂಚನೆಯನ್ನಾದರೂ ಕೊಡಲಿ, ವಿಜ್ಞಾನಿಯಾದವನು ಅದಕ್ಕೆ ಕಿವಿ ಕೊಟ್ಟು ಕೇಳಬೇಕು. ಆದರೆ ಅದನ್ನು ವಿಚಾರ

ಮಾಡಿ ಅಂಗೀಕರಿಸುವ ಅಥವಾ ಬಿಡುವ ಅಧಿಕಾರವನ್ನು ಮಾತ್ರ ತಾನೇ ಉಳಿಸಿಕೊಳ್ಳಬೇಕು. ಬರಿಯ ತೋರ್ಕೆಯಿಂದ ಮೋಸಹೋಗಬಾರದು. ಇದು ನನ್ನ ಸೂಚನೆ ಎಂಬ ಮಮತೆಗೆ ಈಡಾಗಬಾರದು. ಎಷ್ಟೇ ಗಟ್ಟಿಯಾದುದಾಗಲಿ ಯಾವ ಒಂದು ಮತಕ್ಕೂ ಮನಸೋಲಬಾರದು. ಎಷ್ಟು ಗಟ್ಟಿಗನಾದರೂ ಆಗಲಿ ಅವನನ್ನು ಗುರುವಾಗಿ ಎಣಿಸಕೂಡದು. ಪೂಜ್ಯಭಾವವೇನಿದ್ದರೂ ಅದನ್ನು ವಿಚಾರಮಾಡುವ ವಸ್ತುವಿನಲ್ಲಿ ತೋರಿಸಬೇಕೇ ಹೊರತು ಯಾವ ಒಬ್ಬ ವ್ಯಕ್ತಿಯಲ್ಲೂ ತೋರಿಸಲಾಗದು. ಸತ್ಯವೊಂದೇ ವಿಜ್ಞಾನಿಯ ಪರಮ ಧ್ಯೇಯವಾಗಿರಬೇಕು. ಇದರ ಜತೆಗೆ ಶ್ರಮಪಟ್ಟು ಕೆಲಸ ಮಾಡುವ ಅಭ್ಯಾಸವೂ ಇದ್ದರೆ, ಅವನು ಪ್ರಕೃತಿದೇವಿಯ ಮಂದಿರದ ಪ್ರಾಕಾರದಲ್ಲಿ ಸುಳಿದಾಡಲೆಳಸಬಹುದು."

ಸಂಶಯಮಾರ್ಗವು ಸತ್ಯದ ಹೆದ್ದಾರಿ. ಆದರೆ ಸಂಶಯಕ್ಕೂ ಮಿತಿಯುಂಟು. ಆ ಮಿತಿಯನ್ನು ಮೀರಿದರೆ ಅದು ಶೂನ್ಯವಾದವಾಗಿ ಪರಿಣಮಿಸುವುದು. ಸಂಶಯವು ವಿಜ್ಞಾನದ ಅಂಗವಾಗಿರಬೇಕೇ ಹೊರತು ಅದರ ಧ್ಯೇಯವಾಗಬಾರದು. ಸಂಶಯದ ಉದ್ದೇಶವು ವಿಚಾರಮಾಡುವ ವಿಷಯವನ್ನು ಸ್ಪಷ್ಟಪಡಿಸುವುದು, ಖಚಿತವಾಗಿ ನಿಶ್ಚಿತವಾಗಿ ತಿಳಿಯುವಂತೆ ಮಾಡುವುದು. [illegible] ವಿಷಯವು ಮಸಕು ಮಸಕಾಗಿದ್ದರೆ ವಿಜ್ಞಾನಿಗೆ ನೆಮ್ಮದಿಯಿಲ್ಲ. [illegible] ವಂತೆ ಆಗುವುದು. ಅದನ್ನು ಮೇಲೂ ಕೆಳಗೂ ಒಳಗೂ ಹೊರಗೂ [illegible] ವಾಗಿ ನೋಡಿ, ಅದರ ರೂಪ ರಚನೆಗಳನ್ನು ನಿರ್ಧರಿಸುವವರೆಗೂ ಅವನ ಮನಸ್ಸು ಸ್ತಿಮಿತಕ್ಕೆ ಬರುವುದಿಲ್ಲ, ಅವನು ಶಾಂತಚಿತ್ತನಾಗುವುದಿಲ್ಲ. ಉದಾಹರಣೆಗಾಗಿ ಒಬ್ಬ ಸಸ್ಯಶಾಸ್ತ್ರಜ್ಞನನ್ನು ತೆಗೆದುಕೊಳ್ಳೋಣ. ತನಗೆ ಒಂದು ಸಸ್ಯದ ವಿಚಾರ ಗೊತ್ತಾಯಿತು ಎನ್ನಬೇಕಾದರೆ ಅದರ ಒಂದೊಂದು [illegible] ಅವನ ಕಣ್ಣಿಗೆ ಕಟ್ಟಿದಂತಾಗಬೇಕು: ಅದರ ಬುಡದಿಂದ ಮೇಲಕ್ಕೆ [illegible] ತುದಿಯವರೆಗೆ [illegible] ಬೇರೂ [illegible] ಸಣ್ಣ [illegible] ಪದಾರ್ಥಗಳೂ—ಎಲ್ಲವೂ ಗಾಜಿನಲ್ಲಿ [illegible] ಕಂಡಂತೆ ಕಾಣಬೇಕು. ಚಲನಚಿತ್ರ [illegible] ಹೊತ್ತೂ ಮೆರವಣಿಗೆಯ [illegible] ಯನ್ನು ಫೋಟೋ ಯಂತ್ರದ [illegible]

ವೈಜ್ಞಾನಿಕನೂ ಕೂಡ ತನ್ನ ಭಾವನಾಶಕ್ತಿಯ ಮೂಲಕ ಅವುಗಳನ್ನು ಗ್ರಹಿಸಲು ಯತ್ನಿಸಬೇಕು. ಹೀಗೆ ವಿಷಯವನ್ನು ಸ್ಪಷ್ಟವಾಗಿ ಗ್ರಹಿಸಬೇಕೆಂದರೆ, ವಿಜ್ಞಾನಿಯು ಸರ್ವಜ್ಞನಾಗಬೇಕೆಂದು ಅರ್ಥವಲ್ಲ. ವಿಜ್ಞಾನಿಯ ದೃಷ್ಟಿಯು ಪೂರ್ಣದೃಷ್ಟಿಯಲ್ಲ ; ಅದು ಅಂಶದೃಷ್ಟಿ. ಎಲ್ಲವನ್ನೂ ಒಟ್ಟಿಗೆ ತಿಳಿಯಬೇಕೆಂಬ ಆಸೆ ಅವನಿಗಿಲ್ಲ. ಅವನು ಕೋರುವುದು ಒಂದು ಅಂಶದ ಜ್ಞಾನ ; ಆದರೆ ಈ ಅಂಶಜ್ಞಾನವು ಮಾತ್ರ ಸುಸ್ಪಷ್ಟವಾಗಿರಬೇಕೆಂದು ಅವನ ಇಚ್ಛೆ. ತಿಳಿದ ವಿಷಯವು ಸ್ಪಷ್ಟವಾಗಿದ್ದರೆ ತತ್ವತಃ ಅದು ಭ್ರಮೆಯಾದರೂ ಅದರಿಂದ ಮುಂದೆ ಒಂದು ಕಾಲದಲ್ಲಿ ಸತ್ಯವು ಹೊರಬೀಳುವ ಸಂಭವವಿದೆ. ಅದು ಅಸ್ಪಷ್ಟವಾಗಿದ್ದರೆ ಅದರಿಂದ ಸತ್ಯವು ಹುಟ್ಟುವ ಸಂಭವವೇ ಇಲ್ಲ. ಎದುರಿಗೆ ನಿಂತಿರುವುದು ಒಂದು ದೆವ್ವವಾದರೂ ಅದಕ್ಕೆ ಸ್ಪಷ್ಟವಾದ ಆಕಾರವಿದ್ದರೆ ಅದನ್ನು ಗೆಲ್ಲಬಹುದು.

ಅಸ್ಪಷ್ಟತೆಗೆ ನಮ್ಮ ಅನ್ವೀಕ್ಷಣದ ಅಥವಾ ಆಲೋಚನೆಯ ದೋಷಗಳೇ ಮುಖ್ಯಕಾರಣಗಳಾದರೂ ಎಲ್ಲ ಅಸ್ಪಷ್ಟತೆಯೂ ಇವೆರಡರಿಂದಲೇ ಹುಟ್ಟುವುದಿಲ್ಲ, ನಾವು ಉಪಯೋಗಿಸುವ ಭಾಷೆಯೂ ಇಲ್ಲಿ ಗಣನೆಗೆ ಬರುತ್ತದೆ. ಸಾಮಾನ್ಯವಾಗಿ ಭಾಷೆಯು ಧ್ವನಿಯಿಂದ ತುಂಬಿದೆ. ನಾವು ಆಡುವ ಮಾತು ಬೇರೆ ಬೇರೆ ಸನ್ನಿವೇಶಗಳಲ್ಲಿ ಬೇರೆ ಬೇರೆ ಅರ್ಥವನ್ನು ಕೊಡುತ್ತದೆ. ಹೆಗಲ್ ಎಂಬ ಪ್ರಸಿದ್ಧ ತಾತ್ವಿಕನು ಹೇಳುವಂತೆ—ಮಾತುಗಳಿಗೆ ಕೈ ಕಾಲುಗಳಿವೆ ; ಸನ್ನಿವೇಶದಿಂದ ಸನ್ನಿವೇಶಕ್ಕೆ, ಕಾಲದಿಂದ ಕಾಲಕ್ಕೆ ಅವು ಬದಲಾಯಿಸುವುವು: ಈಗ ಸಂಕೋಚವಾಗುವುವು. ಇನ್ನೊಂದು ವೇಳೆಗೆ ವಿಕಾಸವಾಗುವುವು. ಮಾತಿನ ಈ ಶಕ್ತಿಯು ಸಾಹಿತ್ಯದಲ್ಲಿ ಅರ್ಥಪುಷ್ಟಿಗೆ ಸಹಕಾರಿಯಾಗಿ ಪರಿಣಮಿಸುತ್ತದೆ. ಆದರೆ ವಿಜ್ಞಾನದಲ್ಲಿ ಅದು ಅಸ್ಪಷ್ಟತೆಗೂ ಮಿಥ್ಯಾಜ್ಞಾನಕ್ಕೂ ತವರುಮನೆಯಾಗುತ್ತದೆ. ಆದುದರಿಂದ ವಿಜ್ಞಾನಿ ತನ್ನ ಭಾವನೆಗಳನ್ನು ತಿಳಿಯಾಗಿ ಮಾಡಲು ತನ್ನದೇ ಒಂದು ಭಾಷೆಯನ್ನು ಮಾಡಿಕೊಂಡಿದ್ದಾನೆ. ಈ ಭಾಷೆಯು ಸಾಹಿತ್ಯದೃಷ್ಟಿಯಿಂದ ಎಷ್ಟೇ ನೀರಸವಾಗಿ ಕಂಡರೂ ಶಾಸ್ತ್ರದೃಷ್ಟಿಯಿಂದ ಅದರಲ್ಲಿ ವಿಶೇಷ ಸೌಲಭ್ಯವಿದೆ.

ವೈಜ್ಞಾನಿಕದೃಷ್ಟಿ ಪೂರ್ಣವಾಗಬೇಕಾದರೆ ಅದಕ್ಕೆ ಬೇಕಾದ ಇನ್ನೊಂದು ಅಂಶವುಂಟು. ಇದು ಪರಸ್ಪರ ಸಂಬಂಧಜ್ಞಾನ. ಪ್ರಕೃತಿಯಲ್ಲಿ ಒಂದು ಕ್ರಮವಿದೆ, ಒಂದು ರಚನೆ ಇದೆ; ಅದರಲ್ಲಿ ವಿಷಯಗಳು ಹಾಸುಹೊಕ್ಕುಗಳಂತೆ ಒಂದಕ್ಕೊಂದು ಹೆಣೆದುಕೊಂಡಿವೆ ಎಂಬ ಈ ನಂಬಿಕೆ ವಿಜ್ಞಾನಿಯ ಸಕಲ ಅನ್ವೇಷಣಗಳಿಗೂ ಉದ್ಯಮಗಳಿಗೂ ಪ್ರೇರಕ. ಈ ಪರಸ್ಪರ ಸಂಬಂಧಜ್ಞಾನವು ಎಲ್ಲಾ ವಿಜ್ಞಾನಿಗಳಲ್ಲೂ ಇದೆ. ಆದರೆ ಇದು ಡಾರ್ವಿನ್ನಿನ ಕೆಲಸದಲ್ಲಿ ಎದ್ದು ಕಾಣುತ್ತದೆ. ಅದು ಅವನ ಕೆಲಸಕ್ಕೆಲ್ಲಾ ಹಿನ್ನೆಲವಾಗಿ ನಿಂತು ಅವನ ಒಂದೊಂದು ಊಹೆಯನ್ನೂ ಪುಷ್ಟೀಕರಿಸಿದೆ. ಅವನ ಪುಸ್ತಕಗಳ ಪುಟಪುಟದಲ್ಲಿಯೂ ಅತಿವಿಸ್ಮಯಕರವಾದ, ಊಹಿಸುವುದಕ್ಕೂ ಆಗದಂಥ ಸಂಬಂಧ ವಿಶೇಷಗಳು ತುಂಬಿ ತುಳುಕುತ್ತಿವೆ. ದುಂಬಿಗಳಿಗೂ ಹೂವು ಕಾಯಾಗುವುದಕ್ಕೂ, ಎರೆಹುಳುವಿಗೂ ಜನಗಳ ಆಹಾರಕ್ಕೂ ಯಾರು ತಾನೆ ಸಂಬಂಧ ಹೇಳಬಲ್ಲರು ! ಎಲ್ಲಿಂದಲೊ ಒಂದು ಹಕ್ಕಿ ಬಂದು ನೆಲದ ಮೇಲೆ ಕುಳಿತರೆ, ಅದರ ಸುತ್ತಲೂ ಆ ಪ್ರಾಂತ್ಯಕ್ಕೇ ಅಪರಿಚಿತವಾದ ಗಿಡಗಳ ಒಂದು ವನ ಏಳುವುದೆಂದು ಊಹಿಸುವುದು ತಾನೆ ಹೇಗೆ ! ಆದರೆ ಒಂದು ಹಕ್ಕಿಯ ಕಾಲಿಗೆ ಹತ್ತಿಕೊಂಡಿದ್ದ ಮಣ್ಣಿನ ಉಂಡೆಯೊಳಗಿನ ಬೀಜದಿಂದ ಡಾರ್ವಿನ್ ಎಂಭತ್ತು ಸಸಿಗಳನ್ನು ಮಾಡಿದನು. ಪ್ರಕೃತಿಯಲ್ಲಿ ಸಂಬಂಧವಿಶೇಷಗಳು ವಿರಾಮವಿಲ್ಲದೆ ಸಂಚರಿಸುತ್ತಿವೆ; ದಿಕ್ಕಿನಿಂದ ದಿಕ್ಕಿಗೆ, ಧ್ರುವದಿಂದ ಧ್ರುವಕ್ಕೆ, ವಿಶ್ವದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಮಿಂಚಿನ ವೇಗದಲ್ಲಿ ಪ್ರಭಾವಗಳು ಹರಡುತ್ತಿವೆ.

ಇದು ಕೇವಲ ಕೌತುಕದ ವಿಷಯ ಮಾತ್ರವಲ್ಲ. ಈ ಬಗೆಯ ಮರೆತುದುದ ಅನಿರೀಕ್ಷಿತವಾದ ಸಂಬಂಧಗಳು ವಿಶ್ವದಲ್ಲಿ ವ್ಯಾಪಿಸಿರುವುದನ್ನು ಮರೆತುದರಿಂದ ಎಷ್ಟೋ ವೇಳೆ ಅನರ್ಥಗಳು ಕೂಡ ಉಂಟಾಗಿವೆ, ಇದಕ್ಕೆ ಒಂದೆರಡು ನಿದರ್ಶನಗಳನ್ನು ಕೊಡುವುದು ಅನೌಚಿತ್ಯವಾಗದಿರಬಹುದು. ಈಗ ಸುಮಾರು ಅರವತ್ತು ಎಪ್ಪತ್ತು ವರ್ಷಗಳ ಹಿಂದೆ ಕ್ರಿಮಿಕೀಟಗಳನ್ನು ನಾಶ ಮಾಡುವ ಉದ್ದೇಶದಿಂದ ಸಂಯುಕ್ತ ಸಂಸ್ಥಾನದ ಕೆಲವು ಭಾಗಗಳಿಗೆ ಗುಬ್ಬಚ್ಚಿಗಳನ್ನು ಆಮದುಮಾಡಿಕೊಂಡರು. ಆ ಗುಬ್ಬಚ್ಚಿಗಳು ಈ ಹೊಸ ಆವರಣದಲ್ಲಿ ಕ್ರಿಮಿಕೀಟಗಳನ್ನು ತಿನ್ನುವುದನ್ನು ಬಿಟ್ಟು, ತಮ್ಮ ಸಂಪಲು

ಕಾಳುಕಡ್ಡಿಯನ್ನೇ ಹೆಚ್ಚಾಗಿ ತಿನ್ನಲು ಮೊದಲುಮಾಡಿದುವು. ಈಗ ಗುಬ್ಬಚ್ಚಿಗಳು ವಿಶೇಷವಾಗಿ ಹೆಚ್ಚಿಕೊಂಡು ಆ ಪ್ರದೇಶಗಳಲ್ಲಿ ಬೆಳೆದ ಬೆಳೆಯನ್ನೆಲ್ಲಾ ತಿಂದು, ಬೇಕಾದ ಹಾಗೆ ಹಾವಳಿಮಾಡುತ್ತಿವೆ. ಅಲ್ಲಿಯ ಜನರಿಗೆ ಅವುಗಳ ಕಾಟ ತಡೆಯುವುದು ಅಸಾಧ್ಯವಾಗಿದೆ. ಹೀಗೆಯೇ ಆಹಾರದ ಸರಬರಾಯಿ ಹೆಚ್ಚಿಸುವ ಉದ್ದೇಶದಿಂದ ಆಸ್ಟ್ರೇಲಿಯಾದವರೂ ನ್ಯೂಸಿಲೇಂಡಿನವರೂ ಮೊಲಗಳನ್ನು ಆಮದು ಮಾಡಿಕೊಂಡರು. ಇವುಗಳೂ ಗುಬ್ಬಚ್ಚಿಗಳಂತೆ ಹೆಚ್ಚಿಕೊಂಡು ಅಲ್ಲಿಯ ಬೆಳೆಯನ್ನೆಲ್ಲಾ ತಿಂದು ಜನರಿಗೆ ಬಹಳ ನಷ್ಟವನ್ನುಂಟುಮಾಡುತ್ತಿವೆ. ಅವುಗಳಿಗೆ ಏನಾದರೂ ಒಂದು ಅಂಟುರೋಗವನ್ನು ತಂದು ಹಾಕಿ ನಿರ್ಮೂಲಮಾಡಬಹುದೆಂದು ಕೆಲವರು ಸಲಹೆ ಕೊಡುತ್ತಿದ್ದಾರೆ. ಆದರೆ ಯಾವುದಕ್ಕೆ ಏನು ಸಂಬಂಧವಿದೆಯೋ, ಮೊಲಕ್ಕೆ ಹತ್ತಿದ ಅಂಟುರೋಗವು ಕುರಿಗಳಿಗೂ ಹರಡುವುದೇನೋ ಎಂಬ ಹೆದರಿಕೆ ಹುಟ್ಟಿ; ಅಲ್ಲಿ ಮೊಲಗಳ ಮೇಲೆ ಅಂಟುರೋಗವನ್ನು ಪ್ರಯೋಗಮಾಡದೆ ತಡೆದಿದ್ದಾರೆ. ಹೀಗೆಯೇ ಜಮೈಕಾದವರು ಮುಂಗುಸಿಗಳನ್ನು ಆಮದು ಮಾಡಿಕೊಂಡು ನರಳುತ್ತಿದ್ದಾರೆ.

ಇವರೇನೋ ಪ್ರಕೃತಿಯಲ್ಲಿರುವ ಸಮತೂಕವನ್ನು ಕೆಡಿಸಿ ತಾವು ಮಾಡಿದ ತಪ್ಪಿಗೆ ತಾವೇ ಕಷ್ಟಗಳನ್ನು ಅನುಭವಿಸುತ್ತಿದ್ದಾರೆನ್ನಬಹುದು. ಆದರೆ ಒಂದು ದೇಶದವರು ಮಾಡಿದ ತಪ್ಪಿಗೆ ಇನ್ನೊಂದು ದೇಶದವರು ನಷ್ಟಪಡುವುದೂ ಉಂಟು. ಯುರೋಪಿನಲ್ಲಿ ಮಹಾಯುದ್ಧವಾದ ಸಲುವಾಗಿ ಅಲ್ಲಿ ಸತ್ತವರಿಗೆ ಎರಡುಮೂರರಷ್ಟು ಜನ ಇಂಡಿಯಾ ದೇಶದಲ್ಲಿ ಇನ್‌ಫ್ಲುಯೆಂಜದಿಂದ ಸತ್ತರು. ಆದುದರಿಂದ ಯಾವ ದೇಶದಲ್ಲಿ ಏನಾದರೇನು, ಯಾರಿಗೆ ಏನಾದರೇನು, ಮೃಗಗಳಿಗೆ ಖಾಯಿಲೆ ಬಂದರೆ ಮನುಷ್ಯರಿಗೇನು ಎಂದು ತೆಪ್ಪಗೆ ನಮ್ಮಷ್ಟಕ್ಕೆ ನಾವು ಇರುವ ಹಾಗಿಲ್ಲ. ದಿವಾನರ ಮನೆಯಲ್ಲಿ ಮದುವೆಯಾದರೆ ಜವಾನನ ಮನೆಯವರೆಲ್ಲರೂ ವಿಷಮಶೀತಜ್ವರದಿಂದ ಸಾಯಬಹುದು. ಯಾವುದು ಯಾವುದಕ್ಕೆ ಸಂಬಂಧಿ ಎಂದು ಎಲ್ಲವನ್ನೂ ಶೋಧಮಾಡಿ ಜೋಡಿಸುವುದು ವಿಜ್ಞಾನದಲ್ಲಿ ಆಗುವ ಕೆಲಸ. ವಿಜ್ಞಾನವು ಬೆಳೆದ ಹಾಗೆಲ್ಲಾ, ವಿಶ್ವದಲ್ಲಿ ಎಲ್ಲವೂ ಬಾಂಧವ್ಯದಲ್ಲಿ ಬೆರೆತಿವೆ ಎಂಬ ವೈಜ್ಞಾನಿಕ ಭಾವವು ಪ್ರಸಕ್ತವಾಗಿ ಸಾಮಾನ್ಯ ಜನರಲ್ಲೂ ಮೂಡುತ್ತಿದೆ.

ಇದುವರೆಗೂ ವೈಜ್ಞಾನಿಕ ಮನೋಧರ್ಮವನ್ನು ನಿರೂಪಿಸಿದುದಾಯಿತು. ಇನ್ನು ವಿಜ್ಞಾನಿಯು ಉಪಯೋಗಿಸುವ ಕ್ರಮಗಳನ್ನು ಕುರಿತು ಸಂಗ್ರಹವಾಗಿ ವಿಚಾರ ಮಾಡೋಣ.

ಪ್ರಕೃತಿ ಬಹು ವಿಸ್ತಾರವಾಗಿದೆ;ಅದರಲ್ಲಿ ವಿಷಯಗಳು ಒಂದಕ್ಕೊಂದಕ್ಕೆ ದಟ್ಟವಾಗಿ ಹೆಣೆದುಕೊಂಡಿವೆ. ನಮ್ಮ ಬುದ್ಧಿಶಕ್ತಿ ಅಲ್ಪವಾದುದು, ವಿಶಾಲವೂ ಜಟಿಲವೂ ಆದ ವಿಷಯಪ್ರಪಂಚವನ್ನು ಮಾನವನು ತನ್ನ ಅಲ್ಪವಾದ ಬುದ್ಧಿಯ ಹಿಡಿತಕ್ಕೆ ತಂದುಕೊಳ್ಳುವುದು ಹೇಗೆ ಎಂಬ ಸಮಸ್ಯೆ ಸಹಜವಾಗಿ ಹುಟ್ಟಿತು. ಇದಕ್ಕೆ ಪರಿಹಾರವಾಗಿ ವೈಜ್ಞಾನಿಕರು ಒಂದು ಉಪಾಯವನ್ನು ಹುಡುಕಿದರು. ಅದೇ ವಿಭಜನಾಕ್ರಮ. ಜನರಿಗೆ ಈ ಹೆಸರು ಹೊಸದಾಗಿ ಕಾಣುವುದೇ ಹೊರತು ಇದರ ಕೆಲಸವೇನೂ ಹೊಸದಲ್ಲ. ನಾವು ನಿತ್ಯವೂ ಮಾಡುವ ಕೆಲಸ ಕೆಲಸದಲ್ಲೂ ವಿಭಜನೆಯುಂಟು. ಉಂಡೆಯಾದುದನ್ನು ಒಡೆದು ತಿನ್ನುತ್ತೇವೆ ; ಹಾಲಿನಿಂದ ಬೆಣ್ಣೆ ತೆಗೆಯುತ್ತೇವೆ ; ಸಮುದ್ರದ ನೀರಿನಿಂದ ಉಪ್ಪನ್ನು ಮಾಡುತ್ತೇವೆ : ಅದುರಿನಿಂದ ಲೋಹವನ್ನು ಪ್ರತ್ಯೇಕಿಸುತ್ತೇವೆ ; ಒಗ್ಗಟ್ಟಾಗಿರುವ ಶತ್ರುಗಳನ್ನು ಭೇದಿಸಿ ಜಯಿಸುತ್ತೇವೆ. ಹೀಗೆ ಉಂಡೆಯಾಗಿರುವುದನ್ನು ವಿಭಾಗ ಮಾಡುವುದೂ ತೊಡಕಾದುದನ್ನು ಬಿಡಿಸುವುದೂ ಕೂಡಿರುವುದನ್ನು ಬೇರೆಮಾಡುವುದೂ ನಮ್ಮ ನಿತ್ಯಕಾರ್ಯ. ಇದರ ರೂಪಾಂತರವೇ ವೈಜ್ಞಾನಿಕರ ವಿಭಜನಾಕ್ರಮ.

ನಾವು ಮಾಡುವುದೂ ವಿಭಜನೆಯೇ. ವೈಜ್ಞಾನಿಕನು ಮಾಡುವುದೂ ವಿಭಜನೆಯೇ. ಹಾಗಾದರೆ ಎರಡಕ್ಕೂ ವ್ಯತ್ಯಾಸವೇನು? ಯುದ್ಧದಲ್ಲಿ ಒಬ್ಬನ ತಲೆ ಸೀಳುವುದೂ ವಿಭಜನೆ ; ಆಸ್ಪತ್ರೆಯಲ್ಲಿ ಶಸ್ತ್ರವೈದ್ಯನು ದೇಹ ಭಾಗಗಳನ್ನು ಕೊಯ್ಯುವುದೂ ವಿಭಜನೆ. ಆದರೆ ಒಂದರಲ್ಲಿ ನಯವಿಲ್ಲ, ಸೂಕ್ಷ್ಮವಿಲ್ಲ. ಇನ್ನೊಂದರಲ್ಲಿ ಇವೆರಡೂ ಉಂಟು. ವೈಜ್ಞಾನಿಕ ವಿಭಜನೆಯಲ್ಲಿ ಒಂದು ಕ್ರಮವುಂಟು, ವಿಧಾನವುಂಟು. ಇದು ವಿಜ್ಞಾನದ ಚರಿತ್ರೆಯಿಂದಲೇ ಸ್ಫುಟವಾಗುತ್ತದೆ. ವಿಜ್ಞಾನಿಗಳು ಮೊದಲಲ್ಲಿ ಆತ್ಮಕ್ಕೂ ಪ್ರಕೃತಿಗೂ ನಡುವೆ ಒಂದು ಗೆರೆ ಎಳೆದು ಪ್ರಕೃತಿಯನ್ನೇ ತಮ್ಮ ಪರಿಶೀಲನೆಗೆ ವಿಷಯವಾಗಿ ಇರಿಸಿಕೊಂಡರು. ಕಾಲಕ್ರಮದಲ್ಲಿ ಸಜೀವ ಪ್ರಕೃತಿಯನ್ನೂ [illegible] ಧಾತುಪ್ರಕೃತಿಯನ್ನೂ. ಸಜೀವಿಗಳಲ್ಲಿ [illegible]

ಪ್ರತ್ಯೇಕಿಸಿಕೊಂಡರು. ಭೌತವಿಜ್ಞಾನವು ಬೆಳೆದ ಹಾಗೆಲ್ಲಾ ಅದೊಂದರಲ್ಲೇ ನಾಲ್ಕಾರು ಶಾಸ್ತ್ರಭಾಗಗಳು ಹುಟ್ಟಿದುವು. ಹಾಗೆಯೇ ಒಂದು ಪ್ರಾಣಿಶಾಸ್ತ್ರವು ನಾಲ್ಕಾರು ಕವಲಾಗಿ ಒಡೆಯಿತು. ಹೀಗೆ ಪ್ರಕೃತಿಯನ್ನು ವಿಭಾಗ ಮಾಡುತ್ತಾ ಹೋದಹಾಗೆಲ್ಲಾ ಹೊಸಹೊಸ ಶಾಸ್ತ್ರಗಳು ಹುಟ್ಟುತ್ತಿವೆ. ಇವುಗಳ ಸಮೃದ್ಧಿ ಈಗ ಎಷ್ಟು ಹೆಚ್ಚಾಗಿದೆ ಎಂದರೆ, ಬೆಳಗಾದರೆ ಒಂದು ಹೊಸ ಶಾಸ್ತ್ರದ ಹೆಸರು ಕಿವಿಗೆ ಬೀಳುತ್ತದೆ.

ಶಾಸ್ತ್ರಗಳನ್ನು ಹೀಗೆ ಹೆಚ್ಚಿಸುವುದರಲ್ಲೇ ವಿಭಜನೆಯ ಕೆಲಸವು ಪರ್ಯವಸಾನ ಹೊಂದುವುದಿಲ್ಲ. ತಲೆಯೆತ್ತಿದ ಒಂದೊಂದು ಶಾಸ್ತ್ರದಲ್ಲೂ ವಿಭಜನೆಯ ಕಾರ್ಯವು ಅವಿಚ್ಛಿನ್ನವಾಗಿ ಮುಂದುವರಿಯುತ್ತಲೇ ಇದೆ. ವಿಭಾಗಿಸುವ ಕೆಲಸ ಇಲ್ಲಿಗೆ ಮುಗಿಯಿತು ಎನ್ನುವಂತೆಯೇ ಇಲ್ಲ. ವಿಶ್ವದ ವಸ್ತುಗಳನ್ನು ಮೊದಲು ಪಂಚಭೂತಗಳಾಗಿ ವಿಂಗಡಿಸಿದರು ; ಈಗ ಆ ಐದು ಭೂತಗಳ ಜಾಗದಲ್ಲಿ ಹೆಚ್ಚು ಕಡಮೆ ನೂರು ಭೂತಗಳು (Elements) ಎದ್ದಿವೆ. ಈ ಭೂತಗಳಲ್ಲಿ ಒಂದೊಂದನ್ನೂ ಅಣುವಾಗಿ ಒಡೆದರು : ಅಣುವನ್ನು ಪರಮಾಣುವಾಗಿ ಸೀಳಿದರು. ಕೆಲವು ಕಾಲದ ತನಕ ವಿಜ್ಞಾನಿಯ ಉಳಿಗೆ ಇನ್ನು ವಿಶ್ರಾಂತಿ ಸಿಕ್ಕಿತೆಂಬಂತೆ ತೋರುತ್ತಿತ್ತು. ಆದರೆ ಈಚೆಗೆ ಪರಮಾಣುಗಳೂ ಎಲೆಕ್ಟ್ರಾನ್ ಪ್ರೋಟಾನ್‌ಗಳಾಗಿ ವಿಭಾಗವಾಗಿವೆ. ಈಗ ಎಲೆಕ್ಟ್ರಾನ್‌ಗಳೇ ಭೌತವಿಭಜನೆಯ ಪರಮಾವಧಿಯೆಂದು ಹೇಳುತ್ತಿದ್ದಾರೆ. ಈ ಎಲ್ಲೆಯನ್ನು ಇನ್ನೆಷ್ಟು ದಿನಗಳವರೆಗೆ ವಿಭಜನೆಯು ದಾಟದಿರುವುದೋ ಹೇಳಲಾಗುವುದಿಲ್ಲ. ಅಂತೂ ವಿಜ್ಞಾನದ ವಿಧಾನವು ಮೊದಲಿನಿಂದ ಕೊನೆಯವರೆಗೂ ವಿಭಜನೆಯೇ. ಅದನ್ನು ಎಷ್ಟು ದೂರ ಸಾಧ್ಯವೋ ಅಷ್ಟು ದೂರಕ್ಕೂ ವಿಜ್ಞಾನಿಯು ಮುಂದುಮುಂದಕ್ಕೆ ತಳ್ಳುತ್ತಲೇ ಇರುವನು.

ಹೀಗೆ ವಿಭಜನೆಯು ವಿಶೇಷವಾಗಿ ಮುಂದುವರಿಯುತ್ತಿರುವುದು ಯಂತ್ರಗಳ, ಉಪಕರಣಗಳ ಸಹಾಯದಿಂದ. ಮಾನವನ ಇಂದ್ರಿಯ ಬುದ್ಧಿಗಳೇ ಈ ಕಾರ್ಯದಲ್ಲಿ ಮೊಟ್ಟಮೊದಲನೆಯ ಉಪಕರಣಗಳೆನ್ನಬಹುದು. ವಿಭಜನೆಯು ವಿಜ್ಞಾನದ ಅಂಗವಾಗುವುದಕ್ಕೆ ಮೊದಲೇ ಜೀವನದ ಅಂಗವಾಗಿತ್ತು. ಪ್ರಾಣಿಗಳು ಜೀವಿಸುವುದಕ್ಕೆ ಆಹಾರವು ಬಹುಮುಖ್ಯವಷ್ಟೆ. ಆಹಾರಕ್ಕೆ ಯೋಗ್ಯವಾದ ಪದಾರ್ಥಗಳನ್ನು ಯೋಗ್ಯವಲ್ಲದವುಗಳಿಂದ

ಪ್ರತ್ಯೇಕಿಸುವುದಕ್ಕೆ ಪ್ರಾಣಿವರ್ಗದಲ್ಲಿ ಸ್ಪರ್ಶೇಂದ್ರಿಯವು ಮೊದಲ
ಉಪಯೋಗಕ್ಕೆ ಬಂದಿತು. ಬಳಿಕ ಈ ಕೆಲಸವನ್ನು ಮುಂದುವರಿಸಲು ಇತರ
ಇಂದ್ರಿಯಗಳು ಅನುವಾದವು. ಪ್ರಾಣಿಗಳು ಜೀವನದ ಹಂತದಲ್ಲಿ ಮೇಲು
ಮೇಲಕ್ಕೇರಿದ ಹಾಗೆಲ್ಲಾ ಅವುಗಳ ಇಂದ್ರಿಯಗಳೂ ಹೆಚ್ಚಾಗುತ್ತಾ ಬಂದವು.
ಜೀವನದ ಶಿಖರದಲ್ಲಿ ನಿಂತಿರುವ ಮನುಷ್ಯನಲ್ಲಿ ಜ್ಞಾನೇಂದ್ರಿಯ
ಕರ್ಮೇಂದ್ರಿಯ ಅನೇಕ ಇಂದ್ರಿಯ ವಿಶೇಷಗಳು ಉದ್ಭವಿಸಿವೆ. ಇಷ್ಟು
ಸಾಧನಗಳಿದ್ದರೂ ಮನುಷ್ಯನಿಗೆ ಜೀವನವನ್ನು ನೀಸುವುದು ಕಷ್ಟವಾಯಿತು.
ಹೊಸ ಇಂದ್ರಿಯಗಳು ಹುಟ್ಟುವುದಕ್ಕೆ ಇನ್ನು ಅವಕಾಶವಿಲ್ಲ ; ಇದ್ದವು
ಗಳಿಂದಲೇ ಕೆಲಸ ತೂಗಬೇಕಾಯಿತು. ಇದಕ್ಕಾಗಿ ಅವನು ಯಂತ್ರಗಳನ್ನು
ರಚಿಸಿ ತನ್ನ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ವ್ಯಾಪಾರವನ್ನು
ವಿಸ್ತರಿಸಲು ಮೊದಲು ಮಾಡಿದನು. ದೂರದರ್ಶಿನಿ, ಸೂಕ್ಷ್ಮದರ್ಶಿನಿ, ವೈರ್
ಲೆಸ್, ಎಕ್ಸ್-ರೇ ಮುಂತಾದ ಉಪಕರಣಗಳ ಸಹಾಯದಿಂದ ಪ್ರಕೃತಿಯ
ವಿಭಜನೆಯನ್ನು ಮುಂದುವರಿಸಿ, ಅದರ ಮೇಲೆ ತನ್ನ ಹಿಡಿತವನ್ನು ಹೆಚ್ಚಿಸಿ
ಕೊಂಡನು.

ತನ್ನ ವಿಭಜನೆಯ ಕೆಲಸವನ್ನು ಮುಂದುವರಿಸಲು ವಿಜ್ಞಾನಿಯು
ಭೌತ ಯಂತ್ರಗಳನ್ನು ಮಾತ್ರವಲ್ಲ, ಮಾನಸಿಕ ಯಂತ್ರಗಳನ್ನೂ ಏರ್ಪಡಿಸಿ
ಕೊಂಡನು. ಈ ಮಾನಸಿಕ ಯಂತ್ರಗಳಲ್ಲಿ ಎಣಿಕೆ ಒಂದು. ಮನುಷ್ಯನಿಗೆ
ಸಂಖ್ಯಾಜ್ಞಾನವುಂಟಾದ ದಿವಸ ಅವನಲ್ಲಿ ಒಂದು ಹೊಸ ಅಂಗವೇ ಉದ್ಭವಿಸಿ
ದಂತಾಯಿತು ; ಅದರ ಸಹಾಯದಿಂದ ಅವನಿಗೆ ಒಂದು ಹೊಸ ಪ್ರಪಂಚವೇ
ಗೋಚರವಾಯಿತು. ಗಣಿತಶಾಸ್ತ್ರದ ಜ್ಞಾನವು ಹೆಚ್ಚಿದ ಹಾಗೆಲ್ಲ ಅವನಿಗೆ
ಪ್ರಕೃತಿಯ ಮೇಲಿನ ಹತೋಟಿಯು ಬಲಪಟ್ಟಿತು. ಎರಡು ಸಾವಿರ ವರ್ಷ
ಗಳ ಕಾಲ ಯೂಕ್ಲಿಡ್ಡಿನ ಗಣಿತದ ಆಶ್ರಯದಲ್ಲಿ ವಿಜ್ಞಾನಿಯು ಪ್ರಕೃತಿ
ಯನ್ನು ಎಷ್ಟುಮಟ್ಟಿಗೆ ವಿಭಜನೆ ಮಾಡಬಹುದೋ ಅಷ್ಟುಮಟ್ಟಿಗೂ
ಮಾಡಿದನು. ಆದರೂ ಅವನಿಗೆ ಅದರ ದಾಹ ಆರಲಿಲ್ಲ. ಇನ್ನು ಮುಂದೆ
ವಿಭಜನೆ ಮಾಡಬೇಕಾದರೆ ಬೇರೆಯ ಗಣಿತಶಾಸ್ತ್ರವನ್ನು ರಚಿಸಬೇಕಾಯಿತು.
'ನಾನ್-ಯೂಕ್ಲಿಡಿಯನ್ ಜಾಮಿಟ್ರಿ' ಹುಟ್ಟಿತು ; ಇದರ ಸಹಾಯದಿಂದ
ಭೌತ ಖಗೋಳ ಶಾಸ್ತ್ರಗಳ ಹೊಸದೊಂದು ಅಧ್ಯಾಯವು ಆರಂಭವಾಗಿದೆ.

'ಮ್ಯಾಥಮ್ಯಾಟಿಕಲ್ ಪ್ರಾಬಬಿಲಿಟಿ' ಹುಟ್ಟಿತು; ಅದರ ಮೂಲಕ ಈವರೆಗೂ ಅಳತೆಗೆ ಸಿಕ್ಕದಿದ್ದ ಮಾನಸಿಕ ವ್ಯಾಪಾರಗಳು ಅಳತೆಗೆ ತಲೆಬಾಗಿಸಿವೆ. ಸೂಕ್ಷ್ಮತಮವಾದ ಎಣಿಕೆಯ ಯಂತ್ರಗಳಿಲ್ಲದೆ ಹೋಗಿ, ಇನ್ನೂ ಅನೇಕ ಶಾಸ್ತ್ರಗಳ ವಿಷಯಗಳನ್ನು ಅಳೆಯಲು ಆಗಿಲ್ಲ. ಇಂಥ ವಿಷಯಗಳನ್ನು ವಿಜ್ಞಾನವೆಂದೇ ಎಣಿಸಕೂಡದೆಂದು ಕೆಲವರು ಅಭಿಪ್ರಾಯಪಡುವರು ; ಹೀಗೆ ಹೇಳುವುದು ಸರಿಯಲ್ಲವೆಂದು ಇತರರು ವಾದಿಸುವರು. ಇದು ಸರಿಯೋ ತಪ್ಪೋ ಹೇಗಾದರೂ ಇರಲಿ ; ಮುಖ್ಯವಾಗಿ ಗಮನಿಸಬೇಕಾದ ಅಂಶ ಇದು ; ಯಾವ ವಿಷಯವೇ ಆಗಲಿ ಎಣಿಕೆಯ ಹಿಡಿತಕ್ಕೆ ಎಷ್ಟೆಷ್ಟು ಸಿಕ್ಕುವುದೋ ಅದರ ಸ್ವರೂಪವೂ ಅಷ್ಟಷ್ಟು ಸಿಷ್ಕೃಷ್ಟವಾಗುವುದು. ವಿಜ್ಞಾನವನ್ನೆಲ್ಲಾ ಗಣಿತಸೂತ್ರದಲ್ಲಿ ನಿರೂಪಿಸಲಾಗದಿರಬಹುದು. ಆದರೆ ಹಾಗೆ ನಿರೂಪಿಸು ವುದು ವಿಜ್ಞಾನದ ಧ್ಯೇಯವೆಂಬುದನ್ನು ಮಾತ್ರ ಮರೆಯಬಾರದು. ವಿಷಯ ವಿಷಯಕ್ಕಿರುವ ಸಂಬಂಧವನ್ನು ಗಣಿತಸೂತ್ರ ರೂಪದಲ್ಲಿ ವಿವರಿಸಿದಾಗ ವಿಜ್ಞಾನದ ಉದ್ದೇಶವು ಪೂರ್ಣವಾಗುವುದು ; ಆದರಿಂದ ಮನುಷ್ಯನಿಗೆ ಪ್ರಕೃತಿಯ ಮೇಲಿನ ಹತೋಟಿ ಹೆಚ್ಚುತ್ತುವುದು.

ವಿಷಯಗಳನ್ನು ವಿಭಜನೆಮಾಡಬಹುದು, ಯಂತ್ರಗಳ ಸಹಾಯದಿಂದ ಅವುಗಳ ರಹಸ್ಯವನ್ನು ಭೇದಿಸಬಹುದು, ಎಣಿಕೆಮಾಡಿ ಅವುಗಳನ್ನು ಗಣಿತ ಸೂತ್ರದಲ್ಲಿ ಕಟ್ಟಿ ಬಿಗಿಯಬಹುದು. ಇಷ್ಟಾದರೂ ಆ ವಿಷಯಗಳ ಜ್ಞಾನವು ವಿಜ್ಞಾನವಾಗದಿರಬಹುದು. ನಕ್ಷತ್ರಮಂಡಲವನ್ನೆಲ್ಲಾ ನಕಾಸೆಯ ರೂಪದಲ್ಲಿ ಚಿತ್ರಿಸಿದ ಮಾತ್ರಕ್ಕೆ, ಆಕಾಶದೊಳಗಿನ ನಕ್ಷತ್ರಗಳನ್ನೆಲ್ಲಾ ಎಣಿಸಿ ಪಟ್ಟಿ ಹಾಕಿದ ಮಾತ್ರಕ್ಕೆ ಅದು ವಿಜ್ಞಾನವಾಗುವುದಿಲ್ಲ. ನಕ್ಷತ್ರ ನಕ್ಷತ್ರಕ್ಕಿರುವ ಸಂಬಂಧವನ್ನು ವ್ಯಕ್ತಪಡಿಸಿದಾಗ ಮಾತ್ರ ಈ ಖಗೋಳ ವಿವರಣೆ ನಿಜ ವಾಗಿಯೂ ವಿಜ್ಞಾನವಾಗುವುದು. ಈ ಪರಸ್ಪರ ಸಂಬಂಧಗಳ ಜ್ಞಾನವನ್ನು ಕಾರ್ಯಕಾರಣ ಸಂಬಂಧದ ಅರಿವನ್ನು ತಾರ್ಕಿಕರು ವ್ಯಾಪ್ತಿಜ್ಞಾನವೆನ್ನುವರು. ಇದರಿಂದ ಅದು ಹುಟ್ಟಿದೆ ; ಇದು ಇದ್ದರೆ ಅದು ಇರುತ್ತದೆ; ಇದು ಇಲ್ಲದಿದ್ದರೆ ಅದು ಇರುವುದಿಲ್ಲ: ಇದು ಬದಲಾಯಿಸಿದರೆ ಅದೂ ಬದಲಾಯಿಸುತ್ತದೆ. ಹೀಗೆ ವಿಷಯ ವಿಷಯಕ್ಕಿರುವ ಸಂಬಂಧವನ್ನು ತಿಳಿದಾಗ ವ್ಯಾಪ್ತಿಜ್ಞಾನ ವುಂಟಾಗುವುದು.

ವ್ಯಾಪ್ತಿಜ್ಞಾನಕ್ಕೆ ಮುಖ್ಯಸಾಧನವು ಭಾವನಾಶಕ್ತಿ—ಪ್ರತಿಭೆ. ಭಾವನಾಶಕ್ತಿಯು ಕವಿಗೆ ಎಷ್ಟು ಅವಶ್ಯಕವೋ ವಿಜ್ಞಾನಿಗೂ ಅಷ್ಟೇ ಆವಶ್ಯಕ. ನ್ಯೂಟನ್‌ಗೆ ಈ ಭಾವನಾಶಕ್ತಿ ಇದ್ದುದರಿಂದಲೇ ಒಂದು ಸೇಬಿನ ಹಣ್ಣು ಬಿದ್ದುದನ್ನು ನೋಡಿದ ಮಾತ್ರಕ್ಕೆ[1] ಸಮಗ್ರ ವಿಶ್ವವನ್ನೇ ವ್ಯಾಪಿಸುವಂಥ ವಿಶಾಲವಾದ ಸೂಚನೆ ಅವನ ಮನಸ್ಸಿಗೆ ಹೊಳೆದುದು. ಈ ಭಾವನಾಶಕ್ತಿಯ ಪ್ರಭಾವದಿಂದಲೇ ಫ್ಯಾರಡೇ, ಡಾರ್ವಿನ್, ಕೆಲ್ವಿನ್, ಕ್ಲಾರ್ಕ್ ಮ್ಯಾಕ್ಸ್‌ವೆಲ್ ಮುಂತಾದ ವಿಜ್ಞಾನಿಗಳು ಅತಿವಿಸ್ಮಯಕರವಾದ, ವಿಶ್ವವ್ಯಾಪಕವಾದ ಸಂಬಂಧಗಳನ್ನು ಕಂಡುಹಿಡಿದುದು. ಹೀಗೆ ಕವಿಗೂ ವಿಜ್ಞಾನಿಗೂ ಭಾವನಾಶಕ್ತಿಯು ಸಮಾನವಾದರೂ ಅದು ಅವರಿಬ್ಬರಲ್ಲೂ ಬೇರೆ ಬೇರೆ ರೀತಿಯಾಗಿ ಕೆಲಸ ಮಾಡುತ್ತದೆ. ಕವಿಯ ಕಲ್ಪನೆಯ ಗುರಿಯೇ ಬೇರೆ, ವೈಜ್ಞಾನಿಕನ ಕಲ್ಪನೆಯ ಗುರಿಯೇ ಬೇರೆ. ಕವಿಯ ಧ್ಯೇಯ ಸೌಂದರ್ಯ, ವೈಜ್ಞಾನಿಕನ ಧ್ಯೇಯ ಸತ್ಯ. ಕವಿ ಕಲ್ಪಿಸಿದುದು ಪ್ರಪಂಚದಲ್ಲಿ ಇದ್ದರೂ ಇರಬಹುದು, ಇಲ್ಲದಿದ್ದರೂ ಇರಬಹುದು: ಅದು ಸುಂದರವಾಗಿದ್ದರೆ ಸರಿ. ವೈಜ್ಞಾನಿಕನು ಕಲ್ಪಿಸಿದುದಾದರೋ ಪ್ರಪಂಚದಲ್ಲಿ ಇದ್ದೇ ಇರಬೇಕು. ಅದು ಸುಂದರವಾಗಿರಬಹುದು, ಇಲ್ಲದಿರಬಹುದು; ಆದರೆ ಅದು ಸತ್ಯವಾಗಿರಬೇಕು. ವಿಜ್ಞಾನಿಯ ಭಾವನೆಯು ಎಷ್ಟು ಎತ್ತರಕ್ಕೆ ಬೇಕಾದರೂ ಏರಬಹುದು, ಎಷ್ಟು ಆಳಕ್ಕೆ ಬೇಕಾದರೂ ಇಳಿಯಬಹುದು, ಎಷ್ಟು ವಿಸ್ಮಯವನ್ನಾದರೂ ಉದ್ರೇಕಿಸಬಹುದು; ಕೊನೆಯಲ್ಲಿ ಅದು ಯಥಾರ್ಥವಾಗಿ ಮಾತ್ರ ಇರಬೇಕು.

ಭಾವನಾಶಕ್ತಿಯಿಂದ ಹುಟ್ಟಿದ ಕಲ್ಪನೆಯು ಯಥಾರ್ಥವಾಗಲು ಅದಕ್ಕೆ ರುಜುವಾತುಗಳು ಬೇಕು. ರುಜುವಾತಿಗೆ ಮುಖ್ಯವಾದ ಸಾಧನಗಳು ಎರಡು: ತರ್ಕ ಮತ್ತು ಪ್ರಯೋಗ. ವೈಜ್ಞಾನಿಕನು ಮಾಡಿದ ಊಹೆಗಳು ಅನುಭವಕ್ಕೆ ವಿರೋಧವಾಗಿಲ್ಲ. ಸಮ್ಮತವಾಗಿವೆ ಎಂದು ತರ್ಕದ ಬಲದಿಂದ ವ್ಯವಸ್ಥೆ ಮಾಡಬಹುದು. ಈ ಸಾಧನದಿಂದ ಒಂದು ಕಲ್ಪನೆಯ ಬಹು

---

1 ಇದು ಬರಿಯ ಕಥೆಯೆಂದು ಹೇಳುವವರೂ ಉಂಟು. ಆದರೂ ಇದು ನಂಬಬಹುದಾದ ಕಥೆಯೆಂದು ತೋರುತ್ತದೆ.

ಮಟ್ಟಿಗೆ ನಿಜವಾಗಿರಬಹುದೆಂದು ಹೇಳಲಾದೀತೇ ಹೊರತು. ಇದು ಖಂಡಿತವಾಗಿಯೂ ನಿಜವೆಂದು ಹೇಳಲಾಗುವುದಿಲ್ಲ. ಆದರೆ ಆ ಕಲ್ಪನೆಯನ್ನು ಪ್ರಯೋಗದ ಮೂಲಕ ಕಣ್ಣಿಗೆ ಕಟ್ಟುವಂತೆ ಮಾಡಿದರೆ ಅದು ಖಂಡಿತವಾಗಿಯೂ ಸಿದ್ಧಾಂತವಾಗುವುದು. ಇದಕ್ಕೆ ಉದಾಹರಣೆಯನ್ನು ಹುಡುಕಲು ಬಹುದೂರ ಹೋಗಬೇಕಾಗಿಲ್ಲ. ಅನುಭವಕ್ಕೆ ಬಂದಿರುವವೇ ನೂರಾರಿವೆ. ಏನು ಉರಿಯಬೇಕಾದರೂ ಆಮ್ಲಜನಕ ಆವಶ್ಯಕ; ಒಂದು ಪದಾರ್ಥ ಸುಟ್ಟರೆ ಅದರ ರೂಪ ಬದಲಾಯಿಸಬಹುದೇ ಹೊರತು ಅದರಲ್ಲಿನ ಒಂದು ಅಣುವೂ ಕೂಡ ನಾಶವಾಗುವುದಿಲ್ಲ; ಪ್ರಾಣಿಗಳಂತೆಯೇ ಸಸ್ಯಗಳು ಬದುಕಬೇಕಾದರೆ ಗಾಳಿ ಬೇಕು; ಪ್ಲೇಗು, ಕಾಲರಾ, ಸಿಡುಬು ಮುಂತಾದ ಅಂಟುರೋಗಗಳಿಗೆಲ್ಲಾ ಕೆಲವು ಕ್ರಿಮಿವಿಶೇಷಗಳೇ ಕಾರಣ; ಸೂಜಿಗಲ್ಲಿಗೆ ಕಬ್ಬಿಣವನ್ನು ಎಳೆದುಕೊಳ್ಳುವ ಶಕ್ತಿ ಇರುವುದು ಅದರಲ್ಲಿ ಅಡಗಿರುವ ವಿದ್ಯುಚ್ಛಕ್ತಿಯ ಬಲದಿಂದ:—ಇವುಗಳಲ್ಲೆಲ್ಲಾ ಜನರಿಗೆ ಸ್ಥಿರವಾದ ನಂಬಿಕೆ ಹುಟ್ಟಿರುವುದು ಅವು ಪ್ರಾಯೋಗಿಕವಾಗಿ ಸ್ಥಿರವಾದುದರಿಂದ. ಪ್ರಾಯೋಗಿಕವಾಗಿ ಪರೀಕ್ಷಿಸದೆ ಇದ್ದರೆ ಅವು ಕೇವಲ ಊಹೆಗಳೇ ಆಗುತ್ತಿದ್ದವು; ಬರಿಯ ಆಕಾಶ ಪುರಾಣದ ದಾರಿ ಹಿಡಿದು ಹೋಗುತ್ತಿದ್ದವು. ಇದು ಕಥೆ, ಇದು ಊಹೆ, ಇದು ಸತ್ಯ ಎಂದು ನಿಷ್ಕೃಷ್ಟವಾಗಿ ಹೇಳಲಾಗುತ್ತಿರಲಿಲ್ಲ. ಈಗ ವೈಜ್ಞಾನಿಕರು ನಿಜವೆಂದು ತೋರಿಸಿಕೊಟ್ಟಿರುವ ಅನೇಕ ವಿಷಯಗಳು ನಮ್ಮ ಪುರಾಣಗಳಲ್ಲಿವೆ. ವಿಮಾನಗಳ ವಿಚಾರವಿದೆ; ನೂರಾರು ಯೋಜನೆಗಳ ದೂರದಲ್ಲಿ ನಡೆಯುವುದನ್ನು ಇದ್ದೆಡೆಯಿಂದಲೇ ನೋಡುವ ಕೇಳುವ ಋಷಿಗಳ ವಿಚಾರವಿದೆ; ವಿಜ್ಞಾನಿಗಳು ಇನ್ನೂ ಕಂಡುಹಿಡಿಯದ ಅನೇಕ ವಿಚಿತ್ರಗಳೂ ಇವೆ. ಇದೆಲ್ಲವೂ ಬರಿಯ ಕಥೆಯೋ ಸತ್ಯವೋ? ಪ್ರತ್ಯಕ್ಷವಾಗಿ ತೋರಿಸಿದ ಹೊರತು ಈ ಕಾಲದಲ್ಲಿ ನಂಬುವ ಹಾಗಿಲ್ಲ. ಹಿಂದಣಕಾಲದವರಿಗೇನೋ ದೇವರೇ ಎದುರಿಗೆ ಬಂದು "ಇದೆಲ್ಲಾ ಸತ್ಯ; ನಂಬಿ" ಎಂದು ಹೇಳುತ್ತಿದ್ದನು; ಅವರು ನಂಬುತ್ತಿದ್ದರು. ಈಗ ದೇವರು ನಮ್ಮ ಮೇಲೆ ಮುನಿಸಿಕೊಂಡಿರುವಂತೆ ತೋರುತ್ತದೆ. ಅವನು ನಮ್ಮೆದುರಿಗೆ ಬರುವ ಹಾಗಿಲ್ಲ, ನಮ್ಮೊಡನೆ ಮಾತಾಡುವ ಹಾಗಿಲ್ಲ. ಈ ಸ್ಥಿತಿಯಲ್ಲಿ ನಮಗೆ ಪ್ರಯೋಗವೊಂದೇ ಗತಿ.

ಪ್ರಯೋಗದಿಂದ ನಮಗೆ ಆಗುವ ಉಪಯೋಗವು ಇಷ್ಟೇ ಅಲ್ಲ; ಅದು ನಮಗೆ ಅನೇಕ ಸಿದ್ಧಿಗಳನ್ನೂ ಒದಗಿಸಿಕೊಟ್ಟಿದೆ. ಪ್ರಯೋಗದ ಬಲದಿಂದ ವಿಜ್ಞಾನವು ಒಂದು ಬೆಳಕಾದುದಲ್ಲದೆ, ಒಂದು ದೊಡ್ಡ ಶಕ್ತಿಯೂ ಆಗಿದೆ. ಪ್ರಯೋಗದ ಪ್ರಭಾವದಿಂದ ನಮಗೆ ಪ್ರಕೃತಿಯ ಗುಟ್ಟೆಲ್ಲಾ ಬಯಲಾದುದಲ್ಲದೆ, ಪ್ರಕೃತಿಗೆ ಲಗಾಮು ಹಾಕಿ ಕಟ್ಟಿ ನಮಗೆ ಬೇಕುಬೇಕಾದ ಹಾಗೆ ಅದನ್ನು ತಿರುಗಿಸಿಕೊಳ್ಳುವ ಶಕ್ತಿಯೂ ದೊರೆತಿದೆ. ಅಲ್ಲಾವುದೀನನು ಒಂದು ಲಾಂದ್ರವನ್ನು ಉಜ್ಜಿದ ಕೂಡಲೆ ಭೂತವೊಂದು ಮೇಲಕ್ಕೆದ್ದು ಅವನಿಗೆ ಬೇಕುಬೇಕಾದುದನ್ನೆಲ್ಲಾ ಮಾಡಿಕೊಟ್ಟ ವಿಚಾರವನ್ನು ನಾವು ಚಿಕ್ಕಂದಿನಲ್ಲಿ 'ಅರೇಬಿಯನ್ ನೈಟ್ಸ್' ಕಥೆಯಲ್ಲಿ ಓದಿದ್ದೇವೆಯಷ್ಟೆ. ಆಗ ಇದೆಲ್ಲಾ ಬರಿಯ ಕಥೆ, ಇಂಥದು ಭೂಲೋಕದಲ್ಲಿ ಹೇಗೆ ಸಾಧ್ಯ ಎನ್ನುತ್ತಿದ್ದೆವು. ಆದರೆ ಕಥೆಯಲ್ಲಿ ಓದಿದುದೆಲ್ಲ ನಮ್ಮ ಕಣ್ಣ ಮುಂದೆ ಈಗ ನಡೆಯುತ್ತಲೇ ಇದೆ. ಭದ್ರಾವತಿಯ ಕಾರ್ಖಾನೆಗೆ ಹೋಗಿ ನೋಡಿದರೆ ಪ್ರಯೋಗಬಲದಿಂದ ನಮ್ಮ ಕೈಗೆ ಎಂಥೆಂಥ ಭೂತಗಳು ಸಿಕ್ಕಿವೆಯೆಂಬುದು ವಿಶದವಾಗುವುದು.

ವಿಜ್ಞಾನವು ಜ್ಞಾನವೂ ಹೌದು, ಶಕ್ತಿಯೂ ಹೌದು. ಆದರೆ ವಿಜ್ಞಾನದ ಸಿದ್ಧಿಶಕ್ತಿಗೆ ಮರುಳಾಗಿ ಅದು ಪ್ರಧಾನತಃ ಜ್ಞಾನವೆಂಬುದನ್ನು ಮರೆಯುವ ಸಂಭವವುಂಟು. ಇದು ಸಾಮಾನ್ಯ ಜನರ ಮನಸ್ಸಿನಲ್ಲಿ ಉಂಟಾಗಬಹುದಾದ ಒಂದು ದುಷ್ಪರಿಣಾಮ. ಇದಕ್ಕಿಂತಲೂ ಹೆಚ್ಚಿನ ಕೆಡುಕು ಇನ್ನೊಂದಿದೆ. ವಿಜ್ಞಾನದ ಸಿದ್ಧಿಬಲದಿಂದ ಮದಿಸಿ, ತಮ್ಮ ಸ್ವಭಾವವನ್ನೇ ಮರೆತುಬಿಡಬಹುದು. ಈ ಸಿದ್ಧಿಗಳೇ ನಮ್ಮ ಪರಮ ಪುರುಷಾರ್ಥಗಳೆಂದು ನಂಬಿ, ಕಲೆ, ಶೀಲ, ಆತ್ಮಜ್ಞಾನ ಇವುಗಳನ್ನು ಉಪೇಕ್ಷಿಸಬಹುದು. ಈಗಿನ ಪ್ರಪಂಚದ ವಿದ್ಯಮಾನಗಳನ್ನು ನೋಡಿದರೆ. ವಿಜ್ಞಾನದಿಂದ ಇಂಥ ದುಷ್ಪರಿಣಾಮಗಳುಂಟಾಗಬಹುದೆಂಬ ಹೆದರಿಕೆಗೆ ಅವಕಾಶವಿದೆ. ಆದರೆ ಈ ದುಷ್ಪರಿಣಾಮಗಳಿಗೆ ವಿಜ್ಞಾನವಾಗಲಿ, ವೈಜ್ಞಾನಿಕನಾಗಲಿ ನಿಜವಾದ ಕಾರಣವಲ್ಲ. ಈ ತಪ್ಪು ಅವರದಲ್ಲ; ಆಧುನಿಕ ಸಂಸ್ಕೃತಿಯದು. ವಿಜ್ಞಾನವು ಮತದಂತೆ ಪವಿತ್ರವಾದುದು. ಆದರೆ ಒಂದು ಕಾಲದಲ್ಲಿ ಅಂಧರಾದ ಅರ್ಥಕಾಮಿಗಳಾದ ಅರ್ಚಕ ಪುರೋಹಿತರ [illegible]ದ ಮತವೂ ಧರ್ಮವೂ ಅಪವಿತ್ರವಾದುವು. ಹಾಗೆಯೇ ಈಗ ಅರ್ಥಕಾಮಿಗಳಾದ ವರ್ತಕರು, ಅವರ

ಅನುಯಾಯಿಗಳಾದ ರಾಜಕಾರಣಪಟುಗಳು ಇವರ ಒಳಸಂಚಿನಿಂದ ವಿಜ್ಞಾನವು ಅಪವಿತ್ರವಾಗಿದೆ. ಜೀವನದ ಅನ್ವೇಷಣವು ಹಲವು ; ತುಂಬಿದ ಬದುಕಿಗೆ ಎಲ್ಲವೂ ಆವಶ್ಯಕ. ಅರ್ಥ ಕಾಮಗಳ ಅನ್ವೇಷಣವು ಮನುಷ್ಯ ಜೀವನಕ್ಕೆ ಎಷ್ಟು ಸ್ವಾಭಾವಿಕವೋ ಸತ್ಯ, ಸೌಂದರ್ಯ, ಧರ್ಮ ಮೋಕ್ಷಗಳ ಅನ್ವೇಷಣವೂ ಅಷ್ಟೇ ಸ್ವಾಭಾವಿಕ. ಮಾನವನು ಒಂದೊಂದನ್ನೂ ಹುಡುಕಿ ಅವುಗಳನ್ನೆಲ್ಲಾ ಸಮನ್ವಯಗೊಳಿಸಿದಾಗ ಜೀವನದಲ್ಲಿ ನಿಜವಾದ ಸುಖ ಶಾಂತಿಗಳು ತೋರುವುವು. ಹಾಗಿಲ್ಲದೆ ಒಂದೊಂದು ಅನ್ವೇಷಣವೂ ತಾನೇ ತಾನಾಗಿ ಇತರ ಅನ್ವೇಷಣಗಳನ್ನು ತನ್ನ ಅಡಿಯಾಳಾಗಿ ಮಾಡಿಕೊಳ್ಳಲು ಪ್ರಯತ್ನಿಸಿದರೆ ಅದರಿಂದ ಅಧಃಪತನವೇ ಹೊರತು ಅಭ್ಯುದಯವೆಂದಿಗೂ ಸಿದ್ಧಿಸದು. ವಿಜ್ಞಾನವು ಜೀವನದ ಸರ್ವಾಧಿಕಾರಿಯಾಗಲು ಬಯಸಿದರೆ ಜೀವನದ ಶ್ರೇಯಸ್ಸಿಗೆ ಭಂಗಬರುವುದು—ಇದಕ್ಕೆ ಪ್ರತಿಯಾಗಿ ಜೀವನದ ಇತರ ಅಧಿಕಾರಿಗಳೊಡನೆ ತಾನೂ ಸಹಕರಿಸಿದರೆ, ಅದರ ಶ್ರೇಯಸ್ಸಿಗೆ ಒಂದು ಆಧಾರಸ್ತಂಭವಾಗುವುದು.

೯. ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ

ಕುವೆಂಪು : ೨೯-೧೨-೧೯೦೪ : ೧೦-೧೧-೧೯೯೪

ಅಮೃತಪುತ್ರರಲ್ಲಿ ವಿಜ್ಞಾಪನೆ,

ಮಿತ್ರರೇ, ನಿಮ್ಮ ಮುಂದೆ ನಿಂತು, ನನ್ನ ಕೆಲವು ಅಭಿಪ್ರಾಯಗಳನ್ನು ಪ್ರಕಾಶಪಡಿಸಲು ಅವಕಾಶ ಕಲ್ಪಿಸಿಕೊಟ್ಟುದಕ್ಕಾಗಿ ನಾನು ನಿಮ್ಮೆಲ್ಲರನ್ನು ಮನಮುಟ್ಟಿ ವಂದಿಸುತ್ತೇನೆ.

ನನ್ನ ಅಭಿಪ್ರಾಯಗಳು ಕೆಲವರಿಗೆ ರುಚಿಸದಿರಬಹುದು, ಮತ್ತೆ ಕೆಲವರಿಗೆ ಕ್ರಾಂತಿಕಾರಿಗಳಾಗಿ ತೋರಬಹುದು. ಆದರೂ ನನ್ನ ಮನಸ್ಸಿನಲ್ಲಿ ಯಾರನ್ನಾದರೂ ನೋಯಿಸಬೇಕೆಂಬ ಇಚ್ಛೆ ಲವಲೇಶವೂ ಇಲ್ಲ. ಅಲ್ಲದೆ, ನಾನು ಹೇಳಲಿರುವ ಅಭಿಪ್ರಾಯಗಳು ಅಲ್ಪಾಲೋಚನೆಯಿಂದಾಗಲಿ, ಉದ್ರೇಕದ ಬುದ್ಧಿಯಿಂದಾಗಲಿ, ಅನುದಾರತೆಯಿಂದಾಗಲಿ, ಪ್ರತಿಹಿಂಸಾಭಾವದಿಂದಾಗಲಿ ಬಂದುವಲ್ಲ; ಬಹುಕಾಲದ ದೀರ್ಘಮಂಥನದಿಂದ, ಪ್ರಶಾಂತ ಧ್ಯಾನದಿಂದ, ಅನ್ಯಾಯಗಳನ್ನೂ ಅವಿವೇಕಗಳನ್ನೂ ಅಜ್ಞಾನಜನ್ಯವಾದ ಕ್ರೂರವರ್ತನೆಗಳನ್ನೂ ಕಂಡಾಗ ಮೂಡಿದ ಸಾತ್ವಿಕ ಕ್ರೋಧದಿಂದ, ನಮ್ಮ ದೇಶ ನಮ್ಮ ನಾಡು ನಮ್ಮ ಭಾಷೆ ನಮ್ಮ ಸಂಸ್ಕೃತಿ ನಮ್ಮ ಸ್ಥಿತಿಗತಿಗಳು ಉಚ್ಛ್ರಾಯವಾಗಬೇಕೆಂಬ ಹಂಬಲದಿಂದ ಮೂಡಿದುವಾಗಿವೆ. ಆದಕಾರಣ, ತಾಳ್ಮೆಯಿಂದ ಆಲಿಸಿ, ವಿವೇಕದಿಂದ ಭಾವಿಸಿ, ವಿಮರ್ಶಕ ಬುದ್ಧಿಯಿಂದ ಪರೀಕ್ಷಿಸಿ, ಒಪ್ಪಿಗೆಯಾದುದನ್ನು ಸ್ವೀಕರಿಸಿ, ತಪ್ಪುಗಳನ್ನು ತಿದ್ದಿಕೊಳ್ಳಬೇಕೆಂದು ವಿನಯದಿಂದ ಕೇಳಿಕೊಳ್ಳುತ್ತೇನೆ.

ನಾನಿಲ್ಲಿ ಗುರುಸ್ಥಾನದಲ್ಲಿ ನಿಂತಿಲ್ಲ; ನೀವೂ ಶಿಷ್ಯಸ್ಥಾನದಲ್ಲಿ ಕುಳಿತಿಲ್ಲ. ನಾನು ಉಪದೇಶಮಾಡುತ್ತಿಲ್ಲ; ವಿಜ್ಞಾಪಿಸುತ್ತಿದ್ದೇನೆ. ನನ್ನಂತೆಯೇ ನಿಮ್ಮಲ್ಲಿ ಅನೇಕರು ಜಿಜ್ಞಾಸೆ ಮಾಡಿರಬಹುದು. ಹಾಗಿದ್ದರೆ ನಮ್ಮ ಅಭಿಪ್ರಾಯಗಳು ಘರ್ಷಿಸದೆ ಮೃದುವಾಗಿ ಹೊಂದಿಕೊಳ್ಳುತ್ತವೆ; ಜಿಜ್ಞಾಸೆ [illegible] ಇದುವರೆಗೆ ಜಿಜ್ಞಾಸೆಮಾಡಲು ಭಾವಾವಕಾಶಗಳು ದೊರೆಯುತ್ತವೆ.

ಆದ್ದರಿಂದ ಯಾರೊಬ್ಬರೂ ನನ್ನ ಮಾತುಗಳನ್ನು ಪಠನಮಾಡದೆ ನುಂಗದಿರಲಿ; ಮತಿಯ ಒರೆಗಲ್ಲಿಗೆ ಹಚ್ಚದೆ ಸ್ವೀಕರಿಸದಿರಲಿ; ಧೀರವಾಗಿ ವಿಮರ್ಶಿಸದೆ ಒಪ್ಪದಿರಲಿ ; ಆದರೆ ಪಕ್ಷಪಾತವಿಲ್ಲದೆ ಕಿವಿಗೊಟ್ಟು ಮಾತ್ರ ಕೇಳಿ.

ಯುವಕರು 'ನಿರಂಕುಶಮತಿ'ಗಳಾಗಬೇಕು. 'ನಿರಂಕುಶಮತಿತ್ವ' ಎಂದರೆ ನಿರಂಕುಶ ಪ್ರಭುತ್ವದಂತೆ ಎಂದು ತಿಳಿಯಬಾರದು. ನಿರಂಕುಶ ಪ್ರಭುತ್ವದ ಲಕ್ಷಣವೆಂದರೆ ವಿವೇಕಹೀನವಾದ ಸ್ವಚ್ಛಂದವರ್ತನೆ. ಸಂಯಮಪೂರ್ಣವಾದ ಬುದ್ಧಿಸ್ವಾತಂತ್ರ್ಯವೇ 'ನಿರಂಕುಶಮತಿ.'

ಮತಿ ಮಾನವನ ಸರ್ವೋತ್ಕೃಷ್ಟವಾದ ಆಯುಧ. ಮತಿಯೇ ಕತ್ತಲಲ್ಲಿ ದಾರಿತೋರುವ ರತ್ನದ ಕೈದೀವಿಗೆ ಮತಿಯ ದೆಸೆಯಿಂದಲೇ, ಪ್ರಾಣಿಮಾತ್ರವಾಗುತ್ತಿದ್ದ ನರಜೀವಿ ಮನುಷ್ಯತ್ವಕ್ಕೆ ಏರಿದ್ದಾನೆ. ಮತಿಯ ಕೃಪಾಮಹಿಮೆಯಿಂದಲೇ ನಾವು ಮನುಷ್ಯತ್ವದಿಂದ ದೇವತ್ವಕ್ಕೆ ಏರಬೇಕಾಗಿದೆ. ಮತಿ ಮನುಷ್ಯತ್ವದ ಹಕ್ಕು. ಆದ್ದರಿಂದ, ಸಹೋದರರೇ, ಮತಿ ನಿಮ್ಮ ನೆಚ್ಚಿನ ರನ್ನದೀವಿಗೆಯಾಗಲಿ.

ಸ್ವಲ್ಪವಾಗಿಯೋ ಹೆಚ್ಚಾಗಿಯೋ ಮತಿ ಮನುಷ್ಯರೆಲ್ಲರಲ್ಲಿಯೂ ಇರುತ್ತದೆ. ಆದರೆ ಈಗೇನಾಗಿದೆ ಅದರ ಗತಿ ? ಮೌಢ್ಯದಿಂದಲೂ ಮತಾಚಾರಗಳಿಂದಲೂ ಸಮಾಜಭೀತಿಯಿಂದಲೂ ರಾಜಭಯದಿಂದಲೂ ಸ್ವರ್ಗ ನರಕ ದೇವಾನುದೇವತೆಗಳ ಮೋಹಮಾಯೆಗಳಿಂದಲೂ ಅದು ಸತ್ವರಹಿತವಾಗಿದೆ ; ಕಾಂತಿ ಹೀನವಾಗಿದೆ. ಚಕ್ರವರ್ತಿಯಂತೆ ಸಿಂಹಾಸನದಲ್ಲಿ ಮಂಡಿಸಬೇಕಾದುದು ತೊತ್ತಾಗಿ ಕಾಲೊತ್ತಬೇಕಾಗಿದೆ. ಎಂದರೆ ಮತಿಗೆ ಅಂಕುಶಗಳು ಅತಿಯಾಗಿ ಹೋಗಿ ಜೀವವೆ ನಿಸ್ತೇಜವಾಗಿದೆ. ಯುವಕಮಿತ್ರರೇ, ಅಧೋಗತಿಗಿಳಿದಿರುವ ನಮ್ಮ ಮತಿಯನ್ನು ಮತ್ತೆ ಆಕಾಶಕ್ಕೆತ್ತಬೇಕು.

ಮತಿಯನ್ನು ನಿಸ್ತೇಜಗೈದಿರುವ ಕೆಲವು ಅಂಶಗಳನ್ನು ವಿವರಿಸುತ್ತೇನೆ. ಸಾವಧಾನದಿಂದ ಕೇಳಿ.

ಮತ ನಮಗೊಂದು ದೊಡ್ಡ ಬಂಧನವಾಗಿದೆ : ನಾಡಿನ ಏಳ್ಗೆಯ ಕುತ್ತಿಗೆಗೆ ಉರುಳಾಗಿದೆ. ಪರಮಶಾಂತಿಯೂ ಪರಮಾನಂದವೂ ಆಗಿರುವ ಪರಮೇಶ್ವರನನ್ನು ಪಡೆಯಲೆಂದು ಜೀವ ಮಾಡುವ ಪ್ರಯತ್ನವೇ ಮತದ ನಿಜಾರ್ಥ. ಆದರೆ ಈಗ ನಾವು ಮತ ಎಂದು ಕರೆಸಿಕೊಳ್ಳುವ ಆಚಾರ

ಸಮೂಹ ಬರಿಯ ಸಾಮಾಜಿಕ ಕಟ್ಟುಕಟ್ಟಳೆಗಳ ಕಾಟವಾಗಿದೆ. ಒಬ್ಬರ ನ್ನೊಬ್ಬರು ಮುಟ್ಟದಿರುವುದು, ನೋಡದಿರುವುದು ; ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು; ನಾಮ ಹಾಕಿಕೊಳ್ಳುವುದು ; ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳು ವುದು, ಕೆಲವರನ್ನು ಸಾರ್ವಜನಿಕವಾದ ಬಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳ ದಂತೆ ಮಾಡುವುದು : ಕೆಲವರನ್ನು ದೇವಸ್ಥಾನದೊಳಕ್ಕೆ ಸೇರಿಸದಿರುವುದು ; ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತುಮಾರು ಮಾತ್ರ ಬರಗೊಡಿಸುವುದು; ಹಾಗೆ ಬರಗೊಡಿಸಬೇಕೇ ಬೇಡವೇ ಎಂದು ಚರ್ಚೆ ನಡೆಸುವುದು ; ಇತ್ಯಾದಿ ಕೆಲಸಕ್ಕೂ ಬಾರದ, ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ. ಉಪನಿಷತ್ತು, ಭಗವದ್ಗೀತೆ ಮತ್ತು ಮಹಾವಿಭೂತಿಗಳು ಸಾರಿದ ಮತ್ತು ಸಾರುತ್ತಿರುವ ಅಮೃತಸಂದೇಶ ಅರಣ್ಯರೋದನವಾಗಿದೆ.

ಆದರೆ ಇನ್ನು ಹೆಚ್ಚು ಕಾಲ ಆ ಅಮೃತಸಂದೇಶಕ್ಕೆ ಕಿವುಡಾಗಿರಲಾರೆವು. ಹಾಗಿದ್ದರೆ ನಮಗೂ ನಮ್ಮ ಸಂಸ್ಕೃತಿಗೂ ಮರಣವೇ ಗತಿಯಾಗುತ್ತದೆ. ಯುವಕರಾದವರು ಎಚ್ಚೆತ್ತುಕೊಂಡು ದೀರ್ಘದೃಷ್ಟಿಯಿಂದಲೂ ವಿಶಾಲ ಹೃದಯದಿಂದಲೂ ಸನಾತನವಾದರೂ ಚಿರನವೀನವಾದ ಆತ್ಮನ ಚಿರಂತನ 'ದರ್ಶನ'ವನ್ನು ಪಡೆದು ತಮ್ಮನ್ನೂ ದೇಶವನ್ನೂ ಉದ್ಧಾರಮಾಡಿಕೊಳ್ಳ ಬೇಕಾಗಿದೆ.

ಸರ್ವಮತಗಳಿಂದಲೂ ಶುದ್ಧಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು. ಆ ಗುರು, ಈ ಆಚಾರ್ಯ, ಆ ಧರ್ಮಶಾಸ್ತ್ರ, ಈ ಮನುಸ್ಮೃತಿ ಮೊದಲಾದುವು ಏನೇ ಹೇಳಲಿ ; ಎಲ್ಲವನ್ನೂ ವಿಮರ್ಶಿಸುವ ಪರೀಕ್ಷಿಸುವ, ಒರೆಗಲ್ಲಿಗೆ ಹಚ್ಚುವ ಹಕ್ಕು ನಮ್ಮದಾಗಿರುತ್ತದೆ. ಈಶ್ವರನು ನಮ್ಮಲ್ಲಿಯೂ ಇದ್ದಾನೆ. ಆತನ ಮಹಾಜ್ಯೋತಿಯ ಕಿರಣಗಳು ನಮ್ಮ ಬುದ್ಧಿಯಲ್ಲಿಯೂ ಪ್ರಕಾಶಿಸುತ್ತವೆ. ಆ ಪ್ರಕಾಶವೇ ಮತಿ. ಮತಿಯನ್ನು ತಿರಸ್ಕರಿಸಿದರೆ ಈಶ್ವರನ ಜ್ಯೋತಿಯನ್ನು ತಿರಸ್ಕರಿಸಿದಂತಾಗುತ್ತದೆ. ಹಾಗೆ ಮಾಡುವವನೇ ನಿಜವಾಗಿಯೂ ನಾಸ್ತಿಕನು. ಮೌಢ್ಯವೇ ಈಶ್ವರನಿಂದೆ. ತ್ರೀಮೂ ಯಾವ ರೂಪದಲ್ಲಿಯೇ ಆಗಲಿ, ಯಾವ ವೇಷದಲ್ಲಿಯೇ ಆಗಲಿ,

ತಿಳಿದೂ ಮೂಢತನವನ್ನು ಆರಾಧಿಸಿ, ಬೋಧಿಸಿ, ಲಾಭಪಡೆಯುತ್ತ ನೆಮ್ಮದಿಯಾಗಿರುವವನು ಪಾಷಂಡಿಯಾಗುತ್ತಾನೆ.

ಚತುರ್ಮುಖ ಬ್ರಹ್ಮನೇ ಸಾಕ್ಷಾತ್ತಾಗಿ ಬಂದು, ನಾನೀಗ ನಿಮ್ಮೊಡನೆ ಮಾತಾಡುತ್ತಿರುವಂತೆ, ಋಷಿಗಳಿಗೆ ವೇದಗಳನ್ನು ಉಪನ್ಯಸಿಸಿದೆನು ಎಂದು ಹೇಳಿದರೆ, ಕಣ್ಣುಮುಚ್ಚಿಕೊಂಡು ನಂಬಬೇಡಿ. ಯಾವ ಕಾಲದಲ್ಲಿಯೋ ಯಾವ ಸಮಾಜಕ್ಕಾಗಿಯೋ ಮನು ಬರೆದಿಟ್ಟ ಕಟ್ಟಳೆಗಳು ಇಂದಿಗೂ ನಮ್ಮನ್ನಾಳಬೇಕೆಂದು ಹೇಳಿದರೆ ತಲೆದೂಗಿಬಿಡಬೇಡಿ. ಆಗಿನ ಮನು ಪವಿತ್ರನಾದರೆ ಈಗಿನ ಮಹಾತ್ಮಗಾಂಧಿ ಪವಿತ್ರನಲ್ಲವೆ? ನಂಬುಗೆ ಪುರಾತನವಾದ ಮಾತ್ರಕ್ಕೆ ಸತ್ಯವಾದುದೆಂದು ಭಾವಿಸಬೇಡಿ. ವಿಜ್ಞಾನ ಪ್ರಪಂಚದಲ್ಲಿ ಹೊಸದಾಗಿ ಕಂಡು ಹಿಡಿದ ಸತ್ಯಗಳು ಹಳೆಯ ಅರ್ಧಸತ್ಯಗಳಿಗಿಂತಲೂ ಮಾನ್ಯವಾಗುವುದಾದರೆ ಧರ್ಮಪ್ರಪಂಚದಲ್ಲೇಕೆ ಹಾಗಾಗಬಾರದು? ವೇದ ಅನಾದಿಯಾದರೆ ಅನಂತವೂ ಆಗಿರುವುದಿಲ್ಲವೆ? ವೇದ ಪೂರೈಸಿದ ಗ್ರಂಥವಲ್ಲ; ವೇದದ ಕಟ್ಟಕಡೆಯ ಅಧ್ಯಾಯ ಅಂದಿಗೇ ಮುಗಿದಿಲ್ಲ. ಅದು ಇಂದಿಗೂ ನಾಳೆಗೂ ಮುಂದುವರಿಯುತ್ತದೆ. ಹಾಗೆಯೇ ಋಷಿಗಳೂ ಆಚಾರ್ಯರೂ ಅಂದಿಗೇ ಪೂರೈಸಿಲ್ಲ, ಕೊನೆಗಂಡಿಲ್ಲ; ಇಂದಿಗೂ ನಾಳೆಗೂ ಬರುತ್ತಲೇ ಇರುತ್ತಾರೆ. ಆದ್ದರಿಂದ ಹೊಸ ಋಷಿಗಳ ಹೊಸ ವೇದವಾಕ್ಯಗಳನ್ನು ಕಿವಿಗೊಟ್ಟು ಕೇಳಿ. ಸಂಕುಚಿತ ಬುದ್ಧಿಯನ್ನು ದೂರಮಾಡಿ. ಹೃದಯಜೀವನ ಹಳೆಯ ನೀರಿನ ಕೊಳವಾಗದಿರಲಿ; ಯಾವಾಗಲೂ ಹೊಸ ನೀರು ಬಂದು ಹರಿಯುತ್ತಿರುವ ಸ್ವಚ್ಛ ಸಲಿಲಸ್ರೋತವಾಗಿರಲಿ.

ಮಹನೀಯರೇ, ಕೆಲವು ಉದಾಹರಣೆಗಳನ್ನು ತೆಗೆದುಕೊಂಡರೆ ನನ್ನ ಆಶಯ ನಿಮಗೆ ಇನ್ನೂ ಸ್ಪಷ್ಟವಾಗುತ್ತದೆ. ಅಸ್ಫುಟವಾಗಿ ಅನಿರ್ದಿಷ್ಟವಾಗಿ ನಿರಾಕಾರವಾಗಿ ತತ್ತ್ವಪ್ರತಿಪಾದನೆ ಮಾಡುವುದಕ್ಕಿಂತ ದೃಷ್ಟಾಂತಗಳನ್ನೂ ನಿದರ್ಶನಗಳನ್ನೂ ತೆಗೆದುಕೊಂಡು ಭಾವವನ್ನು ವಿವರಿಸುವುದು ಮೇಲು.

ಮತಭ್ರಾಂತಿಯೂ ಮೌಢ್ಯವೂ ವೈಜ್ಞಾನಿಕ ಪ್ರಗತಿಗೆ ಹೇಗೆ ಮಹಾಕಂಟಕಗಳಾದುವು ಎಂಬುದಕ್ಕೆ ಪಾಶ್ಚಾತ್ಯ ದೇಶಗಳ ಕ್ರೈಸ್ತಧರ್ಮಚರಿತ್ರೆಯಲ್ಲಿ ಬೇಕಾದಷ್ಟು ನಿದರ್ಶನಗಳಿವೆ. ಅವುಗಳಲ್ಲಿ ಒಂದು, ಸುಪ್ರಸಿದ್ಧ ವಿಜ್ಞಾನಿಯಾಗಿದ್ದ ಗೆಲಿಲಿಯೋ ಎಂಬಾತನನ್ನು ಕುರಿತದ್ದು. ಕ್ರೈಸ್ತರಿಗೆ

ಬೈಬಲ್ ಪರಮ ಪ್ರಮಾಣವಾದ ಗ್ರಂಥ, ಹಿಂದೂಗಳಿಗೆ ವೇದಗಳಿರುವಂತೆ. ಆದ್ದರಿಂದ ಕ್ರೈಸ್ತಪುರೋಹಿತರೂ ಗುರುಗಳೂ ಭಕ್ತಜನರೂ ಬೈಬಲ್ಲಿಗೆ ವ್ಯತಿರಿಕ್ತವಾದುವೆಲ್ಲ ಪಾಷಂಡಮತವೆಂದು ಸಾರಿ, ಅಂತಹ ದುರ್ಮತಕ್ಕೆ ಕಾರಣರಾದವರನ್ನು ಜೀವಸಹಿತವಾಗಿ ಸುಡುವುದೇ ಮೊದಲಾದ ಶಿಕ್ಷೆಗಳಿಗೆ ಗುರಿಮಾಡುತ್ತಿದ್ದರು. ಎಷ್ಟೋ ಜನ ಸಾತ್ವಿಕ ಜೀವಿಗಳೂ ಮೇಧಾವಿಗಳೂ ಆದ ಸತ್ಯಾರಾಧಕರು ಬೈಬಲ್ಲಿಗೂ ಮತ್ತು ಕ್ರೈಸ್ತಗುರುಸಂಪ್ರದಾಯಕ್ಕೂ ವ್ಯತಿರಿಕ್ತವಾದ ಖಗೋಲ ಶಾಸ್ತ್ರ, ಜೀವಶಾಸ್ತ್ರ ಮತ್ತು ಭೌತಶಾಸ್ತ್ರಗಳ ಅಮೂಲ್ಯ ಸತ್ಯಗಳನ್ನು ಕಂಡು ಹಿಡಿದು ಹೇಳಿದುದರ ಫಲವಾಗಿ ಆ ಪುರೋಹಿತರ ಕ್ರೋಧಾಗ್ನಿಗೆ ಸಿಕ್ಕಿ ಭಸ್ಮೀಭೂತರಾಗಬೇಕಾಯಿತು.

ಗೆಲಿಲಿಯೊ ಎಂಬಾತನು ದೂರದರ್ಶಕ ಯಂತ್ರವನ್ನು ಕಂಡುಹಿಡಿದು, ಗ್ರಹ ಚಂದ್ರ ತಾರೆಗಳನ್ನು ನೋಡಿ ಪರೀಕ್ಷಿಸಿದುದರ ಫಲರೂಪವಾಗಿ ಭೂಮಿ ಇತರ ಗ್ರಹಗಳಂತೆ ಸೂರ್ಯನ ಸುತ್ತ ಸುತ್ತುತ್ತದೆ ಎಂದು ಪ್ರಯೋಗಪೂರ್ವಕವಾಗಿ ಸಿದ್ಧಾಂತ ಮಾಡಿದನು. ಆದರೆ ಕ್ರೈಸ್ತ ಸಂಪ್ರದಾಯಕ್ಕನುಸಾರವಾಗಿ ಭೂಮಿ ಜಗತ್ತಿನ ಕೇಂದ್ರಸ್ಥಾನ; ಸೂರ್ಯ ನಕ್ಷತ್ರಗಳೆಲ್ಲ ಭೂಮಿಯ ಸುತ್ತ ಸುತ್ತುತ್ತವೆ. ಆ ಕಾರಣದಿಂದಲೇ ಕ್ರೈಸ್ತಗುರುಗಳು ಗೆಲಿಲಿಯೊನನ್ನು ಪಾಷಂಡಿಯೆಂದು ಸಾರಿ ವಿಚಾರಣೆಗೆ ಒಳಪಡಿಸಿದರು. ಮುಖ್ಯಾಳರೆಲ್ಲ ಸೇರಿ ಮೇಧಾವಿಯನ್ನು ಕುರಿತು ಹೀಗೆ ಹೇಳಿದರು: "ನಮ್ಮ ಪವಿತ್ರ ಧರ್ಮಶಾಸ್ತ್ರ ಭೂಮಿಯೆ ವಿಶ್ವದ ಕೇಂದ್ರವೆಂದು ಹೇಳುತ್ತದೆ. ಸೂರ್ಯ ಚಂದ್ರ ನಕ್ಷತ್ರಗಳೆಲ್ಲ ದೇವರು ತನ್ನ ಮಕ್ಕಳಾದ ಮನುಷ್ಯರ ಪ್ರಯೋಜನಕ್ಕಾಗಿ ಆಕಾಶದಲ್ಲಿಟ್ಟಿರುವ ಅಲಂಕಾರ ದೀಪಗಳು. ಅವು ಭೂಮಿಯ ಸುತ್ತ ಸುತ್ತುತ್ತವೆ. ಭೂಮಿ ತನಗಿಂತಲೂ ಬಹುಪಾಲು ದೊಡ್ಡದಾಗಿರುವ ಸೂರ್ಯನ ಸುತ್ತಲೂ ಸುತ್ತುವ ಅನೇಕ ಗ್ರಹಗಳಲ್ಲಿ ಒಂದು ಸಣ್ಣ ಯಃಕಶ್ಚಿತ ಗ್ರಹಮಾತ್ರವೆಂದು ಸಿದ್ಧಾಂತ ಮಾಡಿ ನಮ್ಮನ್ನು ಸೃಷ್ಟಿಸಿದ ಕರುಣಾಮಯನಾದ ಸೃಷ್ಟಿಕರ್ತನಿಗೂ ಆತನ ವಾಣಿಗೂ ಆತನ ಭಕ್ತರಿಗೂ ಅಪಮಾನ ಮಾಡಿದ್ದೀಯೆ. ಅಲ್ಲದೆ ನೀನು ಹೇಳುವುದು ಬೈಬಲ್ಲಿಗೆ ವ್ಯತಿರಿಕ್ತವಾದುದರಿಂದ ಅದು ಸುಳ್ಳು. ನೀನು ಸಿದ್ಧಾಂತವನ್ನು ವಾಪಸು ತೆಗೆದುಕೊಂಡು ನಮ್ಮ ಪವಿತ್ರಮತ ಹೇಳುವ ಸಿದ್ಧಾಂತವನ್ನು ಒಪ್ಪಿಕೊಳ್ಳದಿದ್ದರೆ, [illegible] ಉದ್ಧಾರಕ್ಕಾಗಿಯೂ

ಬೈಬಲ್ಲಿನ ಗೌರವಾರ್ಥವಾಗಿಯೂ ಪಾಷಂಡಿಗಳಿಗೆ ಭೀತಿ ಹುಟ್ಟಿಸುವ ಸಲುವಾಗಿಯೂ ಸೃಷ್ಟಿಕರ್ತನ ಮಹಿಮೆ ಪೂಜೆಗಳಿಗಾಗಿಯೂ ನಿನ್ನ ಆತ್ಮದ ಪ್ರಾಯಶ್ಚಿತ್ತ ಮತ್ತು ಮೋಕ್ಷಾರ್ಥವಾಗಿಯೂ ನಿನ್ನನ್ನು ಜೀವಸಹಿತವಾಗಿ ಸುಡುತ್ತೇವೆ! ಹೇಳು! ನಿನ್ನ ಸಿದ್ಧಾಂತವನ್ನು ವಾಪಸು ತೆಗೆದುಕೊಳ್ಳುತ್ತೀಯೋ! ಜೀವಸಹಿತವಾಗಿ ಸುಡಿಸಿಕೊಳ್ಳುತ್ತೀಯೊ?"

ಗೆಲಿಲಿಯೊಗೆ ಚೆನ್ನಾಗಿ ಗೊತ್ತು. ತನ್ನ ಸಿದ್ಧಾಂತವೇ ಸರಿ ಎಂದು ಅದರೆ ವಾಪಸು ತೆಗೆದುಕೊಳ್ಳದಿದ್ದರೆ, ಹಿಂದೆ ಕೆಲವರನ್ನು ಸುಟ್ಟಹಾಗೆ ತನ್ನನ್ನೂ ಸುಡುತ್ತಾರೆ ಎಂದೂ ಆತನಿಗೆ ಚೆನ್ನಾಗಿ ಗೊತ್ತು. ಆದ್ದರಿಂದ ಮುಟ್ಠಾಳರ ತೃಪ್ತಿಗಾಗಿ ತನ್ನ ಸಿದ್ಧಾಂತವನ್ನು ವಾಪಸು ತೆಗೆದುಕೊಂಡು ಅವರ ಸಿದ್ಧಾಂತವೇ ಸರಿಯೆಂದು ಒಪ್ಪಿ ಬಿಡುಗಡೆ ಪಡೆದನು. ಆದರೆ ಕೋರ್ಟಿನಿಂದ ಹೊರಗೆ ಬರುವಾಗ ತನ್ನಷ್ಟಕ್ಕೆ ತಾನೇ "ನಾನು ನೋಪಿ ನವರಿ ವಾಪಸು ತೆಗೆದುಕೊಂಡರೇನಾಯಿತು? ಭೂಮಿ ಸೂರ್ಯನ ಸುತ್ತ ಸುತ್ತಿಯೇ ಸುತ್ತುತ್ತದೆ" ಎಂದುಕೊಂಡನಂತೆ. ಹೀಗೆ ಮತಿಹೀನವಾದ ಮತಜ್ಞಾನವ ಪ್ರಗತಿಗೆ ಅಡಚಣೆಯಾಗಿರುವುದಕ್ಕೆ ಸಾವಿರಾರು ನಿದರ್ಶನಗಳು ಹಿಂದೆಯೂ ಸಿಕ್ಕುತ್ತವೆ; ಇಂದೂ ದೊರೆಯುತ್ತವೆ.

ಕೆಲವು ತಿಂಗಳ ಹಿಂದೆ ಪತ್ರಿಕೆಯೊಂದರಲ್ಲಿ ಯಾರೋ ಒಬ್ಬರ ಯಾವುದೋ ದೇವತೆ ಯಾವುದೋ ತೋಟದಲ್ಲಿ ಕಾಣಿಸಿಕೊಂಡಂತೆಯೂ ಆ ದೇವತೆ "ಎಲ್ಲರೂ ಇಂತಿಷ್ಟು ದಿನಗಳ ಒಳಗಾಗಿ ಉಗಾದಿ ಹಬ್ಬವನ್ನು ಮಾಡದಿದ್ದರೆ ಮನೆಮನೆಗೂ ಒಂದೊಂದು ಜೀವವನ್ನು ಅಪಹರಿಸುತ್ತೇನೆ ಎಂದು ಹೇಳಿದ ಹಾಗೂ ಪ್ರಕಟವಾಗಿದ್ದಿತು. ಮಾಡಬೇಕಾದ ನೈವೇದ್ಯದ ವಿವರವು ಪ್ರಮಾಣವೂ ಕೂಡ ಅಚ್ಚಾಗಿತ್ತು. ಅನೇಕರು ದೇವರಿಗೇ ಹ[illegible] ಮಾಡಿಕೊಂಡು ತಿಂದರು. ಹಬ್ಬ ಮಾಡಿಕೊಂಡು ತಿಂದುದರಿಂದ ಅಪಾಯವಿಲ್ಲ. ಆದರೆ ಅಂತಹ ಮೂಢಭಾವನೆಗಳ ಪ್ರಚಾರ ದುಷ್ಪರಿಣಾಮಕಾರಿ ಬೀರದಿದ್ದೀತೇ? [illegible] ಹಳ್ಳಿಗಳಲ್ಲಿ ಪತ್ರಿಕೆಗಳಿಂದರೆ ವೇದವಾಗಿದೆ. ಪತ್ರಿಕೆಗಳಲ್ಲಿ ಬಂದಿದೆ ಎಂದರೆ ಏನನ್ನು ಬೇಕಾದರೂ ನಂಬುತ್ತಾ[illegible] ಧರ್ಮಶಾಸ್ತ್ರಗಳಲ್ಲಿ ಹೇಳಿದೆ ಎಂದರೆ ಎಂತಹ ಕ್ರೂರಕರ್ಮವನ್ನಾದ[illegible] ಏನು ಹೇಳುವುದು! [illegible] ಅನಾಗರಿಕತ್ವ [illegible] ನಮಗೆ [illegible]

ಶ್ಲೋಕಗಳಲ್ಲಿರುವಂತೆ. ದುಡ್ಡು ಇದ್ದರೆ ಸರಿ. 'ಮೊಲಕ್ಕೆ ಮೂರು ಕೊಂಬುಗಳ ತುದಿಯಲ್ಲಿ ಕಣ್ಣುಗಳಿವೆ' ಎಂದು ಬೇಕಾದರೂ ಅಚ್ಚು ಮಾಡಬಹುದು ಎಂಬ ಸಂಗತಿ, ಪಾಪ, ಆ ಹಳ್ಳಿಗರಿಗೇನು ಗೊತ್ತು ?

ಹಾಗೆಯೇ ಪರ್ಜನ್ಯ ಜಪಮಾಡಿ ಮಳೆ ಬರಿಸಿದವರು ಎನ್ನುವ ವಿಷಯ. ಅದನ್ನು ಕುರಿತು ಎಷ್ಟು ಮಂದಿ ನಿಷ್ಪಕ್ಷಪಾತವಾಗಿ ಧೀರಮತಿಯಿಂದ ಆಲೋಚಿಸಿದ್ದಾರೆ? ಸಹರಾ ಮರುಭೂಮಿಗೆ ಪುರೋಹಿತರನ್ನು ಕಳುಹಿಸಿ ಪರ್ಜನ್ಯ ಜಪ ಮಾಡಿಸಿದರೆ ಮಳೆ ಬಂದು ಅದು ಫಲವತ್ತಾಗುತ್ತದೆಯೇ ? ಆಗುತ್ತದೆ ಎಂದು ನಿರ್ಣಯವಾಗುವವರೆಗೆ ನಂಬುಗೆ ಕುದುರಬಲ್ಲವೆ ? ಹೃತ್ಪೂರ್ವಕವಾದ ಪ್ರಾರ್ಥನೆಯಿಂದ ಪ್ರಕೃತಿನಿಯಮಗಳು ಮನಕರಗುತ್ತವೆಯೇ ? ಒಂದು ವೇಳೆ ಕರಗುವುದಾದರೂ ರೈತಾದಿ ಜನಗಳು ಮನೆ ಮನೆಯಲ್ಲಿಯೂ ಮೂರು ಹೊತ್ತೂ 'ಭಗವಂತ, ಮಳೆಯನ್ನು ದಯಪಾಲಿಸು' ಎಂದು ಬೇಡುವ ಆರ್ತಧ್ವನಿಗಿಂತಲೂ ದುಡ್ಡು ಕೊಟ್ಟು ಮಾಡಿಸುವ ಜಪಕ್ಕೆ ಜಗಚ್ಛಕ್ತಿ ಹೆಚ್ಚಾಗಿ ಕೃಪೆತೋರುತ್ತದೆಯೆ ? ಯುವಕರೆಲ್ಲರೂ ಇಂತಹ ಪ್ರಶ್ನೆಗಳನ್ನು ಧೀರವಾಗಿ ಕೇಳಿಕೊಳ್ಳಬೇಕು. ಧೀರವಾದ ಉತ್ತರಗಳನ್ನು ಕಂಡುಹಿಡಿದುಕೊಳ್ಳಬೇಕು.

ಏಕೆಂದರೆ ಇಂದು ಪರ್ಜನ್ಯಜಪ ಮಾಡಿ ಮಳೆ ಬರಿಸಿದವರು ನಾಳೆ ರಾಮಧ್ಯಾನಮಾಡಿ ಪ್ಲೇಗು ಓಡಿಸಲಾರರೆ ಎಂದು ಮೂಢರು ಆ ರೋಗಕ್ಕೆ ಬೇಕಾಗುವ ವೈದ್ಯಕಾರ್ಯಗಳನ್ನು ಮಾಡದೆ ನಾಶವಾಗಬಹುದು ! ಅಂತಹ ಮೌಢ್ಯದಿಂದ ನಾಶವಾಗುತ್ತಿರುವುದನ್ನು ನಾವು ಕಣ್ಣಾರೆ ಕಾಣಬಹುದು. ಉದ್ದೇಶ ಎಷ್ಟೇ ಶ್ಲಾಘ್ಯವಾಗಲಿ, ಅದು ತಿಳಿವಳಿಕೆಯಿಂದ ಕೂಡಿರದಿದ್ದರೆ ಅಪಾಯವಾಗುತ್ತದೆ. ಒಂದು ಪಟ್ಟಣದಲ್ಲಿ ಸಿಡುಬುರೋಗ ತಲೆದೋರಿ ಎಲ್ಲೆಲ್ಲಿಯೂ ಜನರು ಸಾಯುತ್ತಿದ್ದರಂತೆ. ಆ ನಗರದ ದೊಡ್ಡ ಪಾದ್ರಿ ಸಿಡುಬಿನ ರೋಗವನ್ನು ಓಡಿಸುವುದಕ್ಕೆಂದು ಜನರನ್ನೆಲ್ಲ ಚರ್ಚಿನಲ್ಲಿ ಒಟ್ಟುಗೂಡಿಸಿ ದೇವರ ಪ್ರಾರ್ಥನೆ ಮಾಡಿಸಿದನಂತೆ. ಆದರೆ ಆ ಗುಂಪಿನಲ್ಲಿ ಸಿಡುಬಿನ ಸೋಂಕು ತಗುಲಿದವರು ಇದ್ದುದರಿಂದ, ಜನರು 'ಸಿಡುಬಿನಿಂದ ಪಾರು ಮಾಡು' ಎಂದು ದೇವರನ್ನು ಬೇಡುತ್ತಿದ್ದಾಗಲೇ ಆ ಭಯಂಕರ ರೋಗ ನೆರೆದವರಲ್ಲಿ ಒಬ್ಬರಿಂದೊಬ್ಬರಿಗೆ ಹರಡುತ್ತಿತ್ತು. ಇಲ್ಲಿ ಪಾದ್ರಿಯ ಮತ್ತು ಜನರ

ಉದ್ದೇಶ ಸದ್ಭಾವದಿಂದ ಕೂಡಿದ್ದರೂ ಸಿಡುಬಿನ ರೋಗದ ವಿಚಾರವಾಗಿದ್ದ ಅವರ ಅಜ್ಞಾನ ಆ ಸದುದ್ದೇಶವನ್ನೆ ಅದು ಭಯಂಕರ ವ್ಯಾಪಾರಕ್ಕೆ ಕಾರಣವಾಗುವಂತೆ ಮಾಡಿತು. ಅಂತಹ ಅನಾಹುತಗಳಿಂದ ಜನರನ್ನು ಪಾರುಮಾಡಬೇಕಾದರೆ ಅವರ ಕೈಗೆ ಮತಿಯ ದೀವಿಗೆಯನ್ನು ಕೊಡಬೇಕು. ಅವರಲ್ಲಿ ಪರೀಕ್ಷಿಸುವ ಬುದ್ಧಿಯೂ ವಿಮರ್ಶಿಸುವ ಧೈರ್ಯವೂ ಉದ್ಭವಿಸುವಂತೆ ಮಾಡಬೇಕು. "ಅವಿದ್ಯಾಯಾ ಮಂತರೇ ವರ್ತಮಾನಾಃ ಸ್ವಯಂ ಧೀರಾಃ ಪಂಡಿತಂ ಮನ್ಯಮಾನಾಃ । ದಂದ್ರಮ್ಯಮಾಣಾಃ ಪರಿಯಂತಿ ಮೂಢಾ ಅಂಧೇನೈವ ನೀಯಮಾನಾಯಥಾಂಧಾಃ ॥ ಅವಿದ್ಯೆಯ ಮಧ್ಯೆ ಬಿದ್ದುಕೊಂಡಿದ್ದರೂ ತಾವು ಬುದ್ಧಿವಂತರೆಂದೂ ಪಂಡಿತರೆಂದೂ ಭ್ರಮಿಸಿ, ಕುರುಡರಿಂದ ನಡೆಯಿಸಲ್ಪಡುವ ಕುರುಡರಂತೆ, ಅಜ್ಞಾನಿಗಳು ಕಷ್ಟಕ್ಕೀಡಾಗಿ ತೊಳಲುತ್ತಾರೆ" ಎಂದು ಹೇಳುವ ಉಪನಿಷತ್ತಿನ ಎಚ್ಚರಿಕೆಗೆ ಕಿವಿಗೊಡಬೇಕು.

ಹಾಗೆಯೇ 'ದೇವಾಲಯದ ಪ್ರವೇಶ'ದ ಪ್ರಶ್ನೆ—ಮುಂತಾದವುಗಳನ್ನು ಕೆಚ್ಚಿನಿಂದ ಮತಿಯ ಒರೆಗಲ್ಲಿಗೆ ಹಚ್ಚಿನೋಡಬೇಕು. ಮೊನ್ನೆ ಪತ್ರಿಕೆಗಳಲ್ಲಿ ನಾನು ಓದಿದೆ. ಒಬ್ಬರು ಕೃತವಿದ್ಯರಾದ ಗೌರವಸ್ಥರು ದೇವಾಲಯಕ್ಕೆ ಹೋಗಿ ಬಂದುದಕ್ಕೆ ಪ್ರತಿಯಾಗಿ ಸಂಪ್ರೋಕ್ಷಣೆಗೆ ಜುಲುಮಾನೆ ಕೊಡಬೇಕಾಗಿ ಬಂದಿತಂತೆ. ಕಾರಣ, ಅವರು ಅಸ್ಪೃಶ್ಯರ ಜಾತಿಗೆ ಸೇರಿದವರಂತೆ. ಅವರಿಗಿಂತಲೂ ಮೂಢರೂ ಕೊಳಕರೂ ದುಷ್ಟರೂ ರೋಗಿಗಳೂ ದುರಾಚಾರಿಗಳೂ ಆದ 'ಸ್ಪೃಶ್ಯ'ರೆಂದೆನಿಸಿಕೊಂಡವರು ಗುಡಿಯೊಳಗೆ ಹೋದರೆ ಮೈಲಿಗೆಯಾಗುವುದಿಲ್ಲವಂತೆ! 'ಸ್ಪೃಶ್ಯ' ಯುವಕರು ತಮ್ಮ ಸಹೋದರನಿಗಾದ ಅವಮಾನ ತಮ್ಮದೆಂದು ಭಾವಿಸಿ ದೇವಾಲಯಗಳಿಗೆ ಹೋಗುವುದನ್ನೇ ಬಿಟ್ಟು ಹೊರಗೆ, ಪ್ರಕೃತಿ ಸೌಂದರ್ಯದಲ್ಲಿ, ಉದಯಿಸುವ ಸೂರ್ಯನಲ್ಲಿ, ಸಾಹಿತ್ಯದಲ್ಲಿ, ಸಂಸ್ಕೃತಿಯಲ್ಲಿ, ದರಿದ್ರನಾರಾಯಣನ ಸೇವೆಯಲ್ಲಿ ತಮ್ಮ ದೇವಾಲಯಗಳನ್ನು ಕಟ್ಟಿಕೊಂಡು, ಮತದ ಅನೌದಾರ್ಯವನ್ನು ಮುರಿಯಬೇಕು. ಅಸ್ಪೃಶ್ಯ ಯುವಕರಾದವರಿಗೆ ನನ್ನದೊಂದು ಬಿನ್ನಹ. ನೀವು ಅವಮಾನಿಸಿಕೊಂಡು ದೇವಾಲಯಕ್ಕೆ ಹೋಗದಿದ್ದರೆ ಏನಾಗುತ್ತದೆ? ಗುಡಿಯ ಕಲ್ಲಿನಲ್ಲಿ ದೇವರಿದ್ದಾನೆ ಎಂಬ ಭ್ರಾಂತಿ ನಿಮಗೇಕೆ? 'ಪ್ರಭುಲಿಂಗಲೀಲೆ'ಯಲ್ಲಿ ಸತ್ಯ

ಸಾಕ್ಷಾತ್ಕಾರದ ಕಾರ್ಯವನ್ನು ಬಿಟ್ಟು ಕೀರ್ತಿಪೂಜಾಲಾಭದಾಸೆಗೆ ದೇವಸ್ಥಾನ ವನ್ನು ಕಟ್ಟಿಸುತ್ತಿದ್ದ ಸಿದ್ಧರಾಮನನ್ನು ಕುರಿತು ಅಲ್ಲಮನು—

ಸಕಲ ಕಲ್ಲನು ಕಡಿದು, ಕಳ್ಳಿಗೆ
ಶಿಖರ ದೇಗುಲವೆಂದು ಮಾಡಿಸಿ,
ಮುಕರಿಸುವರಿವರೊಡ್ಡರಲ್ಲದೆ ಸಿದ್ಧರಲ್ಲ—

ಎಂದಿದ್ದಾನೆ. ಒಡ್ಡತನದ ಕೆಲಸವನ್ನು ನಾವೇಕೆ ಮಾಡಬೇಕು! ಗುಡಿಯೊಳಗೆ ಹೋಗಿ ಮತದ ಮೌಢ್ಯಕ್ಕೂ ಪುರೋಹಿತರ ಸುಲಿಗೆಗೂ ಒಳಗಾಗುವುದ ಕ್ಕಿಂತ ದೂರವಾಗಿದ್ದುಕೊಂಡು ಎಡೆಯ ದೇಗುಲದಲ್ಲಿಯೇ ಈಶ್ವರನನ್ನು ಇನ್ನಷ್ಟು ಅತಿಶಯವಾದ ಭಾವಭಕ್ತಿಯಿಂದ ಪೂಜಿಸಬಾರದೆ? ಅಸ್ಪೃಶ್ಯ ರನ್ನು ದೇವಾಲಯಗಳಿಗೆ ಪ್ರವೇಶಮಾಡಲು ಬಿಡಬೇಕೆಂದು ಹೇಳುತ್ತಿರುವುದು ಉಚ್ಚವರ್ಗದ ಹಿಂದುಗಳ ಪರಿಶುದ್ಧತೆಗಾಗಿ ಮತ್ತು ದೃಷ್ಟಿವೈಶಾಲ್ಯ ಸಾಧನೆ ಗಾಗಿಯೇ ಹೊರತು ಹರಿಜನರ ಮೋಕ್ಷಕ್ಕಾಗಿಯಲ್ಲ. ಹೊರಗಿನ ಸುಂದರ ಪ್ರಕೃತಿಮಯ ಜಗತ್ತೂ ಅಂತರಂಗದ ದಿವ್ಯಭಾವಗಳ ಪ್ರಪಂಚವೂ ಸರ್ವರಿಗೂ ಸುಲಭವಾದ ಮಹಾಪುರುಷರ ಕೃತಿಗಳಲ್ಲಿರುವ ಮಹದಾಲೋಚನೆ ಗಳೂ ನಮಗೆ ದೇವಸ್ಥಾನ, ಪೂಜೆ, ಗುರು, ಮಂತ್ರ ಇವುಗಳೆಲ್ಲವೂ ಆಗಲಿ: ಪ್ರಯತ್ನಿಸುವವರಿಗೆಲ್ಲ ಆ 'ದರ್ಶನ' ಲಭಿಸುವುದರಲ್ಲಿ ಸಂದೇಹವಿಲ್ಲ. ಅದು ಸಿದ್ಧಿಸುವವರೆಗೂ ನಮಗಾಗಲಿ ನಮ್ಮ ದೇಶಕ್ಕಾಗಲಿ ಮೋಕ್ಷವಿಲ್ಲ, ಸುಖವಿಲ್ಲ! ಶಾಂತಿಯಿಲ್ಲ, ದಾಸ್ಯದಿಂದ ಬಿಡುಗಡೆಯಿಲ್ಲ.

ಆದ್ದರಿಂದ ಯುವಕ ಸಹೋದರರೇ, ಯಾವ ಒಂದು ಸಂಪ್ರದಾಯದ ಸಂಕೋಚಕ್ಕೂ ಸಿಕ್ಕಿಕೊಳ್ಳಬಾರದು. ಯಾವ ಒಂದು ಸಂಘದ ಇಕ್ಕಟ್ಟಿಗೂ ಒಳಗಾಗಬಾರದು. ಸರ್ವಧರ್ಮಗಳ ಸಾರವಾದ ಉದಾರ 'ದರ್ಶನ'ವೊಂದನ್ನು ಕಂಡು, ಕಟ್ಟಿಕೊಂಡು ಬಾಳಬೇಕು, ಜಾತಿ ಮತ ದೇಶ ಕಾಲಗಳ ಭೇದವಿಲ್ಲದೆ ಎಲ್ಲ ಮಹಾಪುರುಷ ಜ್ಞಾನಗಂಗೆಗಳ ಸಂಗಮದಲ್ಲಿ ತೀರ್ಥಸ್ನಾನ ಮಾಡಿ ಪೂರ್ಣ ಜೀವನವನ್ನು ಪೂರ್ಣವಾಗಿ ಅನುಭವಿಸಬೇಕು.

ಸೋದರರೇ, ಅಂತಹ 'ದರ್ಶನ'ದ ಸಂಪಾದನೆ ಅಷ್ಟೇನೂ ದುಸ್ಸಾಧ್ಯ ವಲ್ಲ. ಮತಭ್ರಾಂತಿಯನ್ನು ಬಿಟ್ಟು ಮತಿಯ ದೀವಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಹೊರಡುವ ಸರ್ವರಿಗೂ ಅದು ಸುಲಭಸಾಧ್ಯ.

ಆ 'ದರ್ಶನ'ವನ್ನು ಪಡೆದ ಮೇಲೆ ನಮಗೆ ದೇವಸ್ಥಾನಗಳ ಅವಶ್ಯಕತೆ ಇರುವುದಿಲ್ಲ. ದೇವದೇವನ ಶರೀರರೂಪಿಯಾದ ಜಗತ್ತೆಲ್ಲವೂ ದೇವಸ್ಥಾನವಾಗುತ್ತದೆ. ಅಸ್ಪೃಶ್ಯರೆಂದು ಪರಿಗಣಿತರಾಗಿರುವ ಈಶ್ವರ ಶಿಶುಗಳು ಕಲ್ಲು ಕಟ್ಟಡದ ದೇವಸ್ಥಾನಗಳಿಗೆ ಹೋಗಿ ಭಕ್ತಿಪ್ರದರ್ಶನ ಮಾಡಿದ ಪಾಪಕ್ಕೆ ಆಮೇಲೆ ಸಂಪ್ರೋಕ್ಷಣೆಗಾಗಿ ಜುಲುಮಾನೆ ಕೊಡುವುದೂ ತಪ್ಪುತ್ತದೆ.

ಇಂತಹ ದಿವ್ಯ 'ದರ್ಶನ'ದ ಪ್ರಾಪ್ತಿಗಾಗಿ ನಮಗೆ ಬೇಕಾಗುವ ಧೀರ, ಸ್ವತಂತ್ರ, ಉದಾರ ಪ್ರತಿಭಾಪೂರ್ಣವಾದ ಬುದ್ಧಿಯನ್ನೇ ನಾನು 'ನಿರಂಕುಶ ಮತಿ' ಎಂದು ಕರೆದಿದ್ದೇನೆ. ಆದ್ದರಿಂದ ತಮ್ಮ ಮತ್ತು ಜಗತ್ತಿನ ಶ್ರೇಯಸ್ಸನ್ನು ಕೋರುವ ಯುವಕರೆಲ್ಲರೂ 'ನಿರಂಕುಶಮತಿ'ಗಳಾಗಬೇಕು.

'ನಿರಂಕುಶಮತಿ'ಗಳಾಗಬೇಕಾದರೆ ದಾಸ್ಯಬುದ್ಧಿ ತೊಲಗಬೇಕು ; ದಾಸ್ಯ ಬುದ್ಧಿ ತೊಲಗಬೇಕಾದರೆ ಸ್ವತಂತ್ರವಾಗಿ ಜೀವಿಸಲು ಪ್ರಯತ್ನಿಸಬೇಕು ; ಎಂದರೆ ಸ್ವಾವಲಂಬನೆ ಬೇಕು ಎಂದರೆ ಇನ್ನೊಬ್ಬರ ಕೈ ಹಾರೈಸಿ ಹೊಟ್ಟೆ ಹೊರೆಯುವುದು ತಪ್ಪಬೇಕು. ಮುಚ್ಚುಮರೆಯಿಲ್ಲದೆ ಬಿಚ್ಚಿ ಹೇಳುವುದಾದರೆ, ಸಂಪತ್ತು ಬೇಕು, ಹಣಬೇಕು, ಉದ್ಯೋಗಬೇಕು. ಮಿತ್ರರೇ, ನಾನು ಒಪ್ಪಿಕೊಳ್ಳುತ್ತೇನೆ, ಈ ಸಮಸ್ಯೆ ನಿಜವಾಗಿಯೂ ಕಗ್ಗಂಟಾಗಿದೆ. ಆ ಸಮಸ್ಯೆಯನ್ನು ಪರಿಹರಿಸಲೆಂದೇ ದೇಶದ ನಾಯಕರೆಲ್ಲರೂ ಕಷ್ಟಪಡುತ್ತಿದ್ದಾರೆ. ಆಶಾಬುದ್ಧಿಯಿಂದ ಅವರ ಉದ್ಯಮದಲ್ಲಿ ನಾವೂ ಭಾಗಿಗಳಾಗಿ ಇಂದಿನ ತಪಸ್ಸು ಮುಂದಿನ ಸತ್ಫಲಕ್ಕೆ ಮಾರ್ಗವೆಂದು ಶ್ರದ್ಧೆಯಿಂದ ಮುಂದುವರಿಯಬೇಕಾಗಿದೆ. ಸಮಸ್ಯೆಯ ಅಗಾಧತೆ ನಮ್ಮ ಮುಂದಿರುವ ಸಾಹಸದ ಆಳ ಅಗಲಗಳನ್ನು ಸೂಚಿಸುತ್ತದೆ.

ಆದರೂ ಪಾರಾಗಲು ಕೆಲವು ಸೂಚನೆಗಳನ್ನು ಕೊಡಬಹುದು. ಹೀಗೆಯೇ ಮಾಡಿ ಎಂದು ಇತಿವಿಧಿಗಳನ್ನು ಸೂಚಿಸುವುದು ಕಷ್ಟಸಾಧ್ಯವಾದರೂ ಹೀಗೆ ಮಾಡದಿದ್ದರೆ ಒಂದಿಷ್ಟು ಲೇಸಾಗಬಹುದೆಂದು ನೇತಿ ವಿಧಾನವನ್ನಾದರೂ ಹೇಳಲು ಸಾಧ್ಯ.

ಕೃತವಿದ್ಯರಾದ ಯುವಕರು ನಾಗರಿಕತೆಯ ಮೆರುಗಿಗೆ ಮನಸೋತು ಪಟ್ಟಣಗಳನ್ನು ಸೇರುತ್ತಾರೆ. ಅಲ್ಲಿಯೂ ಕೂಡ ಅವರು ಕೈಕೊಳ್ಳುವ ವೃತ್ತಿ ಸ್ವಲ್ಪ ಹೆಚ್ಚು ಕಡಮೆ 'ಉತ್ಪತ್ತಿಕಾರಕ'ವಾಗಿರುವುದಿಲ್ಲ ; 'ಸಂಗ್ರಹ

ಕಾರಕವಾಗಿರುತ್ತದೆ. ಹಾಗೆ ಮಾಡುವುದರಿಂದ ಹಲಕೆಲವರಿಗೆ ಅವರವರ ಮಟ್ಟಿಗೆ ಸಮೃದ್ಧಿಯಾಗಬಹುದು. ಆದರೆ ಎಲ್ಲರೂ ಎಷ್ಟು ಕಾಲ ತಾನೆ ಸಂಪತ್ತನ್ನು ಸೃಷ್ಟಿಸದೆ ಸಂಗ್ರಹಿಸುತ್ತಲೆ ಹೋಗಲಾಗುತ್ತದೆ? ಆದ್ದರಿಂದ ಮೇಧಾವಿಗಳಾದ ಯುವಕರು ತಮಗೆ ನವನಾಗರಿಕತೆಯ ಮಾಯಾಸ್ಮಿತ ರುಚಿ ದೊರಕೊಳ್ಳದಿದ್ದರೂ ಚಿಂತೆಯಿಲ್ಲ ಎಂದುಕೊಂಡು, ಗ್ರಾಮಗಳಲ್ಲಿಯ ಸಿಂತು ಜನರ ಆಧ್ಯಾತ್ಮಿಕ ಅಜ್ಞಾನವನ್ನೂ ಆಧಿದೈವಿಕ ಮೌಢ್ಯವನ್ನೂ ಆಧಿಭೌತಿಕ ಕಷ್ಟನಷ್ಟಗಳನ್ನೂ ಪರಿಹರಿಸಲು ಪ್ರಯತ್ನಿಸುವ ತಪಸ್ಸನ್ನು ಕೈಕೊಳ್ಳಬೇಕು.

ಮತದ ಹೆಸರಿನಲ್ಲಿ, ಸಮಾಜದ ಕಟ್ಟುಕಟ್ಟಳೆಗಳ ಹೆಸರಿನಲ್ಲಿ, ದೆವ್ವ ಪಿಶಾಚಿ ಗ್ರಹಗಳ ಹೆಸರಿನಲ್ಲಿ, ಮಾಮೂಲುಗಳ ಹೆಸರಿನಲ್ಲಿ ದುರ್ವ್ಯಯವಾಗುತ್ತಿರುವ ಸಂಪತ್ತನ್ನು ತಡೆಗಟ್ಟಿ, ಅದನ್ನು ಹೆಚ್ಚು ಆವಶ್ಯಕವಾಗಿರುವ ಮತ್ತು ಹೆಚ್ಚು ಉಪಯೋಗಕರವಾಗಿರುವ ಜೀವನ ಪಥಗಳಲ್ಲಿ ವಿನಿಯೋಗಿಸುವಂತೆ ಮಾಡಬೇಕು.

ಯುವಕರು ವೇಷಭೂಷಣಗಳಲ್ಲಿ ಅತಿ ಶೋಕಿಗೆ ಹೋಗದೆ ಸರಳ ಸಾಧಾರಣವಾಗಿದ್ದರೆ ಸ್ವಲ್ಪವಾದರೂ ಉಳಿತಾಯವಾಗುತ್ತದೆ. ಅಲ್ಲದೆ ಶೋಕಿ ಮಾಡಲೆಂದು ಮದುವೆ ಮಾಡಿಕೊಂಡು ಮಾವಂದಿರ ಮೂಲಧನಕ್ಕೆ ಬಾಯಿ ಬಾಯಿ ಬಿಡುವುದೂ ತಪ್ಪುತ್ತದೆ.

ಯುವಕನು ಸಂಪಾದನೆ ಮಾಡುವ ಸಾಮರ್ಥ್ಯವನ್ನು ಪಡೆಯುವ ಮೊದಲೆ ಮದುವೆ ಮಾಡಿಕೊಂಡಲ್ಲಿ ಒಡನೆಯೆ ಚಿತ್ತಶ್ಶಾಂತಿಯಾಗುತ್ತಾನೆ. ಆವನ ಸ್ವತಂತ್ರ ಬುದ್ಧಿ, ನಿರಂಕುಶ ಮತಿ ಎಲ್ಲವೂ ಮಾಯ್ದು ಗೂಡುತ್ತವೆ. ಆವರಿವರ ಕೈ ಹಾರೈಸಿ, ನಾಲ್ಕು ಕಾಸು ಸಂಪಾದನೆಗಾಗಿ [illegible]ವನ್ನು ಒಲಿಗಿಸಿ, ತನ್ನಲ್ಲಿರುವ ಅಧಿಕಾರಿಗಳ ಅಥವಾ ಸಾಹುಕಾರನ ಕಾಲಬಳಿ [illegible] ಆತನ ಆತ್ಮವನ್ನು ಸಂಪೂರ್ಣವಾಗಿ [illegible]ಸುತ್ತಾನೆ. ಆತನ ದಿವ್ಯಾತ್ಮವನ್ನು [illegible] ಸಾಂಸಾರಿಕ ಜೀವನದ ದಾಸ್ಯದಲ್ಲಿ, [illegible] ತಾರುಣ್ಯದ 'ದರ್ಶನ' ಜ್ಯೋತಿ ಸಾಂಸಾರಿಕ [illegible] [illegible] ಯಲ್ಲಿ, ಕಷ್ಟದಲ್ಲಿ, ಧೂಳಿಧೂಮಗಳಲ್ಲಿ, [illegible] ಹೋಗುವಷ್ಟರ ಮಟ್ಟಿಗೆ ಮಾಸಿಹೋಗುತ್ತದೆ [illegible] ಆವನ [illegible] [illegible] ತೋರುವುದಿಲ್ಲ.

ಕಿರಿದಾಗಿ, ಕಡೆಗೆ ತಾನು, ತನ್ನ ಹೆಂಡತಿ, ತನ್ನ ಮಗು ಮೂವರನ್ನು ಮಾತ್ರ ಸುತ್ತುವರಿಯುತ್ತದೆ. ಅವರಿಗಾಗಿ ಏನನ್ನು ಬೇಕಾದರೂ ಮಾಡಲು ಹೇಸುವುದಿಲ್ಲ. ಹಾಗಾಗುವವರು ದೇಶದ ಪ್ರಗತಿಗೆ ಕಂಟಕಪ್ರಾಯರಾಗುತ್ತಾರೆ. ಆದ್ದರಿಂದ ಮಿತ್ರರೇ, ನಿಮ್ಮ ಕಾಲಮೇಲೆ ನೀವು ನೆಮ್ಮದಿಯಾಗಿ ನಿಲ್ಲುವ ಶಕ್ತಿ ಬರುವ ಮೊದಲು ಮದುವೆಯಾಗಬೇಡಿ; ಆತ್ಮಕ್ಕೆ ಅಗೌರವವನ್ನೂ ಮನಸ್ಸಿಗೆ ಯಾತನೆಯನ್ನೂ ದೇಶಕ್ಕೆ ಹಾನಿಯನ್ನೂ ತರಬೇಡಿ.

ಅದಕ್ಕೆ ಬದಲು ವೈವಾಹಿಕ ಜೀವನವನ್ನು ಸಾಂಗವಾಗಿ ನಡೆಸಲು ತಕ್ಕ ಸಂಪತ್ತೂ ಸಾಮರ್ಥ್ಯವೂ ಲಭಿಸುವ ತನಕ ಬ್ರಹ್ಮಚಾರಿಗಳಾಗಿದ್ದುಕೊಂಡು ದೇಶಕ್ಕೆ ಹಿತಕರವಾದ ಕಾರ್ಯಗಳನ್ನು ಮಾಡುತ್ತಿರಬಹುದು. ಭೀಷ್ಮನು ಬ್ರಹ್ಮಚಾರಿಯಾಗಿದ್ದನು. ಹನುಮಂತನು ಬ್ರಹ್ಮಚಾರಿಯಾಗಿದ್ದನು. ಅವರು ಮಹತ್ಕಾರ್ಯಗಳನ್ನು ಸಾಧಿಸಿದರು. ಇಂದಿನ ಮನಶ್ಶಾಸ್ತ್ರವೂ ಕೂಡ ಬ್ರಹ್ಮಚರ್ಯದಿಂದ ತೇಜಸ್ಸು ಓಜಸ್ಸುಗಳೂ ದರ್ಪ ಬಲ ಅಧಿಕಾರಗಳೂ ಲಭಿಸುತ್ತವೆ ಎಂದು ಹೇಳುತ್ತಿದೆ. "ನ್ಯಾಯಮಾತ್ಮಾ ಬಲಹೀನೇನಲಭ್ಯಃ"

ದೇಶವು ಸರ್ವತೋಮುಖವಾಗಿ ಎಚ್ಚರಗೊಳ್ಳುತ್ತಿರುವ ಕಾಲವಿದು. ಎಲ್ಲೆಲ್ಲಿಯೂ ಎಲ್ಲ ಶಾಖೆಗಳಲ್ಲಿಯೂ ಕೆಲಸಗಾರರು ಬೇಕಾಗಿದ್ದಾರೆ. ಸಂಘಬದ್ಧರಾಗಿಯೊ, ಸಂಸ್ಥೆಗಳಿಗೆ ಸದಸ್ಯರಾಗಿಯೊ, ಅಥವಾ ವ್ಯಕ್ತಿಶಃವಾಗಿಯೊ ಎಲ್ಲರೂ ಕಾರ್ಯೋನ್ಮುಖರಾಗಬೇಕು. ಆ ಕಾರ್ಯಗಳ ರೀತಿ ನೀತಿ ವಲಯ ವಿಸ್ತಾರಗಳನ್ನು ಯಾರೊಬ್ಬರೂ ನಿಷ್ಕರ್ಷಿಸಿ ಹೇಳಲಾರರು. ಆಯಾ ಸನ್ನಿವೇಶಕ್ಕೆ ತಕ್ಕಂತೆ ಅವರವರ ಮನೋಧರ್ಮ ಆತ್ಮಾನುಭವ ಅಭಿರುಚಿ ಉದ್ದೇಶಗಳಿಗೆ ತಕ್ಕಂತೆ ಕಾರ್ಯಾರಂಭಮಾಡಬೇಕು. ಮೈಸೂರು ಪಟ್ಟಣದಲ್ಲಿರುವ ಯುವಕರು ಕೈಕೊಳ್ಳಬೇಕಾಗಿರುವ ಕಾರ್ಯದ ಸ್ವಭಾವ ರೀತಿ ನೀತಿ ವಲಯಗಳು ಶ್ರೀರಂಗಪಟ್ಟಣಕ್ಕೆ ಹೊಂದದಿರಬಹುದು ; ಶ್ರೀರಂಗಪಟ್ಟಣಕ್ಕೆ ಹೊಂದುವ ಕಾರ್ಯಗಳು ಪಕ್ಕದ ಹಳ್ಳಿಗೆ ಹೊಂದದಿರಬಹುದು. ಹಳ್ಳಿಗಳಲ್ಲಿ ನೈರ್ಮಲ್ಯ ವಿದ್ಯಾಪ್ರಚಾರಗಳು ಬೇಕಾಗುವಂತೆ ಪಟ್ಟಣಗಳಲ್ಲಿ ಬಹುಶಃ ಅಸೌದಾರ್ಯ ಮತ ಭ್ರಾಂತಿಗಳನ್ನು ಪರಿಹಾರ ಮಾಡುವ ಬೋಧಪ್ರದ ಕಾರ್ಯಗಳು ಬೇಕಾಗಬಹುದು. ಆದ್ದರಿಂದ ಮಿತ್ರರೇ, ನೂತನ ಭಾರತ

ರಾಷ್ಟ್ರಭವನ ನಿರ್ಮಾಣ ಕಾರ್ಯದಲ್ಲಿ ನಮ್ಮಲ್ಲಿ ಪ್ರತಿಯೊಬ್ಬರಿಗೂ ಗೌರವಪೂರ್ಣವಾದ ಸ್ಥಾನವಿದೆ. ಪ್ರತಿಯೊಬ್ಬರ ಸಾಹಸಕ್ಕೂ ಅವಕಾಶವಿದೆ.

ಆದರೆ ಇಲ್ಲಿ ಒಂದು ಎಚ್ಚರಿಕೆಯ ಮಾತನ್ನು ಹೇಳಿ ಮುಂದುವರಿಯಬೇಕಾಗಿದೆ.

ನಮ್ಮಲ್ಲಿ ಅನೇಕರು ಸದ್ಯಃಫಲಾಕಾಂಕ್ಷಿಗಳು. ದೀರ್ಘಕಾಲ ಸಾಧನೆ ಮಾಡುವ ತಾಳ್ಮೆಯಿಲ್ಲ, ದೃಢಚಿತ್ತವಿಲ್ಲ. ಸತ್ಕರ್ಮ ಸತ್ಫಲವನ್ನು ತಂದೇತರುತ್ತದೆ ಎಂಬ ಶ್ರದ್ಧೆಯಿಲ್ಲ. ಗೀತೆಯಲ್ಲಿ ಶ್ರೀಕೃಷ್ಣನು "ಪಾರ್ಥ, ನೈವೇಹನಾಮುತ್ರ ವಿನಾಶಸ್ತಸ್ಯ ವಿದ್ಯತೇ। ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ ॥ ೬–೪೦. ಪೃಥಾನಂದನನೆ, ಇಹದಲ್ಲಿಯಾಗಲಿ ಪರದಲ್ಲಿಯಾಗಲಿ ಅವನಿಗೆ ವಿನಾಶವಿಲ್ಲ. ಎಳ್ಳನಿತಾದರೂ ಆಗಲಿ ಒಳ್ಳೆಯದನ್ನು ಮಾಡಿದವನಿಗೆ ದುರ್ಗತಿಯಿಲ್ಲ" ಎಂದು ಆಘೋಷಿಸಿದ್ದಾನೆ. ಮಹಾಫಲಕ್ಕೆ ಹೆಚ್ಚು ಕಾಲವೂ ಹೆಚ್ಚು ಸಾಧನೆಯೂ ಬೇಕಾಗುತ್ತದೆ. ಆದ್ದರಿಂದ ಅಲ್ಪ ಕಾಲದಲ್ಲಿ ಫಲ ಲಭಿಸದಿದ್ದರೆ ಹತಾಶರಾಗದೆ ಮುಂದುವರಿಯುವ ಉಕ್ಕಿನಂತಹ ಚಿತ್ತ ದಾರ್ಢ್ಯವನ್ನು ನಾವು ಸಂಪಾದಿಸಬೇಕು. ನಮ್ಮ ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು; ಕಲ್ಲಿದ್ದಲ ಕಾವಾಗಬೇಕು.

ಸದ್ಯಃಫಲಾಕಾಂಕ್ಷೆಗಿಂತಲೂ ಕೀರ್ತಿಮೋಹದಿಂದ ಹೆಚ್ಚು ಅನಾಹುತವಾಗುತ್ತದೆ! 'ಕೀರ್ತಿ ಮಹಾಪುರುಷರಲ್ಲಿರುವ ಕಟ್ಟಕಡೆಯ ದೌರ್ಬಲ್ಯ' ಎಂಬುದಾಗಿ ಒಂದು ಸುಭಾಷಿತವಿದೆ. ಮಹಾಪುರುಷರಾದವರೇ ಈ ಯಶೋಲೋಭಕ್ಕೊಳಗಾದಮೇಲೆ ಸಾಮಾನ್ಯರ ಗತಿಯೇನು? ಆದರೂ ಮಹಾಪುರುಷರಲ್ಲಿರುವ ದೌರ್ಬಲ್ಯವನ್ನು ಸಾಮಾನ್ಯರೂ ಪೋಷಿಸಬೇಕೆಂಬ ನಿಯಮವಿಲ್ಲ. ಮಹಾಪುರುಷರಿಗೆ ಬಂದೊದಗುವ ಕೀರ್ತಿಯ ಪ್ರಭಾವದಿಂದಲೇ ಅದರ ಲೋಭವನ್ನು ಗೆಲ್ಲಲು ಅವರಿಂದ ಸಾಧ್ಯವಾಗದಿರಬಹುದು. ನಮಗೆ ಅದರ ಅಭಾವವೇ ಅದರ ಲೋಭದಿಂದ ಪಾರಾಗಲು ಸಹಾಯವಾಗುತ್ತದೆ. ಮುಂದಿಯ ಕೈ, ಚಪ್ಪಾಳೆ, ವೃತ್ತಪತ್ರಿಕೆಗಳ ಅಗ್ಗದ ಸ್ತುತಿ, ಬಿರುದುಬಾವಲಿಗಳ ವ್ಯಾಮೋಹ ಇವುಗಳಿಗೆ ವಶನಾಗದೆ, ತಾನು ಹಿಡಿದ ಕೆಲಸವನ್ನು ಪಟ್ಟುಹಿಡಿದು ನಿಸ್ಪೃಹನಾಗಿ ಮಾಡುವಾತನೇ ನಿಜವಾದ ಕರ್ಮಯೋಗಿ. ಸ್ವಾಮಿ ವಿವೇಕಾನಂದರು ಒಂದು ಕಡೆ ಈ ಅರ್ಥದ ಮಾತುಗಳನ್ನು ಹೇಳಿ

ದ್ವಾರ. ಸಾವಿರಾರು ಜನರು ಸುತ್ತಲೂ ನೆರೆದು ಕರತಾಡನ ಮಾಡುವಾಗ, ಜಯಘೋಷದಿಂದ ಹುರಿದುಂಬಿಸುವಾಗ, ಸ್ಮಾರಕ ಸ್ತೂಪಗಳೂ ಜೀವನ ಚರಿತ್ರೆಗಳೂ ತನ್ನನ್ನು ಕೊಂಡಾಡುತ್ತವೆ ಎಂದು ಗೊತ್ತಾದಾಗ, ತನ್ನ ಮರಣವೇ ತನ್ನ ಯಶೋದುಂದುಭಿಯನ್ನು ಮೊಳಗುತ್ತದೆಂದು ತಿಳಿದಾಗ, ಯಾವ ಹೇಡಿ ತಾನೇ ಮುಂದುವರಿದು ರಣರಂಗದಲ್ಲಿ ಮಡಿಯಲಾರ? ಯಾವ ಕ್ರಿಮಿ ತಾನೆ ಸಾಹಸಿಯಾಗಲಾರನು? ಆದರೆ ಕೀರ್ತಿಯ ಕಿರಣ ಮಾತ್ರವೂ ಪ್ರಕಾಶಿಸದಿರುವಾಗ, ಪ್ರಶಂಸೆ ಮಾಡುವವರಾಗಲಿ ಹುರಿದುಂಬಿಸುವವರಾಗಲಿ ಒಬ್ಬರೂ ಇಲ್ಲದಿರುವಾಗ, ಬಹುಕಾಲದ ಪ್ರಯತ್ನದಿಂದಲೂ ಕಾರ್ಯಸಿದ್ಧಿಯಾಗದಿರುವಾಗ, ದೃಢಚಿತ್ತನಾಗಿ, ಕ್ರಿಯಾನ್ವಿತನಾಗಿ, ಮೌನಿಯಾಗಿ, ಹಲ್ಲುಕಚ್ಚಿಕೊಂಡು, ಹಣೆಸುಕ್ಕಿಕೊಂಡು, ಬೆವರು ಸುರಿಸುತ್ತಾ, ನಸುಬಾಗಿ, ಕಟ್ಟಕಡೆಯ ಕಲ್ಯಾಣದಲ್ಲಿ ನೆಚ್ಚಿಟ್ಟುಕೊಂಡು, ಈಶ್ವರನನ್ನು ನೆನೆದು ಕರ್ಮಪರ್ವತವನ್ನೇರುವವನೇ ಮಹಾತಪಸ್ವಿ; ಅವನಿಗಿಂತಲೂ ಹೆಚ್ಚಾದ ವಿಭೂತಿಗಳಿಲ್ಲ. ಅವನ ಹೆಸರು ಪತ್ರಿಕೆಗಳಿಗೆ ಗೊತ್ತಿಲ್ಲದಿರಬಹುದು; ಆದರೆ ಈಶ್ವರನ ದೃಷ್ಟಿಯಲ್ಲಿ ಅವನು ಅಗ್ರಗಣ್ಯನಾಗುತ್ತಾನೆ.

ಆದ್ದರಿಂದ ಪ್ರತಿಯೊಬ್ಬ ಯುವಕನೂ ಅಂತಿಮದ ಅನಂತ ಕಲ್ಯಾಣದಲ್ಲಿ ದೃಷ್ಟಿಯಿಟ್ಟು ಕಾರ್ಯರಂಗಕ್ಕಿಳಿಯಬೇಕು. ತಾನು ರಂಗಕ್ಕಿಳಿದೊಡನೆಯೇ ಜಗತ್ತು ಉದ್ಧಾರವಾಗುತ್ತದೆಂದಾಗಲಿ, ಲೋಕಲೋಚನ ವಲಯಕ್ಕೆ ತಾನು ಕೇಂದ್ರವಾಗುತ್ತೇನೆಂದಾಗಲಿ, ಶಾಂತಿಸಾಧನೆಗಾಗಿ ಕೊಡುವ ನೋಬೆಲ್ ಬಹುಮಾನ ತನಗೇ ಬರುತ್ತದೆ ಎಂದಾಗಲಿ ಹೊಂಗನಸುಗಳನ್ನೂ ಆಕಾಶ ಗೋಪುರಗಳನ್ನೂ ಕಟ್ಟಬಾರದು.

ಇನ್ನು ನನಗೆ ಅತ್ಯಂತ ಪ್ರಿಯತಮವಾದ ಒಂದೆರಡು ವಿಷಯಗಳನ್ನು ಕುರಿತು ಪ್ರಸ್ತಾಪಿಸಿ ಉಪನ್ಯಾಸವನ್ನು ಕೊನೆಗಾಣಿಸುತ್ತೇನೆ. ಆ ವಿಷಯಗಳು ನಿಮ್ಮೆಲ್ಲರಿಗೂ ಕೂಡಾ ಪ್ರಿಯವಾಗಿರುತ್ತವೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ.

ಯುವಕರು ಕೈಕೊಳ್ಳಬೇಕಾಗಿರುವ ಅನೇಕ ಕಾರ್ಯಗಳಲ್ಲಿ ಭಾಷೆಯ ಅಭ್ಯಾಸವೂ ಸಾಹಿತ್ಯಸೇವೆಯೂ ಮತ್ತು ಪ್ರಚಾರಗಳೂ ಗಣ್ಯವಾಗಿವೆ. ಹಿಂದಿ, ಲ್ಯಾಟಿನ್, ಗ್ರೀಕ್, ಸಂಸ್ಕೃತ, ತೆಲುಗುಗಳಲ್ಲಿ ನಾನು ಹೇಳುತ್ತ

ವುದು : ಕನ್ನಡ ಭಾಷೆ, ಕನ್ನಡ ಸಾಹಿತ್ಯ ! ನಮ್ಮ ಮಾತೃಭಾಷೆ ಮತ್ತು ಅದರ ಸಾಹಿತ್ಯ !

ಜನಜೀವನವನ್ನು ಎಚ್ಚರಿಸುವ ತೂರ್ಯಧ್ವನಿ ಸಾಹಿತ್ಯದಿಂದ ಬರುತ್ತದೆ. ಸಾಹಿತ್ಯ ಜನಜೀವನದ ಇಂದಿನ ಸ್ಥಿತಿಯನ್ನು ವರ್ಣಿಸಿ ಮುಂದಿನ ಗತಿಯನ್ನು ನಿರ್ಣಯಿಸುತ್ತದೆ. ಕೃತವಿದ್ಯರಾದ ಯುವಕರು ತಮ್ಮ ಆಸೆ ಆಕಾಂಕ್ಷೆಗಳನ್ನು ಬರೆದು ಓದಿ, ಮತ್ತೆ ಮತ್ತೆ ಹೇಳಿ ಹೇಳಿ, ಜನರ ಹೃದಯಗಳಲ್ಲಿ ಕಿಡಿಗಳನ್ನು ಬಿತ್ತಬೇಕು. ಈಗಾಗಲೇ ನಮ್ಮ ನಾಡಿನ ಜೀವನ ಕೃತ್ತಿಕಾದೀಪೋತ್ಸವದಂತೆ ಸಾವಿರಾರು ಸೊಡರಮಾಲೆಗಳಾಗಿ ಉರಿಯುತ್ತಿರುವ ಮನೋಹರ ಭವ್ಯದೃಶ್ಯ ಕಂಗೊಳಿಸುತ್ತಿದೆ. ಎಲ್ಲೆಲ್ಲಿಯೂ ಕರ್ನಾಟಕ ಸಂಘಗಳೇಳುತ್ತಿವೆ; ಕನ್ನಡದ ಪುನರುಜ್ಜೀವನಕ್ಕಾಗಿಯೂ ಉದ್ಧಾರಕ್ಕಾಗಿಯೂ ದೀಕ್ಷೆತೊಟ್ಟು ಸೊಂಟಕಟ್ಟಿ ಕಂಕಣಬದ್ಧರಾಗಿರುವ ಅನೇಕ ಪ್ರತಿಭಾಸಂಪನ್ನರಾದ ಮಹನೀಯರು ಕರ್ನಾಟಕದಲ್ಲೆಲ್ಲ ಸಂಚರಿಸಿ ಹಣತೆಗಳನ್ನು ಹೊತ್ತಿಸುತ್ತಿದ್ದಾರೆ : ಕೇಂದ್ರಸಂಸ್ಥೆಯಾಗಿರುವ ಸಾಹಿತ್ಯ ಪರಿಷತ್ತು ತನ್ನ ಕೈಯಲ್ಲಾದ ಮಟ್ಟಿಗೆ ಹುರುಪಿನಿಂದ ಕಾರ್ಯಸಾಧನೆ ಮಾಡುತ್ತಿದೆ : ವಿದ್ಯಾಭ್ಯಾಸದ ಇಲಾಖೆ ಕನ್ನಡದಲ್ಲಿಯೇ ಪಾಠ ಹೇಳುವ ಏರ್ಪಾಡು ಮಾಡುತ್ತಿದೆ ; ವಿಶ್ವವಿದ್ಯಾನಿಲಯ ಕನ್ನಡಗ್ರಂಥ ಪ್ರಕಟನೆಗಳಿಂದ ತನ್ನ ಭಾಗದ ತೈಲವನ್ನು ಹೊಯ್ದು ಉರಿಯನ್ನು ವರ್ಧಿಸುತ್ತಿದೆ. ಇಂತಹ ಮಹಾಸಾಹಿತ್ಯ ದೀಪೋತ್ಸವದಲ್ಲಿ ನಾವೆಲ್ಲರೂ ಉತ್ಸಾಹದಿಂದ ಭಾಗಿಗಳಾಗ[illegible] ಗಾಢಾಂಧಕಾರವನ್ನು [illegible] ದಿದ್ದರೆ ಅದು ನಿಮ್ಮಿಂದ ಕಗ್ಗ[illegible] ಸೂಚಿಸುತ್ತದೆ. ಇಲ್ಲಿ ನೆರೆದಿರುವವರಲ್ಲಿ ಯಾರ ಹೃದಯದಲ್ಲಿಯೂ ಅಂತಹ ಕಗ್ಗತ್ತಲಿಲ್ಲವೆಂದು ನಾನು ದೃಢವಾಗಿ ನಂಬುತ್ತೇನೆ. ಮೇಲೆ ಹೇಳಿದಂತೆ

ಮಹನೀಯರೇ, ಮತ್ತೊಮ್ಮೆ ಹೇಳುತ್ತೇನೆ. ನಮ್ಮ ಹೃದಯದಲ್ಲಿ ಒಂದು ಶಕ್ತಿಯು ಜೀವನದಲ್ಲಿ ಮುಂಬರಿಯಬೇಕಾದರೆ [illegible] ವಿಧಿಯನ್ನು ಶೋಧಿಸಬೇಕು ; ನಮ್ಮ ಆತ್ಮ [illegible] 'ನಿರಂಕುಶಮತಿ'ಗಳಾಗಿ 'ದರ್ಶನ' [illegible] ನಿರ್ಮಲ ಜೀವನದಿಂದ ಅಂತಹ ತೇಜಸ್ಸು [illegible]

ಸಾಧನತಪಸ್ಸು.

ನಮ್ಮೆಲ್ಲರ ದಿವ್ಯ'ದರ್ಶನ'ಕ್ಕೆ ಈ ಮಹಾಮಂತ್ರಗಳು ಅಡಿಗಲ್ಲುಗಳಾಗಿರಲಿ :

"ಏಕಂ ಸತ್ ವಿಪ್ರಾ ಬಹುಧಾ ವದಂತಿ".

ಇರುವುದೊಂದೇ ಸತ್ಯ ; ತಿಳಿದವರು ಬೇರೆ ಬೇರೆ ರೀತಿಯಿಂದ ಹೇಳುತ್ತಾರೆ.

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ಧನಂ ||

ಚರಾಚರ ಜಗತ್ತೆಲ್ಲವನ್ನೂ ಈಶ್ವರನಿಂದ ಆವರಿಸು. ತ್ಯಾಗದಿಂದ ಅದನ್ನು ಆಸ್ವಾದಿಸು. ಇತರ ಸಿರಿಗೆ ಆಳುಪದಿರು.

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ |
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ||

ಒಂದು ಶತಮಾನ ಬಾಳಬೇಕೆಂದು ಇಚ್ಛಿಸುವಾತನು ಕರ್ಮ ಮಾಡುತ್ತಲೇ ಬಾಳಬೇಕು. ಹಾಗೆ (ಜಗತ್ತೆಲ್ಲವನ್ನೂ ಈಶ್ವರನಿಂದ ಆವರಿಸಿ) ಬಾಳಿದರೆ ಕರ್ಮಲೇಪನವಿಲ್ಲ.

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ |
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ |
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿಃ |
ವ್ಯಶೇಮ ದೇವಹಿತಂ ಯದಾಯುಃ ||

ಶುಭವಾದುದನ್ನೆ ನಮ್ಮ ಕಿವಿಯಾಲಿಸಲಿ. ಪೂಜಾರ್ಹವಾಗಿ ಮಂಗಳವಾದುದನ್ನೇ ನಮ್ಮ ಕಣ್ಣು ನೋಡಲಿ. ದೃಢದೇಹದಿಂದಲೂ ಆನಂದದಿಂದಲೂ ಜೀವಮಾನ ದೇವಹಿತವಾಗಿ ಸಾಗಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

೧೦. ಕುಮಾರವ್ಯಾಸನ ದೃಷ್ಟಿಯಲ್ಲಿ ಕರ್ಣ

ಡಿ. ಎಲ್. ನರಸಿಂಹಾಚಾರ್ : ೨೭-೧೦-೧೯೦೬ : ೭-೫-೧೯೭೧

ದ್ವಾಪರಯುಗದ ಮಹಾಪುರುಷರಲ್ಲಿ ತನ್ನದೇ ಆದ ತೇಜಸ್ಸಿನಿಂದ ಕಂಗೊಳಿಸುವ ವ್ಯಕ್ತಿಯೆಂದರೆ ಕರ್ಣ. ಇತರ ಪಾತ್ರಗಳು ಬೇರೆ ಬೇರೆ ದೃಷ್ಟಿಗಳಿಂದ ಇವನನ್ನು ಮೀರಿಸಿದ್ದರೂ ಇವನ ಕ್ಷೇತ್ರದಲ್ಲಿ ಅವರು ಯಾರೂ ಇವನನ್ನು ಮೀರಿಸುವಂತಿಲ್ಲ. ಇತರರಲ್ಲಿ ಕಾಣಲಾಗದ ವಿಶಿಷ್ಟ ಮಹಿಮೆ ಕರ್ಣನಲ್ಲಿ ಮೈಗೊಂಡು ಬೆಳಗಿದೆ. ಕೃಷ್ಣ, ಭೀಷ್ಮ, ದ್ರೋಣ, ವಿದುರಾದಿ ಮಹಾಪುರುಷರು ಜ್ಞಾನದಲ್ಲಾಗಲಿ ಪರಾಕ್ರಮದಲ್ಲಾಗಲಿ ಆತ್ಮೋನ್ನತಿಯಲ್ಲಾಗಲಿ ಕರ್ಣನಿಗಿಂತ ಮೇಲಾದ ವ್ಯಕ್ತಿಗಳಿರಬಹುದು. ಆದರೆ ಕರ್ಣನ ಮಾನವೀಯತೆಯ ಎದುರಿಗೆ ಆ ಪಾತ್ರಗಳ ಪ್ರಭೆ ಮಸುಕಾಗಿ ಕಾಣುತ್ತದೆ. ಕರ್ಣನಿಗೆ ಒದಗಿದ ಸಮಸ್ಯೆಗಳೂ ಧರ್ಮಸಂಕಟಗಳೂ ಅವರ ಬಾಳ್ವೆಯಲ್ಲಿ ಸುಳಿದಾಡಲಿಲ್ಲ. ಅಂಥ ಸಂದರ್ಭಗಳಲ್ಲಿ ಅವರು ಯಾವ ರೀತಿ ನಡೆದುಕೊಳ್ಳುತ್ತಿದ್ದರು ಎಂಬುದನ್ನು ಊಹಿಸುವುದಕ್ಕೆ ಕೂಡ ಅವಕಾಶ ಸಾಲದು. ಕರ್ಣನಲ್ಲಿ ಕಾಣುವಷ್ಟು ಸತ್ಯ ಪ್ರೀತಿಯಾಗಲಿ ಸ್ವಾಮಿಭಕ್ತಿಯಾಗಲಿ ಸ್ನೇಹ ರಸವಾಗಲಿ ಅಂತಿಮ ವಿರಕ್ತಿಯಾಗಲಿ ಅವರಲ್ಲಿ ಕಾಣದಿರುವುದರಿಂದ, ಅವನಿಗೆ ಬಂದಂತಹ ಧರ್ಮಸಮಸ್ಯೆಗಳಿಗೆ ಸದೃಶವಾದ ಸಂದರ್ಭಗಳು ಅವರಿಗೇನಾದರೂ ಒದಗಿದ್ದರೆ, ಅವರ ನಡತೆ ಇವನ ನಡತೆಗಿಂತ ಏನೂ ಉತ್ತಮವಾಗುತ್ತಿರಲಿಲ್ಲವೆಂದು ಹೇಳಬಹುದು. ಈ ದೃಷ್ಟಿಯಿಂದಲೂ ಕರುಳನ್ನು ಹಿಂಡುವ ಅವನ ಜೀವಿತದ ಕರುಣಕಥೆಯಿಂದಲೂ ಕರ್ಣಪಾತ್ರ ಭವ್ಯತೆಯ ತುತ್ತತುದಿಗೇರಿದೆ.

ಕರ್ಣನ ವ್ಯಕ್ತಿತ್ವವನ್ನು ತನ್ನ ಮನದಲ್ಲಿ ಮೂಡಿಸಿಕೊಳ್ಳುವಾಗ ಕುಮಾರವ್ಯಾಸನ ದೃಷ್ಟಿ ಯಾವುದಿತ್ತೆಂಬುದನ್ನು ಮೊದಲು ತಿಳಿಯಬೇಕು. ಅವನು ತನ್ನ ವೀರಕಾವ್ಯವನ್ನು ಹಾಡುವ ಕಾಲಕ್ಕಾಗಲೇ ಹಲವು ಮಹಾ

ಕವಿಗಳ ಪ್ರತಿಭೆ ಕರ್ಣಪಾತ್ರ ಪ್ರಪಂಚದಲ್ಲಿಹಲವು ತೆರನಾಗಿ ವಿಹಾರಿಸಿತ್ತು. ಈ ವಿಹಾರದ ರಸಪರಿಚಯ ಕುಮಾರವ್ಯಾಸನಿಗೆ ಸ್ವಂತ ಪರಿಶ್ರಮದಿಂದಲೋ ಪರಂಪರೆಯಿಂದಲೋ ಸ್ವಲ್ಪಮಟ್ಟಿಗೆ ಲಭ್ಯವಾಗಿದ್ದಿರಬಹುದು. ವ್ಯಾಸ ಮಹರ್ಷಿಗಳು ಯಾವ ಮುಚ್ಚುಮರೆಯಿಲ್ಲದೆ ಕರ್ಣಪಾತ್ರದ ಗುಣದೋಷ ಗಳನ್ನು ವಿಶದವಾಗಿ ನೇರಾಗಿ ನಿರೂಪಿಸಿದ್ದಾರೆ; ಅವರು ಪಕ್ಷಾವೇಶಿಯಾಗಿಲ್ಲ; ಆ ಪಾತ್ರದ ವಿಷಯವಾಗಿ ಅವರು ತಮ್ಮ ಕೊನೆಯ ತೀರ್ಮಾನವನ್ನು ಹೇಳದೆ ಪಾಠಕರ ಸಹೃದಯತೆಗೆ ಅದನ್ನು ಬಿಟ್ಟಿದ್ದಾರೆ. ಭಾಸಮುನಿಯ ಮನವು ವ್ಯಾಸರ ಕರ್ಣನನ್ನು ಹೆಚ್ಚು ಸಹಾನುಭೂತಿಯಿಂದ ಕಂಡಿದೆ ; ಆ ಪಾತ್ರದ ದೋಷಗಳು ಅಲ್ಪ, ಅವು ಸಂದರ್ಭವಶದಿಂದ ಬಂದುವು ; ಗುಣ ಗಳೊಡನೆ ಹೋಲಿಸಿ ನೋಡಿದಾಗ ಅವು ಸ್ವಲ್ಪವೂ ಸಿಲ್ಲಲಾರವು; ಹೆಚ್ಚೆಂದರೆ ಅವು ಸಾಧಾರಣವಾದ ಮಾನವ ದೌರ್ಬಲ್ಯಗಳು. ಇವುಗಳಿಗೆ ಪ್ರಧಾನತೆ ಯನ್ನು ಕೊಡದೆ ಗುಣದ ಝರಿಯನ್ನು ಉಕ್ಕಿಸಿದ್ದಾನೆ ಭಾಸ ; ಅಲ್ಲದೆ ಕರುಣೆಯ ಕಾವೇರಿಯನ್ನೂ ಹರಿಯಿಸಿದ್ದಾನೆ. 'ಪಂಚರಾತ್ರ'ದ ಕರ್ಣನ ಮಿತಭಾಷಿತ್ವದಲ್ಲಿ ಹುದುಗಿರುವ ಅಮಿತ ಸ್ವಾಮಿಭಕ್ತಿಗೆ ಅಳತೆಯುಂಟೇ ? ತನ್ನ ಜೀವಮಾನದ ಕೊನೆಯ ದಿನಾರ್ಧದಲ್ಲಿ ಕರ್ಣನ ಮನವು ಹಳೆಯ ದುಃಖಗಳನ್ನು ನೆನೆದುಕೊಂಡು ಹೊಸದಾದ ತೀವ್ರತರವಾದ ಖೇದದಿಂದ ವಿಹ್ವಲವಾಗುವುದನ್ನೂ ಬಾಳಿನ ಜಿಲೆಯನ್ನು ಮನಗಂಡುದನ್ನೂ ಸಂಯಮ ಸಹಿತವಾಗಿ ಶಕ್ತಿಪೂರ್ಣವಾಗಿ ಸಚೇತನವಾಗಿ ಚಿತ್ರಿಸಿರುವ 'ಕರ್ಣಭಾರ' ದಂತಹ ಏಕಾಂಕರೂಪಕ ಬೇರೊಂದಿದೆಯೆ ? ಇವೆರಡೇ ಸಾಕು, ಕರ್ಣನ ವಿಷಯದಲ್ಲಿ ಭಾಸನ ಹೃದಯವನ್ನು ತಿಳಿಸಿ ತೋರಿಸುವುದಕ್ಕೆ. ಭಾಸನ ದೃಷ್ಟಿಭಾವಕ್ಕೆ ಸಿಕ್ಕಿದವನು ಕನ್ನಡದ ಪಂಪ. ಅವನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ. ಭಾರತವು 'ಕರ್ಣರಸಾಯನ'ವಾಗುವುದಕ್ಕೆ ಮುಖ್ಯಕಾರಣ ಕರ್ಣನೊಬ್ಬನೇ ಎಂದು ಅವನ ಧೀರ ರಸಜ್ಞತೆಯ ನಿರ್ಣಯ "ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ" ಎಂದು ಪಂಪವಾಣಿ ಕರ್ಣನ ವೈಶಿಷ್ಟ್ಯವನ್ನು ಸಾರಿ ಹೇಳುತ್ತಿದೆ. ಕುಮಾರವ್ಯಾಸನಲ್ಲಿ ವ್ಯಾಸರ ಮತ್ತು ಭಾಸ-ಪಂಪರ ದೃಷ್ಟಿ ಗಳೆರಡೂ ಸಮಾವೇಶವಾಗಿವೆ. ಆದರೆ ಭಾಸ ಪಂಪರ ದೃಷ್ಟಿಯೇ ಮಿಗಿಲಾಗಿ

ಕುಮಾರವ್ಯಾಸನನ್ನು ಆವರಿಸಿಕೊಂಡಿದೆ. ಇಷ್ಟೇ ಆಗಿದ್ದರೆ ಕುಮಾರವ್ಯಾಸನನ್ನು ನಾವು ಮೆಚ್ಚುವುದಕ್ಕೆ ಸಾಕಷ್ಟು ಕಾರಣಗಳು ಸಿಕ್ಕಿದಂತಾಗಲಿಲ್ಲ. ಉಳಿದ ಯಾರಲ್ಲಿಯೂ ಕಾಣದಿರುವ ಅಥವಾ ಸ್ಪಷ್ಟವಾಗಿ ವ್ಯಕ್ತವಾಗದಿರುವ ದೃಷ್ಟಿವಿಶೇಷ ಕುಮಾರವ್ಯಾಸನಲ್ಲುಂಟು. ಅದು ಕರ್ಣನ ಪಾತ್ರದಲ್ಲಿ ಅವನು ಕಂಡಿರುವ ಆಧ್ಯಾತ್ಮಿಕತೆ; ಸರ್ವಶಕ್ತನೂ, ವಿಧಿಸ್ವರೂಪನೂ, ಮಹಾಭಾರತದ ಲೀಲಾವಿನೋದಿಯೂ ಆದ ಶ್ರೀಕೃಷ್ಣನ ವೈಷ್ಣವಮಾಯೆಗೆ ಒಳಗಾಗುವ ಮಹಾಪುಣ್ಯ ಕರ್ಣನಿಗೂ ಲಭ್ಯವಾದದ್ದು; "ಪರಮ ಕರುಣಾಸಿಂಧು ಕರ್ಣಂಗಿರವೆ ನಿಜಮೂರ್ತಿಯನು ತೋರಿಸಿಯುರುತರ ಪ್ರೇಮದಲಿ ಮುಕ್ತಿಯ ಪದ"ವನ್ನು ನೇಮಿಸಿದ್ದು. ಕರ್ಣಪಾತ್ರದಲ್ಲಿ ಪ್ರಾಚೀನರು ಕಂಡ ಸೌಂದರ್ಯದ ಪರಿಧಿಯನ್ನು ಕುಮಾರವ್ಯಾಸನ ನೋಟ ಅನಂತತೆಯ ದಿಕ್ಕಿನಲ್ಲಿ ವಿಸ್ತರಿಸಿದೆ. ಕರ್ಣನ ಜೀವಿತದ ಮುಖ್ಯ ಸಂದರ್ಭಗಳನ್ನು ಪರಿಭಾವಿಸಿದರೆ ಈ ದೃಷ್ಟಿಗೆ ಸಮರ್ಥನೆ ದೊರೆಯುತ್ತದೆ.

ಕರ್ಣನ ಜನನವಾದದ್ದು ಹುಡುಗಾಟದಲ್ಲಿ,ಅದಕ್ಕೆ ಯಾರ ಸಂಕಲ್ಪವೂ ಹೊಣೆಗಾರಿಕೆ ಹೊತ್ತಿರುವಂತೆ ಕಾಣುವುದಿಲ್ಲ. ಕನ್ಯೆಯಾದ ಕುಂತಿ ಬೊಂಬೆಯಾಟಕ್ಕಾಗಿ ನಿಜವಾದ ಮಗುವನ್ನೇ ತರುವೆನೆಂದು ದೂರ್ವಾಸರಿತ್ತ ಮಂತ್ರವನ್ನು ಧ್ಯಾನಿಸಿದ್ದು, ರವಿಯನ್ನು ಸ್ಮರಿಸಿದ್ದು, ಋಷಿಶಾಪ ತಟ್ಟಬಹುದೆಂಬ ಅಂಕೆಯಿಂದ ಸೂರ್ಯ ಕೆಳಗಿಳಿದು ಬಂದು ಕನ್ಯೆಯನ್ನು ಮುಟ್ಟಿದ್ದು, ಕರ್ಣನ ಜನ್ಮವಾದದ್ದು ಈ ಎಲ್ಲ ಅಂಶಗಳು ಬಲುಬೇಗ ನಡೆದುಹೋಗುತ್ತವೆ. ತನ್ನ ಆಟದ ಪರಿಣಾಮವೇನೆಂಬುದು ಕುಂತಿಗೆ ಆಗ ಹೊಳೆಯಲಿಲ್ಲ. ಸೂರ್ಯ ಬಂದಕೂಡಲೇ ಅವಳು ಬೆಚ್ಚಿ ಬೆವರಿದಳು. ಕರ್ಣ ಹುಟ್ಟಿದಕೂಡಲೇ "ಜನದಪವಾದ ಭೀತಿ" ಅವಳನ್ನು ಮುಸುಕಿತು. ಕುಲದ ಕೀರ್ತಿಯನ್ನು ಕಾಪಾಡುವುದಕ್ಕಾಗಿ ಮಗುವನ್ನು ತೊರೆಯುವ ಒಂದೇ ಮಾರ್ಗ ಅವಳಿಗೆ ತೋರಿದ್ದು. ಆದ್ದರಿಂದ "ಕಂದನ ಕಾಯಿ ಮೇಣ್ ಕೊಲ್ಲೆನುತ" ಗಂಗೆಯಲ್ಲಿ ಅವಳು ಮಗುವನ್ನು ಈಡಾಡಿದಳು. ಹೆತ್ತ ತಾಯಿ ತಳ್ಳಿದರೂ "ಲೋಕದ ತಾಯಿ" ಜಾಹ್ನವಿ ಆ ಮಗುವನ್ನು ತೆರೆಗೈಗಳಿಂದ ದಡಕ್ಕೆ ತಳ್ಳಿ ಬದುಕಿಸಿದಳು. ತಾಯ ಅಕ್ಕರೆಯಿಂದ ವಂಚಿತನಾದ ಮಗುವಿಗೆ ಸೂತನ ಮಡದಿ ರಾಧೆಯ ಪ್ರೀತಿ ತಾನಾಗಿ ಬಂತು. ಅರಮನೆಯಲ್ಲಿ ಬೆಳೆಯಬೇಕಾಗಿದ್ದ ಮಗು ಸೂತ

ಭವನದಲ್ಲಿ ಬೆಳೆಯಬೇಕಾಯಿತು. ಕರ್ಣನ ಬಾಳಿಗೆ ಅಂಟಿಕೊಂಡು ಬಂದ ದುರ್ವಿಧಿ ಅವನ ಜನನದಲ್ಲಿಯೇ ತನ್ನ ಕೈವಾಡವನ್ನು ತೋರಿಸಿದೆ. ಹೀಗಾಗದೆ ಕುಂತಿ ತಾನು ಪಡೆದ ಮಗುವನ್ನೇ ಬೊಂಬೆಯಾಟಕ್ಕೆ ತೆಗೆದುಕೊಂಡು ಹೋಗಿ ಎಲ್ಲರಿಗೂ ತೋರಿಸಿದ್ದರೆ ಕರ್ಣನ ಕಥೆಯೇ ಬೇರೆಯಾಗುತ್ತಿತ್ತು. ತನ್ನ ಮಾನ ಹೋಗುವುದಲ್ಲಾ ಕುಲಕ್ಕೆ ಕಳಂಕ ಬರುವುದಲ್ಲಾ ಎಂಬ ಸ್ವಾರ್ಥ ಚಿಂತನೆ ಮನುಜಸಹಜವಾದ್ದು. ಅದಕ್ಕೆ ವಶಳಾಗಿ ಕುಂತಿ ಕಂದನನ್ನು ಕೈಬಿಟ್ಟಳೆನ್ನುವುದು ಸಾಮಾನ್ಯದೃಷ್ಟಿ. ಆದರೆ ಇದಕ್ಕಿಂತ ಪ್ರಬಲತರವಾದ ಕಾರಣ ಒಂದಿದೆ. ಅದನ್ನು ಕುಮಾರವ್ಯಾಸ ಬೇರೊಂದು ಸಂದರ್ಭದಲ್ಲಿ ಸ್ಪಷ್ಟವಾಗಿಯೇ ಸೂಚಿಸಿದ್ದಾನೆ. ಕರ್ಣ ಬೆಳೆದು ದೊಡ್ಡವನಾಗಿ ಪರಶುರಾಮರಲ್ಲಿ ಅಸ್ತ್ರವಿದ್ಯೆಯನ್ನು ಕಲಿತು ಆ ಮುನಿಯ ಉಗ್ರಶಾಪದಿಂದ ಖಿನ್ನನಾಗಿ ತನ್ನ ಭವನಕ್ಕೆ ಬಂದು ದ್ರೋಣನ ಗರುಡಿಯಲ್ಲಿ ಪ್ರವೇಶಿಸಿ ತನ್ನ ಪರಿಣತಿಯನ್ನು ಪ್ರದರ್ಶನ ಮಾಡಿದ ಸಂದರ್ಭವೇ ಅದು. ಪಾಂಡವರ ಬಾಣವಿದ್ಯಾ ಕೌಶಲವನ್ನು ಕಣ್ಣಾರ ಕಂಡ ಕುಂತಿ ತಾಯ್ತನದ ಹೆಮ್ಮೆಯಿಂದ ಮುಖವರಳಿಸಿಕೊಂಡಿದ್ದಾಳೆ. ಎಲ್ಲರ ಬಾಯಲ್ಲೂ ಪಾಂಡವರ ಹೊಗಳಿಕೆಯೇ; ದುರ್ಯೋಧನಾದಿಗಳ ಮುಖ ದುಗುಡಭಾರದಿಂದ ಬಾಗಿದೆ. ಮೋಡದಿಂದ ಮಿಂಚು ಬಂದಂತೆ ಆ ಸಮಯದಲ್ಲಿ "ಸಾಯಕವ ತೂಗುತ್ತ ಲಾಕರ್ಣಾಯತಾಂಬಕ"ನಾದ ಕರ್ಣ ಎಲ್ಲರೆದುರಿಗೆ ಬಂದುನಿಂತು ಅರ್ಜುನನ "ಬಾಣಾವಳಿಯ ಬಿನ್ನಾಣ"ಕ್ಕೆ ಸರಿಮಿಗಿಲಾದ ಕೌಶಲವನ್ನು ತೋರಿಸುತ್ತಾನೆ. ಅರ್ಜುನನನ್ನು ಸೆಣಸಿ ಹೊಯ್‌ಕಯ್ಯಾಗಿ ನಿಂತನು. ಅವನನ್ನು ಕುಲಹೀನನೆಂದು ಕೃಪನು ತೆಗಳಿದ್ದೂ ಆಯಿತು. ಇದನ್ನೆಲ್ಲಾ ನೋಡುತ್ತಿದ್ದ ಕುಂತಿ "ನೆನೆದಳು ಪೂರ್ವ ಸಂಗತಿಯ ; ಎನ್ನ ಮಗನೆನಬಂದುದಿಲ್ಲಿದು ತನ್ನ ವಶವೇ, ವಿಷ್ಣು ಮಾಯೆಯ ಬಿನ್ನಣವಲೇ, ಮಾತು ಬಿಗಿದುದು ಮನವನೊಳಗಿಕ್ಕಿ" ಈಗಲಾದರೂ ಕುಂತಿ ಕರ್ಣನನ್ನು ತನ್ನ ಮಗನೆಂದು ಒಪ್ಪಿಕೊಳ್ಳಬಹುದಾಗಿತ್ತು ; ಆದರೆ "ವಿಷ್ಣುಮಾಯೆ" ಅವಳ ಬಾಯನ್ನು ಕಟ್ಟಿತು ; ಅವಳ ರಹಸ್ಯ ಅವಳಲ್ಲಿಯೇ ಉಳಿಯಿತು. ಕರ್ಣನ ಬದುಕು ಆ ವಿಷ್ಣುಮಾಯೆಗೆ ವಶವರ್ತಿಯಾಗಿಯೇ ಮುಂದುವರೆಯಿತು ; ಅವನ ಜನ್ಮವೂ ಆ ಮಾಯೆಯ ಪ್ರಭಾವಕ್ಕೆ ಅಧೀನ. ಅದರ ಹೊಣೆಗಾರಿಕೆಗೆ ಕುಂತಿ ನಿಮಿತ್ತಮಾತ್ರಳು.

ಕರ್ಣನಾರೆಂಬುದನ್ನು ಲೋಕಕ್ಕೆ ತಿಳಿಸಬಹುದಾಗಿದ್ದ ಇನ್ನೊಂದು ಅವಕಾಶ ಕುಂತಿಯ ಪಾಲಿಗೆ ಬರುತ್ತದೆ. ಪಾಂಡವ ಕೌರವರಿಗೆ ಮತ್ಸರವು ಮುಸಗಿ ದಳ್ಳುರಿಯಾಗಿ ಹಬ್ಬುವ ಕಾಲ; ಸಂಧಿಗಾಗಿ ಹೋಗಿದ್ದ ಕೃಷ್ಣ ಬೇಕೆಂದೇ ಅದನ್ನು ಮುರಿದು ಸಂಗ್ರಾಮವನ್ನೇ ನಿರ್ಣಯಿಸಿಕೊಂಡು ಬಂದಿರುವ ಹೊತ್ತು; ಕರ್ಣನ ಕುಲಬಲ ವೈಭವಾದಿಗಳ ಸಾರಸಂಗತಿಯ ಸತ್ಯತೆಯನ್ನು ಕೃಷ್ಣ ಅವನಿಗೆ ತಿಳಿಸಿ ಅವನ ಮನದಲ್ಲಿ ಭಯವನ್ನೂ ಮಿಗಿಲಾದ ವ್ಯಾಕುಲ ವನ್ನೂ ಬಿತ್ತಿ ಬೆಳೆಯಿಸಿರುವ ಸಮಯ; ಆಗ ಕುಂತಿ "ಮುರಹರನ ಮತದಿಂದ" ಬಂದಳು ಕರ್ಣನಿದ್ದೆಡೆಗೆ. ರವಿವಾರ, ಭಾಗೀರಥಿಯತೀರ, ಸೂರ್ಯದೇವನಿಗೆ ಅರ್ಘ್ಯವನ್ನು ಕೊಡುತ್ತಿದ್ದಾನೆ. ಕರ್ಣ; ಬಂದ ತಾಯ್ಗೆದಿರಾಗಿ ಕರ್ಣ ಆಕೆಯ ಚರಣದಲ್ಲಿ ಮೈಯಿಕ್ಕಿದನು; ಕುಂತಿಯ ದುಃಖ ಕಣ್ಣೀರಾಗಿ ಹರಿ ಯಿತು. ಗಂಗೆ ನಾರೀರೂಪದಿಂದ ಬಂದು ತನ್ನ ಹೊಣೆಗಾರಿಕೆ ಸಂದಿತೆಂದು ಮಗನನ್ನು ತಾಯ ಕೈಯ್ಯಲ್ಲಿಟ್ಟಳು. ರವಿ ಇಳಿದು ಬಂದು ತಾಯ ಮಾತಿಗೆ ಮರುಳಾಗಬೇಡೆಂದು ಎಚ್ಚರಿಸಿ ಹೋದನು. ಈಗಲಾದರೂ ಕುಂತಿ ತನ್ನ ಉಳಿದ ಮಕ್ಕಳಿಗೆ ಕರ್ಣನಾರೆಂಬುದನ್ನು ಹೇಳಬಹುದಿತ್ತು. ಆದರೆ ಅವಳು ಬಂದಿರುವುದು "ಮುರಹರನ ಮತದಿಂದ" ಹಾಗೆ ಹೇಳಬೇಕೆಂದು ಕೃಷ್ಣನ ಉದ್ದೇಶವಲ್ಲ. "ಮಗನೆ ತಮ್ಮಂದಿರನು ಪಾಲಿಸು, ಹೋದ ಬಾಣವ ಮರಳಿ ತೊಡದಿರು" ಎಂಬಷ್ಟನ್ನೇ ಮಗನಾದ ಕರ್ಣನನ್ನು ಬೇಡಿ ಪಡೆದು ಅವಳು ಮರೆಯಾಗಿ ಹೋಗುತ್ತಾಳೆ. ತಾಯ ಬೇಡಿಕೆ ಮುಖ್ಯವೆಂದು ಭಾವಿಸಿದ ಕರ್ಣ ತಂದೆಯಾದ ಸೂರ್ಯನ ಮಾತನ್ನು ಏಕೆ ಮನ್ನಿಸಲಿಲ್ಲ? ಉತ್ತರಕ್ಕೆ "ವಿಷ್ಣು ಮಾಯೆ"ಯನ್ನೇ ಕೇಳಬೇಕು. ವಿಧಿಸ್ವರೂಪಿಯಾದ ವಿಷ್ಣು-ಕೃಷ್ಣನ ಸಂಕಲ್ಪವೇ ಬೇರೆ.

ಕರ್ಣನ ಜೀವನದಲ್ಲಿ ಕುಂತಿಯೆಸಗಿದ ಕೆಲಸವಿಷ್ಟು. ಅದರ ಪರಿಣಾಮ ಆಜೀವಪರ್ಯಂತ ಕರ್ಣ ಮನದಲ್ಲಿ ಕೊರಗಿದ್ದು. ಸೂತಜ, ಕುಲಹೀನ— ಎಂಬ ನಿಂದೆಯನ್ನು ಕೇಳಿ ಎಷ್ಟು ಸಲ ಅವನು ತಲೆ ತಗ್ಗಿಸಬೇಕಾಯಿತು! ಪ್ರಮುಖ ಸಂದರ್ಭಗಳಲ್ಲಿ ಅದೆಷ್ಟು ಬಾರಿ ಅವನ ತೇಜೋವಧೆ ನಡೆಯಿತು! ಕುಲದ ಮಾತು ಬಂದಾಗಲೆಲ್ಲಾ ಕರ್ಣನ ಬಾಯಿ ಕಟ್ಟಿಬಿಡುತ್ತಿತ್ತು. ದುಃಖ ವೆಗ್ಗಳಿಸುತ್ತಿತ್ತು; ಹೆಡೆಯೆತ್ತಿದ ಉತ್ಸಾಹ ಹಾಗೆಯೇ ತಣ್ಣಗಾಗುತ್ತಿತ್ತು.

ಈ ನಿರಂತರವಾದ ದುಃಖ ಕರ್ಣನ ಸಹಜ ವಜ್ರಕವಚದಂತೆ ಬೆನ್ನಂಟಿ ಬಾಳಿನಂತ್ಯದವರೆಗೂ ಅವನನ್ನು ಕಾಡಿಸಿತು. ತಾನು ಯಾರೆಂಬ ವಿಷಯ ಅವನಿಗೆ ಕೃಷ್ಣ-ಕುಂತಿಗಳಿಂದ ತಿಳಿದ ಮೇಲೂ ಅದು ಅವನಿಗೆ ಹರ್ಷಕರವಾಗದೆ ಮಿಗಿಲಾಗಿ ದುಃಖಕಾರಕವಾಯಿತು ; ಅವನಿಗೆ ನೂತನ ಸಮಸ್ಯೆಗಳನ್ನು ಒಡ್ಡಿತು. ತನಗೆ ಮಾತ್ರ ತಿಳಿದಿದ್ದ ತನ್ನ ಜನ್ಮದ ವೃತ್ತಾಂತವನ್ನು ಅವನು ಇತರರಿಗೆ ಹೇಳುವಂತಿಲ್ಲ ; ಅದರ ಪರಿಣಾಮವು ತನ್ನ ಸ್ವಾಮಿಯಾದ ಕೌರವನ ಮೇಲೆ ಏನಾಗುವುದೋ ಎಂಬ ಚಿಂತೆ ಅವನಿಗೆ. ಆದ್ದರಿಂದ ಕರ್ಣನ ದುರಂತ ಚಿಂತೆಗೆ ಕೊನೆಯೇ ಇರಲಿಲ್ಲ. ಹಲವು ಬಾರಿ ಕೊರಗಿ ಅಳಿದು ಸುರಿದು ನೋಡಿ ತನ್ನ ಪ್ರಾಣವನ್ನು ಪತಿಯ ಅವಸರಕ್ಕೆ ಒಪ್ಪಿಸುವುದೊಂದೇ ಮಾರ್ಗ ಅವನಿಗೆ ಉಳಿದದ್ದು. ಕುಂತಿ ಮಗನನ್ನು ತೊರೆದದ್ದು, ಅವನು ತನ್ನವನೆಂದು ಸಂದರ್ಭಗಳು ಒದಗಿದಾಗಲು ಒಪ್ಪಿಕೊಳ್ಳಲು ಹಿಂಜರಿದದ್ದು, ಕ್ರಮವಾಗಿ ಕರ್ಣನನ್ನು ಸಾವಿನತ್ತ ನಿಷ್ಠುರವಾಗಿ ತಳ್ಳುತ್ತ ಬಂತು. ಕರ್ಣನು ನಿಸ್ತೇಜವಾಗುವುದಕ್ಕೆ ಕುಂತಿ ಬಲುಮಟ್ಟಿಗೆ ಕಾರಣಳು ; ಅಥವಾ ಅವಳನ್ನು ಆಡಿಸಿದ ವಿಷ್ಣು ಮಾಯೆಯ ಪ್ರಭಾವವೇ ಅದು.

ಕರ್ಣನ ಬಾಳನ್ನು ಬರಿದುಮಾಡುವುದಕ್ಕೆ ಅವನಿಗೆ ಸೇರಿದ ಮಾನವ ವ್ಯಕ್ತಿಗಳಷ್ಟೇ ಮಹತ್ತರ ನಿಮಿತ್ತಗಳಲ್ಲ. ಋಷಿಗಳು ದೇವತೆಗಳು ಸಹ ಯಾವುದೋ ಅಂತರ್ಗಾಮಿಯಾದ ಅದೃಷ್ಟ ಶಕ್ತಿಗೆ ವಶರಾಗಿ ಅವನ ತೇಜವನ್ನು ಕುಂದಿಸಲು ತೊಡಗಿದರು. ಪರಶುರಾಮನ ಉಗ್ರಶಾಪವನ್ನು ನೆನೆಯಬಹುದು. ಅವನ ಜೀವಿತದ ಕೊನೆಯ ದಿನದಲ್ಲಿ ಆ ಶಾಪ ಪ್ರಬುದ್ಧವಾಗಿ "ಕರ್ಣ, ನೀನು ಕಾಕಪೌರುಷ" ಎಂದು ಹಂಗಿಸಿದ ಸಾರಥಿ ಶಲ್ಯನಿಗೆ "ತನ್ನಯ ಪಿತೆಯು ಕೇಳೆಂದ" ಎಂದು ಕರ್ಣ ಹಿಂದಿನ ಸಂದರ್ಭವನ್ನು ಸ್ಮರಿಸುವನು. 'ಪರಶುರಾಮನು ಕೊಟ್ಟ ದಿವ್ಯಾಸ್ತ್ರಗಳೆಲ್ಲ ಕಾಳಗಕ್ಕೆ ಒದಗಲರಿಯವು ! ಅಯ್ಯೋ ಕುರುಪತಿ ಪ್ರಣ್ಯಾರ್ಹನನು" ಎಂದು ಕರ್ಣ ನಿಟ್ಟುಸಿರಿಡುವನು. ಇದಕ್ಕಿಂತ ಮುಂಚೆಯೇ ಇಂದ್ರನು ಅವನ ಸಹಜ ವಜ್ರಕವಚವನ್ನು ಬೇಡಿ ಪಡೆದು ಅವನನ್ನು ಅಷ್ಟರಮಟ್ಟಿಗೆ ದುರ್ಬಲವನ್ನಾಗಿ ಮಾಡಿದ್ದನು. ಇಂದ್ರನೆಂಬ ವಜ್ರಕೀಟ ಅವನ ತೊಡೆಯನ್ನಷ್ಟೇ ಕೊರೆಯಲಿಲ್ಲ, ಅವನ ಜೀವಿತದ ಕ್ರೌಂಚಪರ್ವತವನ್ನು ಕುಮಾರಸ್ವಾಮಿಯ ಕೂರ್ಗಣೆಗಳಂತೆ ತೋಡಿ ಹೊಳ್ಳು

ಸ್ವಾಮಿಗಾಗುವ ಕೇಡಿನ ಚಿಂತೆಗೇ ಅವನ ಮನದಲ್ಲಿ ಅಗ್ರಸ್ಥಾನ. "ಕೌರವಂಗವನಿಯಲಿ ಹುಗಲಿಲ್ಲ", "ಕೌರವೇಂದ್ರನ ಕೊಂದೆ ನೀನೆಂದ", "ಕೌರವೇಶ್ವರನೊಲುಮೆ ತಪ್ಪಿಸಿ ಭುವನದೊಳಿನಗಾಪ್ತಜನವಿಲ್ಲ", "ಕೌರವೇಂದ್ರನನದೆಂತು ಮರೆದಪೆನೋ", "ವೀರಕೌರವರಾಯನೇ ದಾತಾರನ್", ಮೊದಲಾತ್ಮಜರಳಿವನು, ಒಡಹುಟ್ಟಿದರ ಮರೆಯಲಿ ಮರೆದನು, ಒಡಹುಟ್ಟಿದರು ನೂರ್ವರು ಮಡಿಯೆ ಮರೆದನು ಎನ್ನ ಸುಳಿವಿನಲಿ, ಕದನವೆನ್ನಯ ಸುಳಿವನೊಳಕೊಂಡುದು, ಸುಯೋಧನ ನೃಪತಿಗಿನ್ನಾವುದನು ಕಾಣೆನು"—ಎಂದು ಕರ್ಣ ಅದೆಷ್ಟು ಬಗೆಯಾಗಿ, ತನ್ನ ಸ್ವಾಮಿಗಾಗಿ, ಸ್ನೇಹಚೋದಿತನಾಗಿ, ಮರುಗಿದನೋ! ಇದನ್ನು ಕುರಿತ ಅವನ ಹೃತ್ಸಂವಾದಗಳು ಕರುಣಾಪೂರ್ಣ ಕಲಶಗಳು ನಾರಣಪ್ಪನ ಪ್ರತಿಭೆಯ ಗಂಗೆ ಆ ಅಕ್ಷಯ ಕಲಶವನ್ನು ಸದಾ ತುಂಬುತ್ತಿರುತ್ತದೆ. ಕರ್ಣ ಮಡಿದರೂ ಆ ಕಲಶ ಉಕ್ಕುತ್ತಿರುತ್ತದೆ. ಸಹಸ್ರಾರು ವರ್ಷಗಳಿಂದ ಕೋಟ್ಯಂತರ ಭಾರತೀಯರ ಮನವನ್ನು ಆ ಸ್ನೇಹದ ಹೊನಲು ತೊಳೆದು ನಿರ್ಮಲವಾಗಿಸಿದೆ ; ಸಾತ್ವಿಕ ಪ್ರೇಮದ ಪವಿತ್ರವಾದ ಆವರಣದಲ್ಲಿ ಅದನ್ನು ಸುಳಿದಾಡಿಸುತ್ತಿದೆ. ಜನದ ಮನವನ್ನು ಅತ್ಯುನ್ನತಿಯ ನೆಲೆಗೆ ಕೊಂಡೊಯ್ಯುವ ವಿಮಾನ ಕರ್ಣನ ಸ್ನೇಹ. ಇಂಥ ಮಹಾಪುರುಷನ ಅವಸಾನ ನಮ್ಮ ದುರ್ಭರವಾದ ಪರಿತಾಪಕ್ಕೆ ಕಾರಣ.

ಕರ್ಣನ ಸತ್ಯಸಂಧತೆ ತ್ಯಾಗಗುಣಗಳು ಲೌಕಿಕ ದೃಷ್ಟಿಯಿಂದ ಅವನ ಮರಣಕ್ಕೆ ಕಾರಣ ; ಪರಮಾರ್ಥ ದೃಷ್ಟಿಯಿಂದ ಅವನ ಜೀವಿತದ ಪರಿಪೂರ್ಣತೆಗೆ ಸಾಧನ. ಅವು ಅವನ ದೌರ್ಬಲ್ಯಗಳಾದರೂ ಅವನನ್ನು ತಲೆಗಾಯ್ದ ಶಕ್ತಿವಿಶೇಷಗಳು ; ವಿಷ್ಣುವಿನ ವಿಭೂತಿಯ ಅಂಶಗಳು. ಅವನು ಮಗುವಾಗಿದ್ದಾಗಲೇ ಅವನ ತ್ಯಾಗ ಸರ್ವವಿದಿತವಾಗಿತ್ತು ; ಹೊಳೆಹೊಳೆವ ಹೊಡೆವರಳಿ ನಡುಹೊಸ್ತಿಲಲಿ ಮಂಡಿಸಿ ಬೀದಿಬೀದಿಗಳೊಳಗೆ ಸುಳಿವರ ಸನ್ನೆಯಲಿ ಕರೆಕರೆದು ನಸುನಗುತ, ಲಲಿತ ರತ್ನದ ಬಾಲದೊಡಿಗೆಯ ಕಳಚಿ ಹಾಯ್ಕುವ ಹೆಸರು ಜಗದಲ್ಲಿ ಬಳೆಯುತಿರ್ದುದು. ಹಬ್ಬಿದುದು ಜನಜನದ ಕರ್ಣದಲಿ" ಕೊಡು ಎಂದು ಕೈಚಾಚಿದ ಇಂದ್ರನಿಗೆ ತನ್ನ ಒಡಹುಟ್ಟಿದ ವಜ್ರ ಕವಚವನ್ನು ಸುಲಿದುಕೊಟ್ಟನು ; ಮಕ್ಕಳನ್ನು ಕಾಪಾಡು, ತೊಟ್ಟ ಬಾಣವನ್ನು ತೊಡದಿರು ಎಂದು ಅತ್ತು ಬೇಡಿದ ತಾಯಿಗೆ ಬೇಡಿದ್ದನ್ನು ಕೊಟ್ಟು

ಸಂತಸವೆಸಗಿದನು. ಅವನು "ತ್ಯಾಗಸಿಂಹಾಸನದ ಮೇಲಿದ್ದಾಗ" ಕೈಯೊಡ್ಡಿ ಬರಿದೆಮರಳಿದವರಿಲ್ಲ. ಅಲ್ಲಿರದೆ ಯುದ್ಧರಂಗದಲ್ಲಿದ್ದಾಗ ಕೂಡ ವಿಪ್ರನಾಗಿ ಬಂದು ಬೇಡಿದ ಕೃಷ್ಣನಿಗೆ ತನ್ನ ಕುಂಡಲಗಳನ್ನು ತನ್ನ ಹೃದಯದ ಅಮೃತ ಕಲಶದ ಧಾರೆಯೊಡನೆ ಅವನಿಗೆ ಸಮರ್ಪಿಸಿದನು. ಅವನ ಜೀವಿತ ಕೃಷ್ಣಾರ್ಪಣವಾಯಿತು ಧನ್ಯವಾಯಿತು. ಈ ಸಮಯಗಳಲ್ಲೆಲ್ಲಾ ಕರ್ಣನಿಗೆ ಚೆನ್ನಾಗಿ ಗೊತ್ತು, ತಾನು ಮಾಡುವ ದಾನದಿಂದ ತನಗೂ, ತನ್ನ ಸ್ವಾಮಿಗೂ ವಿಪತ್ತು ಒದಗುವುದೆಂದು. ಆದರೂ ಅವನು ಸ್ವಲ್ಪವೂ ಅಳುಕಲಿಲ್ಲ ಇಲ್ಲಿ ಅವನ ಸ್ವಾಮಿ ಭಕ್ತಿಗೆ ನ್ಯೂನತೆ ಉಂಟಾಗಿದೆಯೆಂದು ತೋರಬಹುದು. ಕರ್ಣನ ಸತ್ಯವೂ ತ್ಯಾಗವೂ ಅವನ ವೈಯಕ್ತಿಕ ಧರ್ಮಗಳು ; ಅವನ ಅಧ್ಯಾತ್ಮ ಸಾಧನೆಯ ಮಾರ್ಗಗಳು ; ಅವನ ಆತ್ಮದ ಶ್ರೇಯಸ್ಸಿಗೆ ಕಾರಣ ಗಳಾದ ಆದರ್ಶಗಳು. ಇವನ್ನು ಸ್ವಾಮಿಭಕ್ತಿಗೆ ಬಲಿಕೊಡುವುದು ನ್ಯಾಯವೆ? ಸ್ವಾಮಿಗಿಂತಲೂ ಮಿಗಿಲಾದ, ತನ್ನಲ್ಲೂ ಸ್ವಾಮಿಯಲ್ಲೂ ಅಂತರ್ಗತವಾಗಿ ಸರ್ವವ್ಯಾಪಿಯಾಗಿ ಇರುವ, ಅತೀತವಾದ ಆ ಆತ್ಮವಸ್ತುವಿಗೆ ಅವು ಅರ್ಪಣ ವಾಗಬೇಡವೆ ? ಸ್ವಾಮಿಯ ಸ್ನೇಹದಿಂದ ಅವನಿಗೆ ಲಭ್ಯವಾಗಿರುವುದಾದರೂ ಏನು ? ಐಹಿಕ ಲೌಕಿಕ ಸುಖಭೋಗ ಭಾಗ್ಯ ವೈಭವಗಳಲ್ಲವೆ ? ಅವನ್ನು ಉಂಡು ಸುಖಿಸಿದ ದೇಹವನ್ನು "ಪತಿಯವಸರಕ್ಕೆ ನೂಕಿದನು". ಅಲ್ಲಿಗೆ ಮುಗಿಯಿತು ಸ್ವಾಮಿಗೆ ತಾನು ಹೊತ್ತ ಋಣ. ಅದಕ್ಕಾಗಿ ಸತ್ಯ ತ್ಯಾಗಗಳನ್ನು ಅವನು ವಿಸರ್ಜಿಸಬೇಕಾದ ಅವಶ್ಯಕತೆ ಇಲ್ಲ. ಅವನ್ನು ಹಿಡಿದು ಅವನು ಪರಮಾತ್ಮನ ಒಲವನ್ನು ಸೂರೆಗೊಂಡನು. ಲೋಕದ ದುಃಖ ನಿಂದೆ ತಿರಸ್ಕಾರಗಳಿಂದ ನೊಂದುನಲುಗಿ ತಾರಿದ ಅವನ ಆತ್ಮ, ಸತ್ಯ ತ್ಯಾಗಗಳ ಹಲಗೆಯನ್ನು ಮೆಟ್ಟಿ ಪರಸುಖದ ಮಡುವಿನಲ್ಲಿ ದುಮುಕಿ ಅಂತರ್ಗತ ವಾಯಿತು. ಇದರಿಂದ ಕರ್ಣನು ಸತ್ತು ಅಮರನಾದನು.

ಕರ್ಣನ ಜೀವನವನ್ನು ಸಾರ್ಥಕಗೊಳಿಸಿದ ಶಕ್ತಿಯೇ ಶ್ರೀಕೃಷ್ಣ. ಸರ್ವಚೈತನ್ಯಾತ್ಮಕನೂ ಸರ್ವಜ್ಞನೂ ಆದ ಆತನಿಗೆ ಕರ್ಣನ ಬಾಳು ಹೀಗೆ ಹೀಗೆಯೇ ನಡೆಯುವುದೆಂದು ವೇದ್ಯವಾಗಿದ್ದಿರಬಹುದು. ಭೂಭಾರವನ್ನು ಇಳಿಸುವುದೂ ಪಾಂಡವರನ್ನು ರಕ್ಷಿಸುವುದೂ ಅವನ ಸ್ವಧರ್ಮವಾಗಿತ್ತು. ಇದಕ್ಕಾಗಿ ಕರ್ಣನ ಬಾಳಿನಲ್ಲಿ ಅವನ ಪ್ರವೇಶ. ಅಲ್ಲಿ ಆತನು ಕಂಡ ಸತ್ಯ

ತ್ಯಾಗಗಳ ಸಿರಿಗೆ ತಲೆದೂಗಿದನು ; ಮೆಚ್ಚಿದನು, ಮಾರುಹೋದನು. ಕರ್ಣನ ಮನವನ್ನು ಪರೀಕ್ಷಿಸುವ ಮಹಾ ಸಂದರ್ಭದಲ್ಲಿ ಶ್ರೀಕೃಷ್ಣ ಕರ್ಣನ ಘನತೆಯನ್ನು ಲೋಕಕ್ಕೆ ಸಾರಿದ್ದಾನೆ. ಕರ್ಣನ ಕುಲವನ್ನು ಎಚ್ಚರಿಸಿ ಅವನೇ ಪಟ್ಟಕ್ಕೆ ಹಿರಿಯನೆಂದೂ ಸೂರ್ಯಸುತನೆಂದೂ ಉಭಯಪಕ್ಷದವರಿಂದ ಓಲೈಸಿಕೊಳ್ಳುತ್ತ ರಾಜವೈಭವದಿಂದ ಮೆರೆಯಬಹುದೆಂದೂ ದುರ್ಯೋಧನನ ಗದ್ದುಗೆಯ ಕೆಳಗೆ ಜೀಯಾ ಹಸಾದವೆಂಬ ದೀನಸ್ಥಿತಿ ತೊಲಗುವುದೆಂದೂ ಬಗೆಬಗೆಯಾಗಿ ಕೃಷ್ಣನು ಬಣ್ಣದ ಪ್ರಲೋಭನೆಯನ್ನು ಮುಂದೊಡ್ಡಿದಾಗ ಅವರಿಬ್ಬರ ವ್ಯಕ್ತಿತ್ವ ಮಹಿಮೆಗಳು ವೇದ್ಯವಾಗುತ್ತವೆ. ಕೃಷ್ಣನ ಮಾತನ್ನು ಕೇಳಿ ಕರ್ಣನಿಗೆ ಆಶ್ಚರ್ಯ ಭಯ ವಿಷಾದ ಹರ್ಷಗಳ ತುಮುಲಯುದ್ಧವೇ ಉಂಟಾಗುತ್ತದೆ. ಅದರಿಂದ ಅವನು ಚೇತರಿಸಿಕೊಳ್ಳುವುದೇ ಕಷ್ಟವಾಯಿತು; "ತನ್ನ ವಂಶವನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ", "ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ", "ಆಂತಹೆನು ಕುರುನೃಪತಿ" "ಕೌರವನ ಹಗೆ ಹರಿಬ ತನಗೆ", "ಮಹಿಯ ರಾಜ್ಯದ ಸಿರಿಗೆ ಸೋಲುವನಲ್ಲ" "ಪೊಡವಿಯೊಳು ನೀ ಹರಹಿಕೊಳು ನಿನ್ನವರ", "ವೀರರೈವರ ನೋಯಿಸೆನು ರಾಜೀವಸಖನಾಣೆ"— ಎಂಬ ದೃಢನಿಶ್ಚಯದ ಕರ್ಣವಾಣಿಯನ್ನು ಕೇಳಿ ಮುರಹರ "ಮನದೊಳುತ್ಸಾಹಿಸಿದನು". ಕೃಷ್ಣನಿಗೆ ಏಕೆ ಈ ಉತ್ಸಾಹ ? ತಾನು ನಿರೀಕ್ಷಿಸಿದ್ದು ನಡೆಯಿತೆಂದೆ ? ಇರಬಹುದು, ಆದರೆ ಅದು ಅಲ್ಪ ಕಾರಣ. ಕರ್ಣನಂಥ ಸತ್ಯ ಭಕ್ತಿ ಸಂಪನ್ನ ಚೇತನವನ್ನು ಕಂಡು ಕೃಷ್ಣ ಹಿಗ್ಗಿದನು. "ಕರ್ಣ ನಿನ್ನಭ್ಯುದಯವನೆ ಬಯಸುವೆನು", "ನೀ ಸುಖಿಯಾಗು"—ಎಂಬ ಎರಡರ್ಥದ ಮಾತುಗಳು ಕೃಷ್ಣನವು. "ಹರಿಯ ಹೊಗೆ ಜೊಗೆದೋರದುರುಹದೆ ಬರಿದೆ ಹೋಹುದೆ", "ಈ ಗೋಪಾಲ ಬರಿದೇ ಬಿಡನು, ಜೀವವ ಕೊಳ್ಳದಿರನು",—ಎಂದು ಕರ್ಣನ ವಿಶಾಲ ಚಿಂತೆ : ಈ ಸಂದರ್ಭದಲ್ಲಿ "ಒಲಿದವರನುಜ್ಜೀವಿಸುವ ಬಗೆ ಬಲುಹು ಮುರಮಥನಂಗೆ" ಎಂದು ಮೇಲುನೋಟಕ್ಕೆ ಕಂಡರೂ ಕೃಷ್ಣನು ಕರ್ಣನ ಅಭ್ಯುದಯವನ್ನೂ ಸುಖವನ್ನೂ ಬೇರೊಂದು ತೆರದಲ್ಲಿ ಉಂಟುಮಾಡುವ ಇಂಗಿತವನ್ನು ಸೂಚಿಸಿರುವುದು ಕಾಣುತ್ತದೆ.

ಇನ್ನು ಕರ್ಣಾರ್ಜುನರ ಕಾಳಗದ ರುದ್ರಭಯಾನಕ ದೃಶ್ಯ. ಸರ್ಪಾಸ್ತ್ರ
ಕರ್ಣನ ಸತ್ಯಸಂಧತೆಯನ್ನು ಕಂಡು ನಿಷ್ಫಲವಾಗಿ ಹೊರಟು ಹೋಯಿತು.
ರಕ್ತಪ್ರವಾಹದಿಂದ ಕೆಸರೆದ್ದ ಭೂಮಿ ಕರ್ಣನ ರಥದ ಗಾಲಿಯನ್ನು ನುಂಗಿತು.
"ಕೌರವನ ಪುಣ್ಯವಿದೆ ಎನುತ ಮರುಗಿದನು ಕಲಿಕರ್ಣ". "ಗಾಲಿಯನಲುಗಿ
ಕೀಲಚ್ಚಿನಲಿ ಮುಂಗೈಗೊಟ್ಟು ಮೊಳಕಾಲಿನಲಿ ಧರಣಿಯನೌಕಿ, ಮುಗ್ಗಿದ"
ರಥವನ್ನು ನೆಗಹುವ ಕರ್ಣನನ್ನು ಕಂಡು ಕೃಷ್ಣ ಅರ್ಜುನನನ್ನು ಚಮ್ಮಟಿಗೆ
ಯಲಿ ತಿವಿದು, "ಎಸೆ ಮರುಳೆ ಗಾಂಡೀವಿ, ಆಪತ್ತಿನಗಿದಾಗಲೆ ಹಗೆಯ ಗೆಲು
ವುದು ವಸುಮತೀಶರ ನೀತಿ" ಎಂದು ಪ್ರೋತ್ಸಾಹಿಸಿದನು. ಅರ್ಜುನ "ಸಿಕ್ಕಿ
ದನು ಕರುಣಾಲತಾಂಗಿಯ ತೆಕ್ಕೆಯಲಿ". "ಮಾತಿನಲಿ ಮನದಲಿ ಗುಣದಲಿ
ನೀತಿಯಲಿ ಸತ್ವಾತಿಶಯದಲಿ ಸೂತಕುಲದವನಲ್ಲ ಕರ್ಣನದಾರು ಹೇಳೆಂದ"
ಎಂದು ಪರಿಪರಿಯಾಗಿ ಹಲುಬಿದನು. ಕೃಷ್ಣ "ಮನದಲಿ ಮರುಗಿದನು".
ಮಾತಿನಲ್ಲಿ ಕೆರಳಿದನು. "ಕರ್ಣನ ಕೊಲುವನಲ್ಲೆಂದ" ಎಂಬ ಪಾರ್ಥನನ್ನು
"ಕಲಿತನಕೀಸು ಮೊಲೆಗಳು ಮೂಡಿದವೆ" ಎಂದು ಜರೆದು ಜಂಕಿಸಿ "ಬೀಸಿ
ದನು ನಿಜಮಾಯೆಯನು, ಡೊಳ್ಳಾಸದಲಿ ಹರಹಿದನು ತನುವನು. ರೋಷ
ವನು ಬಿತ್ತಿದನು ಮನದಲಿ ನರನ ಕಲಿಮಾಡಿ". ಕರ್ಣನಾದರೊ "ನಲಿಹಿ
ದೊಡೆಯನ ಜೋಳವಾಳಿಗೆ ತಲೆಯ ಮಾರುವುದೊಂದು ಪುಣ್ಯದ ಬೆಳಸು,
ಮರಣದ ಹೊತ್ತು ಕೃಷ್ಣನ ಕಾಬ ಸುಕೃತ ಫಲ, ಇಳೆಯೊಳಿಂದೆನಗಲ್ಲದಾರಿಗೆ
ಫಲಿಸುವುದು, ತಾ ಧನ್ಯನೆನುತೆವೆಹಳಚದಸುರಾಂತಕ"ನನ್ನು ನೆಟ್ಟಕಣ್ಣಿನಿಂದ
ನೋಡುತ್ತಾ "ಹೃದಯಾಂಬುಜದ ಮಧ್ಯಸ್ಥಳದೊಳಗೆ ಮುರವೈರಿಯನು,
ಫಲುಗುಣನ ಮಣಿರಥದಗ್ರಭಾಗದಲಿ ಹೊಳೆವ ಹರಿಯನು ಕಂಡು ಹೊರ
ಗೊಳಗು ಹರಿ ತಾನೆಂಬ ಭೇದವ ತಿಳಿದು ನಿಜದೆಚ್ಚರಿನ ತಪಕದಲಿರ್ದನು".
ಅರ್ಜುನನ ಬಿಲ್ಲ ಹೆದೆಯಿಂದ ಚಿಮ್ಮಿ ಉರಿಯನ್ನುಗುಳುತ್ತಾ ಬಂದ ಅಂಜಲಿ
ಕಾಸ್ತ್ರ ಅವನ ಎದೆಯನ್ನು ಇರಿದರೂ ಅವನ ಪ್ರಾಣ ತೊಲಗಲಿಲ್ಲ.
ಮರ್ಮಜ್ಞನಾದ ಕೃಷ್ಣ ಕರ್ಣನೆದೆಯ ಅಮೃತಕಲಶವನ್ನು ಅವನ ಕುಂಡಲ
ಸಹಿತವಾಗಿ ಪಡೆದನು ; "ಲೋಕೈಕನಾಥನ ನೋಡಿ ಧನ್ಯನೆನುತ್ತ ರವಿಸುತ
ನಿದ್ದ ಭಕ್ತಿಯಲಿ". ಈ ತ್ಯಾಗಕ್ಕೆ ಪ್ರತಿಯಾಗಿ ಕೃಷ್ಣ "ನಿಜಮೂರ್ತಿ
ಯನು ತೋರಿಸಿ ಉರುತರ ಪ್ರೇಮದಲಿ ಮುಕ್ತಿಯ ಪದವ ನೇಮಿಸಿದ".

ಇದೇ ಕೃಷ್ಣನು ಕರ್ಣನಿಗೆ ಬಯಸಿದ ಅಭ್ಯುದಯ, ಸುಖ. ಕೃಷ್ಣನ ಕರುಣೆಯ ಹುಸುಳೆಗಳಾದ ಪಾಂಡವರಿಗೂ ಸುಲಭವಾಗಿ ದೊರೆಯದ ಪರಮಪದ ಅವರಿಗಿಂತ ಮುಂಚೆಯೇ ಕರ್ಣನಿಗೆ ದೊರೆಯಿತು.

ಕರ್ಣನ ಪಾತ್ರದಲ್ಲಿ ಕುಮಾರವ್ಯಾಸ ಅಧ್ಯಾತ್ಮದ ಹೊನ್ನಿನೆಳೆಯನ್ನು ಕಂಡು ಅವನ ಸೌಂದರ್ಯವನ್ನು ಮತ್ತಷ್ಟು ಉಜ್ವಲಗೊಳಿಸಿದ್ದಾನೆ. ಭಾಸ-ಪಂಪರು ಕಂಡರಿಸಿದ ಕರ್ಣವಿಗ್ರಹಕ್ಕೆ ಕುಮಾರವ್ಯಾಸ ಅಧ್ಯಾತ್ಮದ ವಜ್ರ ಕಿರೀಟವನ್ನು ತೊಡಿಸಿದ್ದಾನೆ. ಅದರಿಂದ ಕರ್ಣನ ಮೂರ್ತಿ ನಮ್ಮ ಜನತೆಯ ಮನೋಮಂದಿರದಲ್ಲಿ ಕುಂದದ ಪ್ರಭೆಯಿಂದ ಸಚೇತನವಾಗಿದೆ.

೧೧. ದಾನಚಿಂತಾಮಣಿ ಅತ್ತಿಮಬ್ಬೆ

[illegible]

೧

ಕ್ರಿ. ಶ. ೧೦ನೆಯ ಶತಮಾನದ ಕೊನೆಯ ಭಾಗ : ರಾಷ್ಟ್ರಕೂಟರ ಹಿರಿಮೆಯನ್ನು ಕೊನೆಗಾಣಿಸಿ ಚಾಳುಕ್ಯಸಾಮ್ರಾಜ್ಯವನ್ನು ನಿಲ್ಲಿಸಿದ ಆಹವಮಲ್ಲದೇವ—"ನೂರ್ಮಡಿ ತೈಲಪ"ನ ಆಳಿಕೆಯ ಕಾಲ. "ಆಹವಮಲ್ಲನ ಭುಜಾದಂಡ", "ವಿವೇಕಬೃಹಸ್ಪತಿ" ಎಂಬ ಬಿರುದುಗಳುಳ್ಳ ಮಹಾಮಂತ್ರಿ ಧಲ್ಲಪನ ಹಿರಿಯ ಮಗನಾದ "ಒಟ್ಟಿದಮಲ್ಲ" ನಾಗದೇವನು ತಂದೆಯಂತೆಯೇ ಸ್ವಾಮಿಸೇವಾಧುರಂಧರನಾಗಿ ಅನೇಕ ಸಂಗ್ರಾಮಗಳಲ್ಲಿ ವಿಜಯವನ್ನು ಸೂರೆಗೊಂಡು ಒಡೆಯನ ಮೆಚ್ಚಿಕೆಯನ್ನು, ಸೇನಾಪತಿ ಪದವಿಯನ್ನೂ ಗಳಿಸಿದನು. ಅತ್ತಿಮಬ್ಬೆ, ಗುಂಡಮಬ್ಬೆ ಎಂಬ ಸಹೋದರಿಯರು ಆವನ ಪತ್ನಿಯರು. ಅತ್ತಿಮಬ್ಬೆಗೆ ಅಣ್ಣಿಗದೇವನೆಂಬ ಚಿಕ್ಕವಯಸ್ಸಿನ ಒಬ್ಬನೇ ಮಗ. ಈ ಸಂಸಾರ ಸುಖದ ಮಧ್ಯದಲ್ಲೇ ನಾಗದೇವನು ಸ್ವರ್ಗಗಾಮಿಯಾದನು. ಪತಿಯ "ಪರೋಕ್ಷ"ದಲ್ಲಿ ಈ ಸತಿಯರಿಗೆ ಏನು ಗತಿ ?—

ಎರಡೆ ಪಲುಂ ಕುಲವಧುಗಳ್—
ಗರುವರ್ [illegible] ।
ಚರಣಂ [illegible]
[illegible] ॥

ಎಂದು ಪರಿಚ್ಛೇದಿಸಿ ತನ್ನ ಸ್ವಪತ್ನಿ ಅತ್ತಿಮಬ್ಬೆಯನ್ನುಳಿದು ಗುಂಡಮಬ್ಬೆ ಬಂದು ಬದ್ಧಾಂಜಲಿಯಾಗಿ—

[illegible]
[illegible] ।

ಬೀಯುವದಸ್ತ್ರಿ ಕೊಂಡುಬಿತವಂಗೆ ಬಿತಾಗ್ನಿಯೊಳಗ್ನೆ ಸತ್ತ ಪ
[illegible] ಸಂಪು [illegible] ಬಿಣ್ಣ [illegible] ॥

(ಅಜಿತಪುರಾಣ, ೧. ೯೬, ೭)[1]

೭೦—ಮಹಾಭಾರತದ ಮಾದ್ರಿಯಂತೆ ಹಿರಿಯ ಹೆಂಡತಿ ಪ್ರಿಯನ ದೇಹದೊಡನೆ ಚಿತೆಯೇರಿದಳು; ಅವಳ ಪಾತಿವ್ರತ್ಯವನ್ನು ಲೋಕ ಹೊಗಳಿತು; ಆ "ಮಹಾಸತೀತ್ವ"ದ ಗೌರವವನ್ನು ತಂಗಿಗೆ ಬಿಟ್ಟುಕೊಟ್ಟು, ಪುತ್ರಪಾಲನೆಗಾಗಿ ಕುಂತಿಯಂತೆ ಅತ್ತಿಮಬ್ಬೆ ನಿಂತಳು; ಸಂನ್ಯಾಸವನ್ನು ಸ್ವೀಕರಿಸದೆ ಶ್ರಾವಕಿಯಾಗಿದ್ದುಕೊಂಡೇ ಜೈನವ್ರತನಿಷ್ಠೆಯ ಉಗ್ರದೀಕ್ಷೆಯನ್ನು ನಡೆಸಿದಳು. ಉರಿಯುವ ಕಿಚ್ಚನ್ನು ಪ್ರವೇಶಿಸಬಿದ್ದ ಮಾತ್ರಕ್ಕೆ ಅವಳ ವ್ರತವೇನೂ ಕಿರಿದಾಗಲಿಲ್ಲ.

ಅತಿಮಬ್ಬೆಗೆನ್ನ ತಂಗೆ ಪದಸಾಟಿಯೊಳೊಂದೆ ಮಹಾಸತೀತ್ವದೊಳ್ ಪೆರ್-
[illegible] ಪಿರಿದಪ್ಪ ಪಾಪಮಂ ।
ವ್ರತಪರಿಪಾಲನಿಂದ [illegible] ತನುವಂ [illegible]
[illegible] ಮನೋವಿರೋಧಮುಂ ತನುವಿರೋಧಮುಮೊಪ್ಪಿ [illegible] ಬೆಟ್ಟದೊಳ್ ॥

(೧.೪೯)

ತಾನು ಹಿರಿಯಳಾದ ಕಾರಣ ಹಿರಿದಾದ ಜೀವಾವಧಿಯ ದಾರುಣವ್ರತವನ್ನು ಕೈಕೊಂಡು ಅತ್ತಿಮಬ್ಬೆ ತನ್ನ ದೇಹವನ್ನು ಶೋಷಿಸಿ ಕೃಶಗೊಳಿಸಿಕೊಂಡಳು. ಆಕೆಯಲ್ಲಿ ಮನೋವಿರೋಧವೂ (ಎಂದರೆ, ಕಾಮಪರಾಙ್ಮುಖತೆಯೂ) ತನುವಿರೋಧವೂ (ಎಂದರೆ, ದೇಹದಂಡನೆಯೂ) ಏಕಕಾಲದಲ್ಲಿ ಶೋಭಿಸುವುವು.

---

1 'ಅಜಿತಪುರಾಣ'ದ [illegible] [illegible] [illegible] [illegible] [illegible] [illegible] [illegible] [illegible] [illegible] [illegible].

"ಅತನು ವಿರೋಧಮುಂ ತಪೋವಿರೋಧಮುಂ ಒಟ್ಟಿಗೆ ಅತ್ತಿಮಬ್ಬೆಯೊಳ್ !"—ಈ ವಿರೋಧಾಭಾಸದ ಉಕ್ತಿ ರನ್ನನದು. ಅವನು 'ಅಜಿತಪುರಾಣ'ವನ್ನು ರಚಿಸಿದ್ದು ಅತ್ತಿಮಬ್ಬೆಯ ಆಶ್ರಯದಲ್ಲಿ—ಕ್ರಿ. ಶ. ೯೯೩ ರಲ್ಲಿ. [illegible] ಗಳನ್ನು [illegible] ಬಂದ ಪದ್ಧತಿಯೆಂಬುದು ನಿಜ. [illegible] ಆದರೂ ಅತ್ತಿಮಬ್ಬೆಯನ್ನು ಕುರಿತು ಅಜಿತಪುರಾಣದ ಮೊದಲಿನ ಮತ್ತು ಕೊನೆಯ ಆಶ್ವಾಸಗಳಲ್ಲಿ ಬಂದಿರುವ ಮಾತುಗಳು, ಕೇವಲ [illegible] ರನ್ನನು ಸಲ್ಲಿಸಿದ ಕೃತಿಫಲವಲ್ಲ. ಆಕೆಯ [illegible] ನಿಷ್ಠೆಯೂ [illegible] ರನ್ನನ ಗೌರವವನ್ನು ಗಳಿಸಿ ಆಕೆಯಲ್ಲಿ ತಪಸ್ವಿನಿಯ ತೇಜಸ್ಸನ್ನು ಕಂಡು ಅವನು ಭಕ್ತಿಭಾವದಿಂದ ಪದ್ಯ ಸ್ತುತಿಮಾಲಿಕೆಯನ್ನು ಅರ್ಪಿಸಿದ್ದಾನೆ. ಈ ಕೆಲವು ಪದ್ಯಗಳನ್ನು ಗಮನಿಸಬಹುದು :

[illegible]
[illegible]
[illegible]
[illegible]

[ಅತ್ತಿಮಬ್ಬೆಯ [illegible]]

ಜಿನಪದಭಕ್ತಿ ಜಗದ ಯು
[illegible]
[illegible]
[illegible]

[illegible]
[illegible]
[illegible]
[illegible]

ಅಸಿಲತೆಯೆಂದು ಬಣ್ಣಿಪುದು ಧರ್ಮವಿರೋಧಿಜನಕ್ಕೆ ಧರ್ಮದಿಂ-
ದೆಸೆಪ ಜನಕ್ಕೆ ಕಲ್ಪಲತೆಯೆಂದಳೆ ಬಣ್ಣಿಪುದೆಂಬ ತನ್ನ ಪೆಂ ।
ಪೆಸೆಯೆ ಜಗಜ್ಜನಂ ಪೊಱಿ ಸಂದ ಮಹಾಸತಿಯಂ ತಗುಳ್ದು ಬ-
ಣ್ಣಿಸುವುದು ಪುಣ್ಯಮಲ್ತೆ ಜಿನಧರ್ಮಪತಾಕೆಯನತ್ತಿಮಬ್ಬೆಯಂ ॥

(೧.೭೨)

ಉತ್ತಮಗೋತ್ರೋದ್ಭವೆ ಸ-
ದ್ವೃತ್ತೆ ಮಹಾಸತಿ ವಿನೇಯಚೂಡಾಮಣಿ ತಾ ।
ನೆತ್ತಱಿದರೆತ್ತ ಪಿಕ್ಕುವೊ-
ಡತ್ತಿಯ ಪಣ್ಣತ್ತಿಮಬ್ಬೆಯುಲ್ಲದರ ಗುಣಂ ॥ (೧.೭೩)

ಶೀಲಾಳಂಕೃತೆಯಂ ಗುಣ
ಮಾಲಾಳಂಕೃತೆಯನಾ ಮಹಾಸತಿಯಂ ಶ್ರೀ ।
ತ್ರೈಲಾಂಬಿಕೆಯಂ ಪೆಸಗೊಳ್ಳಳೆ
ಬಾಳಿಯರಂ ಖಳಕಲಂಕನೋ ಪೊರ್ದುಗುವೋ ॥ (೧.೭೪)

ಅಳುರದು ಕೀರ್ತಿ ಮುಟ್ಟದು ದಿಶಾಹಿ ಮಹಾಸತಿಯಿರ್ದ ಮಂಡಲಂ
ಬೆಳೆವುದು ಬೇಡಿದಂತೆ ಮಱಿ ಕೊಳ್ವುದೆನಿಪ್ಪ ಜಸಕ್ಕೆ ನೋಂತ ಭೂ ।
ತಿಳಕ ಪವಿತ್ರೆಯಂ ಗುಣಪವಿತ್ರೆಯನಾ ಸತಿಯಂ ಮಹಾಸತೀ-
ತಿಳಕೆಯನತ್ತಿಮಬ್ಬರಸಿಯಂ ಪೆಸಗೊಳ್ವುದು ಪುಣ್ಯಕಾರಣಂ ॥

(೧.೭೫)

"ಮೊಲೆವೆತ್ತ ತ್ರೈಲಜನನಿಯ ಕೆಲದೊಳ್ ರಂಜಿಪರೆ ಮಿಾಸೆವೊತ್ತ ಅಣ್ಣಂಗಳ್ !" "ತಗಳ್ದು ಬಣ್ಣಿಸುವುದು ಪುಣ್ಯಮಲ್ತೆ ಜಿನಧರ್ಮ ಪತಾಕೆಯಂ ಅತ್ತಿಮಬ್ಬೆಯಂ !" "ಪಿಕ್ಕುವೊಡೆ ಅತ್ತಿಯ ಪಣ್ ಅತ್ತಿಮಬ್ಬೆ ಯುಲ್ಲದರ ಗುಣಂ !"—ಇದೆಲ್ಲ ರನ್ನನ ಹೃದಯದಿಂದಲೇ ಹೊಮ್ಮಿದ ನುಡಿ. ಅತ್ತಿಮಬ್ಬೆಯ ನಾಮೋಚ್ಚರಣೆ ರಕ್ಷಾಮಂತ್ರವೆಂದೇ ಅವನ ದಿಟದ ನಂಬಿಕೆ. ಕೃತಜ್ಞತೆಯ ಜೊತೆಗೆ ಈ ಭಾವನೆಯೂ ಸೇರಿಯೇ ಇರಬೇಕು. ರನ್ನನು ತನ್ನ ಮಗಳಿಗೆ ಅತ್ತಿಮಬ್ಬೆಯೆಂದು ಈ ಪೂಜ್ಯೆಯ ಹೆಸರನ್ನೇ ಇಟ್ಟು ಕರೆದನು !

ಅತ್ತಿಮಬ್ಬೆಯ ಶುಭ್ರಶೀಲವನ್ನು ಉಪಮಿಸುವ ಈ ಪದ್ಯವಂತೂ ಧವಳೋಜ್ಜ್ವಲಮೌಕ್ತಿಕ :

ಬೆಳೆಯರಳೆಯಂತೆ ಗಂಗಾ-
ಜಳದಂತಜಿತಸೇನ ಮುನಿಪತಿಯ ಗುಣಾ- ।
ವಳಿಯಂತೆ ನೆಗಳ್ದ ಕೊಪಣಾ-
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ ॥ (೧೨.೬)

[ಅಜಿತಸೇನಮುನಿ ರನ್ನನ ಪೂಜ್ಯಗುರು; ಕೊಪಣಾಚಳ ಕೊಪಣನಗರದ (ಈಗಿನ ಕೊಪ್ಪಳದ) ಪಕ್ಕದಲ್ಲಿ ಬೆಳಗುವ ಜೈನರ ಪುಣ್ಯಶೈಲ.]

ಅತ್ತಿಮಬ್ಬೆಯ ಸಿರಿಗಳ ದಾನಗುಣವನ್ನು ನೆನೆದು, ಉದಾರ ಹೃದಯರಲ್ಲದವರ ದಾನವನ್ನು ತೆಗಳುವ ಈ ಪದ್ಯ ಚೆನ್ನಾಗಿದೆ :

ಅಲಸುತುಮಿರ್ಪವ ಚಿಂತಿಸುತುಮಿರ್ಪವ ಮೊಗಂಮುರಿದೀವ ಮುಟ್ಟಿ ಮೂ-
ದಲಿಸುತುಮಿರ್ಪವ ಪೆರ್ಚನೊಸೆದೀವತಿಬೆಳ್ಮೆಗದಿಂದಮಿರ್ಪವ ಮ- ।
ಮ್ಮಲನುಮ್ಮುಗುತ್ತುಮಿರ್ಪವ ಕಡುಲೋಭಕದಾನಗುಣಂಗಳಂ ಪಳಂ-
ಚಳಿದವುದಾತ್ತರ್ ಕೂರ್ತರ್ ಪಿರಿದೀವ ಗುಣಂ ಗುಣದಂಕಕಾರ್ತಿಯಾ ?
(೧೨.೧೭)

ದಾನಮಾಡದೆ ವೆಚ್ಚಮಾಡದೆ ಹಣವನ್ನು ಹೂತಿಟ್ಟು ಪೂಜಿಸುವವರನ್ನು ಈ ಪದ್ಯ ಉಪಹಾಸ ಮಾಡುತ್ತದೆ :

ಪಡೆದೆರೆದರ್ಥಿಗೀಯದೆ ಜಪಕ್ಕೆ ತಗುಳ್ಚದೆ ತಮ್ಮ ದಾನಧ-
ರ್ಮದೊಳುಪಯೋಗಮಾಗದುಪಯೋಗಿಸದರ್ಥಮನಾದಮಾನೆಗಂ ॥
ಕಂದುರೆಗಮಾರ್ತರ್ ಪೆಚ್ಚಿಸದೆ ಪೂಜಿಸಿ ಪೂಜಿಸಿಯುಮಿರ್ದ್ದು ಪೂಳ್ದು ಬ-
ಯ್ತುದೆ ಪೆಜಗೆಂಬುದೀ ದೊರೆತು ದಾನಗುಣಂ ಗುಣದಂಕಕಾರ್ತಿಯಾ ॥
(೧೨-೧೮)

ದಾನಧರ್ಮದಲ್ಲಿ ಒಬ್ಬರಿಗಿಂತ ಒಬ್ಬರು ಹಿರಿಯರಾಗಿದ್ದ ಬೂತುಗ–ಮಮಳ, ನೊಳಂಬಾಂತಕ, ಚಾವುಂಡರಾಯ, ಶಂಕರಗಂಡ ಮೊದಲಾದ ಪ್ರಭುಗಳು ಈ ವೇಳೆಗೆ ಸಂದುಹೋಗಿದ್ದರು. ಆ ಭಾರವನ್ನೆಲ್ಲಾ ಅತ್ತಿಮಬ್ಬೆಯೊಬ್ಬಳೇ ಹೊತ್ತು ವಿಸ್ತರಿಸುತ್ತಾ ಎಲ್ಲರಿಗಿಂತ ಹಿರಿಯಳಾಗಿದ್ದಳು. (ಅಜಿತ ಪುರಾಣ, ೧೨.೯). ಅವಳ ಉನ್ನತಿಯನ್ನು ಹೊಗಳಿ. ಆ "ಕೆಟ್ಟಕಾಲ"ದಲ್ಲಿ ತನ್ನ ಕಾವ್ಯವನ್ನು ಕೊಂಡಾಡಿದ್ದಕ್ಕಾಗಿ ರನ್ನನು ಕೃತಜ್ಞತೆ ಸಲ್ಲಿಸುವ ಈ ಪದ್ಯ ಅವನ ಹೃದಯದಿಂದ ಉಕ್ಕಿಬಂದಿದೆ :

ವ್ರತಮಂ ಪೇೞ್ವೊಡೆ ನೋಂತು ತಾಱಿದೊಡಲಂ ಚಕ್ರೇಶನಾಜ್ಞಾಧಿಪಂ
ಸುತನಂ ಪೇೞ್ವೊಡೆ ಚಕ್ರವರ್ತಿಕಟಕಕ್ಕಾರಾಧ್ಯೆಯಾಗಿರ್ದೆಯಾ- ।
ಯತಿಯಂ ಪೇೞ್ವೊಡೆ ಕೆಟ್ಟ ಕಾಲದೊಳಿದಂ ಕೊಂಡಾಡಿದೈ ಧರ್ಮದು-
ನ್ನತಿಯು ಪೆರ್ಚಿಸುವಂದು ನೀನೆ ಪಿರಿಯೈ ಶ್ರೀದಾನಚಿಂತಾಮಣೀ ॥
(೧೨.೮)

ಈ ದಾನಚಿಂತಾಮಣಿಯ ಗುಣಕ್ಕೆ ಸಾಕ್ಷಿ ರನ್ನನಿಂದ ಆಕೆ ಕಾವ್ಯ ಹೇಳಿಸಿದ್ದು ಮಾತ್ರವಲ್ಲ ; ಮಣಿಕನಕಖಚಿತವಾದ ೧,೫೦೦ ಜಿನಪ್ರತಿಮೆಗಳನ್ನು ಮಾಡಿಸಿ ದಾನಮಾಡಿದಳಂತೆ. ಒಂದೊಂದಕ್ಕೂ ಮಣಿಯ ಘಂಟೆ, ಮೇಲ್ಕಟ್ಟು, ದೀಪಮಾಲೆ, ರತ್ನತೋರಣ ಮೊದಲಾದ ಕಣ್ಣು ಕೋರೈಸುವ ಬೆಲೆಬಾಳುವ ಪರಿಕರ ! ಶಾಸ್ತ್ರದ ಮೇರೆಗೆ ಒಂದು ಸಾವಿರ ಪ್ರತಿಮೆಗಳನ್ನು ಮಾಡಿಸಿದ್ದರೇ ಸಾಕಾಗಿತ್ತು. ಆದರೆ ಇನ್ನೂ ಐನೂರನ್ನು ಅಧಿಕವಾಗಿ ಮಾಡಿಸಿದ ಆಕೆಯ ಧರ್ಮಾನುರಾಗವನ್ನು ರನ್ನನು ಕೊಂಡಾಡುತ್ತಾನೆ. (೧.೫೭–೯).

ಇನ್ನು ಅತ್ತಿಮಬ್ಬೆಯ ವ್ರತಮಹಿಮೆಗೆ ಒಂದು ಒಳ್ಳೆಯ ನಿದರ್ಶನ ;

ಉನ್ನತ ಕುಕ್ಕುಟೇಶ್ವರ ಜಿನೇಶ್ವರನಂ ಜಿನಭಕ್ತಿ ವೋಗಿ ಕಾ-
ಣ್ಬನ್ನೆಗಮನ್ನಮಂ ಬಿಸುಟು ಪರ್ವತಮಂ ಪರಿದೇಱೆ ತಜ್ಜಿನಾ- ।
ಸನ್ನದೆ ಅತ್ತಿಮಬ್ಬೆಗೆ ಪಥಶ್ರಮಮಂ ನಾಱಿಲ ಕಾಲವೃಷ್ಟಿ ಯಾ-
ಯೆನ್ನದೊ ದೇವಭಕ್ತಿಗದು ಚೋದ್ಯಮೆ ಕೋಳ್ಪನೆ ಪುಷ್ಪವೃಷ್ಟಿಗಳ್ ॥
(೧.೬೦)

ಚಾವುಂಡರಾಯನು ಶ್ರವಣಬೆಳ್ಗೊಳದಲ್ಲಿ ಕುಕ್ಕುಟೇಶ್ವರಜಿನಮೂರ್ತಿಯನ್ನು (ಎಂದರೆ, ಗೊಮ್ಮಟೇಶ್ವರ ವಿಗ್ರಹವನ್ನು) ಕಡೆಯಿಸಿ ಕೆಲವು ವರ್ಷ ಮಾತ್ರವಾಗಿತ್ತು. ಅದರ ಮಹಿಮೆಯೂ ಪ್ರಸಿದ್ಧಿಯೂ ನಾಡಿನಲ್ಲೆಲ್ಲಾ ಹರಡಿರಬೇಕು. ಈ ಜಿನೇಶ್ವರನ ದರ್ಶನ ಮಾಡಬೇಕೆಂಬ ತೀವ್ರಾಪೇಕ್ಷೆ ಅತ್ತಿಮಬ್ಬೆಯಂಥ ಜಿನಭಕ್ತೆಗೆ ಸಹಜವಾಗಿಯೇ ಒದಗಿತು. ಮೂರ್ತಿಯನ್ನು ಕಾಣುವವರೆಗೆ ಅನ್ನವನ್ನು ಮುಟ್ಟೆನೆಂಬ ಕಠಿಣ ನಿಯಮವನ್ನು ಈಕೆ ಹಿಡಿದು, ಉತ್ತರದ ಚಾಳುಕ್ಯ ರಾಜಧಾನಿಯಿಂದ ದಕ್ಷಿಣದ ಶ್ರವಣಬೆಳ್ಗೊಳಕ್ಕೆ ಪಯಣಿಸಿ, ಬೆಟ್ಟವನ್ನೇರಿ ಗೊಮ್ಮಟೇಶ್ವರನ ಸಮೀಪದಲ್ಲಿ

ನಿಂತಳು. ಆಗ ಅಕಾಲವಾದರೂ—ಈಕೆಯ ಮಾರ್ಗಶ್ರಮ ಪರಿಹಾರವಾಗು ವಂತೆ—ಮಳೆ ಕರೆಯಿತು ! ದೇವಭಕ್ತಿಯ ವಿಷಯದಲ್ಲಿ ಇದೊಂದು ಆಶ್ಚರ್ಯವೆ. ಪುಷ್ಪವೃಷ್ಟಿಗಳಾಗುವುದಿಲ್ಲವೆ ?—ಎಂದು ರನ್ನನು ಕೇಳು ತ್ತಾನೆ. ಚಾವುಂಡರಾಯನ ಆಶ್ರಿತನಾಗಿದ್ದ ರನ್ನನೂ ಆಗ ಅಲ್ಲಿ ಇದ್ದು ಈ ಚೋದ್ಯವನ್ನು ಕಣ್ಣಾರ ಕಂಡನೇನೋ. ಅತ್ತಿಮಬ್ಬೆಯ ಮೊದಲ ದರ್ಶನ ರನ್ನನಿಗೆ ಅಂದೇ ಆಗಿ, ಆ ಮುಂದೆ, ಅವಳ ಆಶ್ರಯವನ್ನು ಅವನು ಪಡೆದನೇನೋ.

೨

ಧಾರವಾಡ ಜಿಲ್ಲೆಯ ಗದಗು ತಾಲ್ಲೂಕಿನ ಲಕ್ಕುಂಡಿ ಗ್ರಾಮದ ಜೈನ ಬಸದಿಯ ಕೆಲವು ಪ್ರಾಚೀನ ಶಾಸನಗಳು ಇತ್ತೀಚೆಗೆ ಬೊಂಬಾಯಿ ಕರ್ನಾಟಕ ಶಾಸನಸಂಗ್ರಹ ಸಂಪುಟದಲ್ಲಿ ಮುದ್ರಿತವಾಗಿ ಪ್ರಸಿದ್ಧಿಗೆ ಬಂದಿವೆ. (S.I.I.XI–I : Bombay Karnataka Inscriptions Volume 1 Part. 1). ಈ ಸಂಪುಟದಲ್ಲಿ ೫೨, ೫೩ ಎಂದು ಸಂಖ್ಯೆ ಕೊಟ್ಟಿರುವ ಎರಡು ಶಿಲಾಶಾಸನಗಳು ಅತ್ತಿಮಬ್ಬೆಗೆ ಸಂಬಂಧಿಸಿದವು. ೫೩ನೆಯದನ್ನು ಕೊರೆದಿದ್ದ ಶಿಲಾಪಟ್ಟವು ಒಡೆದುಹೋಗಿ ಅದರ ನಾಲ್ಕು ಚೂರುಗಳು ಬಸದಿಯ ಪೌಳಿ ಯೊಳಗೆ ಬಿದ್ದಿವೆಯೆಂದೂ, ಬಹುಶಃ ಇದು ತುಂಬ ಭಿನ್ನವಾದ ಕಾರಣದಿಂದಲೇ ಇವರ ವಸ್ತುವನ್ನು ಬಸದಿಯ ಸಮೀಪದಲ್ಲಿ ನಿಲ್ಲಿಸಿರುವ ೫೨ನೆಯ ಶಾಸನದಲ್ಲಿ ಕೊರೆದಿರಬಹುದೆಂದೂ ಸಂಪಾದಕರು ಊಹಿಸಿದ್ದಾರೆ.[2] ೫೩ನೆಯ ಶಾಸನ ಈಗಿರುವ ರೀತಿಯಲ್ಲಿ ಅತ್ಯಂತ ತ್ರುಟಿತವಾಗಿದೆ. ಇದರಲ್ಲಿ ಇನ್ನೂ ಉಳಿದಿರುವ ಭಾಗಗಳನ್ನು ಹೋಲಿಸಿ ನೋಡಿದರೆ ೫೨ನೆಯ ಶಾಸನದ ಪೂರ್ವಭಾಗವೆಲ್ಲ ಒಟ್ಟಿನ ಮೇಲೆ ಇದರ ನಕಲೇ ಆಗಿರಬೇಕೆಂದು ಸಂದೇಹವಿಲ್ಲದೆ ಹೇಳಬಹುದು.

2 "This inscription (No. 53), which is very much mutilated, is almost a copy of the foregoing record (No 52) except in the last few lines It is not improbable that the previous inscription was engraved in consequence of the breakage in the stone containing the present epigraph...." (S.I.I. XI-I, P 43)

ಕೆಲವು ಅಕ್ಷರಗಳೂ ಮಾತುಗಳೂ, ಲಿಪಿಕಾರನ ಪ್ರಮಾದದಿಂದಲೋ ಏನೋ, ಅಲ್ಲಲ್ಲಿ ವ್ಯತ್ಯಾಸವಾಗಿರುವುದುಂಟು ; ಕೆಲವು ಮಾತು ಸೇರಿರುವುದೂ ಉಂಟು. ಆದರೆ ಇಷ್ಟುಮಾತ್ರಕ್ಕೇ ಇವೆರಡನ್ನೂ ಸ್ವತಂತ್ರವಾದ ಎರಡು ಶಾಸನಗಳೆಂದು ಭಾವಿಸದೆ, ೫೩ರ ಅತಿವಿಪುಲವಾದ ಗ್ರಂಥಪಾತಗಳನ್ನು ಕೂಡಿಸಿಕೊಳ್ಳಲು ಐವತ್ತೆರಡನ್ನು ಅವಲಂಬಿಸಿ ಇವುಗಳ ಒಟ್ಟು ಹೇಳಿಕೆಯನ್ನು ಗಮನಿಸಬಹುದು.

೫೨ನೆಯ ಶಾಸನವನ್ನು ಕುರಿತು, ಇನ್ನೊಂದು ಮಾತು. ಈ ಶಾಸನ ಶಿಲೆಯಲ್ಲಿ ೫೩ರ ವಸ್ತುವಿನ ಉಲ್ಲೇಖವಾದ ಬಳಿಕ, ಇನ್ನೂ ಹೆಚ್ಚಿನ ಬರೆಹವಿದೆ. "ಸಾಸಿರ್ವರು"–ಎಂದರೆ, "ಲೊಕ್ಕಿಗುಣ್ಡಿಯೂರೊಡೆಯ ಪ್ರಮುಖ ಮಹಾಜನ ಸಾರ್ಸಿರ್ವರು"–ಈ ಬಸದಿಗೆ ಬ್ರಹ್ಮಜಿನಾಳಯವೆಂದು ಹೆಸರಿಟ್ಟರೆಂದೂ, ಗ್ರಾಮಾಧಿಪನು ಮೂರು ಪರ್ವಗಳಲ್ಲಿ ಇಲ್ಲಿಗೆ ಸಕಲ ಪರಿಕರಗಳೊಡನೆ ಒಂದು "ಸೇಸೆಗೊಣ್ಡು ಬಲಂಗೊಣ್ಡು ಪೋದ"ನೆಂದೂ ಮೂರು ಪದ್ಯಗಳಿಂದ ತಿಳಿಯಬರುತ್ತದೆ. ಬಳಿಕ "ಮಹಾಸತೀರತ್ನಮತ್ತಿಮಬ್ಬರಸಿಯರ್" ಎಂಬ ಉಕ್ತಿಯಿದೆ. ಆಮೇಲೆ ಬಹುಶಃ ಕೆಲವು ಕಾಲ ಕಳೆದ ಬಳಿಕ ರಚಿತವಾದ ಇನ್ನೊಂದು ಶಾಸನ ಬಂದಿದೆ. ಬಸತಿಗೆ ಪೂಜಾನಿಮಿತ್ತವಾಗಿ ತೋಟ ಮೊದಲಾದದ್ದನ್ನು ಮಹಾಜನ ಸಾಸಿರ್ವರಿಂದ ಪಡೆದ ವಿಷಯ ಇದರ ವಸ್ತು. ಇದರ ಅಂತ್ಯಭಾಗದಲ್ಲಿ ಬರುವ ಈ ಪದ್ಯಗಳು ಗಮನಾರ್ಹವಾದವು :

ಪರಮಶ್ರೀಜಿನಧರ್ಮಾಂ-
ಬುಜರವಿ ಸಿರಿಪಾಳಸೆಟ್ಟಿಯಾತ್ಮಜನುದ್ಯ-।
ಚ್ಚರಿತಂ ಬಾಹುಬಲಿ ಸವಿ-
ಸ್ತರದಿಂ ಪಂ ಬರೆಪನೆಂಪೊಡಾರ್ ಪೊಗ[ೞ]ರಿದಂ ॥

ನಿರುಪಮಮುತ್ತಿಯಬ್ಬೆಯ ಜಿನೇಂದ್ರಗೃಹಂ ಧರಣೀತಳಕ್ಕೆ ಬೀ-
[ತ್ತಿರೆ]ಪೊಸತಾಗಿ ದೆಯ್ಯಭಟಾರಾರ್ಯರಿನಾ ಭಟಾರಾರ್ಯರಿಂ ಬ[ೞಿ]-।
ಕ್ಕೆ ಬಂದುದು.... ಸ್ವಧತ್ತಿ ಬೆಂಪತೆ ಸುಸ್ದರವಾಗೆ ನಾಕಿಯಿಂ
ಪರಮಪರೋಪಕಾರಿ ಸಿರಿಪಾಳನಸೇ[ಂ] ಪರಿಪೂರ್ಣಮಾಡು[ದೋ]-॥

ಇದರಿಂದ, ಅತ್ತಿಮಬ್ಬೆ ಕಟ್ಟಿಸಿದ ಬಸದಿ ಕುಸಿದುಬಿದ್ದಿತ್ತೆಂದೂ, ಅದನ್ನು ದೆಯ್ಯಪ್ರಭರತಾರ್ಯ, ನಾಕಿ, ಸಿರಿಪಾಳ—ಇವರು ಕಾಲಕಾಲಕ್ಕೆ ಜೀರ್ಣೋದ್ಧಾರ ಮಾಡಿದರೆಂದೂ, ಸಿರಿಪಾಳಸೆಟ್ಟಿಯ ಮಗನಾದ ಬಾಹುಬಲಿ ಶಾಸನವನ್ನು ಸವಿಸ್ತರವಾಗಿ ಬರೆದನೆಂದೂ ಗೊತ್ತಾಗುತ್ತದೆ. ದೇವಾಲಯದೊಂದಿಗೆ ಮೂಲಶಾಸನವೂ ಬಿದ್ದುಹೋಗಿರಬೇಕು. ಅದನ್ನೂ ಜೀರ್ಣೋದ್ಧಾರಮಾಡಿ ಶಿಲಾಪಟ್ಟದ ಮೇಲೆ ಮತ್ತೆ ಉಲ್ಲೇಖಿಸಿ, ಪ್ರಸಕ್ತ ಕಾಲದ ಬಾಹುಬಲಿ ರಚಿತವಾದ ಶಾಸನವನ್ನು ಕೊನೆಗೆ ಸೇರಿಸಿದರೆಂದು ತೋರುತ್ತದೆ.

ಇನ್ನು ಅತ್ತಿಮಬ್ಬೆಯ ಶಾಸನದ ಕಡೆ ತಿರುಗೋಣ. "ಅತ್ತಿಮಬ್ಬರಸಿಯರ್ ಸಕಳಗೂರ್ಜರವಿಜಯಾನನ್ತರಂ ಶ್ರೀಮದಾಹವಮಲ್ಲದೇವಂಗೆ ಬಿನ್ನಪಂಗೆಯ್ದು ಚಕ್ರವರ್ತಿದತ್ತಿಪ್ರಖ್ಯಾತಮಪ್ಪ ಶಾಸನಮಂ ಪೊನ್ನಕಳಶಂಬೆರಸು ಪಡೆದು ಸಕವರ್ಷ ೯೨೯ನೆಯ ಪ್ಲವಂಗ ಸಂವತ್ಸರದ ಫಾಲ್ಗುಣಮಾಸದ ನನ್ದೀಶ್ವರದಷ್ಟ[ಮಿ]ಯುಂ ಬೃಹಸ್ಪತಿವಾರದಂದು ಶುಭಲಗ್ನೋದಯದೊಳ್ ಮಹಾಧ್ವಜ ಮಹಾಭಿಷೇಕ ಮಹಾದಾನ ಧರಣಾನನ್ತರಂ ತಮ್ಮ ಗುರುಗಳು ಸೂರಸ್ತಗಣದ ಕೌಱೂರ್ಗಚ್ಛದ ಅರ್ಹನನ್ದಿ ಪಣ್ಡಿತದೇವರ್ಗೆ ಶ್ರೀಲೋಕ್ಕಿಗುಣ್ಡಿಯೊಳ್ ಬಸದಿಯಂ ಮಾಡಿಸಿಯದರ್ಕ್ಕೆ ತಳವೃತ್ತಿಯೆಂದು"[3] ಸುಱುಕಿಯೆಂಬ ಗ್ರಾಮ (?) ವನ್ನು ಕೊಟ್ಟದ್ದು ಇದರ ವಿಷಯ ಶಾಸನದಲ್ಲಿ ಉಕ್ತವಾಗಿರುವ ಕಾಲ ಶಕವರ್ಷ ೯೨೯ : ವಾರದ ದಿನಕ್ಕೆ ಪ್ರಾಮುಖ್ಯಕೊಟ್ಟು

---

೩. ಮೇಲೆ ಕೊಟ್ಟಿರುವುದು ೫೩ನೆಯ ಶಾಸನದಲ್ಲಿ ದೊರೆಯುವ ಪಾಠ. ೫೩ರಲ್ಲಿ ಈ ಭಾಗ ಈ ಮುಂದೆ ಕೊಟ್ಟಿರುವಂತಿದೆ. (ಗ್ರಂಥಪಾತವನ್ನು × × × ಹೀಗೆ ತೋರಿಸಿದೆ)—"× × × ಯಾನನ್ತರಂ ಶ್ರೀಮದಾ[ಹವ]ಮಲ್ಲ ದೇವರಿಗೆ ಬಿನ್ನ ಪಂಗೆ × × × ಶಾಸನಮುಂ ಪಡೆದು । ಶಕನೃಪಕಾಲಾಕ್ರಾನ್ತ ಸಂವ × × × ಗ ಸಂವತ್ಸರಂ ಪ್ರವರ್ತಿಸೆ ಫಾಲ್ಗುಣ ಮಾಸದ ನನ್ದೀಶ್ವರದಷ್ಟಮಿ × × × ಭಲಗ್ನೋದಯದೊಳ್ ಮ.ಹಾಧ್ವಜ ಮಹಾಭಿಷೇಕೋತ್ಸವದೊಳ್ ಮಹಾ × × × ತ್ತಿಯಬ್ಬರಸಿಯುಂ ಲೊಕ್ಕಿಗುಣ್ಡ ಮಹಾಗ್ರಾಮದೊಳ್ ತಮ್ಮ ಗುರುಗಳ್ ಅ × × × ಕರ್ಗೆ ಬಸದಿಯುಂ ಮಾಡಿಸಿಯದರ್ಕೆ ತಳವೃತ್ತಿಯೆನ್ದು." ೫೩ನೆಯ ಶಾಸನದಲ್ಲಿ ವರ್ಷ ಸಂಖ್ಯೆ ನಷ್ಟವಾಗಿರುವುದು ತೋರುತ್ತದೆ; "× × × ಸಂವತ್ಸರಂ" ಎಂಬುದು "[ಪ್ಲವಂ]ಗ ಸಂವತ್ಸರಂ" ಎಂದೇ ಇದ್ದಿರಬಹುದು.

ಇದು ಕ್ರಿ.ಶ. ೧೦೦೬ಕ್ಕೆ ಸರಿಹೋಗುವುದೆಂದು ಶಾಸನ ಸಂಪಾದಕರು ನಿರ್ಧರಿಸಿದ್ದಾರೆ. ಆಗ ಚಾಲುಕ್ಯ ಚಕ್ರವರ್ತಿಯಾಗಿದ್ದವನು ಆಹವಮಲ್ಲ-ನೂರ್ಮಡಿತೈಲಪನ ಮಗನೂ ರನ್ನಕವಿಯ 'ಗದಾಯುದ್ಧದ' ನಾಯಕನೂ ಆದ ಇರಿವಬೆಡಂಗ ಸತ್ಯಾಶ್ರಯ. ಶಾಸನದ ಈ ಭಾಗದಲ್ಲಿ, ಮೇಲೆ ಉದಾಹರಿಸಿದಂತೆ, "ಶ್ರೀಮದಾಹವಮಲ್ಲದೇವಂಗೆ ಬಿನ್ನಪಂಗೆಯ್ದು" ಎಂದು ಇರುವುದಲ್ಲದೆ, ಶಾಸನದ ಪ್ರಾರಂಭದಲ್ಲೂ "ಶ್ರೀಮದಾಹವಮಲ್ಲದೇವರ ರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕ ತಾರಂಬರಂ ಸಲುತ್ತಮಿರೆ" ಎಂದು ಇರುವುದರಿಂದ ದಾನದ ಕಾಲದಲ್ಲಿದ್ದ ಚಕ್ರವರ್ತಿಯ ಹೆಸರು "ಆಹವಮಲ್ಲ" ಎಂದೇ ಆಗಿತ್ತೆಂದು ಸ್ಪಷ್ಟವಾಗುತ್ತದೆ. ಇದುವರೆಗೆ ತಿಳಿದಮಟ್ಟಿಗೆ ಆಹವಮಲ್ಲ ಎಂಬುದು ನೂರ್ಮಡಿತೈಲಪನ ಹೆಸರು ; ಚರಿತ್ರಕಾರರು ನಿರ್ಧರಿಸಿರುವ ಮೇರೆಗೆ ಆತನ ಆಳಿಕೆಯ ಕಾಲ ಕ್ರಿ.ಶ. ೯೭೩-೯೯೭ ; ಆತನ ಮಗ ಇರಿವಬೆಡಂಗ ಸತ್ಯಾಶ್ರಯನ ಕಾಲ ಕ್ರಿ.ಶ. ೯೯೭-೧೦೦೮. ಹೀಗಿರುವುದರಿಂದ, ಈ ಶಾಸನದಲ್ಲಿ ಆಹವಮಲ್ಲ ಎಂಬ ಹೆಸರು ತಂದೆ ತೈಲಪನಿಗೆ ಅನ್ವಯಿಸಬೇಕಾಗುತ್ತದೆ. ಶಾಸನದ ಸಂಪಾದಕರು ಈ ಅಭಿಪ್ರಾಯವನ್ನು ಅಂಗೀಕರಿಸಿದಂತೆ ತೋರಿದರೂ[4] ಇದು ಇನ್ನೂ ವಿಚಾರಾರ್ಹವಾದ ಅಂಶ. ಇರಿವಬೆಡಂಗ-ಸತ್ಯಾಶ್ರಯನಿಗೂ ಆಹವಮಲ್ಲ ಎಂಬ ಹೆಸರು ಇತ್ತೆಂಬುದಕ್ಕೆ ಬೇರೆ ಏನಾದರೂ ಪ್ರಮಾಣ ಉಂಟೆ? ಅವನ ನಿಜವಾದ ಹೆಸರು ಈ ಶಾಸನದಲ್ಲೇಕೆ ಕಾಣಿಸಿಕೊಂಡಿಲ್ಲ ? 'ಚಕ್ರವರ್ತಿಯ ಬಿರುದು' ಕೈಗೊಂಡಿದ್ದು ಯಾವಾಗ? ಶಾಸನದ ಕಾಲವನ್ನು ಉಲ್ಲೇಖಿಸುವುದರಲ್ಲೇನಾದರೂ ತಪ್ಪಾಗಿರಬಹುದೆ? ಅಥವಾ ಚಕ್ರವರ್ತಿ ಪತ್ರವನ್ನು ಪಡೆದುದ್ದು ಮುದ್ರೆಯನ್ನು ಕೊಟ್ಟದ್ದು ಬೇರೆ ಬೇರೆ ಕಾಲದಲ್ಲಿರಬಹುದೆ?" ಈ ಮೊದಲಾದ ಪ್ರಶ್ನೆಗಳು

---

4 "On account of the date the record has to be assigned to the time of Irivabedanga Satyasraya, who must have also had the surname of title of Ahavamalla" (S.I.I., XI-1, P. 39).

[illegible]

[illegible]

ಭಾಸುರವಾಯ್ತು ಜಿನೇಂದ್ರಾ-
[illegible]

ಎಂದು ಪ್ರಕೃತದ [illegible]

[illegible] ಇವೆಲ್ಲವೂ ನಡೆದ "ಸಮಾಧಿ"ಗಳನ್ನು ಸೂಚಿಸುತ್ತವೆ :

ನರಪನ ಬೆಸದಿಂ ಜಿನನಂ
ಶಿರದೊಳ್ ಸಲೆ ತಾಳ್ದಿ ದಾನಚಿಂತಾಮಣಿ ನಿ–।
ರ್ಝರ ಗೋದಾವರಿಯಂ ಪುಗೆ
ಪರಿಯುಡುಗಿದುದೆಂದೊಡೊಳ್ಪನದ ನೇವೇ[ೞ್ವಂ] ॥

ಮದವತ್ಸರಿ ಸೆಱೆಯಿಂ ಪೞ–
ದೊದವಿದ ಮುಳಿಸಿಂದೆ ಘೋರನೆಯ್ತಂದೊಡದ–।
ರ್ಕದಿರ್ದಿರೆ ಭಕ್ತಿಯಿಂದದು
ಪದಯುಗಕೆಱಗಿದುದು ದಾನಚಿಂತಾಮಣಿಯ ॥

ಮುದದರ್ಚಿಪ ಜಿನಬಿಂಬಂ
ನದಿಯೊಳ್ ಕಯ್ಪ್ಪಿದರ್ಕಿ ಬಿೞ್ದೊಡದು ಬಪ್ಪಿನಮು–।
ೞ್ಪದನು[ೞಿ]ದಿರಲೆಂಟು ದಿನ–
ಕ್ಕದು ಬಂದುದು ಕಯ್ಗೆ ದಾನಚಿಂತಾಮಣಿಯ ॥

ಪ್ರ[ಳ]ಯಾಗ್ನಿಯಂತೆ ಕಟಕಮು–
ನೊಳಕೊಂಡಳುರ್ವಗ್ನಿ ದಾನಚಿಂತಾಮಣಿ ನಿ–।
ರ್ಮಳ[ಜಿ]ನ ಗಂಧೋದಕಮಂ
ತಳಿಯಲ್ಕುಪಶಮಿಸಿತೆಂದೊಡೇವ[ಣ್ಣಿ[ಸುವೆ[ಂ] ॥

ಒಡನೇಱೆ ಸವತಿ ನೂಂಕ–
ಲ್ಕೊಡರಿಸೆ ತೊಱೆಯೊಳಗೆ ಪ[ಱು]ಗಲತ್ತಿತ್ತಲಣಾ।
ಮಿಡುಕದೆ ತಿರಿಯುತ್ತಿರೆ ಕಂ–
ಡಡಿಗೆಱಗಿದಳತ್ತಿಯಬ್ಬೆ[ಗ]ತಿಭಯವಶದಿಂ ॥[5]

ಜಿನಧರ್ಮಪತಾಕೆಗೆ ವಿಮ–
ಳ ನರ್ಮದಾನದಿಯ [ಕು]ರುಳ ಪಾವೆಯು ಜಿನನಂ।
ವಿನುತಂ ಕಾಣ್ಬೆನೆಗಂ ಕೂ–
(ೞ)ನೆ ತೊಱೆದುದು ಸಂದುದುನ್ತದಾ ಜನ್ಮಾಂಶಂ ॥

---

5 ಅತ್ತಿಮಬ್ಬೆ ಎಂದು ಮಾತ್ರವಲ್ಲದೆ ಅತ್ತಿಯಬ್ಬೆ, ಅಕ್ಕಬ್ಬೆ—ಎಂಬ ರೂಪಗಳಲ್ಲೂ ಈಕೆಯ ಹೆಸರು ಬೇರೆ ಬೇರೆ ಕಡೆಗಳಲ್ಲಿ ದೊರೆಯುತ್ತದೆ.

ಹೀಗೆ ಅತ್ತಿಮಬ್ಬೆಯ ಮಹಿಮಾಸ್ತವವನ್ನು ಈ ಶಾಸನದಲ್ಲಿ ಕಡೆಯಿಸಿ ನಿಲ್ಲಿಸಿದ ಕವಿ ಯಾರು ? ಇದರ ಕಂದವೃತ್ತಗಳ ಧಾಟಿಯನ್ನೂ ಗದ್ಯದ ಬಿಗಿಯನ್ನೂ ನೋಡಿದರೆ ಈತನು ವಿಶೇಷ ಸಮರ್ಥನಾಗಿರಬೇಕೆನಿಸುತ್ತದೆ. ರನ್ನನ ಅಜಿತಪುರಾಣದ ಕೆಲವು ಹೇಳಿಕೆಗಳು ಈ ಶಾಸನದಲ್ಲೂ ಬಂದಿವೆಯೆಂದು ವಾಚಕರಿಗೆ ಈಗಾಗಲೇ ಗೊತ್ತಾಗಿರಬೇಕು. ಅಷ್ಟೇ ಅಲ್ಲ 'ಉನ್ನತ ಕುಕ್ಕುಟೇಶ್ವರ....' ಎಂಬ ಅಜಿತಪುರಾಣದ ಪದ್ಯ (೧.೬೦) ಈ ಶಾಸನದಲ್ಲಿ ಉದ್ಧೃತವಾಗಿದೆ; ಈ ಶಾಸನದಲ್ಲಿ ಉಂಟೆಂದು ಮೇಲೆ ಉದಾಹರಿಸಿರುವ 'ಜಿನಪದಪಂಕಜಭ್ರಮರ....' ಎಂಬ ಪದ್ಯವೂ ಅಜಿತಪುರಾಣದಲ್ಲಿ ಆಗಲೆ ಕಾಣಿಸಿಕೊಂಡಿದೆ (೧.೬೮). ಇದರ ಮೇಲೆ, ಅತ್ತಿಮಬ್ಬೆಯ ಪ್ರಶಸ್ತಿಗಳಲ್ಲಿ ರನ್ನನಿಗೆ ಪ್ರಿಯತಮವಾದ 'ದಾನಚಿಂತಾಮಣಿ' ಎಂಬುದಕ್ಕೆ ಈ ಶಾಸನದಲ್ಲಿ ಹೆಚ್ಚಿನ ಪ್ರಾಮುಖ್ಯ ದೊರೆತಿದೆ. ಜಿನಧರ್ಮಪತಾಕೆ ದಾನಚಿಂತಾಮಣಿ ಅತ್ತಿಮಬ್ಬೆಯ ಔದಾರ್ಯಕ್ಕೆ ಕಳಶವಿಟ್ಟಂತೆ ಒಪ್ಪುವ ದಾನ, ಜೊತೆಗೆ ಅದಕ್ಕೆ "ಚಕ್ರವರ್ತಿದತ್ತಿ" ಎಂಬ ವಿಶೇಷ ಗೌರವ: ಹೀಗೆ ತನ್ನ ಧಾರ್ಮಿಕ ಲೌಕಿಕ ಪೋಷಕರಿಬ್ಬರಿಗೂ ನಿಕಟವಾಗಿ ಸಂಬಂಧಿಸಿದ ಈ ಶಾಸನವನ್ನು ಕವಿ ರನ್ನನೇ ರಚಿಸಿರಬಹುದಲ್ಲವೆ ? ಕಾಲದ ದೃಷ್ಟಿಯಿಂದಾಗಲಿ ವಿಷಯದ

---

6 ಶಾಸನದ ವಸ್ತುವನ್ನೂ ಅದರಲ್ಲಿ ಅಜಿತಪುರಾಣದ ಪದ್ಯಗಳು ಬಂದಿರುವುದನ್ನೂ ನೋಡಿದರೆ, ಅಜಿತಪುರಾಣದ ರಚನೆಯಾದ ಬಳಿಕ (ಎಂದರೆ ಕ್ರಿ. ಶ. ೯೯೩ರಿಂದ ಈಚೆಗೆ) ಅದು ಹುಟ್ಟಿತೆಂದು ಒಪ್ಪಬಹುದು. ರನ್ನನ ಇನ್ನೊಂದು ಉಪಲಬ್ಧ ಕೃತಿಯಾದ ಗದಾಯುದ್ಧದ ರಚನೆಯ ಕಾಲ ನಿರ್ದಿಷ್ಟವಾಗಿ ತಿಳಿದಿಲ್ಲ. ಇರಿವಬೆಡಂಗ-ಸತ್ಯಾಶ್ರಯನು ಚಕ್ರವರ್ತಿಯಾದ ಬಳಿಕ, ಎಂದರೆ ಕ್ರಿ. ಶ. ೯೯೭ರಿಂದ ಈಚೆಗೆ, ಅದು ಹುಟ್ಟಿತೆಂದು ಹೇಳಲು "ಕೃತೀಶ್ವರ ಚಕ್ರವರ್ತಿ ಸಾಹಸಭೀಮ" ಎಂಬ ರನ್ನನ ಉಕ್ತಿ (ಗದಾಯುದ್ಧ ೧.೩೨) ಅವಕಾಶಕೊಡುತ್ತದೆ. ಈ ಕಾವ್ಯವನ್ನು ರನ್ನನು ಕ್ರಿ.ಶ. ೧೦೦೫ರಿಂದ ಈಚೆಗೆ ಸುಮಾರು ೧೦೦೭ ಅಥವಾ ೧೦೦೮ರಲ್ಲಿ ರಚಿಸಿರಬೇಕೆಂದು ಕೆಲವು ಆಧಾರಗಳ ಮೇಲೆ ಶ್ರೀ ವೆಂ. ಜ. ಜೋಶಾಪೂರ ಅವರು ಊಹಿಸಿದ್ದಾರೆ ('ಗದಾಯುದ್ಧದ ಕಾಲನಿರ್ಣಯ', ಪರಿಷತ್ಪತ್ರಿಕೆ ೩೪. ೨; 'ರನ್ನನ ಗದಾಯುದ್ಧದ ಕಾಲನಿರ್ಣಯ', ಜಯಕರ್ನಾಟಕ, ೧೭.೭). ಇಷ್ಟು. ಅತ್ತಿಮಬ್ಬೆಯ ಶಾಸನದ ಕಾಲ ಕ್ರಿ.ಶ. ೧೦೦೬; ಆದ್ದರಿಂದ ಶಾಸನವೂ ಗದಾಯುದ್ಧವೂ ಸಮಕಾಲೀನವಿರಬಹುದು.

ದೃಷ್ಟಿಯಿಂದಾಗಲಿ ಶೈಲಿಯ ಊಹೆಯಿಂದಾಗಲಿ ಈ ಊಹೆಗೆ ಯಾವ ಪ್ರತಿಬಂಧಕವೂ ತೋರುವುದಿಲ್ಲ ; ಸಂಭಾವ್ಯತೆಯೇ ಹೆಚ್ಚು. ರನ್ನನೇ ಈ ಶಾಸನವನ್ನು ರಚಿಸಿದ್ದರೂ ಇರಬಹುದು.

೩

ಇದುವರೆಗಿನ ನಿರೂಪಣೆಯಲ್ಲಿ, ಅತ್ತಿಮಬ್ಬೆ ಸೇರಿದ ಮನೆತನದ ಪ್ರಖ್ಯಾತಿಯೇ ಮುಖ್ಯವಾಗಿ ಬಂದಿತು. ಮಹಾಮಂತ್ರಿ ಧಲ್ಲನ ಸೊಸೆ, ಚಮೂಪತಿ ನಾಗದೇವನ ಮಡದಿ. ಪಡೆವಳ ತೈಲನ ತಾಯಿ ! ಇನ್ನು ಈಕೆ ಹುಟ್ಟಿದ ವಂಶದ ಕಡೆ ತಿರುಗೋಣ. ಇದರ ವೈಭವವೂ ಸಾಮಾನ್ಯವಲ್ಲ. ಅತ್ತಿಮಬ್ಬೆಯ ಪಿತಾಮಹನು ವೆಂಗಿಮಂಡಲದ ಕಮ್ಮೆನಾಡಿನ ಪುಂಗನೂರಿನಲ್ಲಿ ಬಾಳಿದ ಕೌಂಡಿಣ್ಯ ಗೋತ್ರದ 'ದ್ವಿಜಾಗ್ರಣಿ' ನಾಗಮಯ್ಯ. ಈತನಿಗೆ ಮಲ್ಲಪಯ್ಯನೂ, ಪೊನ್ನಮಯ್ಯ (ಅಥವಾ ಪುನ್ನಮಯ್ಯ)ನೂ ಮಕ್ಕಳು. ಮಲ್ಲಪಯ್ಯನು "ಅಮ್ಮನ ಭಕ್ತ", "ವಿದ್ಯಾನಿಧಾನ" ; "ಪಂಡಿತಮಂಡಳಿಗಂ ಕವಿಮಂಡಳಿಗಂ ತನ್ನ ಮನೆ ತವರ್ಮನೆಯೆನೆ" ಮೆರೆದವನು ; ಸ್ವಯಂ ಜ್ಯೌತಿಷವಿಶಾರದ ; ಜೊತೆಗೆ ಶೂರ. "ಮಲ್ಲಪನಲ್ಲದೆ ಪೆಱನಾವನೊ ಶಾಸ್ತ್ರಶಸ್ತ್ರವಿದ್ಯಾಕುಶಲಂ !" ಅವನ ತಮ್ಮ ಪೊನ್ನಮಯ್ಯನು "ಜಿನಭಕ್ತ", "ಅಣ್ಣನ ಭಕ್ತ" ; ಕಾವೇರೀತೀರದ ಕಾಳೆಗದಲ್ಲಿ "ತೈಲಪನೃಪಂ ಬಾೞಿಸೆ" ಎಂದು ಕತ್ತಿಯನ್ನು ಹಿರಿದು ಶತ್ರುಗಳನ್ನಿರಿದು ತಲೆಯನ್ನೊಪ್ಪಿಸಿ ಸ್ವರ್ಗಕ್ಕೆ ಸಂದವನು. ಸಹೋದರರಿಬ್ಬರೂ "ಕವಿಚಕ್ರವರ್ತಿ" ಪೊನ್ನನ ಕೈಯಲ್ಲಿ 'ಪುರಾಣ ಚೂಡಾಮಣಿ'ಯೆನಿಸಿದ "ಶಾಂತಿಪುರಾಣ"ವನ್ನು ಬರೆಯಿಸಿದವರು. ಪೊನ್ನನು ತನ್ನ ಕೃತಿಯಲ್ಲಿ ತನ್ನ ಈ ಪೋಷಕರನ್ನೂ ಅವರ ವಂಶಮಹಿಮೆಯನ್ನೂ ಬಣ್ಣಿಸಿದ್ದಾನೆ. ರನ್ನನು 'ಅಜಿತಪುರಾಣ'ದಲ್ಲಿ ಆ ಜಾಡಿನಲ್ಲೇ ನಡೆದು ಹೆಚ್ಚಿನ ವಿವರಗಳನ್ನು ತಿಳಿಸಿದ್ದಾನೆ.

ಒಂದೇ ಕಾಲದಲ್ಲಿ ಹುಟ್ಟಿದವೆಂದು ಹೇಳಬೇಕಾಗುತ್ತದೆ. ಎಂತಿದ್ದರೂ ರನ್ನನು ತೈಲಪ, ಇಱಿವಬೆಡಂಗ ಇವರಿಬ್ಬರ ಆಳ್ವಿಕೆಯಲ್ಲೂ ಇದ್ದು ಕಾವ್ಯರಚನೆ ಮಾಡಿದವನು. ಇವರಿಬ್ಬರಲ್ಲೊಬ್ಬರ ಆಳಿಕೆಗೆ ಸಂಬಂಧಪಟ್ಟ ಶಾಸನವು ರನ್ನನ ಕೃತಿಯಾಗಿರುವುದಕ್ಕೆ ಕಾಲದೃಷ್ಟಿಯಿಂದ ಯಾವ ಆಕ್ಷೇಪಣೆಯೂ ತೋರುವುದಿಲ್ಲ.

ಅಂತೂ ಅತ್ತಿಮಬ್ಬೆಯನ್ನು ಕೊಟ್ಟು ತಂದ ಉಭಯಕುಲದವರೂ ಜೈನಬ್ರಾಹ್ಮಣರು; ಚಾಳುಕ್ಯರಾಜರ ಸೇವಾದೀಕ್ಷೆಯನ್ನು ವಂಶಪಾರಂಪರ್ಯವಾಗಿ ಹಿಡಿದಿದ್ದವರು; ಶಸ್ತ್ರಗಳನ್ನು ಬೀಸಿ ಸೇನೆಗಳನ್ನು ನಡಸಿ ಸಮಯ ಬಂದಾಗ-ಸ್ವಾಮಿಗಾಗಿ ಪ್ರಾಣವನ್ನು ತೆತ್ತವರು; ಶಾಸ್ತ್ರಪಾರಂಗತರಾಗಿ ವಿಖ್ಯಾತಿಗಳಿಸಿದ್ದಲ್ಲದೆ ಕವಿಶ್ರೇಷ್ಠರನ್ನು ಪೋಷಿಸಿದವರು; ಜಿನಭಕ್ತರು, ಧರ್ಮಪ್ರಿಯರು.

ಮಲ್ಲಪಯ್ಯ, ಅಪ್ಪಕಬ್ಬೆ ಇವರ ಮಗಳೇ ನಮ್ಮ ಅತ್ತಿಮಬ್ಬೆ. (ಈಕೆಗೆ ಐಮ ಮಂದಿ ಸೋದರರೂ ಇಬ್ಬರು ಸೋದರಿಯರೂ ಇದ್ದರು; ಇವರಲ್ಲಿ ಗುಂಡಮಬ್ಬೆ ಈಕೆಯ ಸಪತ್ನಿಯೂ ಆಗಿದ್ದು ಪತಿಯೊಡನೆ ಸಹಗಮನ ಮಾಡಿದಳೆಂದು ಈ ಲೇಖನದ ಪ್ರಾರಂಭದಲ್ಲೇ ಗಮನಿಸಿದ್ದೇವೆ.) ಧಾರ್ಮಿಕ ಕಾವ್ಯಗಳನ್ನು ಬರೆಯಿಸುವ ಮನೋಧರ್ಮ ಅತ್ತಿಮಬ್ಬೆಗೆ ತಂದೆಯ ಮನೆಯಿಂದಲೇ ಬಂದಿತೇನೋ :

ಪೊನ್ನಿಗನಿಂ ಮಲ್ಲಪನುಂ
ಪೊನ್ನನುಮತ್ತಿಯುಂ ಪುರಾಣಚೂಡಾಮಣಿಯುಂ ।
ಮುನ್ನಂ ಪೇೞಿಸಿದಂತೆ ಗು-
ಣೋನ್ನತ ಕವಿರತ್ನನಿಂದಿವಂ ಪೇೞಿಸಿದಳ್ ॥

(ಅಜಿತಪುರಾಣ, ೧.೭೭)

ಅತ್ತಿಮಬ್ಬೆ ಹೊಸಕಾವ್ಯದ ನಿರ್ಮಾಣಕ್ಕೆ ಮಾತ್ರ ಗಮನಕೊಡಲಿಲ್ಲ; ಹಿಂದಿನ ಕಾವ್ಯಗಳ ಸಂರಕ್ಷಣೆಯನ್ನೂ ಕೈಕೊಂಡಳು. ಆ ಕಾಲದಲ್ಲಿ ಗ್ರಂಥದ ಒಂದೊಂದು ಪ್ರತಿಯನ್ನೂ ಕೈಯಲ್ಲಿ ಬರೆದಿಡಬೇಕಾಗಿತ್ತಷ್ಟೆ. ಅಪೇಕ್ಷಿಸುವವರು ಇಲ್ಲದಿದ್ದರೆ, ಅಥವಾ ಪ್ರತಿಕಾರರಿಗೆ ಹಣ ಕೊಡುವಷ್ಟು ಅವರಿಗೆ ಚೈತನ್ಯವಿಲ್ಲದಿದ್ದರೆ, ಪುಸ್ತಕ ದುರ್ಲಭವಾಗಿ ಕ್ರಮೇಣ ಉಡುಗಿಹೋಗುತ್ತಿತ್ತು. ಪೊನ್ನಕವಿಯ 'ಭುವನೈಕರಾಮಾಭ್ಯುದಯ' ಈಗ ದೊರೆಯದಿರುವುದು ಈ ಮಾತಿಗೆ ಸಾಕ್ಷಿ, ಅವನ 'ಶಾಂತಿಪುರಾಣ'ಕ್ಕೂ ಇದೇ ದುರವಸ್ಥೆ ಒದಗುವುದರಲ್ಲಿತ್ತು. ಅತ್ತಿಮಬ್ಬೆಯ ಕಾಲಕ್ಕೆ ಅದರ ಪ್ರಾಚುರ್ಯ ಕಡಿಮೆಯಾಗಿತ್ತು. ಆದರೆ ತನ್ನ ತಂದೆಯ ಧರ್ಮ ಅವನ ಕಾಲಾನಂತರದಲ್ಲಿ

ಮಸುಳಬಾರದೆಂದು ಈಕೆ ಶಾಂತಿಪುರಾಣದ ಒಂದು ಸಾವಿರ ಪುಸ್ತಕಗಳನ್ನು ಪ್ರತಿಮಾಡಿಸಿ ಪ್ರಚುರಗೊಳಿಸಿದಳು. ಶಾಂತಿಪುರಾಣದ ಮಾತೃಕೆಯೊಂದರ ಕೊನೆಯಲ್ಲಿ ಸೇರಿರುವ ಪದ್ಯಗಳಿಂದ ಈ ವಿಷಯ ಸ್ಪಷ್ಟವಾಗುತ್ತದೆ. ಅಲ್ಲಿಂದ ಎರಡು ಪದ್ಯಗಳನ್ನು ಉದಾಹರಿಸಬಹುದು; ಇವುಗಳ ಕರ್ತೃ ಯಾರೋ ತಿಳಿಯದು—

ಶ್ರೀಮದಶೇಷ ಜೈನಸಮಯೈಕಶಿರೋಮಣಿ ಸರ್ವಜೀವರ-
ಕ್ಷಾಮಣಿಯೆಂದು ಭವ್ಯತತಿ ಬಿಚ್ಚಳಿಸುತ್ತಿರೆ ಸಂದ ದಾನಚಿಂ-।
ತಾಮಣಿ ತನ್ನದೊಂದು ಪಿತೃಭಕ್ತತೆಯಂ ಮೆಱೆಯಲ್ ಪುರಾಣಚೂ-
ಡಾಮಣಿಯಂ ನಿರ್ಮಿಚಿದಳಿಳಾಗ್ರದೊಳಿಂತು ಜಸಕ್ಕೆ ನೋಂತರಾರ್ ॥

ಎಸೆಯದೆ ಪೂೞ್ದು ಕೆಟ್ಟಪುದು ಶಾಂತಿಪುರಾಣಮುಮಂ ನೆಗೞ್ದವೆಂ
ವಸುಧೆಯೊಳೆನ್ನ ತಂದೆಯ ಪರೋಕ್ಷದೊಳೆಂದು ಸಹಸ್ರಪುಸ್ತಕ-।
ಪ್ರಸರವನತ್ತಿಮಬ್ಬೆ ಪರಮಾದರದಿಂ ಬರೆಯಲ್ಕೆ ವೇೞ್ದು ಪೆಂ-
ಪಸದಳಮದ್ವಿತೀಯಮಸಮಂ ಸಲೆ ಭಾವಿಸಲೆಯ್ದೆ ಬಣ್ಣಿಸಲ್ ॥

(ಶಾಂತಿಪುರಾಣ, ಪರಿಶಿಷ್ಟ ೧—ಪದ್ಯಗಳು ೧, ೨)

ನಮ್ಮ ನಾಡಿನಲ್ಲಿ ಹಿಂದೆ ಪ್ರಖ್ಯಾತಿಯಿಂದ ಬಾಳಿದ ಅನೇಕ ಮಹಸೀಯರ ಹೆಸರುಗಳು ಮಾತ್ರ ಈಗ ಉಳಿದಿವೆ; ಅವರ ಬಾಳ್ವೆಯ ವಿವರಗಳು ಕನಸಿಗೂ ನಿಲುಕದಂತೆ ಅಳಿದಿವೆ. ಹೀಗಿರುವಲ್ಲಿ ಅತ್ತಿಮಬ್ಬೆಯಂಥ ಪಾವನ ಮಹಿಳೆಯ ಮೂರ್ತಿ ಹಿಂದಿನ ಕಾವ್ಯಶಾಸನಗಳಲ್ಲಿ—ಬಲುಮಟ್ಟಿಗೆ ರನ್ನ ಮಹಾಕವಿಯ ಕೃಪೆಯಿಂದ—ಸ್ಫುಟವಾಗಿ ರೇಖೆಗೊಂಡಿರುವುದು ಕನ್ನಡಿಗರ ಪುಣ್ಯ. ಬಿಚ್ಚುಗೈಯ ಆಕೆಯ ವಿವಿಧ ಮಹಾದಾನಗಳಿಂದ ಸಾರ್ಥಕವಾದ "ದಾನಚಿಂತಾಮಣಿ"ಯೆಂಬ ಯಶೋಘೋಷ ಇಂದಿಗೂ ನಮ್ಮ ಕಿವಿಗಳಲ್ಲಿ ಮೊಳಗುತ್ತಿದೆ; ವ್ರತೋಪವಾಸಾದಿಗಳಿಂದ ತಾರಿದ ಆಕೆಯ ದೇಹದಲ್ಲಿ ದೀಪವರ್ತಿಯಂತೆ ಹೊಳೆದ ಧಾರ್ಮಿಕ ತೇಜಸ್ಸು ಒಂದು ಸಹಸ್ರಮಾನದವರೆಗೂ ತನ್ನ ಪ್ರಭೆಯನ್ನು ಬೀರಿದೆ!

ಮಹಿಚಕ್ರಕ್ಕಿದು ಚೋದ್ಯಮಲ್ತೆನಿಸುವಂತಾರ್ತೀವೃ[ದ]ಂ ಕಂಡು-
ಸ್ಪೃಹರೆಲ್ಲಂ ಗೆಳೆಗೊಂಡು ಬಣ್ಣಿಸುವರಿನ್ನೇಂ ಚೋದ್ಯಮಾಗಳ್ ಜಗ-।
ನ್ನಹನೀಯತ್ವಮನೆಯ್ದೆ ತಾಳ್ದಿದ ಮಹಾಪ್ರಖ್ಯಾತಿಯಂ ಕೇಳ್ದು ನಿ-
ಸ್ಪೃಹರುಂ ಬಣ್ಣಿಪರಲ್ತೆ ನಿನ್ನ ಗುಣಮಂ ಶ್ರೀದಾನಚಿಂತಾಮಣೀ ॥
(ಅಜಿತಪುರಾಣ, ೧೨, ೧೨)

ಪರಿಶಿಷ್ಟ

ಅತ್ತಿಮಬ್ಬೆಯ ಮಹಿಮೆಯನ್ನು ವರ್ಣಿಸುವ ಈ ಕೆಲವು ಪದ್ಯಗಳು ಬ್ರಹ್ಮಶಿವನ 'ಸಮಯ ಪರೀಕ್ಷೆ'ಯಲ್ಲಿ ದೊರೆಯುತ್ತವೆ—

ಗುಣದ ಖಣಿ ದಾನಚಿಂತಾ
ಮಣಿ ವಿಮಲಚರಿತ ಜೈನಶಾಸನರಕ್ಷಾ-।
ಮಣಿ ಸಜ್ಜನೈಕಚೂಡಾ-
ಮಣಿಯೆಂ[ದೆಂ]ದತ್ತಿಮಬ್ಬೆಯಂ ಪೊಗಳದರಾರ್ ॥

ಭರದಿಂ ಬಂದೊತ್ತೆ ಮುಂ[ದಂ] ಮಸಕದೆಸಕದಿಂ ತೀವಿ ಮುಂದೊತ್ತೆ ಗೋದಾ-
ವರಿ ಭೂಪಂ ತ್ರೈಲಪಂ ನಿಸ್ತರಿಸು ಕಟಕಮಂ ಬೇಗಮಿನ್ನಬ್ಬೆ ನೀನೆಂ-।
ದೆರೆಯಲ್ ಸರ್ವಜ್ಞನಂ ಪೊತ್ತಗಿಯದೆ [ನದಿಯಂ] ಪೊಕ್ಕೊಡಾ ವಾರಿಪೂರಂ
ಬಿರಿದತ್ತಾ ಚಕ್ರಿ[ಪಾ]ಯ್ದಂ ತೊರೆಯನಮಳಸಮ್ಯಕ್ತ್ವ ವಿಖ್ಯಾತಿಯಿಂದಂ

ಅಕಳಂಕಚರಿತೆ ಜಿನಚರ-
ಣಕಂಜಕಿಂಜಲ್ಕಪುಂಜರಂಜಿತ ತನು ಸ-।
ರ್ವಕಳಾವಿದೆ ಶಾಚಿ ಘುಟಾಂ
ತಿಕೆ ದಾನವಿನೋದೆಯೆಂಬ ಬಿರುದಿಂ ನೆಗಳ್ದಳ್ ॥ (೧.೩೯-೪೦)[7]

---

7 ಈ ಪದ್ಯಗಳನ್ನು ಶ್ರೀ ಎಚ್. ದೇವೀರಪ್ಪನವರು 'ಬ್ರಹ್ಮಶಿವನ ಕಾಲವಿಚಾರ' ಎಂಬ ಲೇಖನದಲ್ಲಿ (ಪ್ರಬುದ್ಧ ಕರ್ನಾಟಕ, ೨೪-೪) 'ಸಮಯ ಪರೀಕ್ಷೆ'ಯ ಒಂದು ಕೈಬರಹದ ಪ್ರತಿಯಿಂದ ಉದ್ಧರಿಸಿಕೊಟ್ಟಿದ್ದಾರೆ.

ಇವುಗಳಲ್ಲಿ, ಅತ್ತಿಮಬ್ಬೆ ಜಿನಬಿಂಬವನ್ನು ನೆತ್ತಿಯ ಮೇಲೆ ಹೊತ್ತು ಗೋದಾವರೀ ನದಿಯನ್ನು ಪ್ರವೇಶಿಸಿ ಅದರ ಪೂರ್ಣಪ್ರವಾಹವನ್ನು ತಗ್ಗಿಸಿದಳೆಂಬ 'ಪವಾಡ'ದ ಉಲ್ಲೇಖ ಮೇಲೆ ಲಕ್ಕುಂಡಿಯ ಶಾಸನದಿಂದ ಉದ್ಧರಿಸಿರುವ "ನರಪನ ಬೆಸದಿಂ...." ಎಂಬ ಪದ್ಯದ ಭಾವವಿಸ್ತರಣದಂತಿದೆಯಲ್ಲವೆ? ಬ್ರಹ್ಮಶಿವನು ಈ ಅಂಶವನ್ನು ಶಾಸನದಿಂದಲೇ ಗ್ರಹಿಸಿರುವುದು ಅಸಂಭವವಲ್ಲ. ಅವನ ಕಾಲ ೧೨ನೆಯ ಶತಮಾನದ ಕೊನೆಯ ಪಾದ.

ಶಬ್ದಾರ್ಥಕೋಶ

ಅ

ಅಂತರ್ಮುಖಿ ೩೭ ಒಳಮುಖವಾಗಿರುವ ಸ್ಥಿತಿ

ಅಂತರ್ಹಿತ ೧೪೪ ಮರೆಯಾದ

ಅಂತಸ್ತಾಪ ೭೭ ಒಳಗುದಿ, ಸಂಕಟ

ಅಂಧಶ್ರದ್ಧೆ ೧೦೫ ಕುರುಡು ನಂಬಿಕೆ

ಅಂಬು ೨ ಬಾಣ

ಅಕಾಲವೃಷ್ಟಿ ೧೫೩ ಕಾಲವಲ್ಲದ ಕಾಲದಲ್ಲಿ ಬರುವ ಮಳೆ

ಅಗಳು ೮೯ ಕಂದಕ

ಅಗ್ಗಿ ೧೨ ಅಗ್ನಿ, ಬೆಂಕಿ

ಅಜರಾಮರ ೭೪ ಮುಪ್ಪು ಸಾವು ಇಲ್ಲದ, ಶಾಶ್ವತವಾದ

ಅಜಾಗ್ರತೆ ೬೨ ಎಚ್ಚರಿಕೆಯಿಲ್ಲದಿರುವಿಕೆ

ಅಟ್ಟು ೧೪೯ ಪರಾಕ್ರಮವನ್ನು ತೋರಿಸು

ಅತ್ಯವೇಕ್ಷಣ ೧೦೩ ನಮಗೆ ಬೇಕಾದ ಅಂಶ ವಸ್ತುವಿನಲ್ಲಿ ಅದು ಇಲ್ಲದಿದ್ದರೂ ಇರುವುದಾಗಿ ಭಾವಿಸಿ ಕೊಂಡು ಕಾಣುವ ದೋಷ

ಅನವಸ್ಥೆ ೨೬ ವ್ಯವಸ್ಥೆಯಿಲ್ಲದಿರುವುದು, ಅವ್ಯವಸ್ಥೆ

ಅನವೇಕ್ಷಣ ೧೦೩ ಕಾಣದಿರುವುದು, ನೋಡದಿರುವುದು

ಅನುದಾರತೆ ೧೨೮ ಔದಾರ್ಯವಿಲ್ಲದಿರುವುದು

ಅನುನಯ ೭೩ ನಯವಾದ ರೀತಿ

ಅನುವಾಗು ೧೯೪ ಸಿದ್ಧವಾಗು

ಅನೌದಾರ್ಯ ೧೨೮ ಔದಾರ್ಯವಿಲ್ಲದಿರುವುದು

ಅನ್ವೇಷಣ ೧೦೭ ಹುಡುಕುವುದು

ಅಪಭ್ರಂಶ ೯೬ ಸಂಸ್ಕೃತ ಭಾಷೆಯ ವಿಕೃತರೂಪ, ತದ್ಭವರೂಪ

ಅಪ್ರತಿಬಂಧ ೩೯ ತಡೆಯಿಲ್ಲದ, ಅಡ್ಡಿಯಿಲ್ಲದ

ಅಯೋಮುಖ ೩ ಕಬ್ಬಿಣದ ತುದಿಯುಳ್ಳ ಆಯುಧ

ಅರಗುವರ ೮೦ ಅರಸುಕುಮಾರ, ರಾಜಪುತ್ರ

ಅರಣ್ಯರೋದನ ೧೨೨ ವ್ಯರ್ಥಾಲಾಪ

ಅರಳೆ ೧೫೨ ಹತ್ತಿ

ಅರಿ ೧೪೦ ಸಮರ್ಥವಾಗು, ಶಕ್ತವಾಗು

ಅರ್ಥಕಾಮಿ ೧೮೯ ಪ್ರಯೋಜನಾಪೇಕ್ಷೆಯುಳ್ಳವನು, (ಲಾಭದ) ಹಣದ ಆಸೆಯುಳ್ಳವನು

ಅಲಗು ೩ ಮೊನೆ, ತುದಿ
ಅಲ್ಪಾಯು ೮೩ ಕಡಮೆ ಆಯುಸ್ಸುಳ್ಳವನು
ಅಲ್ಲಗಳೆ ೩೧ ಕಡೆಗಣಿಸು, ತಿರಸ್ಕರಿಸು
ಅವಸರ ೧೪೪ ಸಮಯ
ಅವಸಾನ ೩೧ ಕೊನೆ, ಸಾವು
ಅವ್ಯಾಹತ ೨೬ ಅವಿಚ್ಛಿನ್ನವಾದ, ತಡೆಯಿಲ್ಲದ
ಅಸಿಮಿಸಿ ೨೫ ಹಿಂದೆಮುಂದೆ ನೋಡುವುದು, ಹಿಂದೆಗೆಯುವುದು
ಅಸ್ತಿವಾರ ೧೦೨ ತಳಹದಿ ಬುನಾದಿ
ಅಳಿಪು ೧೪೮ ಅತ್ಯಾಸೆ, ವ್ಯಾಮೋಹ
ಅಳುಪು ೧೩೫ ಆಸೆಪಡು, ಬಯಸು
ಅಳುರು ೧೫೭ ಸುಡು, ದಹಿಸು

ಆ

ಆಘೋಷಿಸು ೧೩೨ ಪ್ರಕಟಿಸು, ಸಾರು
ಆತ್ಮಜ ೧೪೩ ಮಗ
ಆತ್ಮಯಜ್ಞ ೯೦ ತನ್ನನ್ನೇ ಸಮರ್ಪಣೆ ಮಾಡಿಕೊಳ್ಳುವುದು
ಆತ್ಮವಂಚಕ ೩೩ ತನಗೆ ತಾನೇ ಮೋಸ ಮಾಡಿಕೊಳ್ಳುವವನು
ಆತ್ಮಾನುಸಂಧಾನ ೩೭ ಆತ್ಮಸ್ವರೂಪವನ್ನು ಧ್ಯಾನಿಸುವುದು
ಆದಿದೈವಿಕ ೧೬೦ ದೈವಸಂಬಂಧವಾದ
ಆದಿಭೌತಿಕ ೧೩೦ ಪ್ರಾಣಿಸಂಬಂಧವಾದ
ಆಯಕಟ್ಟು ೮ ಅಚ್ಚುಕಟ್ಟು, ಅಂದ

ಇ

ಇತ್ತಾಪಾರ ೬೨ ಸರ್ವಸ್ವ, ಎಲ್ಲ ಆಸ್ತಿ
ಇತಿವಿಧಿ ೧೨೯ (ಹೀಗೆ ಮಾಡಬೇಕೆಂಬ) ನಿಯಮ, ನಡೆಯಬೇಕಾದ ರೀತಿ
ಇಹಪರ ೫೮ ಈ ಲೋಕ ಮತ್ತು ಬೇರೆ ಲೋಕ
ಇಳೀಯಮುಳುಗು ೫ ಪೂರ್ತಿ ಮುಳುಗು

ಈ

ಈಡಾಡು ೧೩೮ ಸಿಕ್ಕಿದಂತೆ ಬಿಸಾಡು, ಚೆಲ್ಲಾಡು

ಉ

ಉಂಗುಷ್ಟ ೨ ಕೈಯಹೆಬ್ಬೆರಳು
ಉಂಬಳಿಗಾರ ೨೬ ತೆರಿಗೆಯಿಲ್ಲದೆ ಭೂಮಿಯನ್ನು ಅನುಭವಿಸುವವನು
ಉಕ್ಕು ೨೦ ಹಿಗ್ಗು, ಸಂತೋಷಿಸು
ಉಡುಗು ೧೬೨ ಕ್ಷಯಿಸು, ಹಾಳಾಗು
ಉದರನಿರ್ವಾಹ ೧೪ ಹೊಟ್ಟೆಯನ್ನು ಹೊರೆದುಕೊಳ್ಳುವುದು
ಉದ್ಗ್ರಂಥ ೯೨ ಪ್ರೌಢವಾದ ಗ್ರಂಥ
ಉಪದ್ರವ ೯೦ ತೊಂದರೆ, ಕಾಟ, ಹಿಂಸೆ
ಉಪನ್ಯಸಿಸು ೧೨೩ ಭಾಷಣಮಾಡು
ಉಪಭೋಗ ೩೭ ಅನುಭವಿಸುವುದು
ಉಪಮಿಸು ೧೫೦ ಹೋಲಿಸು
ಉಪಲಬ್ಧ ೧೭೦ ಸಿಕ್ಕಿರುವ, ದೊರೆತ
ಉಪಶಾಂತ ೬೪ ಶಮೆ ದಮೆಗಳಿಂದ ಕೂಡಿದವನು, ಜಿತೇಂದ್ರಿಯ

ಉಪಸ್ಥಿತವಾಗು ೯೫ ಇದಿರಾಗು,
ಒದಗಿಬರು, ಹುಟ್ಟಿಕೊಳ್ಳು

ಉಪಾಖ್ಯಾನ ೬೪ ಮೂಲಕಥೆಯ
ನಡುವೆ ಹುಟ್ಟಿಕೊಳ್ಳುವ ಬೇರೆ ಸಣ್ಣ
ಕಥೆ

ಉಭಯ ರಾಯರು ೩ ಎರಡು ಪಕ್ಷದ
ರಾಜರು, ಎರಡು ಕಡೆಯ ರಾಜರು

ಉರುತರ ೧೪೭ ಬಹಳ, ವಿಶೇಷ, ಹೆಚ್ಚು

ಉರುಳು ೧೨೧ ನೇಣುಹಾಕುವ ಹಗ್ಗದ
ಕುಣಿಕೆ

ಉಸುರುಗರೆ ೨೯ ನಿಟ್ಟುಸಿರು ಬಿಡು

ಊ

ಊಳಿಗ ೮೪ ಸೇವೆ

ಎ

ಎದವಿದ ಮಗ ೭೬ ವಯಸ್ಸಿಗೆ ಬಂದ
ಮಗ

ಎದ್ದಲಗಾಟ ೨೫ ಗದ್ದಲ
ಕೋಲಾಹಲ ? ಹಿಂಸೆ, ಕೋಟಲೆ ?

ಎಲ್ಲಿಂದ ೯೪ ಎಲ್ಲರೀತಿ, ಸಮಸ್ತವಿಧ

ಏ

ಏಕತ್ರ ೧೪ ಒಂದೇ ಕಡೆ, ಒಟ್ಟಾಗಿ

ಏಕಮೇವ ೯೮ ಒಂದೇ ಒಂದು,
ಮುಖ್ಯ

ಏರಾಟ ೨೭ ಮೇಲೆ ಬೀಳುವುದು,
ಯುದ್ಧ

ಒ

ಒಡ್ಡೋಲಗ ೭ ರಾಜಸಭೆ, ದರ್ಬಾರು

ಒತ್ತಟ್ಟು ೭೭ ಒಂದು ಕಡೆ, ಮಗ್ಗುಲು

ಓ

ಓರನ್ನ ೯೫ ಓರಣ, ಕ್ರಮ

ಓಲಗಿಸು ೧೩೦ ಸೇವೆಮಾಡು,
ಅನುಸರಿಸು

ಔ

ಔಷಧಕಾರ ೨೪ ಔಷಧಿಯನ್ನು ಕೊಡು
ವವನು, ಮದ್ದು ಕೊಡುವವನು

ಕ

ಕಂಕಣಬದ್ಧ ೧೩೪ ದೀಕ್ಷೆಯನ್ನು
ತೊಟ್ಟವನು

ಕಂಜಕಿಂಜಲ್ಕ ೧೬೭ ತಾವರೆಯ ಪರಾಗ

ಕಂಕಟಪ್ರಾಯ ೧೨೦ ಅಡ್ಡಿಯಾದವನು,
ತೊಂದರೆಯನ್ನು ಒಡ್ಡುವವನು

ಕಂಠ ೫೮ ಓಲೆಯಗರಿಯ ಮೇಲೆ ಬರೆ
ಯಲು ಉಪಯೋಗಿಸುತ್ತಿದ್ದ
ಮೊನಚಾದ ಲೋಹಸಾಧನ

ಕಂಡರಿಸು ೧೪೭ ಕೆತ್ತು

ಕಂತೆ ೨೨ ಚಿಂದಿಬಟ್ಟೆಯ ಚೀಲ

ಕಗ್ಗಂಟು ೧೨೯ ಸುಲಭವಾಗಿ
ಬಿಡಿಸಲಾಗದ್ದು

ಕಗ್ಗವಿ ೧೩೪ ಆಳವಾದ ಗವಿ, ಗುಹೆ

ಕಟಕ ೧೫೩ ಕಡಗ, ಬಳೆ

ಕಟಕಪವಿತ್ರೆ ೧೫೮ ಸಮೂಹವನ್ನೇ
ಪಾವನಗೊಳಿಸತಕ್ಕವಳು

ಕಬ್ಬಿ ೩೦ ಕವಿ

ಕಯ್ಪುರ್ಮೆಣು ೧೫೯ ಕೈಯಿಂದ ತಪ್ಪಿಸಿಕೊ
ಕರತಲಾಮಲಕ ೧೮ ಅಂಗೈಯ ನೆಲ್ಲಿಕಾಯಿ
ಕರಿಗಮನೆ ೧೩ ಆನೆಯಂತೆ ನಡಗೆಯುಳ್ಳವಳು
ಕವಿಚಿಕೊ ೧ ಮುಚ್ಚಿಕೊ, ಮುಸುಕು ಹಾಕಿಕೊ
ಕಹವತ ೧೫೧ ಕಾರ್ತಸ್ವರ, ಚಿನ್ನ
ಕಸುವು ೩೧ ಬಲ, ತ್ರಾಣ
ಕಹಳೆ ೫ ಒಂದು ವಾದ್ಯ
ಕಾಕಪಕ್ಷ ೧೮೧ ಕಾಗೆಯಂತೆ [illegible] ವನು
ಕಾಬ ೧೪೩ ಕಾಣುವ, ನೋಡುವ
ಕಾಲಪರಿ [illegible] ಛತ್ರವಾಗಿ ನೆಲಸು
ಕಾಲೊತ್ತಲು ೩೩ ತುಳಿದರು, ಅದ್ದಿ
ಕಾಣಸಾರ ೯ [illegible], ಕಮುರೆಯ ಉಡುಪನ್ನು ತೊಡಿಸಿಕೊಳ್ಳುವವನು
[illegible]
[illegible]
[illegible]
[illegible]
[illegible]
[illegible]

ಕೀಳಂದು ೨೪ ಗದ್ದಲದಿಂದ ಬೇಸರ ಪಡಿಸು, ಗಲಾಟೆ ಮಾಡು
ಕೀಳಾಯು ೯ ಸೊಂಟದಿಂದ ಕೆಳಗಿನ ಭಾಗ
ಕಾವುಗಾರ ೩೩ ಕಾವಲು, ಕಾವಲುಗಾರ
ಕುಲದೀಪಕ ೩೩ ಕುಲದ ಕೀರ್ತಿಯನ್ನು ಬೆಳಗುವವನು
ಕುಸಿದಾರು ೧೫ ಬಿಟ್ಟ ಕಣ್ಣು [illegible]
ಕೃಪಣ ೮೭ ಲೋಭಿ, ಜಿಪುಣ
ಕೆಚ್ಚೆದೆ ೨೫ ನಿರ್ಭಯತೆ
ಕೇಶಪಾಶ ೨೧ ಕೇಶಸಂಘಾತ
ಕೈಸೂರೆ [illegible] ಕೈ [illegible] ಸ್ವಾಧೀನ ಮಾಡು
ಕೈಯಾನು ೧೮೨ ಕೈಯನ್ನು ಒಡ್ಡು
ಕೈವಾಡ ೧೬೮ ಕೈಚಳಕ, ಕೌಶಲ
[illegible]
[illegible]
[illegible] ಹೊರಗಿನವರಿಗೆ ಕಾಣದಂತೆ ಸೈನಿಕರು ನಿಲ್ಲುವ ಜಾಗ
[illegible] ಊದುವ [illegible]
ಕೋವಿ ೩ ಬಂದೂಕು
ಕೋಶ ೩೩ ಭಂಡಾರ
ಕೋಳ ೧೮ ಬೇಡಿ, ಸಂಕೋಲೆ

ಖ

ಖಾಡಾಖಾಡಿಯುದ್ಧ ೪ ಘನಘೋರವಾದ ಯುದ್ಧ

ತಳವೃತ್ತಿ ೧೫೬ (ಕಾರ್ಯಕ್ರಮ ನಡೆಯಲು) ಅರ್ಥವಾದ ಕೊಡುಗೆ
ತಳುವು ೧೭ ನಿಲ್ಲು, ತಡಮಾಡು
ತಾರು ೧೪೪ ಬತ್ತು, ಒಣಗು
ತಾರುವೊಡಲು ೧೫೩ ಬತ್ತಿಹೋದ ಶರೀರ, ಒಣಗಿದ ದೇಹ
ತಿನಕಾಡು ೪ ಹೆಣಗು, ಕಷ್ಟಪಡು
ತಿರಿ ೧೫೯ ತಿರುಗು, ಸುತ್ತು
ತೀರ್ವ ೧೫ ತೀವ್ರ
ತುಟ್ಟಿ ೧೫ ಹೆಚ್ಚುಬೆಲೆ, ತಗ್ಗು
ತುಯ್ಲ್ ೨ ಸೆಳೆ, ಎಳೆ
ತೂರ್ಯಧ್ವನಿ ೧೬೩ ವಾದ್ಯಗಳ ಧ್ವನಿ
ತೃಣಕಾಷ್ಠ ೧೦೧ ಹುಲ್ಲುಕಡ್ಡಿ
ತೆಂಕಣ ದಿಕ್ಕು ೨೫ ದಕ್ಷಿಣ ದಿಕ್ಕು
ತೆರಪು ೨೭ ಬಿಡುವು, ಅವಕಾಶ
ತೊಡು ೧೮೦ ತೊಡು, ಪ್ರಯೋಗಿಸು
ತೇರು ೩ ತೇರ್ಗಡೆಹೊಂದು, ಉತ್ತೀರ್ಣನಾಗು
ತೊರೆ ೧೫೯ ಹಳ್ಳ, ನದಿ
ತೋರ್ಕೆ ೧೦೮ ತೋರುವಿಕೆ, ಪ್ರದರ್ಶನ
ತ್ರುಟಿತ ೧೫೪ ಭಂಗವಾದ, ಮುರಿದುಹೋದ

ದ

ದಾನೋಪಾಯ ೧೮ ಸಾಮ, ದಾನ, ಭೇದ, ದಂಡ ಎಂಬ ರಾಜನೀತಿಯ ನಾಲ್ಕು ಉಪಾಯ ಮಾರ್ಗಕ್ಕೆ ಒಂದು
ದಪ್ತರ ೧೬ ಕಾಗದ ಪತ್ರಗಳ ಕಟ್ಟು
ದಹನಾರ್ಚಿ ೧೪೯ ಅಗ್ನಿಜ್ವಾಲೆ, ಬೆಂಕಿಯಜ್ವಾಲೆ
ದಹಾ ೨೮ ಹತ್ತು
ದಾರಿಗ ೧೭ ಪ್ರಯಾಣಿಕ
ದಾಸದಂಡ ೧೦ ದಾಸನಂತೆ ನಡೆದುಕೊಳ್ಳುವಿಕೆ
ದಿಬ್ಬಣ ೧೪ ಮದುವೆಯ ಮೆರವಣಿಗೆ
ದಿವ್ಯದುಕೂಲ ೬ ಶ್ರೇಷ್ಠವಾದ ರೇಷ್ಮೆ ಬಟ್ಟೆ
ದೀಪವರ್ತಿ ೧೬೩ ದೀಪದ ಬತ್ತಿ
ದೀರ್ಘಮಂಥನ ೧೨೦ ಬಹಳ ಕಾಲದ ಆಲೋಚನೆ
ದೀವಿಗೆ ೧೨೮ (ದೀಪಿಕೆ), ದೀಪ
ದುಗುಡ ೧೩೯ ವ್ಯಸನ
ದುರ್ಮಿಳ ೯೩ ಸುಲಭವಾಗಿ ದೊರೆಯದಿರುವ, ದುರ್ಲಭ
ದುಸ್ಸಾಧ್ಯ ೧೨೮ ಕಷ್ಟಸಾಧ್ಯ, ಅಸಾಧ್ಯ
ದೂರು ೫ ತೂರು, ನುಗ್ಗು
ದೇವಹಿತ ೧೩೫ ದೇವತೆಗಳಿಗೆ ಹಿತ
ದೇಶೀಯ ೧೩ ದೇಶಕ್ಕೆ ಸಂಬಂಧಿಸಿದ
ದ್ರಷ್ಟಾರ ೧೩೪ (ಮಂತ್ರವನ್ನು) ಸಾಕ್ಷಾತ್ಕರಿಸಿಕೊಂಡವನು, ಋಷಿ
ದ್ವಾರ ೫ ಬಾಗಿಲು, ದಾರಿ

ಧ

ಧರ್ಮಸಂಕಟ ೧೩೬ ಹೇಗೆ ನಡೆದರೂ ಕಷ್ಟವೆಂಬಂತಹ ಇಕ್ಕಟ್ಟು

ಪರಿಭಾವಿಸು ೧೩೮ ಚೆನ್ನಾಗಿ ಆಲೋಚಿಸು
ಪರ್ಜನ್ಯಜಪ ೧೨೬ ಮಳೆಯನ್ನು ಬರಿಸಲು ಮಾಡುವ ಜಪ
ಪವಾಡ ೧೫೮ ಅದ್ಭುತ ಕಾರ್ಯ
ಪಂದೇಱು ೧೫೩ ಮೇಲಕ್ಕೆ ಹತ್ತು ಏರು
ಪ[ಱು]ಗಲ್ ೧೫೯ ಹರುಗೋಲು
ಪಾಗು ೨ ತಲೆಗೆ ಸುತ್ತಿಕೊಳ್ಳುವ ಬಟ್ಟೆ
ಪಾಚಕ ೧೧ ಅಡಿಗೆಯವನು
ಪಾದ ೧೪೮ ನಾಲ್ಕನೆಯ ಒಂದು ಭಾಗ
ಪಾದಷಹ ೯ ಬಾದಷಹ ಚಕ್ರವರ್ತಿ
ಪಾರುಪತ್ಯಗಾರ ೧೯ ದೇವಸ್ಥಾನದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವವನು
ಪಾಲಕ ೬೧ ರಕ್ಷಣೆಯ ಭಾರವನ್ನು ಹೊತ್ತವನು, ಯಜಮಾನ
ಪಾವೆ ೧೫೯ ಪಾವನಮಾಡುವವಳು
ಪಾಷಂಡಿ ೧೨೩ ನಾಸ್ತಿಕ
ಪಾಳಯ ೧ ಸೇನೆಯಿರುವ ಜಾಗ, ಠಾಣೆ
ಪಿಕ್ಕ ೧೫೧ ಹಿಂಜು, ಹಿಕ್ಕು
ಪುನರುಜ್ಜೀವನ ೩೧ ಅಭಿವೃದ್ಧಿ, ಏಳಿಗೆ
ಪುರುಷಾರ್ಥ ೬೨ ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಒಂದು
ಪುರ್ಬು ೧೬ ಕಣ್ಣಿನ ಹುಬ್ಬು
ಪೂಣ್ ೧೬೨ ಹೊಣೆಯು, ಕೆಲಸಕ್ಕೆ ಬದ್ಧನು

ಪೆಟ್ಟು ೧ ನೆಡು, ಹೂಳು
ಪೆರ್ದೊರೆ ೯೧ ದೊಡ್ಡ ಹಳ್ಳ, ಪ್ರವಾಹ
ಪೇದೆ ೧೭ ಸೇವಕ, ಜವಾನ
ಪೇರಿಸು ೩ ಒಂದರ ಮೇಲೊಂದನ್ನು ಏರಿಸು
ಪೌಳಿ ೧೫೪ ಕೋಟೆಯ ಗೋಡೆ
ಪೊರ್ದು ೧೫೧ ಸೇರು, ಕೂಡು
ಪ್ರಗಾಢ ೧೪೨ ಬಹಳ ಆಳ
ಪ್ರತಿಷೇಧ ೧೦ ಅಡ್ಡಿ, ತಡೆ
ಪ್ರದಾತೃ ೧೫೦ ಆಶ್ರಯದಾತ, ಯಜಮಾನ
ಪ್ರಬುದ್ಧ ೧೪೧ ಜಾಗೃತವಾದ, ಚೆನ್ನಾಗಿ ತಿಳಿದ
ಪ್ರವೃತ್ತಿ ೪೯ ರೀತಿ, ಸ್ವಭಾವ
ಪ್ರಸಕ್ತಿ ೧೫ ಸಂದರ್ಭ
ಪ್ರಾಕಾರ ೧೦೯ ಹೊರ ಆವರಣ
ಪ್ರಾಕೃತ ೯೫ ಒಂದು ಭಾಷೆ
ಪ್ರಾಕ್ತನ ೯೮ ಪುರಾತನ, ಹಿಂದಿನ
ಪ್ರಾಚೀನ ೫೭ ಬಹಳ ಹಿಂದಿನ
ಪ್ರಾಚುರ್ಯ ೧೯೨ ಹರಡಿಕೊಂಡಿರುವಿಕೆ, ವ್ಯಾಪಕತ್ವ
ಪ್ರಾಣಾಂತಿಕ ೨೦ ಪ್ರಾಣಕ್ಕೆ ಕೊನೆ, ಸಾವು
ಪ್ರಾತಿನಿಧಿಕ ೯೮ ಪ್ರತಿನಿಧಿಯನ್ನು ಒಳಗೊಂಡಿರುವ
ಪ್ರಾಯಿಕ ೬೦ ಪ್ರಾಯಶಃ, ಬಹುಶಃ

ಫ

ಫಿರ್ಯಾದು ೧೧ ದೂರು

ಫೌಜು ೬ ಸೈನ್ಯ

ಬ

ಬಗ್ಗು ೨೪ ಕೃಶತ್ವ, ಕ್ಷೀಣತೆ

ಬಡಗು ೨೪ ಉತ್ತರ ದಿಕ್ಕು

ಬಣ್ಣಿಸು ೧೬೩ ವರ್ಣನೆಮಾಡು, ವರ್ಣಿಸು

ಬಲಗೊಳ್ ೧೫೫ ನಮಸ್ಕಾರಮಾಡು

ಬಸದಿ ೧೫೪ ಜೈನ ದೇವಾಲಯ

ಬಹಲೆ ೩ ಒಂದು ಆಯುಧ, ಭರ್ಜಿ

ಬಹಿರ್ಮುಖ ೩೭ ಹೊರಮುಖ

ಬಾಣಾವಳಿ ೧೩೯ ಬಾಣಗಳ ಸಮೂಹ

ಬಾಯ್ದಂಬುಲ ೧೪೨ ಬಾಯಲ್ಲಿನ ತಾಂಬೂಲ, ಎಂಜಲು

ಬಾರ ೨೮ ಹನ್ನೆರಡು

ಬಿಚ್ಚುಜುಸು ೧೬೩ ಹೊಗಳು, ಸ್ತುತಿಸು

ಬಿಚ್ಚುಗೈ ೧೬೩ ತೆರೆದ ಕೈ, ದಾನ ಮಾಡಲು ಸಿದ್ಧವಾದ ಕೈ

ಬಿನ್ನಾಣ ೧೩೯ ಸೊಗಸು, ಬೆಡಗು

ಬೀಳ್ತುರು ೧೫೫ ಕೆಳಗೆ ಬೀಳು

ಬೆಸೆ ೧೪೧ ವ್ಯಥೆ, ದುಃಖ

ಭ

ಭಾಷಾಭಿಜ್ಞ ೧೩ ಭಾಷೆಯನ್ನು ಚೆನ್ನಾಗಿ ಬಲ್ಲವನು

ಭ್ರೂಮಧ್ಯ ೨ ಕಣ್ಣು ಹುಬ್ಬಿನ ಮಧ್ಯ ಭಾಗ

ಮ

ಮಡು ೬೨ ಆಳವಾದ ನೀರಿನ ಗುಂಡಿ

ಮಣಿಗಂಟು ೧೭ ಜುಟ್ಟು

ಮತ್ತ ೯೫ ಸೊಕ್ಕಿದ, ಮದಿಸಿದ

ಮಥನ ೬೭ ಕಡೆಯುವುದು

ಮಮಕಾರ ೧೦೩ ನನ್ನದು ಎಂಬ ಅಭಿಮಾನ

ಮರಪಂಡಿತ ೨೪ ಕೆಲಸಕ್ಕೆ ಬಾರದ ಪಂಡಿತ

ಮಸಗು ೧೪೦ ವ್ಯಾಪಿಸು, ಹರಡು

ಮಸಳು ೧೬೨ ಬಾಡು, ಕೆಳಗುಂದು

ಮಸ್ತಕ ೩ ತಲೆ

ಮಹಿ ೧೪೫ ಭೂಮಿ

ಮಹಿಮಾಸ್ತವ ೧೪೯ ಹಿರಿಮೆಯನ್ನು ಹೊಗಳುವ ಪದ್ಯಮಾಲೆ

ಮಹೋದರ ೨೨ ದೊಡ್ಡ ಹೊಟ್ಟೆ

ಮಾಂಡಲಿಕ ೨೫ ಸಾಮಂತರಾಜ

ಮಾತೃಕೆ ೨೭ ಮೂಲಪ್ರತಿ

ಮಾತ್ಸರ್ಯ ೬೨ ಹೊಟ್ಟೆಕಿಚ್ಚು

ಮಾನವೀಯತೆ ೧೩೬ ಮನುಷ್ಯತ್ವ

ಮಾಯಾಸ್ಮಿತ ೧೩೦ ಮೋಸದಿಂದ ಕೂಡಿದ ನಗು

ಮಾಲು ೧೪ ಬಾಗು, ಒಂದೇ ಕಡೆಗೆ ವಾಲು

ಮಾವುತ ೩ ಆನೆಯ ಸವಾರ, ಮಾವಟಿಗ

ಮಿಡುಕು ೧೫೯ ಮರುಗು, ವ್ಯಥೆಪಡು

ವಿಹಿತ ೯೭ ಹಿತವಾದ, ತಕ್ಕ, ಯೋಗ್ಯ
ವಿಹ್ವಲ ೧೪೭ ತಬ್ಬಿಬ್ಬಾದ, ಗಾಬರಿಗೊಂಡ

ಶ

ಶಂಕೆ ೭೭ ಅನುಮಾನ, ಸಂದೇಹ
ಶಿರಚ್ಛೇದನ ೧೧ ತಲೆ ಕತ್ತರಿಸುವುದು
ಶಿಲಾಪಟ್ಟ ೧೫೬ (ಶಾಸನವನ್ನು ಕೊರೆಯುವ) ಕಲ್ಲು ಚಪ್ಪಡಿ
ಶೂನ್ಯವಾದ ೧೦೯ ದೇವರಿಲ್ಲವೆಂದು ಮಾಡುವ ವಾದ
ಶ್ರಾವಕಿ ೧೮೯ ಜೈನಸಂನ್ಯಾಸಿನಿ, ಕಂತಿ
ಶ್ರುತಿ ೫೭ ವೇದ

ಷ

ಷಡಂಗ ೭೦ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ ಎಂಬ ಆರು ವೇದಾಂತಗಳು

ಸ

ಸಂಗಮ ೧೨೮ ಸೇರುವುದು
ಸಂಪ್ರೋಕ್ಷಣೆ ೧೨೭ ಚಿಮುಕಿಸುವುದು
ಸಂಭಾವ್ಯತೆ ೧೬೧ ಸಾಧ್ಯತೆ
ಸಂವರ್ಧನೆ ೫೪ ಚೆನ್ನಾಗಿ ಬೆಳೆಸುವುದು
ಸಗ್ಗ ೬ ಹೆದರು, ಜಗ್ಗು
ಸಚೇತನ ೧೪೭ ಚೇತನವುಳ್ಳ, ಜೀವವುಳ್ಳ
ಸಜ್ಜನಿಕೆ ೧೮೯ ಪಾತಿವ್ರತ್ಯ
ಸಜ್ಜುಗೊಳಿಸು ೨೭ ಸಿದ್ಧಪಡಿಸು
ಸದ್ವೃತ್ತೆ ೧೫೧ ಒಳ್ಳೆಯ ಚಾರಿತ್ರ್ಯವುಳ್ಳವಳು, ನಡತೆಯುಳ್ಳವಳು
ಸನಾತನಿ ೧೦೬ ಹಿಂದಿನ ಕಾಲದ ಭಾವನೆಗಳಲ್ಲಿ ನಂಬಿಕೆಯುಳ್ಳವನು
ಸಪತ್ನಿ ೧೬೨ ಸವತಿ
ಸಮಾಪ್ತಿ ೧೨೨ ಪೂರ್ಣ
ಸಹಾನುಭೂತಿ ೧೪೭ ಅನುಕಂಪ, ದಯೆ
ಸಾದ್ಯಂತ ೯೬ ಮೊದಲಿನಿಂದ ಕೊನೆವರೆಗೆ
ಸಾಮಂತ ೭೫ ಅಧೀನಕ್ಕೆ ಒಳಪಟ್ಟ ರಾಜ, ಚಿಕ್ಕ ಸಂಸ್ಥಾನದ ರಾಜ
ಸಾರಸ್ವತ ೯೨ ಜ್ಞಾನ, ಪಾಂಡಿತ್ಯ
ಸಿಂಗಾಡಿ ೧೯ ಬಿಲ್ಲು
ಸುಹೃದ್ಭಾವನೆ ೪೦ ಒಳ್ಳೆಯ ಭಾವನೆ
ಸೂತ ೧೪೮ ಅಂಬಿಗ, ಬೆಸ್ತ
ಸೂಪಶಾಸ್ತ್ರ ೧೮ ಅಡಿಗೆಯ ವಿಚಾರವನ್ನು ತಿಳಿಸುವ ಶಾಸ್ತ್ರ, ಪಾಕಶಾಸ್ತ್ರ
ಸೇಸೆಗೊಳ್ ೧೫೫ ಆಶೀರ್ವಾದವನ್ನು ಪಡೆ
ಸೊಡರ್ಮಾಲೆ ೧೪೮ ಹಣತೆಗಳ ಸಾಲು, ದೀಪಗಳ ಪಂಕ್ತಿ
ಸ್ತಂಭೀಭೂತ ೮ ದಿಕ್ಕುಗಾಣದಿರುವುದು
ಸ್ಥೂಲದೇಹ ೬೮ ದೊಡ್ಡ ಶರೀರ
ಸ್ಮರ ೧೭ ಕಾಮ, ಮನ್ಮಥ
ಸ್ಮೃತಿ ೫೮ ಜ್ಞಾಪಕ, ನೆನಪು
ಸ್ರೋತ ೧೨೪ ಪ್ರವಾಹ
ಸ್ವಯಂಪಾಕ ೧೮ ಸ್ವತಃ ಅಡಿಗೆಮಾಡಿಕೊಳ್ಳುವುದು

ಹ

ಹಂಡಬಂಡ ೨೮ ಸಂಕೀರ್ಣ, ಮಿಶ್ರ

ಹಂದರ ೪೪ ಚಪ್ಪರ

ಹಗರಣ ೫ ಪ್ರಕರಣ, ಸನ್ನಿವೇಶ

ಹತಾಹತಿ ೬ ಸಾವು, ನೋವು

ಹರವಿ ೫ ಗುಡಾಣ

ಹರಹು ೧೪೫ ಹರಡು, ವಿಸ್ತರಿಸು

ಹರಿಬ ೧೪೫ ಕೆಲಸ, ಕಾಯಕ

ಹಳಚು ೧೪೬ ಅಲ್ಲಾಡು, ಚಲಿಸು

ಹಾಲ್‌ಹವಾಲೆ ೧೫ ತೊಂದರೆ, ಕಷ್ಟ ಸುಖ

ಹಾಸುಹೊಕ್ಕು ೧೧೦ ಗಾಢಸಂಬಂಧ ಒಂದಾಗಿರುವಿಕೆ

ಹಿರಿ ೨ ಹೊರಕ್ಕೆ ತೆಗೆ

ಹುದ್ದೆದಾರ ೧೮ ಅಧಿಕಾರಿ

ಹೃದಯಂಗಮ ೧೦೪ ಮನೋಹರ

ಹೇತು ೧೯ ಕಾರಣ

ಹೊಮ್ಮು ೧೫೧ ಮೇಲಕ್ಕೆ ಬರು, ಉಕ್ಕು